# THE GOSPEL ACCORDING TO ST. LUKE.

# ಲೂಕನ ಸುವಾರ್ತೆಯ ಪೀಠಿಕೆ.

ಈ ಸುವಾರ್ತೆಯನ್ನೂ ಅಪೊಸ್ತಲರ ಕ್ರಿಯೆಗಳನ್ನೂ ಲೂಕನೆಂಬವನು ಬರೆದನು. ಇವನು ಸಿರಿಯಾ ದೇಶದ ಮುಖ್ಯ ಪಟ್ಟಣವಾದ ಅಂತಿಯೋಕ್ಯದಲ್ಲಿ ಹುಟ್ಟಿದನೆಂದು ಕೆಲವರು ಹೇಳುತ್ತಾರೆ. ಹಾಗಿಲ್ಲದಿದ್ದರೂ, ಅಲ್ಲಿ ವಾಸ ಮಾಡಿದವನೆಂದು ಅವನು ಬರೆದ ಗ್ರಂಥಗಳಿಂದ ಊಹಿಸ ತಕ್ಕದ್ದು. ಅವನ ಹೆಸರನ್ನೂ ವೈದ್ಯನ ಉದ್ಯೋಗವನ್ನೂ ಕುರಿತು ಯೋಚಿಸುವಾಗ, ಅವನು ರೋಮಾಯರಿಗೆ ಸೇರಿದ ಒಬ್ಬ ದೊಡ್ಡ ಮನುಷ್ಯನೆಂದು ತೋರುತ್ತದೆ. ಅವನು ಕ್ರೈಸ್ತನಾಗುವದಕ್ಕಿಂತ ಮುಂಚೆ ಯೆಹೂದ್ಯರ ಮಾರ್ಗವನ್ನು ಚನ್ನಾಗಿ ಕಲಿತು, ಅದನ್ನು ಅನುಸರಿಸಿರುವವನು. ಯೇಸು ಕ್ರಿಸ್ತನೂ ಆತನ ಅಪೊಸ್ತಲರೂ ಅದ್ಭುತವಾಗಿ ಸ್ವಸ್ಥ ಮಾಡಿದ ವ್ಯಾಧಿಗಳನ್ನು, ಬೇರೆ ಸುವಾರ್ತಿಕರಿಗಿಂತ ಅವನು ಅಧಿಕ ದಿಟ್ಟವಾಗಿಯೂ ಸೂಕ್ಷ್ಮವಾಗಿಯೂ ಹೇಳಿರುವದನ್ನು ನೋಡುವಾಗ, ಅವನು ವೈದ್ಯಶಾಸ್ತ್ರದಲ್ಲಿ ನಿಪುಣನೆಂದು ಕಾಣುತ್ತದೆ. ಬೇರೆ ಸುವಾರ್ತಿಕರಿಗಿಂತ, ಅವನು ತನ್ನ ಸುವಾರ್ತೆಯನ್ನು ಒಳ್ಳೇ ಧೋರಣೆಯಿಂದ ಬರೆದಿರುವ ಕಾರಣ ಅವನು ವಿದ್ವಾಂಸನೆಂದು ಹೇಳಬಹುದು. ಅವನು ಅಪೊಸ್ತಲನಾದ ಪೌಲನ ಸಂಗಡ ನಾನಾ ದೇಶಗಳಿಗೆ ಹೋಗಿ, ಸುವಾರ್ತೆಯನ್ನು ಪ್ರಸಂಗಿಸಿದನು. ಪೌಲನು ತ್ರೋಯ ಪಟ್ಟಣದಲ್ಲಿರುವಾಗ, ಅವನು ಸಹ ಅಲ್ಲಿ ಇದ್ದನೆಂಬದಾಗಿಯೂ, ಆತನ ಸಂಗಡ ಯೂರೋಪ್ ಖಂಡದಲ್ಲಿರುವ ಫಿಲಿಪ್ಪಿ ಪಟ್ಟಣಕ್ಕೆ ಹೋದನೆಂಬದಾಗಿಯೂ ಹೇಳಿ ಇದೆ. (ಅಪೊ. ಕ್ರಿ. ೧೬. ೧೦—೧೭.) ಅದು ಮೊದಲ್ಗೊಂಡು "ನಾವು" ಎಂದು ಬಹುವಚನದಲ್ಲಿ ಹೇಳುತ್ತಾನೆ. ಫಿಲಿಪ್ಪಿ ಪಟ್ಟಣದಲ್ಲಿ ಹೊಸದಾಗಿ ಉಂಟಾದ ಸಭೆಯುವರಿಗೆ, ಅಲ್ಲಿ ಕೆಲವು ಕಾಲವಿದ್ದು ಬೋಧಿಸುತ್ತಾ ಇದ್ದನೆಂದು ತೋರುತ್ತದೆ. ಏಳು ವರುಷಗಳ ತರುವಾಯ ತಿರಿಗಿ ಆ ಪಟ್ಟಣದಿಂದ ಅಪೊಸ್ತಲನಾದ ಪೌಲನ ಸಂಗಡ ಆಸ್ಯ, ಪಾಲೆಸ್ತೀನ್, ರೋಮಪುರಿ ಮೊದಲಾದ ಸ್ಥಳಗಳಿಗೆ ಹೋದನು. (ಅಪೊ. ಕ್ರಿ. ೨೦. ೫—೨೮. ೧೬.) ರೋಮಪುರಿಯಲ್ಲಿ ಪೌಲನು ರಕ್ತಸಾಕ್ಷಿಯ ಮರಣ ಹೊಂದುವದಕ್ಕಿಂತ ಸ್ವಲ್ಪ ಮುಂಚೆ ಅವನು ಪೌಲನ ಸಂಗಡ ಇದ್ದನು. (೨ ತಿಮೊ. ೪. ೧೧.) "ವೈದ್ಯನಾದ ಪ್ರಿಯ ಲೂಕ"ನೆಂದು ಹೇಳಿರುವದು ಅವನನ್ನು ಕುರಿತದ್ದೇ ಎಂದು ಸಾಧಾರಣವಾಗಿ ಎಲ್ಲರೂ ಒಪ್ಪಿ ಕೊಳ್ಳುತ್ತಾರೆ. (ಕೊಲೊ. ೪. ೧೪.) ಪರಿಛೇದನೆಯುವರನ್ನೂ ಅವನನ್ನೂ ಪ್ರತ್ಯೇಕಿಸಿ ಹೇಳಿರುವದರಿಂದ ಅವನು ಅನ್ಯದೇಶದವನೆಂದು ತೋರುತ್ತದೆ. (ಕೊಲೊ. ೪. ೧೧, ೧೪.)

ಅವನು ಬರೆದ ಸುವಾರ್ತೆಯ ಪೀಠಿಕೆಯನ್ನು ನೋಡುವಾಗ ಅವನು ಕಣ್ಣಾರೆ ಕಂಡ ಸಾಕ್ಷಿಯಾಗಿರದೆ, ಕಂಡವರು ಹೇಳಿದ್ದನ್ನು ಜ್ಞಾಪಕವಾಗಿ ಕೇಳಿ ಬರೆದವನೆಂದು ತೋರುತ್ತದೆ. (ಲೂಕ. ೧. ೧—೪.) ಬೇರೆ ಸುವಾರ್ತೆಗಳಲ್ಲಿ ಇಲ್ಲದ ಅನೇಕ ಸಂಗತಿಗಳು ಈ ಸುವಾರ್ತೆಯಲ್ಲಿ ಉಂಟು. ೧ನೇದು. ಕ್ರಿಸ್ತನ ಜನನಕ್ಕೆ ಮುಂಚೆಯೂ, ಜನನದ ಸಮಯದಲ್ಲಿಯೂ ನಡೆದ ಸಂಗತಿಗಳು. ೨ನೇದು. ಕ್ರಿಸ್ತನು ಗಲಿಲಾಯವನ್ನು ಬಿಟ್ಟು ಹೋದದ್ದಕ್ಕೂ, ಕಡೇ ಸಾರಿ ಪಸ್ಕ ಹಬ್ಬವನ್ನು ಆಚರಿಸುವದಕ್ಕೆ ಯೆರೂಸಲೇಮಿಗೆ ಹೋದದ್ದಕ್ಕೂ ಮಧ್ಯಕಾಲದಲ್ಲಿ ಆತನು ಬೋಧಿಸಿದ ಬೋಧನೆಗಳು. ೩ನೇದು. ಆತನು ಪುನರುತ್ಥಾನವಾದ ತರುವಾಯ ಪರಕ್ಕೆ ಏರಿ ಹೋದ ಸಮಯದಲ್ಲಿಯೂ ನಡೆದ ಕೆಲವು ಸಂಗತಿಗಳು.

ಅಪೊಸ್ತಲರ ಕ್ರಿಯೆಗಳನ್ನು ಬರೆಯುವದಕ್ಕಿಂತ ಮುಂಚೆ ಈ ಸುವಾರ್ತೆ ಬರೆಯಲ್ಪಟ್ಟಿತೆಂಬುವದು ನಿಶ್ಚಯವಾಗಿದೆ. (ಅಪೊ. ಕ್ರಿ. ೧. ೧.) ಫಿಲಿಪ್ಪಿ ಪಟ್ಟಣದಲ್ಲಿ ಮೊದಲನೇ ಸಾರಿ ಪೌಲನ ಸಂಗಡ ಇದ್ದದಕ್ಕೂ ಎರಡನೇ ಸಾರಿ ಇದ್ದದಕ್ಕೂ ಮಧ್ಯೆ ಸಂದ ಏಳು ವರುಷ ಕಾಲದ ಮಧ್ಯದಲ್ಲಿ ಈ ಸುವಾರ್ತೆಯಲ್ಲಿರುವ ಸಂಗತಿಗಳನ್ನು ತಿಳಿದು ಕೊಳ್ಳುವ ಉದ್ದೇಶ್ಯವಾಗಿ ಅವನು ಪಾಲೆಸ್ತೀನ್ ದೇಶಕ್ಕೂ, ಅದರ ಸುತ್ತಲಿರುವ ದೇಶಗಳಿಗೂ ಹೋದನೆಂದು ಕೆಲವರು ನೆನಸುತ್ತಾರೆ. (ಅಪೊ. ಕ್ರಿ. ೧೭. ೧; ೨೦. ೬. ಸರಿ ನೋಡ ಬೇಕು.) ಬೇರೆ ಕೆಲವರು, ಪೌಲನು ಕೈಸರೈಯ ಪಟ್ಟಣದಲ್ಲಿ ಎರಡು ವರುಷ ಕಾವಲಿಯಲ್ಲಿದ್ದ ಕಾಲದಲ್ಲಿ ಲೂಕನು ಹೀಗೆ ಪ್ರಯಾಣ ಮಾಡಿದನೆಂದು ಹೇಳುತ್ತಾರೆ. (ಅಪೊ. ಕ್ರಿ. ೨೪. ೨೭.) ಈ ಸುವಾರ್ತೆಯು ಕ್ರಿಸ್ತಶಕದ ೫೦ನೇ ವರುಷಕ್ಕೂ ೫೮ನೇ ವರುಷಕ್ಕೂ ಮಧ್ಯಕಾಲದಲ್ಲಿ ಬರೆಯಲ್ಪಟ್ಟಿರ ಬಹುದು.

ಲೂಕನು ತನ್ನ ಸ್ನೇಹಿತನಾದ ತೆಯೋಫಿಲನಿಗೆ ಆತ್ಮದ ಮೇಲು ಉಂಟಾಗ ಬೇಕೆಂದು ಕೋರಿ ಈ ಸುವಾರ್ತೆಯನ್ನು ಬರೆದಾಗ್ಯೂ, (ಲೂಕ. ೧. ೧.) ಎಲ್ಲಾ ಕಾಲಗಳಲ್ಲಿಯೂ ಬದುಕುವವರ ಮೇಲನ್ನು ಕೋರಿ, ಇದನ್ನು ಬರೆದನೆಂದು ಪ್ರತ್ಯಕ್ಷವಾಗಿದೆ. ಕ್ರಿಸ್ತನ ವಂಶಾವಳಿಯನ್ನು ಮನುಷ್ಯಜಾತಿಗೆ ಬುಡವಾಗಿರುವ ಆದಮನ ಮಟ್ಟಿಗೂ ಶೇರಿಸಿದ್ದು ಮಾತ್ರವಲ್ಲದೆ, ಆತನು ಯೆಹೂದ್ಯರಿಗೂ ಅನ್ಯ ಜನಾಂಗಗಳಾದ ಸಮಸ್ತ ಜನರಿಗೂ ಸದ್ಗುರುವಾಗಿ ಉದ್ಭವಿಸಿದ ರಕ್ಷಣೆಯ ನಾಯಕನೆಂದೂ, ದೇವಕುಮಾರನಾದ ಆತನು ಮನುಷ್ಯತ್ವವನ್ನು ಧರಿಸಿಕೊಂಡು ಭೂಮಿಯ ಮೇಲೆ ಜನ್ಮಿಸಿದನೆಂದೂ, ತೋರಿಸುತ್ತದೆ. ಆತನ ಅದ್ಭುತ ಜನನವು, ಬೆಳೆಯುವಿಕೆ, ಕುಲ, ಗೋತ್ರ, ಜಪತಪ, ಕರುಣೆ, ಸಂತಾಪ, ಜ್ಞಾನಬೋಧನೆ, ಶ್ರಮೆಗಳು, ಇವುಗಳ ವಿಷಯವಾಗಿ ಲೂಕನು ಬರೆದಿರುವ ರೀತಿಯಲ್ಲಿ, ಕಲ್ಲಿನಂಥಾ ಮನಸ್ಸು ಸಹ ಕರಗ ತಕ್ಕದ್ದಾಗಿಯೂ, ಹೃದಯ ಮೆತ್ತಗಾಗ ತಕ್ಕದ್ದಾಗಿಯೂ ಇದೆ. (ಲೂಕ. ೨. ೪೦—೫೨; ೪. ೧೬—೨೨; ೭. ೧೧—೧೭; ೧೦. ೩೦—೩೭;



೧೫. ೧೬, ೧೯—೩೧; ೨೪. ೧೩—೩೨.) ಬೇರೆ ವೇದಪುಸ್ತಕಗಳಿಗಿಂತ ಈ ಸುವಾರ್ತೆಯಿಂದ ಲೋಕರಕ್ಷಕನಿಗೆ ಮನುಷ್ಯರ ಮೇಲಿರುವ ಅಂತಃಕರಣವೂ ಮಹಾ ಪ್ರೀತಿಯೂ ಬಹು ಸ್ಪಷ್ಟವಾಗಿ ತೋರುತ್ತದೆ.

ಮತ್ತಾಯನ ಮಾರ್ಕನ ಸುವಾರ್ತೆಗಳಿಗಿಂತಲೂ ಈ ಸುವಾರ್ತೆಯಲ್ಲಿ, ನಡೆದ ವರ್ತಮಾನಗಳನ್ನು ವಿಸ್ತಾರವಾಗಿ ತೋರಿಸಿ ಇದೆ. ಇದು ಲೋಕರಕ್ಷಕನಿಗೆ ಮುಂದೂತನಾಗಿ ಬಂದ ಸ್ನಾನಿಕನಾದ ಯೋಹಾನನ ಜನನವನ್ನು ಪ್ರಾರಂಭಿಸಿ, ಕ್ರಿಸ್ತನು ದಿವಾರೋಹಣವಾದ ಅದ್ಭುತದಲ್ಲಿ ಮುಗಿಯುತ್ತದೆ. ಬೇರೆ ಸುವಾರ್ತೆಗಳಲ್ಲಿ ಇಲ್ಲದ ಕೆಲವು ಸಂಗತಿಗಳೂ, ಆ ಸುವಾರ್ತೆಗಳಲ್ಲಿರುವ ಕೆಲವು ಸಂಗತಿಗಳ ವಿವರವೂ ಈ ಸುವಾರ್ತೆಯಲ್ಲಿ ಉಂಟು. ಸಮಯಾಸಮಯಗಳಲ್ಲಿ ಕರ್ತನು ತಿಳಿಯಪಡಿಸಿದ ಜ್ಞಾನಬೋಧನೆಗಳೂ, ಅವುಗಳನ್ನು ಹೇಳುವದಕ್ಕೆ ಉಂಟಾದ ಮುಖಾಂತರಗಳೂ, ಅವುಗಳನ್ನು ಕೇಳಿದವರ ಪ್ರತ್ಯುತ್ತರಗಳೂ, ಇದರಲ್ಲಿ ಚನ್ನಾಗಿ ಹೇಳಲ್ಪಟ್ಟವೆ. ಕೆಲವು ಸ್ಥಳಗಳಲ್ಲಿ ಸಂಗತಿಗಳನ್ನು ಕ್ಲುಪ್ತವಾಗಿಯೂ, ಕೆಲವು ಸ್ಥಳಗಳಲ್ಲಿ ವಿಸ್ತಾರವಾಗಿಯೂ, ಬರೆಯಲ್ಪಟ್ಟಿದೆ.

ಈ ಸುವಾರ್ತೆಯು ಆರು ಭಾಗಗಳಾಗಿದೆ:

I. ರಕ್ಷಕನ ಜನನವು, ಬೆಳೆಯುವಿಕೆಯು. (೧, ೨. ಸಂಧಿಗಳು.)

II. ಆತನ ಸ್ನಾನವೂ, ವಂಶಾವಳಿಯೂ, ಆತನಿಗುಂಟಾದ ಶೋಧನೆಯೂ. (೩. ೧ — ೪. ೧೩.)

III. ಗಲಿಲಾಯದಲ್ಲಿ ಆತನು ನಡಿಸಿದ ಉದ್ಯೋಗ. (೪. ೧೪ — ೯. ೫೦.)

IV. ಕಡೆಯಾಗಿ ಗಲಿಲಾಯವನ್ನು ಬಿಟ್ಟು ಹೊರಟು, ಪ್ರಯಾಣ ಮಾಡುತ್ತಾ ಬಂದು, ಯೆರೂಸಲೇಮಿನಲ್ಲಿ ಪ್ರವೇಶಿಸಿದ್ದು. (೯. ೫೧ — ೧೯. ೨೭.)

V. ಯೆರೂಸಲೇಮಿನಲ್ಲಿ ಆತನಿಗೆ ಸಂಭವಿಸಿದ ಕಷ್ಟವೂ ಮರಣವೂ. (೧೯. ೨೮ — ೨೩. ಸಂಧಿ.)

VI. ಪುನರುತ್ಥಾನವೂ ದಿವಾರೋಹಣವೂ. (೨೪. ಸಂಧಿ.)

# THE GOSPEL OF LUKE.

# ಲೂಕನು ಬರೆದ ಸುವಾರ್ತೆ.



ಪೀಠಿಕೆ.

1. [1]ಉತ್ತಮ [2]ತೆಯೋಫಿಲನೇ! ಆದಿಯಿಂದ ತಾವೇ ನೋಡಿದವರೂ [3]ವಾಕ್ಯದ ಸೇವಕರೂ ಆಗಿದ್ದವರು
೨ ನಮಗೆ ಒಪ್ಪಿಸಿದ ಪ್ರಕಾರ, ನಮ್ಮಲ್ಲಿ ಪೂರ್ಣ ನಿಶ್ಚಯವಾದ ಕಾರ್ಯಗಳ [4]ವಿವರವನ್ನು ಕ್ರಮವಾಗಿ ಬರೆ
೩ ಯುವದಕ್ಕೆ ಅನೇಕರು ಪ್ರಯತ್ನ ಮಾಡಿದದರಿಂದ, ನಿನಗೆ ಉಪದೇಶಿಸಲ್ಪಟ್ಟ ವಾಕ್ಯಗಳ ಸ್ಥಿರತ್ವವನ್ನು ನೀನು
೪ ತಿಳಿದು ಕೊಳ್ಳುವ ಹಾಗೆ, [5]ನಿನಗೆ ಕ್ರಮದಿಂದ ಬರೆಯುವದಕ್ಕೆ, [6]ಬುಡದಿಂದ ಎಲ್ಲವುಗಳನ್ನು ಜಾಗ್ರತೆಯಾಗಿ
ವಿಚಾರಿಸಿದ ನನಗೂ ಒಳ್ಳೇದಾಗಿ ತೋಚಿತು.

ದೇವದೂತನು ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದ್ದು.

೫ ಯೆಹೂದದ ಅರಸನಾದ ಹೆರೋದನ ದಿನಗಳಲ್ಲಿ, [7]ಅಬೀಯನ ಒಂತಿನವನಾದ ಜಕರೀಯನೆಂಬ ಒಬ್ಬ ಯಾ
ಜಕನು ಇದ್ದನು; ಅವನ ಹೆಂಡತಿಯು [8]ಆರೋನನ ಕುಮಾರ್ತೆಗಳಲ್ಲಿ ಒಬ್ಬಳಾಗಿದ್ದಳು; ಅವಳ ಹೆಸರು ಎಲಿ
೬ ಸಬೇತ್. ಅವರಿಬ್ಬರು ಕರ್ತನ ಎಲ್ಲಾ ಕಟ್ಟಳೆಗಳಲ್ಲಿಯೂ ನಿರ್ಣಯಗಳಲ್ಲಿಯೂ ತಪ್ಪಿಲ್ಲದವರಾಗಿ ನಡೆದು

1. ಪೀಠಿಕೆಯಲ್ಲಿ ಈ ಸುವಾರ್ತೆಯ ಗುರಿಯೂ ಆಧಾರವೂ ತೋರಿಸಲ್ಪಟ್ಟದೆ. (೧—೪.) ತರುವಾಯ ದೇವದೂತನು ಸ್ನಾನಿಕನಾದ ಯೋಹಾನನ ಜನನವನ್ನು ಕುರಿತು ಜಕರೀಯನಿಗೆ ಮುಂತಿಳಿಸಿದ್ದೂ, (೫—೨೫.) ಲೋಕರಕ್ಷಕನ ಜನನವನ್ನು ಕುರಿತು ಮರಿಯಳಿಗೆ ಮುಂತಿಳಿಸಿದ್ದೂ ಹೇಳಲ್ಪಟ್ಟದೆ. (೨೬—೩೮.) ಕನ್ಯೆ ಮರಿಯಳು ಎಲಿಸಬೇತಳನ್ನು ದರ್ಶಿಸಿದಾಗ ಸ್ತೋತ್ರ ಸಂಗೀತ ಹಾಡಿದಳು. (೩೯—೫೬.) ಯೋಹಾನನು ಹುಟ್ಟಿದಾಗ ಜಕರೀಯನು ದೇವರ ಮಹತ್ವವನ್ನು ಕುರಿತು ಪ್ರವಾದಿಸಿದನು. (೫೭—೮೦.)

2. "ತೆಯೋಫಿಲನು" ಅಂದರೆ ದೇವಪ್ರಿಯನೆಂಬ ಅರ್ಥವು. ಅವನ ಚರಿತ್ರೆ ಬೇರೆ ಏನೂ ತಿಳಿಯದು. ಮೇಲಾದ ಅಂತಸ್ತಿನವರನ್ನು ಘನ ಹೊಂದಿದವರೆಂದು ಹೇಳುವ ಪ್ರಕಾರ ಅವನನ್ನು ಕುರಿತು ಹೇಳಿಯದೆ. (ಅಪೊ. ಕ್ರಿ. ೨೪. ೩; ೨೬. ೨೫.)

3. ಇದು ಸುವಾರ್ತೆಯ ವಾಕ್ಯವನ್ನು ಸೂಚಿಸುತ್ತದೆ.

4. ಪೂರ್ವಿಕ ಕ್ರೈಸ್ತರಲ್ಲಿ ಲೋಕರಕ್ಷಕನನ್ನು ಕುರಿತು ಅನೇಕರು ಬರೆದರೆಂದು ಇದರಿಂದ ತೋರುತ್ತದೆ. ಆದರೆ ಅವರು ಬರೆದದ್ದನ್ನು ಸಭೆಯವರು ತಳ್ಳಿ ಬಿಟ್ಟು, ವೇದದಲ್ಲಿರುವ ನಾಲ್ಕು ಸುವಾರ್ತೆಗಳನ್ನು ಮಾತ್ರವೇ ಅಂಗೀಕರಿಸಿದರು.

5. ಕ್ರಮ, ಅಂದರೆ ಕಾಲಕ್ರಮವಲ್ಲ, ನಡೆದ ವರ್ತಮಾನಗಳನ್ನು ಪಾಂಗ್ತವಾಗಿ ಕ್ರಮ ಪಡಿಸಿ ಬರೆದದ್ದನ್ನು ಸೂಚಿಸುತ್ತದೆ.

6. ದೇವರಾತ್ಮದ ವರವನ್ನು ಹೊಂದಿ ವೇದಪುಸ್ತಕಗಳನ್ನು ಬರೆದ ಗ್ರಂಥಕರ್ತರು ಬೇಕಾದ ವಿಷಯಗಳನ್ನು ತಿಳಿಯುವ ಉದ್ದಿಶ್ಯ ಪ್ರಯಾಸ ಪಟ್ಟರೆಂದು ಇದರಿಂದ ತೋರುತ್ತದೆ. ಬುಡದಿಂದ ಅಂದರೆ ಈ ಸುವಾರ್ತೆಯ ಆರಂಭದಲ್ಲಿರುವ ಸಂಗತಿಗಳನ್ನು ಮರಿಯಳ ಬಳಿಯಲ್ಲಾದರೂ, ಅವಳ ನೆಂಟರ ಬಳಿಯಲ್ಲಾದರೂ ಲೂಕನು ಕೇಳಿ ವಿಚಾರಿಸಿರುವನೆಂದು ತೋರುತ್ತದೆ.

7. ಅರಸನಾದ ದಾವೀದನು ಯಾಜಕರನ್ನು ಇಪ್ಪತ್ತನಾಲ್ಕು ಒಂತುಗಳಾಗಿ ವಿಭಾಗಿಸಿ, ದೇವಾಲಯದಲ್ಲಿ ಸೇವೆ ಮಾಡುವ ಹಾಗೆ ನೇಮಿಸಿದನು. ಅಬೀಯನು ಎಂಬವನ ಒಂತು ಮೇಲೆ ಹೇಳಿದ ಒಂತುಗಳಲ್ಲಿ ಎಂಟನೇದು. ಒಂದೊಂದು ಒಂತಿನವರೂ ವರುಷಕ್ಕೆ ಎರಡು ಸಾರಿ ದೇವಾಲಯದಲ್ಲಿ ಸೇವೆ ಮಾಡ ಬೇಕಾಗಿತ್ತು. (೧ ದಿನಚ. ೨೪. ೧—೧೯. ೨ ದಿನಚ. ೮. ೧೪.) ಈ ೨೪ ಒಂತುಗಳಲ್ಲಿ ೪ ಒಂತಿನವರು ಮಾತ್ರ ಬಾಬೆಲಿನ ಶೆರೆಯಿಂದ ತಿರಿಗಿ ಬಂದರು. (ಎಜ್ರ. ೨. ೩೬.) ಹೀಗೆ ತಿರಿಗಿ ಬಂದವರು ಮುಂಚಿನಂತೆ ೨೪ ಒಂತುಗಳಾಗಿದ್ದು, ದೇವಾಲಯದ ಸೇವೆ ನಡಿಸಿದರು.

8. ಆರೋನನ ಹೆಂಡತಿ ಎಲಿಷೇಬಳೆಂಬವಳು. (ಹೊರ. ೬. ೨೩.) ಈ ಹೆಸರೂ ಎಲಿಸಬೇತ್ ಎಂಬ ಹೆಸರೂ ಒಂದೇ ಅರ್ಥವುಳ್ಳದ್ದು. "ದೇವ ಆಣೆ" ಎಂಬುವ ತಾತ್ಪರ್ಯವು. ಸ್ನಾನಿಕನಾದ ಯೋಹಾನನ ತಂದೆ ತಾಯಿಗಳಿಬ್ಬರೂ ಯಾಜಕರ ಕುಲಕ್ಕೆ ಶೇರಿದವರು. ಒಬ್ಬ ಯಾಜಕನು ಯಾವ ಗೋತ್ರದಲ್ಲ್ಯಾದರೂ ಮದುವೆ ಮಾಡಿ ಕೊಳ್ಳ ಬಹುದು. (೨ ದಿನಚ. ೨೨. ೧೧.)



೭ ಕೊಂಡು, [1]ದೇವರ ಮುಂದೆ ನೀತಿವಂತರಾಗಿದ್ದರು. ಇದಲ್ಲದೆ ಎಲಿಸಬೇತಳು ಬಂಜೆಯಾದದರಿಂದ, ಅವರಿಗೆ
ಮಕ್ಕಳು ಇರಲಿಲ್ಲ; ಮತ್ತು ಅವರಿಬ್ಬರು ದಿನ ಗತಿಸಿದವರಾಗಿದ್ದರು.
೮ ಹೀಗಿರಲಾಗಿ, ಅವನು ತನ್ನ ಒಂತಿನ ಮೇರೆಗೆ ದೇವರ ಮುಂದೆ ಯಾಜಕಸೇವೆ ಮಾಡುತ್ತಿರುವಾಗ,
೯ ಯಾಜಕಸೇವೆಯ ಮರ್ಯಾದೆಯ ಪ್ರಕಾರ, [2]ಕರ್ತನ ಮಂದಿರದಲ್ಲಿ ಪ್ರವೇಶಿಸಿ, ಧೂಪವರ್ಪಿಸುವದು ಅವನ
೧೦ ಪಾಲಿಗೆ ಬಂತು. ಮತ್ತು ಜನರ ಸಮೂಹವೆಲ್ಲಾ, ಧೂಪಾರ್ಪಣೆಯ ಹೊತ್ತಿನಲ್ಲಿ ಹೊರಗೆ [3]ಪ್ರಾರ್ಥನೆ
ಮಾಡುತ್ತಿತ್ತು.
೧೧, ೧೨ ಆಗ ಕರ್ತನ ದೂತನು ಧೂಪಪೀಠದ ಬಲಪಾರ್ಶ್ವದಲ್ಲಿ ನಿಂತು, ಅವನಿಗೆ ಕಾಣಿಸಿ ಕೊಂಡನು. ಜಕ
ರೀಯನು ಅವನನ್ನು ನೋಡಿ, ಕಳವಳ ಪಟ್ಟನು; ಮತ್ತು [4]ಭಯವು ಅವನ ಮೇಲೆ ಬಿತ್ತು.
೧೩ ಆಗ ದೂತನು ಅವನಿಗೆ, ಜಕರೀಯನೇ, ಭಯ ಪಡ ಬೇಡ; ಯಾಕಂದರೆ ನಿನ್ನ [5]ವಿಜ್ಞಾಪನೆಯು ಕೇಳಲ್ಪ
ಟ್ಟಿತು; ಮತ್ತು ನಿನ್ನ ಹೆಂಡತಿಯಾದ ಎಲಿಸಬೇತಳು ನಿನಗೆ ಮಗನನ್ನು ಹೆರುವಳು, ಅವನಿಗೆ [6]ಯೋಹಾನ
೧೪ ನೆಂಬ ಹೆಸರಿಡ ಬೇಕು; ಸಂತೋಷವೂ ಆನಂದವೂ ನಿನಗಿರುವವು; ಮತ್ತು ಅನೇಕರು ಅವನ ಜನನಕ್ಕೆ
೧೫ ಸಂತೋಷ ಪಡುವರು; ಯಾಕಂದರೆ ಅವನು [7]ಕರ್ತನ ಮುಂದೆ ದೊಡ್ಡವನಾಗಿ, ದ್ರಾಕ್ಷೇ ರಸವನ್ನೂ
ಮದ್ಯವನ್ನೂ ಕುಡಿಯದೆ, ತನ್ನ ತಾಯಿಯ ಗರ್ಭದಿಂದಲೇ ಪರಿಶುದ್ಧಾತ್ಮದಿಂದ ತುಂಬಿದವನಾಗುವನು.
೧೬ ಮತ್ತು ಇಸ್ರಯೇಲನ ಮಕ್ಕಳಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತನ ಕಡೆಗೆ ತಿರುಗಿಸುವನು.
೧೭ ಅವನು ತಂದೆಗಳ ಹೃದಯಗಳನ್ನು ಮಕ್ಕಳ ಕಡೆಗೂ, ಅವಿಧೇಯರನ್ನು ನೀತಿವಂತರ ಬುದ್ಧಿಗೂ ತಿರುಗಿಸಿ,
ಕರ್ತನಿಗೆ ಆಯತ್ತರಾಗಿರುವ ಜನರನ್ನು ಸಿದ್ಧ ಮಾಡುವದಕ್ಕೆ, [8]ಎಲೀಯನ ಆತ್ಮದಲ್ಲಿಯೂ ಬಲದಲ್ಲಿಯೂ
ಅವನ ಮುಂದೆ ಹೋಗುವನು, (ಮಲಕಿ. ೪. ೫, ೬.) ಅಂದನು.
೧೮ ಜಕರೀಯನು ದೂತನಿಗೆ, ನಾನು [9]ಯಾತರಿಂದ ಇದನ್ನು ತಿಳುಕೊಳ್ಳಲಿ? ಯಾಕಂದರೆ ನಾನು ಮುದು
೧೯ ಕನು; ಮತ್ತು ನನ್ನ ಹೆಂಡತಿಯು ದಿನ ಗತಿಸಿದವಳು, ಅಂದಾಗ; ದೂತನು ಪ್ರತ್ಯುತ್ತರವಾಗಿ ಅವನಿಗೆ

1. ಅವರು ಫರಿಸಾಯರ ಹಾಗೆ ಮನುಷ್ಯರ ಮುಂದೆ ಮಾತ್ರ ಭಕ್ತಿಯಾಗಿ ನಡಿಯದೆ, ದೇವರ ಮುಂದೆಯೂ ಭಕ್ತರಾಗಿ ನಡೆದರು. ಮಲಕಿ. ೪. ೪ಲ್ಲಿ ಇರುವ ದೈವಕಟ್ಟಳೆಯ ಪ್ರಕಾರ ಅವರು ನಡೆದದರಿಂದ, ಮಲಕಿ. ೩. ೧ಲ್ಲಿ ಇರುವ ವಾಗ್ದತ್ತವು ಯಾವಾಗ ಈಡೇರುವದೋ ಎಂದು ಆಸಕ್ತಿಯಿಂದ ನಿರೀಕ್ಷಿಸುತ್ತಿದ್ದರು.

2. ದೇವಾಲಯದಲ್ಲಿರುವ ಪರಿಶುದ್ಧ ಸ್ಥಳದಲ್ಲಿ ದೀಪ ಧೂಪಗಳೊಡನೆ ಹೋಗಿ ಕರ್ತನನ್ನು ಆರಾಧಿಸುವದು ಯಾಜಕನಿಗೆ ಘನವಾದ ಕೆಲಸ. ಇದನ್ನು ಮಾಡ ತಕ್ಕವರನ್ನು ಚೀಟು ಹಾಕಿ ನೇಮಿಸುವರು. ಇದನ್ನು ಒಬ್ಬನು ಒಂದು ಸಾರಿ ಮಾಡ ಬೇಕೇ ಹೊರ್ತು ಎರಡನೇ ಸಾರಿ ಮಾಡ ಕೂಡದು.

3. (ಹೊರ. ೩೦. ೧—೧೦.) ಈ ಸಮಯದಲ್ಲಿ ಜನಸಮೂಹವು ಪ್ರಾರ್ಥನೆ ಮಾಡಿ ಕೊಂಡಿದ್ದದರಿಂದ ಅದು ಸಬ್ಬತು ದಿವಸವಾಗಿರ ಬೇಕು. ಬೇರೆ ದಿವಸಗಳಲ್ಲಿ ಅಷ್ಟು ಜನರು ಇರುವದಿಲ್ಲ.

4. ದೂತನನ್ನು ಕಂಡಾಗಲೇ ಜಕರೀಯನು ಭಯ ಪಟ್ಟನು. ಅವನು ತನ್ನ ನೀಚತ್ವವನ್ನೂ, ದೂತನ ಮಹಿಮೆಯನ್ನೂ, ಆಕಸ್ಮಿಕವಾಗಿ ಉಂಟಾದ ನೋಟವನ್ನೂ ಕಂಡು, ಕಳವಳ ಪಟ್ಟನು. (ದಾನಿ. ೮. ೧೬, ೧೭; ೧೦. ೫—೧೨.)

5. ಜಕರೀಯನೂ ಎಲಿಸಬೇತಳೂ ತಮ್ಮ ಯೌವನದ ದಿವಸಗಳಲ್ಲಿ ಮಕ್ಕಳ ವರಕ್ಕಾಗಿ ಆಗಾಗ್ಯೆ ಬೇಡಿ ಕೊಂಡಿರುವರು. ಈಗ ಮುಪ್ಪಿನವರಾದದರಿಂದ ಹಾಗೆ ಬೇಡಿ ಕೊಳ್ಳದೆ ಇರುವರು. ಅವರು ಬಹು ದಿವಸಗಳ ಮುಂಚೆ ಮಾಡಿದ ಪ್ರಾರ್ಥನೆಯನ್ನು ಕರುಣೆಯುಳ್ಳ ದೇವರು ತನ್ನ ಚಿತ್ತದಲ್ಲಿ ನೆನಸಿ, ಕಡೆಯಲ್ಲಿ ಅವರಿಗೆ ವರ ಕೊಡುತ್ತಾನೆ. ಭಕ್ತರ ಪ್ರಾರ್ಥನೆ ವ್ಯರ್ಥವಾಗಲಾರದು. ಬೇರೆ ಭಕ್ತರಾದ ಯೆಹೂದ್ಯರ ಹಾಗೆ ಜಕರೀಯನೂ ಎಲಿಸಬೇತಳೂ, ಲೋಕರಕ್ಷಕನು ಅವತರಿಸುವದನ್ನು ಕುರಿತೂ ಆತನ ಮುಂದೂತನ ಜನನವನ್ನು ಕುರಿತೂ ಪ್ರಾರ್ಥನೆ ಮಾಡಿರುವರು. ಆ ಪ್ರಾರ್ಥನೆಯನ್ನು ಕುರಿತು ಹೀಗೆ ಹೇಳಿರ ಬಹುದು.

6. "ಯೋಹಾನ" ಅಂದರೆ "ದೇವಕೃಪೆ" ಎಂಬ ಅರ್ಥವು.

7. ಯೋಹಾನನು ಲೌಕಿಕ ಮಹಿಮೆ ಇಲ್ಲದವನಾದಾಗ್ಯೂ, ದೇವರಿಗೆ ದಾಸನಾಗಿಯೂ, (ಮತ್ತಾ. ೧೧. ೧೧.) ಶ್ರೇಷ್ಠ ಯಾಜಕನಾಗಿಯೂ, (ಲೇವಿ. ೧೦. ೯.) ನಜೀರನಾಗಿಯೂ, (ಅಂಕೆ. ೬. ೧—೨೧.) ಪರಿಶುದ್ಧಾತ್ಮನ ವರಪ್ರಸಾದವನ್ನು ಪೂರ್ಣವಾಗಿ ಹೊಂದಿದವನಾಗಿಯೂ ಇದ್ದನು.

8. ತಂದೆಗಳು ಮಕ್ಕಳು ಎಲ್ಲರಿಗೂ ನ್ಯಾಯಪ್ರಮಾಣವನ್ನು ಹೇಳಿ, ಅವರ ಪಾಪವನ್ನು ಅವರಿಗೆ ತಿಳಿಯ ಪಡಿಸಿ, ಪಾಪನಾಶನಾದ ಯೇಸುವಿನ ಬಳಿಗೆ ಅವರನ್ನು ನಡಿಸುವಂತೆ ಪ್ರಸಂಗಿಸುವದೇ ಯೋಹಾನನ ಮುಖ್ಯ ಕೆಲಸ. ಈ ಮುಖ್ಯ ಕೆಲಸ ಮಾಡುವದರಲ್ಲಿ ಅವನು ಎಲೀಯನ ಹಾಗೆ ವೈರಾಗ್ಯವೂ ದೃಢವೂ ಉಳ್ಳವನಾಗಿದ್ದನು. (ಮಲಕಿ. ೪. ೫, ೬.)

9. ಇದು ಅವನ ಅವಿಶ್ವಾಸವನ್ನು ತೋರಿಸುವ ಪ್ರಶ್ನೆ. ಅದರಿಂದ ಅವನಿಗೆ ಸ್ವಲ್ಪ ಕಾಲ ದೇವರ ದಂಡನೆ ಪ್ರಾಪ್ತಿಸಿತು. (೨೨. ವ.) ಅಬ್ರಹಾಮನ ದೃಷ್ಟಾಂತವು ಇದಕ್ಕೆ ಎದುರಾದದ್ದು.

ಹೇಳಿದ್ದು, ನಾನು [1]ದೇವರ ಮುಂದೆ ನಿಂತು ಕೊಳ್ಳುವ ಗಬ್ರಿಯೇಲನು; ನಿನ್ನ ಸಂಗಡ ಮಾತಾಡಿ ಇವುಗಳನ್ನು
೨೦ ನಿನಗೆ ತಿಳಿಸುವ ಹಾಗೆ ಕಳುಹಿಸಲ್ಪಟ್ಟಿದ್ದೇನೆ. ಮತ್ತು, ಇಗೋ, ತಕ್ಕ ಸಮಯದಲ್ಲಿ ಈಡೇರುವ ನನ್ನ ವಾಕ್ಯ
ಗಳನ್ನು ನೀನು ನಂಬದೆ ಹೋದದರಿಂದ, ಇವು ಆಗುವ ದಿನದ ವರಿಗೂ ಮೌನವಾಗಿದ್ದು, ಮಾತಾಡಲಾ
ರದೆ ಇರುವಿ.

೨೧ ಇಷ್ಟರಲ್ಲಿ ಜನರು ಜಕರೀಯನಿಗೋಸ್ಕರ [2]ಕಾದು ಕೊಂಡು, ಅವನು ದೇವಾಲಯದಲ್ಲಿ ತಡ ಮಾಡಿದ್ದಕ್ಕೆ
೨೨ ಆಶ್ಚರ್ಯ ಪಟ್ಟರು. ಹೊರಗೆ ಬಂದಾಗ, ಅವರ ಸಂಗಡ ಮಾತಾಡಲಾರದೆ ಇದ್ದನು. ಆಗಲವನು ದೇವಾ
ಲಯದಲ್ಲಿ ದರ್ಶನವನ್ನು ಕಂಡಿದ್ದಾನೆಂದು, ತಿಳುಕೊಂಡರು. ಹ್ಯಾಗಂದರೆ ಅವನು ಅವರಿಗೆ ಸೌಜ್ಞೆ ಮಾಡಿ,
ಮೂಕನಾಗಿಯೇ ಇದ್ದನು.

೨೩, ೨೪ ಅವನ ಸೇವೆಯ ದಿವಸಗಳು ಪೂರ್ಣವಾದ ಮೇಲೆ, ತನ್ನ ಮನೆಗೆ ಹೋದನು. ಆ ದಿವಸಗಳಾದ
೨೫ ಮೇಲೆ ಅವನ ಹೆಂಡತಿಯಾದ ಎಲಿಸಬೇತಳು ಗರ್ಭ ಧರಿಸಿ ಕೊಂಡು, ಮನುಷ್ಯರಲ್ಲಿ ನನಗಾದ ಅಪಮಾ
ನವನ್ನು ತೆಗೆದು ಹಾಕುವದಕ್ಕೆ ಕರ್ತನು ದೃಷ್ಟಿ ಇಟ್ಟ ದಿವಸಗಳಲ್ಲಿ ಹೀಗೆ ನನಗೆ ಮಾಡಿದ್ದಾನೆಂದು ಹೇಳಿ,
[3]ಐದು ತಿಂಗಳು ಅಡಗಿ ಕೊಂಡಳು.

ಕ್ರಿಸ್ತನ ಅದ್ಭುತ ಜನನವನ್ನು ದೇವದೂತನು ಮರಿಯಳಿಗೆ ಮುಂತಿಳಿಸಿದ್ದು; ಅವಳು ಎಲಿಸಬೇತಳನ್ನು ಕಂಡು
ಸ್ತೋತ್ರಗೀತ ಹಾಡಿದ್ದು.

೨೬, ೨೭ ಮತ್ತು [4]ಆರನೇ ತಿಂಗಳಲ್ಲಿ, ಗಬ್ರಿಯೇಲನೆಂಬ ದೂತನು, ಗಲಿಲಾಯದ [5]ನಜರೇತೆಂಬ ಪಟ್ಟಣಕ್ಕೆ, [6]ದಾವೀ
ದನ ಮನೆತನದವನಾದ ಯೋಸೆಫನೆಂಬ ಒಬ್ಬ ಮನುಷ್ಯನಿಗೆ ನೇಮಕ ಮಾಡಲ್ಪಟ್ಟ ಒಬ್ಬ ಕನ್ನಿಕೆಯ ಬಳಿಗೆ
೨೮ ದೇವರಿಂದ ಕಳುಹಿಸಲ್ಪಟ್ಟನು. ಆ ಕನ್ನಿಕೆಯ ಹೆಸರು ಮರಿಯಳು. ದೂತನು ಅವಳ ಬಳಿಗೆ ಪ್ರವೇಶಿಸಿ,
ಕೃಪೆ ಹೊಂದಿದವಳೇ, ಶುಭವಾಗಲಿ! ಕರ್ತನು ನಿನ್ನ ಸಂಗಡ ಇದ್ದಾನೆ; ಹೆಂಗಸರಲ್ಲಿ ನೀನು ಆಶೀರ್ವದಿಸಲ್ಪ
೨೯ ಟ್ಟವಳು, ಅಂದನು. ಅವಳು ಅವನನ್ನು ನೋಡಿ, ಅವನ ಮಾತಿಗೆ ಕಳವಳ ಪಟ್ಟು, ಇದು ಎಂಥಾ ವಂದನೆ?
ಎಂದು ಆಲೋಚನೆ ಮಾಡಿ ಕೊಂಡಿರುವಾಗ,

೩೦ ದೂತನು ಅವಳಿಗೆ ಹೇಳಿದ್ದೇನಂದರೆ, ಮರಿಯಳೇ, ಭಯ ಪಡ ಬೇಡ; ದೇವರ ಬಳಿಯಲ್ಲಿ ಕೃಪೆ ಹೊಂದಿದ್ದೀ.
೩೧ ಮತ್ತು, ಇಗೋ, ಗರ್ಭ ಧರಿಸಿ ಕೊಂಡು, ಮಗನನ್ನು ಹೆರುವಿ; ಅವನಿಗೆ ಯೇಸುವೆಂಬ ಹೆಸರಿಡ ಬೇಕು.

1. ದೇವಸನ್ನಿಧಿಯಿಂದ ಬಂದ ದೂತನು ಮುಖ್ಯವಾದ ಕಾರ್ಯಕ್ಕಾಗಿ ಬಂದಿರ ಬೇಕು. ಮುಂಚೆ ಒಂದು ಕಾಲದಲ್ಲಿ ಪ್ರವಾದಿಯಾದ ದಾನಿಯೇಲನ ಬಳಿಗೆ, ಲೋಕರಕ್ಷಕನಾದ ಮೆಸ್ಸೀಯನ ಬರುವಿಕೆಯ ಕಾಲವನ್ನು ತಿಳಿಸುವದಕ್ಕೆ ಬಂದ ದೂತನು ಇವನೇ. (ದಾನಿ. ೮. ೧೬; ೯. ೨೧, ೨೫.)

2. ಜನರು ಯಾಜಕನ ಆಶೀರ್ವಾದವನ್ನು ಹೊಂದದೆ ತಮ್ಮ ಮನೆಗಳಿಗೆ ಹೋಗುವ ವಾಡಿಕೆ ಇಲ್ಲ. ಜಕರೀಯನು ಹೊರಗೆ ಬರುವದಕ್ಕೆ ತಾಮಸ ಮಾಡಿದ್ದರಿಂದ, ಅವನಿಗೆ ಏನು ಸಂಭವಿಸಿತೋ ಎಂದು ಜನರು ಕಳವಳ ಪಟ್ಟರು. ಬಹಳ ಹೊತ್ತು ಹೋಗಿ ಹೊರಗೆ ಬಂದು ಮಾತಾಡಲಾರದೆ ಸೌಜ್ಞೆ ಮಾಡಿದಾಗ, ಅವನ ವಿಷಯ ಅವರಿಗೆ ಅಧಿಕ ಆಶ್ಚರ್ಯವಾಯಿತು. ಮೂಕನಾಗಿದ್ದ ಅವನು ಕಿವುಡನಾಗಿಯೂ ಇದ್ದನೆಂದು ತೋರುತ್ತದೆ. (೨೨, ೬೨. ವ.)

3. ಐದು ತಿಂಗಳ ವರಿಗೂ ಎಲಿಸಬೇತಳು ಹೊರಗೆ ಹೋಗದೆ ಏಕಾಂತವಾಗಿದ್ದದ್ದನ್ನು ನೋಡುವಾಗ, ನ್ಯಾಯಪ್ರಮಾಣದ ಪ್ರಕಾರ ತನಗೂ ತನ್ನ ಗರ್ಭದ ಫಲಕ್ಕೂ ಅಶುಚಿಯಾಗದ ಹಾಗೆಯೂ, (ನ್ಯಾಯಾಧಿ. ೧೩. ೪.) ತನಗೆ ಇಷ್ಟು ಕನಿಕರವನ್ನು ತೋರಿಸಿದ ತನ್ನ ದೇವರಿಗೆ ಸ್ತೋತ್ರ ಮಾಡುವದಕ್ಕೆ ಅಭ್ಯಂತರವಾಗದ ಹಾಗೆಯೂ, ಹೀಗೆ ಇದ್ದಳೆಂದು ತೋರುತ್ತದೆ.

4. ಸ್ನಾನಿಕನಾದ ಯೋಹಾನನ ಜನನವನ್ನು ಕುರಿತು ಜಕರೀಯನಿಗೆ ತಿಳಿಯ ಪಡಿಸಿದ ಆರನೇ ತಿಂಗಳಲ್ಲಿ ಗಬ್ರಿಯೇಲನೆಂಬುವ ದೂತನು ಮರಿಯಳಿಗೆ ಲೋಕರಕ್ಷಕನ ಜನನವನ್ನು ಕುರಿತು ತಿಳಿಸಿದನು. (೩೫, ೩೬. ವ.)

5. ಮತ್ತಾ. ೨. ೨೩. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

6. ಈ ವಚನದಲ್ಲಿಯೂ ಮತ್ತಾ. ೧. ೨೦ಲ್ಲಿಯೂ ಯೋಸೆಫನು ದಾವೀದನ ವಂಶದವನೆಂದು ಹೇಳಿ ಇದೆ. ಮರಿಯಳು ದಾವೀದನ ವಂಶದವಳೆಂದು ಸುವಾರ್ತೆಗಳಲ್ಲಿ ನೆಟ್ಟಗೆ ಹೇಳದೆ ಸೂಚನೆಯಾಗಿ ಹೇಳಿ ಇದೆ. (೩೨—೩೫. ರೋಮಾ. ೧. ೧. ಇಬ್ರಿ. ೭. ೧೪. ಅಪೊ. ಕ್ರಿ. ೨. ೩೦. ಕೀರ್ತ. ೧೩೨. ೧೧.)



೩೨ ಅವನು ದೊಡ್ಡವನಾಗಿದ್ದು, [1]ಮಹೋನ್ನತನ ಮಗನೆಂದು ಕರೆಯಲ್ಪಡುವನು; ಮತ್ತು ಕರ್ತನಾದ ದೇವರು
೩೩ ಅವನಿಗೆ ಅವನ ತಂದೆಯಾದ [2]ದಾವೀದನ ಸಿಂಹಾಸನವನ್ನು ಕೊಡುವನು. ಅವನು ಯಾಕೋಬನ ಮನೆ
ಯನ್ನು ಎಂದೆಂದಿಗೂ ಆಳುವನು; ಮತ್ತು ಅವನ ರಾಜ್ಯಕ್ಕೆ ಅಂತ್ಯವು ಇರದು.
೩೪, ೩೫ ಮರಿಯಳು ದೂತನಿಗೆ, ಇದು ಹ್ಯಾಗೆ? ನಾನು ಗಂಡನನ್ನು ಅರಿಯೆ, ಅನ್ನಲು; ದೂತನು ಪ್ರತ್ಯುತ್ತರ
ವಾಗಿ ಅವಳಿಗೆ ಹೇಳಿದ್ದೇನಂದರೆ, [3]ಪರಿಶುದ್ಧಾತ್ಮವು ನಿನ್ನ ಮೇಲೆ ಬರುವದು; ಮತ್ತು ಮಹೋನ್ನತನ ಬಲವು
ನಿನ್ನ ಮೇಲೆ ನೆರಳಾಗಿರುವದು; ಆದದರಿಂದ ಹುಟ್ಟುವ [4]ಪರಿಶುದ್ಧವಾದದ್ದು ದೇವರ ಮಗನೆಂದು ಕರೆಯಲ್ಪ
೩೬ ಡುವದು. ಮತ್ತು, ಇಗೋ, ನಿನ್ನ ನೆಂಟಳಾದ [5]ಎಲಿಸಬೇತಳು ಸಹ ತನ್ನ ಮುಪ್ಪಿನಲ್ಲಿ ಮಗನನ್ನು ಗರ್ಭ
೩೭ ದಲ್ಲಿ ಧರಿಸಿ ಕೊಂಡಿದ್ದಾಳೆ; ಬಂಜೆ ಎಂದು ಕರೆಯಲ್ಪಟ್ಟ ಅವಳಿಗೆ ಇದೇ ಆರನೇ ತಿಂಗಳು. ಯಾಕಂದರೆ
ದೇವರ ಬಳಿಯಲ್ಲಿ ಯಾವ ಕಾರ್ಯವಾದರೂ ಅಸಾಧ್ಯವಲ್ಲ.
೩೮ ಆದಕ್ಕೆ ಮರಿಯಳು, ಇಗೋ, [6]ನಾನು ಕರ್ತನ ದಾಸಿಯು, ನಿನ್ನ ಮಾತಿನ ಮೇರೆಗೆ ನನಗಾಗಲಿ, ಅಂ
ದಳು. ಆಗ ದೂತನು ಅವಳನ್ನು ಬಿಟ್ಟು ಹೋದನು.
೩೯ ಆ ದಿವಸಗಳಲ್ಲಿ ಮರಿಯಳು ಎದ್ದು, ಬೆಟ್ಟದ ಶೀಮೆಗೆ, [7]ಯೆಹೂದದ ಪಟ್ಟಣಕ್ಕೆ, ಬೇಗ ಹೋಗಿ,
೪೦, ೪೧ ಜಕರೀಯನ ಮನೆಯಲ್ಲಿ ಪ್ರವೇಶಿಸಿ, ಎಲಿಸಬೇತಳನ್ನು ವಂದಿಸಿದಳು. ಎಲಿಸಬೇತಳು ಮರಿಯಳ ವಂದನೆ
ಕೇಳಿದಾಗ, ಅವಳ ಗರ್ಭದೊಳಗೆ ಕೂಸು ಹಾರ್ಯಾಡಿತು. ಮತ್ತು ಎಲಿಸಬೇತಳು [8]ಪರಿಶುದ್ಧಾತ್ಮದಿಂದ ತುಂ
೪೨ ಬಿದವಳಾಗಿ, ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, ನೀನು ಸ್ತ್ರೀಯರಲ್ಲಿ ಆಶೀರ್ವದಿಸಲ್ಪಟ್ಟವಳು,
೪೩ ಮತ್ತು ನಿನ್ನ ಗರ್ಭದ ಫಲವು ಆಶೀರ್ವದಿಸಲ್ಪಟ್ಟದ್ದು. ಇದಲ್ಲದೆ ನನ್ನ ಕರ್ತನ ತಾಯಿಯು ನನ್ನ ಬಳಿಗೆ
೪೪ ಬಂದದ್ದು ನನಗೆ ಹ್ಯಾಗೆ ಉಂಟಾಯಿತು? ಯಾಕಂದರೆ, ಇಗೋ, ನಿನ್ನ ವಂದನೆಯ ಶಬ್ದವು ನನ್ನ ಕಿವಿಗ
೪೫ ಳಲ್ಲಿ ಬಿದ್ದಾಗ, ಕೂಸು ನನ್ನ ಗರ್ಭದಲ್ಲಿ ಉಲ್ಲಾಸದಿಂದ ಹಾರ್ಯಾಡಿತು. ಇದಲ್ಲದೆ ಕರ್ತನಿಂದ ತನಗೆ
೪೬ ಹೇಳಲ್ಪಟ್ಟವುಗಳಿಗೆ ಸಂಪೂರ್ಣತ್ವವು ಆಗುವದೆಂದು ನಂಬುವವಳು [9]ಭಾಗ್ಯವಂತಳು. ಆಗ [10]ಮರಿಯಳು
ಹೇಳಿದ್ದೇನಂದರೆ,

1. ಮಹೋನ್ನತ ದೇವರು ಕ್ರಿಸ್ತನನ್ನು ತನ್ನ ಸ್ವಂತ ಕುಮಾರನೆಂದು ಸಾಕ್ಷಿ ಕೊಟ್ಟನು.

2. ೩೨, ೩೩. ವಚನಗಳು ಯೆಶಾ. ೯. ೬, ೭. ವಚನಗಳಿಗೆ ಸರಿಯಾಗಿವೆ. (೨ ಸಮು. ೭. ೧೨—೧೬. ಕೀರ್ತ. ೭೨. ಯೆಶಾ. ೧೧. ೧.)

3. ಇದು ಉತ್ಪ. ೧. ೩ಲ್ಲಿ ಹೇಳಿದ ಅಭಿಪ್ರಾಯಕ್ಕೆ ಸರಿಯಾಗಿದೆ. ಅದರಲ್ಲಿ ಲೋಕಸೃಷ್ಟಿಯು ಪರಿಶುದ್ಧಾತ್ಮನ ಕ್ರಿಯೆಯಿಂದ ನಡಿಯಿತೆಂದು ತೋರಿಸಿ ಇರುತ್ತದೆ.

4. ದೇವರ ಆದಿ ಪ್ರಮಾವನೆಯ ಹಾಗೆ ಲೋಕರಕ್ಷಕನು ಮನುಷ್ಯರಿಗೆ ಸಮೀಪ ಸಂಬಂಧವುಳ್ಳವನಾಗಿ, ಸ್ತ್ರೀಯ ಬೀಜವಾಗಿ ಇರ ಬೇಕಾದದ್ದು ಅವಶ್ಯವಾಗಿದ್ದ ಪ್ರಕಾರ (ಉತ್ಪ. ೩. ೧೫. ಗಲಾತ್ಯ. ೪. ೫.), ಆತನು ಪಾಪವಿಲ್ಲದ ಪರಿಶುದ್ಧನಾಗಿರ ಬೇಕಾದದ್ದು ಸಹ ಅವಶ್ಯವು. ಹೀಗಿಲ್ಲದಿದ್ದರೆ, ಪಾಪಾತ್ಮರಿಗಾಗಿ ಪ್ರಾಯಶ್ಚಿತ್ತ ಮಾಡುವದು ಅಸಾಧ್ಯವಾಗಿರುವದು.

5. ಅರಸನ ಕುಲದಲ್ಲಿಯೂ ಯಾಜಕರ ಕುಲದಲ್ಲಿಯೂ ನೆಂಟಸ್ತನ ಕಲತದ್ದಕ್ಕೆ ವೇದದಲ್ಲಿ ದೃಷ್ಟಾಂತವುಂಟು. (ಹೊರ. ೬. ೨೩. ೨ ದಿನಚ. ೨೨. ೧೧.) ದೇವದೂತನು ತಿಳಿಸಿದ ಅತಿಶಯವನ್ನು ಕುರಿತು ಕನ್ನಿಕೆಯಾದ ಮರಿಯಳ ಮನಸ್ಸಿನಲ್ಲಿ ನಿಶ್ಚಯ ಉಂಟಾಗುವಂತೆ ಎಲಿಸಬೇತಳ ಸಂಗತಿಯು ಹೇಳಲ್ಪಟ್ಟಿತು.

6. ಎಲಿಸಬೇತಳ ಸಂಗತಿಯನ್ನು ತಿಳಿಸಿ, ದೇವರು ಅವಳಿಗೆ ಕೊಟ್ಟ ವಾಗ್ದತ್ತದ ಪ್ರಕಾರ ನಡಿಸ ಶಕ್ತನೆಂದು ದೂತನು ಹೇಳಿದ ಮಾತ್ರದಲ್ಲಿ ಮರಿಯಳು ಲೋಕದವರ ನಿಂದೆಯೂ ಹಿಂಸೆಯೂ ತನಗೆ ಬರುವದೆಂದು ತಿಳಿದಾಗ್ಯೂ, ಅವಳು ದೇವರ ಚಿತ್ತಕ್ಕೆ ಒಳಪಟ್ಟು, ಅದೇ ತನ್ನ ಭಾಗ್ಯವೆಂದು ತಾಳ್ಮೆಯಿಂದ ನುಡಿದಳು. ಇದು ಹೆಬ್ರೋನಿಗೆ ದಕ್ಷಿಣದಲ್ಲಿ ಯಾಜಕರು ವಾಸ ಮಾಡಿದ ಪಟ್ಟಣವಾಗಿತ್ತು.

7. ಜಕರೀಯನು ಹೆಬ್ರೋನಿನಲ್ಲಿ ವಾಸಿಸಿದನೆಂದೂ, ಮರಿಯಳು ಅದೇ ಪಟ್ಟಣಕ್ಕೆ ಹೋದಳೆಂದೂ ತೋರುತ್ತದೆ. ದೂತನು ಹೇಳಿದ್ದನ್ನು ಕೇಳಿ ಎಲಿಸಬೇತಳನ್ನು ನೋಡುವದಕ್ಕೆ ಹೋದಳು.

8. ಮರಿಯಳ ತತ್ಕಾಲ ಸ್ಥಿತಿಯನ್ನೂ, ಅವಳು ಹೆರ ಹೋಗುವ ಮಗುವು ತನ್ನ ಕರ್ತನೆಂಬುವದನ್ನೂ ಎಲಿಸಬೇತಳು ಪರಿಶುದ್ಧಾತ್ಮನ ಕೃಪೆಯಿಂದ ತಿಳಿದು ಆನಂದಪರವಶವಾದಳು.

9. ತನ್ನ ಪುರುಷನಾದ ಜಕರೀಯನು ವಿಶ್ವಾಸಿಸದೆ ಹೋದದರಿಂದ ಮೂಕನಾಗಿ ಪರಿತಾಪಸ್ಥಿತಿಗೊಳಗಾದನು. ಅದನ್ನು ತಿಳಿದಿದ್ದ ಅವಳು "ನಂಬುವವಳು ಭಾಗ್ಯವಂತಳು", ಅಂದಳು.

10. ಮರಿಯಳ ಸ್ತೋತ್ರಸಂಗೀತವು ಅನೇಕ ವಿಷಯಗಳಲ್ಲಿ ಹನ್ನಳ ಸ್ತೋತ್ರಗೀತಕ್ಕೆ ಹೊಂದಿಕೆಯಾಗಿದೆ. (೧ ಸಮು. ೨. ೧—೧೦.) ಈ ಉನ್ನತ ಸಂಗೀತದಲ್ಲಿ ಮರಿಯಳು ದೇವರ ಕರುಣೆಯನ್ನೂ, ಆತನು ತನ್ನ ದಾಸರ ಮೇಲೆ ಇಟ್ಟಿರುವ ಮಾರ್ಪಡದ ಕೃಪೆಯನ್ನೂ, (೪೬—೫೦.) ಎತ್ತರವಾದವರನ್ನು ತಗ್ಗಿಸಿ ದೀನರನ್ನು ಹೆಚ್ಚಿಸುವ ಆತನ ಆಶ್ಚರ್ಯ ಕ್ರಿಯೆಯನ್ನೂ, (೫೧—೫೩.) ಅಬ್ರಹಾಮನು ಮೊದಲಾದ ಭಕ್ತರಿಗೆ ದಯಪಾಲಿಸಿದ ವಾಗ್ದತ್ತದ ಪ್ರಕಾರ

ನನ್ನ ಪ್ರಾಣವು ಕರ್ತನನ್ನು ಮಹಿಮೆ ಪಡಿಸುತ್ತದೆ;
೪೭ ನನ್ನ ಆತ್ಮವು ನನ್ನ ರಕ್ಷಕನಾದ ದೇವರಲ್ಲಿ ಆನಂದ ಪಟ್ಟದೆ.
೪೮ ಯಾಕಂದರೆ ತನ್ನ ದಾಸಿಯ [1]ದೀನತ್ವದ ಮೇಲೆ ದೃಷ್ಟಿ ಇಟ್ಟಿದ್ದಾನೆ;
ಇದಕ್ಕೋಸ್ಕರ, ಇಗೋ, ಇಂದಿನಿಂದ ಸಕಲ ತಲಾಂತರಗಳು ನನ್ನನ್ನು ಭಾಗ್ಯವಂತಳೆಂದು ಹೇಳುವವು.
೪೯ ಯಾಕಂದರೆ ಬಲವುಳ್ಳವನು ನನಗೆ ಮಹತ್ತಾದವುಗಳನ್ನು ಮಾಡಿದ್ದಾನೆ; ಅವನ ಹೆಸರು ಪರಿಶುದ್ಧವಾದದ್ದು.
೫೦ ಮತ್ತು ಅವನ ಕರುಣೆಯು ಅವನಿಗೆ ಭಯ ಪಡುವವರ ಮೇಲೆ ತಲತಲಾಂತರಗಳ ವರಿಗೂ ಇರುವದು.
೫೧ ಅವನು ತನ್ನ ಭುಜದಿಂದ ತ್ರಾಣವನ್ನು ತೋರಿಸಿ,
ಅವರ ಹೃದಯದ ಆಲೋಚನೆಯಿಂದ ಗರ್ವಿಷ್ಠರನ್ನು ಚದರಿಸಿದ್ದಾನೆ.
೫೨ ಪ್ರಭುಗಳನ್ನು ಸಿಂಹಾಸನಗಳಿಂದ ದೊಬ್ಬಿ ಹಾಕಿ, ದೀನರನ್ನು ಎತ್ತಿದ್ದಾನೆ.
೫೩ ಹಸಿದವರನ್ನು [2]ಒಳ್ಳೆಯವುಗಳಿಂದ ತುಂಬಿಸಿ,
ಐಶ್ವರ್ಯವಂತರನ್ನು ಬರೀದಾಗಿ ಕಳುಹಿಸಿ ಬಿಟ್ಟಿದ್ದಾನೆ.
೫೪ ನಮ್ಮ ತಂದೆಗಳಾದ ಅಬ್ರಹಾಮನಿಗೂ ಸದಾಕಾಲ ಇರುವ ಅವನ ಬೀಜಕ್ಕೂ ಅವನು ಮಾತಾಡಿದ
೫೫ ಮೇರೆಗೆ, [3]ಕರುಣೆಗಳನ್ನು ಜ್ಞಾಪಕ ಮಾಡಿ ಕೊಂಡು,
ತನ್ನ ಸೇವಕನಾದ ಇಸ್ರಯೇಲನನ್ನು ಆದರಿಸಿದ್ಧಾನೆ.

೫೬ ಆ ಮೇಲೆ ಮರಿಯಳು ಹೆಚ್ಚು ಕಡಿಮೆ ಮೂರು ತಿಂಗಳು ಅವಳ ಸಂಗಡ ಇದ್ದು, ತನ್ನ [4]ಮನೆಗೆ ತಿರಿಗಿ
ಹೋದಳು.

ಸ್ನಾನಿಕನಾದ ಯೋಹಾನನ ಜನನವೂ, ಜಕರೀಯನ ಪ್ರವಾದನೆಯೂ ಸಂಗೀತವೂ.

೫೭, ೫೮ ಇದಲ್ಲದೆ ಎಲಿಸಬೇತಳಿಗೆ ಹೆರುವ ಕಾಲ ಪೂರ್ಣವಾದಾಗ, ಮಗನನ್ನು ಹೆತ್ತಳು. ಆಗ ನೆರೆಮನೆಯ
ವರೂ, ಅವಳ ನೆಂಟರೂ, ಕರ್ತನು ಅವಳಲ್ಲಿ ತನ್ನ ಕರುಣೆಯನ್ನು ಅಧಿಕ ಮಾಡಿದ್ಧಾನೆಂದು ಕೇಳಿ, ಅವಳ
ಸಂಗಡ ಸಂತೋಷಿಸಿದರು.
೫೯ ಎಂಟನೇ ದಿವಸದಲ್ಲಿ ಅವರು ಕೂಸಿಗೆ ಪರಿಛೇದನೆ ಮಾಡುವದಕ್ಕೆ ಬಂದು, ಅದಕ್ಕೆ ತಂದೆಯ ಹೆಸರಾಗಿ
೬೦ ರುವ ಜಕರೀಯನೆಂಬ ಹೆಸರಿಟ್ಟರು. ಆಗಲವನ ತಾಯಿಯು ಪ್ರತ್ಯುತ್ತರವಾಗಿ, ಹಾಗಲ್ಲ; ಯೋಹಾನ
೬೧ ನೆಂದು ಕರೆಯಲ್ಪಡ ಬೇಕು, ಅಂದಾಗ; ಅವರು ಅವಳಿಗೆ, ನಿನ್ನ ನೆಂಟರಲ್ಲಿ ಈ ಹೆಸರಿನಿಂದ ಕರೆಯಲ್ಪಟ್ಟ
೬೨ ವನು ಒಬ್ಬನೂ ಇಲ್ಲವೆಂದು ಹೇಳಿದರು. ಇದಲ್ಲದೆ ಅವನಿಗೆ ಯಾವ ಹೆಸರಿಡ ಬೇಕೆಂದು, ತಂದೆಗೆ ಸೌಜ್ಞೆ
೬೩ ಮಾಡಿದರು. ಆಗಲವನು [5]ಹಲಿಗೆ ಕೇಳಿ ಕೊಂಡು, ಅವನ ಹೆಸರು ಯೋಹಾನನೇ ಎಂದು ಬರೆದನು; ಅದಕ್ಕೆ
೬೪ ಎಲ್ಲರು ಆಶ್ಚರ್ಯ ಪಟ್ಟರು. ಸಂಗಡಲೇ ಅವನ ಬಾಯಿಯೂ ನಾಲಿಗೆಯೂ ಬಿಡಿಸಲ್ಪಟ್ಟು, ಅವನು ದೇವ
ರನ್ನು ಸ್ತುತಿಸಿ, ಮಾತಾಡಿದನು.

ಆತನು ಮಾಡುವ ಅದ್ಭುತವಾದ ಕೆಲಸವನ್ನೂ (೫೪, ೫೫.) ಅವಳು ನೆನಸಿ, ಕೀರ್ತನೆಯನ್ನು ಹಾಡುತ್ತಾಳೆ.

1. ಅರಸನಾದ ದಾವೀದನ ವಂಶದವರು ಆ ಕಾಲದಲ್ಲಿ ದೀನ ಸ್ಥಿತಿಯಲ್ಲಿದ್ದರು. (ಯೆಶಾ. ೧೧. ೧. ಆಮೋ. ೯. ೧೧.) ಮರಿಯಳು ತಾನೇ ಪಾಪಿ ಎಂದೂ, ನನಗೆ ಒಬ್ಬ ರಕ್ಷಕನು ಅವಶ್ಯವೆಂದೂ ಅರಿಕೆ ಮಾಡಿರಲಾಗಿ, ಅವಳು ಜನ್ಮಪಾಪವಿಲ್ಲದ ಪರಿಶುದ್ಧಳೆಂದು ಸಾಧಿಸುವವರು ಇದಕ್ಕೆ ಏನು ಉತ್ತರ ಕೊಡುವರು?

2. ಇದು ಕೀರ್ತ. ೧೦೭. ೯. ವಚನಕ್ಕೆ ಸರಿಯಾಗಿದೆ. ಬಲಿಷ್ಠರು ಐಶ್ವರ್ಯವಂತರು ಎಂದು ಕರೆಯಲ್ಪಡುವವರು ಗರ್ವಿಷ್ಠರೆಂದು ತೋರುತ್ತದೆ.

3. ಇದು ಕೀರ್ತ. ೯೮. ೩ಕ್ಕೂ, ಮೀಕ. ೭. ೨೦. ವಚನಕ್ಕೂ ಸರಿಯಾಗಿದೆ.

4. ಮತ್ತಾ. ೧. ೧೮—೨೪. ವರಿಗೂ ಹೇಳಿರುವ ಸಂಗತಿಗಳು ಮರಿಯಳು ಎಲಿಸಬೇತಳ ಮನೆಯನ್ನು ಬಿಟ್ಟು ತನ್ನ ಮನೆಗೆ ಹೋದ ಮೇಲೆ ಸಂಭವಿಸಿರುವವು.

5. ಇದು ಅರಗು ಹಚ್ಚಿದ ಹಲಿಗೆಯಾಗಿರ ಬೇಕು. ಅದರ ಮೇಲೆ ಗಂಟದಿಂದ ಬರಿಯ ಬೇಕು. ನ್ಯಾಯಪ್ರಮಾಣದ ಪ್ರಕಾರ ಮಗುವಿಗೆ ಪರಿಛೇದನೆ ಮಾಡುವಾಗ, ಜಕರೀಯನ ನೆಂಟರು ಬಂದು, ತಂದೆಯ ಹೆಸರನ್ನು ಮಗುವಿಗೆ ಇಡ ಬೇಕೆಂದಿದ್ದರು. ಜಕರೀಯನು ಮೂಕನಾಗಿದ್ದದರಿಂದ, ಹಲಿಗೆಯನ್ನು ಕೇಳಿ ತೆಗೆದು ಕೊಂಡು, ದೇವದೂತನು ಹೇಳಿದ್ದ ಪ್ರಕಾರ, ಅದರ ಮೇಲೆ ಯೋಹಾನನೆಂದು ಬರೆದನು. ಸಂಗಡಲೇ ಅವನ ನಾಲಿಗೆ ಬಿಚ್ಚಲ್ಪಟ್ಟು, ದೇವರನ್ನು ಹೊಗಳಿದನು. ಜನರು ಇದನ್ನು ಕಂಡು, ಆಶ್ಚರ್ಯ ಪಟ್ಟರು.



೬೫ ಆಗಲವರ ಸುತ್ತಲು ವಾಸ ಮಾಡುವವರೆಲ್ಲರ ಮೇಲೆ ಭಯ ಉಂಟಾಗಿ, ಯೆಹೂದದ ಬೆಟ್ಟದ ಶೀಮೆಯಲ್ಲೆ
೬೬ ಲ್ಲಾ ಈ ಸಂಗತಿಗಳೆಲ್ಲಾ ಬೈಲಾದವು. ಮತ್ತು ಕೇಳಿದವರೆಲ್ಲರು, ಈ ಕೂಸು ಎಂಥಾದ್ದಾಗುವದೋ ಎಂದು
ಹೇಳಿ, ಅವುಗಳನ್ನು ತಮ್ಮ ಹೃದಯದಲ್ಲಿ ಇಟ್ಟು ಕೊಂಡರು. ಇದಲ್ಲದೆ ಕರ್ತನ ಕೈ ಅವನ ಸಂಗಡ ಇತ್ತು.
೬೭ ಮತ್ತು ಅವನ ತಂದೆಯಾದ ಜಕರೀಯನು ಪರಿಶುದ್ಧಾತ್ಮದಿಂದ ತುಂಬಿದವನಾಗಿ, [1]ಪ್ರವಾದಿಸಿ ಹೇಳಿದ್ದೇ
ನಂದರೆ,

೬೮ ಇಸ್ರಯೇಲನ ದೇವರಾದ ಕರ್ತನು ಸ್ತುತಿಸ ತಕ್ಕವನು!
ಯಾಕಂದರೆ ಅವನು ತನ್ನ ಜನರನ್ನು ದರ್ಶಿಸಿ, ಅವರಿಗೆ ವಿಮೋಚನೆ ಮಾಡಿ,
೬೯ ತನ್ನ ಸೇವಕನಾದ ದಾವೀದನ ಮನೆಯಲ್ಲಿ ನಮಗೆ [2]ರಕ್ಷಣೆಯ ಕೊಂಬನ್ನು ಎಬ್ಬಿಸಿದ್ದಾನೆ.
೭೦ ಲೋಕಾದಿಯಿಂದಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಯಿಂದ ತಾನು ಮಾತಾಡಿದ ಹಾಗೆ,
೭೧ ನಮ್ಮ ಶತ್ರುಗಳಿಂದಲೂ ನಮ್ಮನ್ನು ಹಗೆ ಮಾಡುವವರೆಲ್ಲರ ಕೈಯಿಂದಲೂ ನಮ್ಮನ್ನು ರಕ್ಷಿಸಿ,
೭೨ ನಮ್ಮ ತಂದೆಗಳಿಗೆ ಕರುಣೆ ಮಾಡಿ, ತನ್ನ ಪರಿಶುದ್ಧ ಒಡಂಬಡಿಕೆಯನ್ನೂ,
೭೩ ನಮ್ಮ ತಂದೆಯಾದ ಅಬ್ರಹಾಮನಿಗೆ ಇಟ್ಟು ಕೊಂಡ ಆಣೆಯನ್ನೂ, ಜ್ಞಾಪಕ ಮಾಡಿ ಕೊಂಡು,
೭೪ ನಾವು ನಿರ್ಭಯವಾಗಿ ನಮ್ಮ ಶತ್ರುಗಳ ಕೈಯಿಂದ ತಪ್ಪಿಸಲ್ಪಟ್ಟವರಾಗಿ,
೭೫ [3]ಪರಿಶುದ್ಧತ್ವದಲ್ಲಿಯೂ ನೀತಿಯಲ್ಲಿಯೂ ನಮ್ಮ ಜೀವದ ದಿವಸಗಳೆಲ್ಲಾ
ಅವನ ಮುಂದೆ ಅವನನ್ನು ಸೇವಿಸುವ ಹಾಗೆ, ನಮಗೆ ಕೊಟ್ಟಿದ್ದಾನೆ.
೭೬ ಇದಲ್ಲದೆ, ಮಗುವೇ! ನೀನು [4]ಮಹೋನ್ನತನ ಪ್ರವಾದಿ ಎಂದು ಕರೆಯಲ್ಪಡುವಿ;
ಯಾಕಂದರೆ ನೀನು ಅವನ ಹಾದಿಗಳನ್ನು ಸಿದ್ಧ ಮಾಡುವದಕ್ಕೂ,
೭೭ ಅವನ ಜನರಿಗೆ ನಮ್ಮ ದೇವರ ಕರುಣೆಯ ಅಂತಃಕರಣದಿಂದಾಗುವ ಅವರ ಪಾಪಪರಿಹಾರದಲ್ಲಿ ರಕ್ಷ
ಣೆಯ ತಿಳುವಿಕೆಯನ್ನು ಕೊಡುವದಕ್ಕೂ,
ಕರ್ತನ ಮುಖದ ಮುಂದೆ ಹೋಗುವಿ.
೭೮ ಈ ಅಂತಃಕರಣದಿಂದ ಉನ್ನತದಿಂದಾಗುವ [5]ಉದಯವು ನಮ್ಮನ್ನು ದರ್ಶಿಸಿ,
ನಮ್ಮ ಪಾದಗಳನ್ನು ಸಮಾಧಾನದ ಮಾರ್ಗದಲ್ಲಿ ನೆಟ್ಟಗೆ ಶೇರಿಸುವ ಹಾಗೆ,
೭೯ ಕತ್ತಲೆಯಲ್ಲಿಯೂ ಮರಣದ ನೆರಳಿನಲ್ಲಿಯೂ ಕೂತು ಕೊಂಡವರಿಗೆ ಬೆಳಗಿ ಅದೆ.

೮೦ ಇದಲ್ಲದೆ ಕೂಸು ಬೆಳದು, ಆತ್ಮದಲ್ಲಿ ಬಲಗೊಂಡು, ಅದು ಇಸ್ರಯೇಲಿಗೆ ತೋರ ಬರುವ ದಿವಸದ ವರಿಗೂ
[6]ಅರಣ್ಯದಲ್ಲಿ ಇತ್ತು.

1. ದೇವರು ಅಬ್ರಹಾಮು ದಾವೀದ ಮೊದಲಾದ ಭಕ್ತರಿಗೆ ದಯಪಾಲಿಸಿದ ವಾಗ್ದತ್ತದ ಪ್ರಕಾರ ತನ್ನ ರಕ್ಷಣೆಯನ್ನು ಕೊಡಲು ಕಟಾಕ್ಷಿಸಿದ್ದರಿಂದ ಜಕರೀಯನು ಆತನನ್ನು ಹೊಗಳಿ, (೬೮—೭೫.) ರಕ್ಷಣೆಯ ಪ್ರಭುವಾದ ಯೇಸುವಿನ ಆಶೀರ್ವಾದವನ್ನು ಹೊಂದ ತಕ್ಕದ್ದಾಗಿ, ಆತನ ಮುಂದೂತನಾಗಿದ್ದು, ಜನರನ್ನು ಆಯತ್ತ ಮಾಡುವನೆಂದು ತನ್ನ ಮಗುವನ್ನು ಕುರಿತು ಪ್ರವಾದಿಸಿದನು. (೭೬—೭೯.)

2. ಕೊಂಬು ಎಂಬುವದು ಬಲವನ್ನು ಸೂಚಿಸುತ್ತದೆ. ರಕ್ಷಣೆಯ ಕೊಂಬು ಅಂದರೆ ಬಲವಾದ ರಕ್ಷಣೆ ಎಂಬ ಅರ್ಥವು. (೧ ಸಮು. ೨. ೧.) ಪ್ರವಾದಿಗಳು ಮುಂತಾದ ದೇವರ ದಾಸರು ಹೇಳಿದ ಪ್ರವಾದನೆಯ ಪ್ರಕಾರವೂ, ದೇವರು ಅಬ್ರಹಾಮು ಮೊದಲಾದವರಿಗೆ ಕೊಟ್ಟ ವಾಕ್ಯದ ಪ್ರಕಾರವೂ, ಲೋಕರಕ್ಷಕನು ಹುಟ್ಟಿದನು. ಆತನನ್ನು ಹೊಂದಿ ಕೊಳ್ಳುವವರು ಸಕಲ ಕಷ್ಟಗಳನ್ನು ತಪಿಸಿ ಕೊಂಡು, ರಕ್ಷಣೆಯ [illegible]

3. ಪರಿಶುದ್ಧತ್ವವೂ ನೀತಿಯೂ ದೇವಭಕ್ತಿಯನ್ನು ಸೂಚಿಸುತ್ತವೆ. ಪರಿಶುದ್ಧತ್ವವು, ನಾವು ದೇವರಿಗೆ ಮಾಡ ತಕ್ಕ ಸೇವೆಯನ್ನೂ, ನೀತಿಯು, ನಾವು ಮನುಷ್ಯರಿಗೆ ಸಲ್ಲಿಸ ತಕ್ಕ ಹಂಗನ್ನೂ ತೋರಿಸುತ್ತದೆ.

4. ಲೋಕರಕ್ಷಕನಾದ ಕ್ರಿಸ್ತನು ಮಹೋನ್ನತನಾದ ದೇವರೆಂದು ಇದರಿಂದ ಪ್ರತ್ಯಕ್ಷವಾಗಿದೆ.

5. (ಯೆಶಾ. ೮. ೨೨; ೯. ೨. ಮಲಕಿ. ೪. ೨.) ಅಂಧಕಾರದಲ್ಲಿದ್ದವರಿಗೆ ಬೆಳಕು ಉದಯವಾಯಿತು. ನೀತಿಸೂರ್ಯನಾದ ಕ್ರಿಸ್ತನು ತನ್ನ ಕೃಪೆಯ ಕಿರಣಗಳಿಂದ ಸತ್ಯಜ್ಞಾನದ ಬೆಳಕನ್ನು ಪ್ರಕಾಶಿಸ ಮಾಡಿದನು.

6. ಅರಣ್ಯ ಅಂದರೆ ಬಹು ಸ್ವಲ್ಪ ಜನರು ವಾಸ ಮಾಡಿದ ಸ್ಥಳವಾಗಿರುವದು. (ಮತ್ತಾ. ೩. ೧.) ಸ್ನಾನಿಕನಾದ ಯೋಹಾನನು ತನ್ನ ಉದ್ಯೋಗವನ್ನು ಪ್ರಾರಂಭಿಸುವ ಮಟ್ಟಿಗೂ ಏಕಾಂತ

ಮುಚ್ಚಿ, ಊಳಿಗದವನಿಗೆ ಕೊಟ್ಟು, ಕೂತು ಕೊಂಡಾಗ, ಸಭೆಮನೆಯಲ್ಲಿ ಇರುವವರೆಲ್ಲರ ಕಣ್ಣುಗಳ [1]ದೃಷ್ಟಿ
ಯು ಅವನ ಮೇಲೆ ಇರಲು,

೨೧, ೨೨ ಅವರಿಗೆ, ಈ ಹೊತ್ತು ಈ ಬರಹವು ನಿಮ್ಮ ಕಿವಿಗಳಲ್ಲಿ ಈಡೇರಿತೆಂದು ಹೇಳಲಾರಂಭಿಸಿದಾಗ, ಎಲ್ಲರು
ಅವನಿಗೆ ಸಾಕ್ಷಿ ಕೊಟ್ಟು, ಅವನ ಬಾಯಿಯೊಳಗಿಂದ ಹೊರಡುವ ಕೃಪೆಯ ವಾಕ್ಯಗಳಿಗೆ ಆಶ್ಚರ್ಯ ಪಟ್ಟು,
ಇವನು ಯೋಸೆಫನ ಮಗನಲ್ಲವೇ? ಅಂದರು.

೨೩ ಅವನು ಅವರಿಗೆ, ವೈದ್ಯನೇ, [2]ನಿನ್ನನ್ನು ವಾಶಿ ಮಾಡಿಕೋ, ಎಂಬ ಗಾದೆಯನ್ನೂ, ಕಪೆರ್ನೌಮಿನಲ್ಲಿ ಆದ
ವೆಂದು ನಾವು ಕೇಳಿದವುಗಳನ್ನು ಇಲ್ಲಿ ನಿನ್ನ ಸ್ವದೇಶದಲ್ಲಿ ಮಾಡು, ಎಂಬುವದನ್ನೂ, ನನಗೆ ಹೇಳುವಿರಷ್ಟೆ,
೨೪ ಅಂದನು. ಮತ್ತು ಅಂದದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಯಾವ ಪ್ರವಾದಿಯಾದರೂ
೨೫ ಸ್ವದೇಶದಲ್ಲಿ ಸಮರ್ಪಕವಾದವನಲ್ಲ. ಆದರೆ ನಿಜವಾಗಿ ನಿಮಗೆ ಹೇಳುತ್ತೇನೆ, ಎಲೀಯನ ದಿವಸಗಳಲ್ಲಿ
ಮೂರು ವರುಷ ಆರು ತಿಂಗಳು ಆಕಾಶವು ಮುಚ್ಚಲ್ಪಟ್ಟ ವೇಳೆಯಲ್ಲಿ ದೇಶವೆಲ್ಲಾದರ ಮೇಲೆ ಮಹಾ ಬರವು
೨೬ ಉಂಟಾದಾಗ, ಅನೇಕ ವಿಧವೆಗಳು ಇಸ್ರಯೇಲಿನಲ್ಲಿ ಇದ್ದರು. ಆದರೆ ಸಿದೋನಿನ ಸರೆಪ್ತದಲ್ಲಿರುವ ವಿಧವೆ
೨೭ ಸ್ತ್ರೀಯ ಬಳಿಗೆ ಹೊರ್ತು, ಅವರಲ್ಲಿ ಯಾವಳ ಬಳಿಗೂ ಎಲೀಯನು ಕಳುಹಿಸಲ್ಪಡಲಿಲ್ಲ. ಮತ್ತು ಪ್ರವಾದಿ
ಯಾದ ಎಲೀಷನ ಕಾಲದಲ್ಲಿ ಇಸ್ರಯೇಲಿನಲ್ಲಿ ಬಹಳ ಮಂದಿ ಕುಷ್ಠರೋಗಿಗಳು ಇದ್ದರು. ಆದರೆ [3]ಸುರಿ
ಯದವನಾದ ನಾಮಾನನೇ ಹೊರ್ತು, ಅವರಲ್ಲಿ ಯಾವನಾದರೂ ಶುಚಿಯಾಗಲಿಲ್ಲ.

೨೮, ೨೯ ಆಗ ಸಭೆಮನೆಯಲ್ಲಿರುವವರೆಲ್ಲರು ಇವುಗಳನ್ನು ಕೇಳಿ, [4]ಕೋಪದಿಂದ ತುಂಬಿದವರಾಗಿ, ಎದ್ದು, ಅವ
ನನ್ನು ಪಟ್ಟಣದಿಂದ ಹೊರಡಿಸಿ, ಅವನನ್ನು ಕೆಳಗೆ ದೊಬ್ಬಿ ಹಾಕುವದಕ್ಕೆ [5]ಅವರ ಪಟ್ಟಣವು ಕಟ್ಟಿದ್ದ ಗುಡ್ಡದ ಅಂ
೩೦ ಚಿಗೆ ನಡಿಸಿ ಕೊಂಡು ಹೋದರು. ಆದರೆ ಅವನು ಅವರ ಮಧ್ಯದಲ್ಲಿಂದ [6]ಹಾದು ಹೊರಟು ಹೋದನು.

ಕಪೆರ್ನೌಮಿನಲ್ಲಿಯೂ ಗಲಿಲಾಯ ದೇಶದಲ್ಲೆಲ್ಲಿಯೂ ಕ್ರಿಸ್ತನು ಪ್ರಸಂಗಿಸಿ, ರೋಗಿಷ್ಟರನ್ನು ಸ್ವಸ್ಥ ಮಾಡಿದ್ದು.

೩೧ ಮತ್ತು ಗಲಿಲಾಯದ ಪಟ್ಟಣವಾದ ಕಪೆರ್ನೌಮಿಗೆ ಬಂದು, ಸಬ್ಬತುಗಳಲ್ಲಿ ಅವರಿಗೆ ಬೋಧಿಸುತ್ತಿದ್ದನು.
೩೨ ಮತ್ತು ಅವನ ವಾಕ್ಯವು [7]ಅಧಿಕಾರವುಳ್ಳದ್ದಾಗಿದ್ದದರಿಂದ ಅವನ ಬೋಧನೆಗೆ ಭ್ರಮೆಗೊಂಡರು.

1. ಈ ವಚನಗಳಲ್ಲಿ ಮೆಸ್ಸೀಯನೆಂಬ ಲೋಕರಕ್ಷಕನನ್ನು ಕುರಿತು ಹೇಳಲ್ಪಟ್ಟದೆ ಎಂದು ಅವರಿಗೆ ತಿಳಿದಿದ್ದದರಿಂದ ಅವುಗಳಲ್ಲಿ ಸೂಚಿಸಲ್ಪಟ್ಟ ರಕ್ಷಕನು ನಾನೇ ಎಂದು ಹೇಳುವನೋ ಎಂದು ಜನರು ಆತನನ್ನು ಆಸಕ್ತಿಯಿಂದ ನೋಡಿ ಕೊಂಡಿದ್ದರು. ಆತನು ತನ್ನ ಅಧಿಕಾರವನ್ನು ಕುರಿತು ಮಾತಾಡದೆ, ಅವರು ಹೊಂದಿ ಅನುಭವಿಸಿದ ವರಗಳನ್ನು ಕುರಿತು ಮಾತಾಡಿದ್ದರಿಂದ ಅವರು ಆತನು ಹೇಳಿದ್ದನ್ನು ಕೇಳಿ ಸಂತೋಷ ಪಟ್ಟರು. ಆದರೆ ಅವರು ತಮ್ಮ ಅಹಂಕಾರ ಮುಂತಾದ ಪಾಪಗಳಿಂದ ಆ ವರಗಳನ್ನು ಕಳಕೊಳ್ಳುವರೆಂದೂ, ಅನ್ಯ ಜನಾಂಗಗಳವರು ಅವುಗಳನ್ನು ಹೊಂದುವರೆಂದೂ ಆತನು ಹೇಳಿದಾಗ ಅವರು ಬಹಳ ಮೂರ್ಖರಾಗಿ ಆತನನ್ನು ಕೊಲ್ಲ ಹುಡುಕಿದರು.

2. ಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟಿರುವಾಗ ಈ ಗಾದೆಯನ್ನು ಸ್ವಲ್ಪ ಮಾರ್ಪಡಿಸಿ, "ನಿನ್ನನ್ನು ನೀನೇ ರಕ್ಷಿಸಿಕೋ" ಎಂದು ಹಾಸ್ಯವಾಗಿ ಹೇಳಿದರು.

3. ಎಲೀಯನು ಮಾಡಿದ ಅದ್ಭುತದಿಂದಲೂ, ಎಲೀಷನು ಮಾಡಿದ ಅದ್ಭುತದಿಂದಲೂ ಅಜ್ಞಾನರಿಗೆ ಮೇಲು ಉಂಟಾಯಿತೇ ಹೊರ್ತು, ಇಸ್ರಯೇಲರಿಗೆ ಮೇಲು ಉಂಟಾಗಲಿಲ್ಲ. ಕ್ರಿಸ್ತನಿಂದ ಉಂಟಾಗುವ ಮೇಲುಗಳು ಅನ್ಯ ಜನಾಂಗಗಳಿಗೆ ಸಲ್ಲುವವೆಂದು ಇದರಿಂದ ತಿಳಿದು ಕೊಳ್ಳ ಹೇತುವೆಯಾಯಿತು.

4. ದೇವರ ಆಶೀರ್ವಾದವನ್ನು ಅನ್ಯ ಜನಾಂಗಗಳು ಹೊಂದುವರೆಂಬ ಸತ್ಯವನ್ನು ಕ್ರಿಸ್ತನು ತಿಳಿಸಿದ ಕೂಡಲೇ ಯೆಹೂದ್ಯರು ಕೋಪಿಷ್ಠರಾಗಿ ಆತನನ್ನು ಕೊಲ್ಲುವದಕ್ಕೆ ಯತ್ನಯಿಸಿದರು. (ಅಪೊ. ಕ್ರಿ. ೨೨. ೨೨. ದ್ವಿತೀಯ ನ್ಯಾ. ೩೨. ೨೧. ರೋಮಾ. ೧೦. ೧೯.)

5. ನಜರೇತು ಒಂದು ಗುಡ್ಡದ ಅಂಚಿನಲ್ಲಿ ಕಟ್ಟಲ್ಪಟ್ಟಿತ್ತು. ಆ ಗುಡ್ಡದ ಶಿಖರಕ್ಕೆ ಕ್ರಿಸ್ತನನ್ನು ಕರಕೊಂಡು ಹೋಗಿ, ಅಲ್ಲಿಂದ ಆತನನ್ನು ಕೆಳಗೆ ತಳ್ಳುವದಕ್ಕೆ ಯೋಚಿಸಿದರು.

6. ಆತನ ನೋಟವನ್ನು ಕಂಡ ಜನರು ಭಯ ಪಟ್ಟು, ಆತನು ಹಾದು ಹೋಗುವ ಹಾಗೆ ಪಕ್ಕಕ್ಕೆ ತೊಲಗಿ ಹೋದರೆಂದು ಕೆಲವರು ನೆನಸುತ್ತಾರೆ. ಬೇರೆ ಕೆಲವರು, ಅವರಿಗೆ ಅಂಧತ್ವ ಪ್ರಾಪ್ತಿಸ ಮಾಡಿದನು, ಅಥವಾ ಬೇರೆ ಅದ್ಭುತದಿಂದ ಅವರನ್ನು ತಡೆದಿರುವನೆಂದು ನೆನಸುತ್ತಾರೆ. ಹಾಗಾದರೆ ಅವರ ಕಣ್ಣುಗಳು ನೋಡುವಂತೆ ಆತನು ಒಂದು ಬಲವಾದ ಅದ್ಭುತವನ್ನು ಮಾಡಿರಬಹುದು. ಆದಾಗ್ಯೂ ಆ ಅದ್ಭುತದಿಂದ ಅವರನ್ನು ಬಿಟ್ಟು ಆತನು ತೊಲಗಿ ಹೋದನೇ ಹೊರ್ತು, ಅವರ ಬಳಿಗೆ ಬಂದು ಅವರನ್ನು ಆಶೀರ್ವದಿಸಲಾಗದೆ ಹೋಯಿತು.

7. ಮಾರ್ಕ. ೧. ೨೨. ವಚನದ ವ್ಯಾಖ್ಯಾನದಲ್ಲಿ ನೋಡಬೇಕು.



೩೩ ಇದಲ್ಲದೆ [1]ಸಭೆಮನೆಯಲ್ಲಿ ಅಶುದ್ಧ ದೆವ್ವದ ಆತ್ಮವುಳ್ಳ ಒಬ್ಬ ಮನುಷ್ಯನಿದ್ದನು. ಅವನು ಮಹಾ ಶಬ್ದ
೩೪ ದಿಂದ ಕೂಗಿ, ನಜರೇತಿನವನಾದ ಯೇಸುವೇ, ಬಿಡು; ನಮಗೂ ನಿನಗೂ ಏನು? ನಮ್ಮನ್ನು ನಾಶ ಮಾಡ
೩೫ ಬಂದಿಯೋ? ನೀನ್ಯಾರೆಂದು ಬಲ್ಲೆನು, ದೇವರ ಪರಿಶುದ್ಧನೇ, ಅಂದಾಗ; ಯೇಸು ಅವನನ್ನು ಗದರಿಸಿ, ಸುಮ್ಮ
ನಿದ್ದು, ಅವನಿಂದ ಹೊರಟು ಹೋಗು, ಅಂದನು. ಆಗ ದೆವ್ವವು ಅವನನ್ನು ಮಧ್ಯದಲ್ಲಿ ಕೆಡವಿ, ಅವನಿಗೆ
ಏನೂ ಕೇಡು ಮಾಡದೆ, ಅವನಿಂದ ಹೊರಟಿತು.

೩೬ ಆಗ ಎಲ್ಲರಿಗೆ ಭ್ರಮೆ ಉಂಟಾಗಿ, ಅವರು ತಮ್ಮೊಳಗೆ, ಈ ವಾಕ್ಯ ಏನು? ಯಾಕಂದರೆ ಅವನು [2]ಅಧಿಕಾರ
ದಿಂದಲೂ ಬಲದಿಂದಲೂ ಅಶುದ್ಧಾತ್ಮಗಳಿಗೆ ಆಜ್ಞಾಪಿಸಲಾಗಿ, ಅವು ಹೊರಡುತ್ತವೆ ಎಂದು, ಹೇಳಿ ಕೊಂಡರು.
೩೭ ಇದಲ್ಲದೆ ಅವನ ಸುದ್ದಿಯು ಸುತ್ತಲಿನ ದೇಶದ ಸ್ಥಳಗಳಿಗೆಲ್ಲಾ ಹಬ್ಬಿತು.
೩೮ [3]ತರುವಾಯ ಅವನು ಎದ್ದು, ಸಭೆಮನೆಯನ್ನು ಬಿಟ್ಟು, ಸೀಮೋನನ ಮನೆಯಲ್ಲಿ ಪ್ರವೇಶಿಸಿದನು. ಸೀಮೋ
೩೯ ನನ ಅತ್ತೆಯು ಬಹು ಜ್ವರದಲ್ಲಿ ಬಿದ್ದಿರುವದರಿಂದ, ಅವಳಿಗೋಸ್ಕರ ಅವನನ್ನು ಬೇಡಿ ಕೊಂಡರು. ಅವನು
ಅವಳ ಹತ್ತರ ನಿಂತು, ಜ್ವರಕ್ಕೆ ಆಜ್ಞಾಪಿಸುವಾಗ, ಅದು ಅವಳನ್ನು ಬಿಟ್ಟು ಹೋಯಿತು. ಸಂಗಡಲೇ ಅವಳು
ಎದ್ದು, ಅವರಿಗೆ ಸೇವೆ ಮಾಡಿದಳು.

೪೦ ಇದಲ್ಲದೆ ಸೂರ್ಯನು ಅಸ್ತಮಿಸಿದಾಗ, ನಾನಾ ರೋಗಗಳಿಂದ ಅಸ್ವಸ್ಥವಾಗಿರುವವರು ಯಾರ ಬಳಿಯಲ್ಲಿ
ಇದ್ದರೋ, ಅವರು ಅವರನ್ನು ಅವನ ಬಳಿಗೆ ತಂದರು. ಆಗಲವನು ಅವರಲ್ಲಿ ಒಬ್ಬೊಬ್ಬನ ಮೇಲೆ ಕೈಗಳ
೪೧ ನ್ನಿಟ್ಟು, ಅವರನ್ನು ಸ್ವಸ್ಥ ಮಾಡಿದನು. ಇದಲ್ಲದೆ ದೆವ್ವಗಳು ಸಹ, ನೀನು ದೇವರ ಮಗನಾದ ಕ್ರಿಸ್ತನೆಂದು
ಕೂಗಿ, ಅನೇಕರನ್ನು ಬಿಟ್ಟು ಹೋದವು. ಅವು ಅವನು ಕ್ರಿಸ್ತನೆಂದು ತಿಳಿದದರಿಂದ, ಅವನು ಅವುಗಳನ್ನು
ಗದರಿಸಿ, ಮಾತಾಡಗೊಡಿಸಲಿಲ್ಲ.

೪೨ ಆದರೆ ಬೆಳಗಾದ ಮೇಲೆ, ಅವನು ಹೊರಟು, ಅರಣ್ಯಸ್ಥಳಕ್ಕೆ ಹೋದನು. ಸಮೂಹಗಳು ಅವನನ್ನು
೪೩ ಹುಡುಕಿ, ಅವನ ಬಳಿಗೆ ಬಂದು, ಅವನು ತಮ್ಮನ್ನು ಬಿಟ್ಟು ಹೋಗದ ಹಾಗೆ, ಹಿಡುಕೊಂಡರು. ಆದರೆ
ಅವನು ಅವರಿಗೆ, ನಾನು ಬೇರೆ ಪಟ್ಟಣಗಳಿಗೂ ದೇವರ ರಾಜ್ಯದ ಸುವಾರ್ತೆ ಪ್ರಸಂಗಿಸ ಬೇಕು; ಯಾಕಂದರೆ
೪೪ ಇದಕ್ಕಾಗಿಯೇ ಕಳುಹಿಸಲ್ಪಟ್ಟಿದ್ದೇನೆಂದು ಹೇಳಿ, ಗಲಿಲಾಯದ ಸಭೆಮನೆಗಳಲ್ಲಿ ಪ್ರಸಂಗಿಸುತ್ತಿದ್ದನು.

ಕ್ರಿಸ್ತನು ಹಡಗದೊಳಗಿಂದ ಜನರಿಗೆ ಪ್ರಸಂಗಿಸಿದ್ದು; ಅದ್ಭುತವಾಗಿ ಮೀನು ಹಿಡಿಯುವಂತೆ ಮಾಡಿದ್ದು;
ಮೀನು ಹಿಡಿಯುವ ಬೆಸ್ತರು ತನ್ನನ್ನು ಹಿಂಬಾಲಿಸುವಂತೆ ಕರೆದದ್ದು.

5. ಸಮೂಹವು ದೇವರ ವಾಕ್ಯವನ್ನು ಕೇಳುವದಕ್ಕೆ ಅವನ ಮೇಲೆ ಬಿದ್ದು ಕೊಂಡಿರುವಾಗ, ಅವನು ಗೆನೆ
೨ ಜರೇತ್ ಕೆರೆಯ ಬಳಿಯಲ್ಲಿ ನಿಂತು ಕೊಂಡು, ಕೆರೆಯ ಹತ್ತರ ನಿಂತ ಎರಡು ಹಡಗಗಳನ್ನು ನೋಡಿದನು.
೩ ಆದರೆ ಮೀನುಗಾರರು ಅವುಗಳಿಂದ ಇಳಿದು, [4]ಬಲೆಗಳನ್ನು ತೊಳೆಯುತ್ತಿದ್ದರು. ಆಗಲವನು ಆ ಹಡಗಗ
ಳಲ್ಲಿ ಸೀಮೋನನದಾಗಿರುವ ಒಂದರಲ್ಲಿ ಏರಿ, ಧಡದಿಂದ ಸ್ವಲ್ಪ ದೂರ ನೂಕ ಬೇಕೆಂದು, ಅವನನ್ನು ಬೇಡಿ
ಕೊಂಡು, [5]ಕೂತು, ಹಡಗದೊಳಗಿಂದ ಸಮೂಹಗಳಿಗೆ ಬೋಧಿಸಿದನು.
೪ ಮಾತಾಡಿ ತೀರಿಸಿದ ಮೇಲೆ, ಸೀಮೋನನಿಗೆ, ಆಳವಾದ ಸ್ಥಳಕ್ಕೆ ನಡಿಸಿ, ಮೀನುಬೇಟೆಗೆ ನಿಮ್ಮ ಬಲೆಗ

1. ೩೩—೩೭. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೧. ೨೩—೨೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಕರ್ತನು ಮಾಡಿದ ಅದ್ಭುತಗಳಿಂದ ಆತನ ಸರ್ವತ್ರಾಣವೂ ದಿವ್ಯ ಅಧಿಕಾರವೂ ಪ್ರಕಟವಾಯಿತು. ಆತನ ಮಾತಿನ ಬಲದಿಂದ ದೆವ್ವಗಳು, ನಡುಗಿ ಭಯ ಪಟ್ಟು, ಓಡಿ ಹೋದವು.

3. ೩೮—೪೪. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೧. ೨೯—೩೯. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ಬಲೆಗಳನ್ನು ತೊಳೆದು ಒಣಗಿಸುತ್ತಿದ್ದರು, ಎಂದು ತೋರುತ್ತದೆ. ಆದದರಿಂದ ಅವುಗಳನ್ನು ತಿರಿಗಿ ಸಮುದ್ರದಲ್ಲಿ ಹಾಕುವ ಹಾಗೆ ಕರ್ತನು ಅಪ್ಪಣೆ ಮಾಡಿದ ಪ್ರಕಾರ ಮಾಡುವದಕ್ಕೆ ಅವರಿಗೆ ಕಷ್ಟವಾಗಿ ತೋರಿರ ಬಹುದು.

5. ಆತನು ಹಡಗದಲ್ಲಿ ಕೂತು ಕೊಂಡದ್ದರಿಂದ ಜನರು ಆತನನ್ನು ಇರಿಕಿಸದ ಹಾಗೆಯೂ, ಆತನ ಬೋಧನೆಗಳನ್ನು ಜನರೆಲ್ಲರು ಚನ್ನಾಗಿ ಕೇಳುವ ಹಾಗೆಯೂ ಅನುಕೂಲವಾಯಿತು.

೫ ಳನ್ನು ಇಳಿಸಿರಿ, ಅಂದನು. ಸೀಮೋನನು ಪ್ರತ್ಯುತ್ತರವಾಗಿ, ಅಯ್ಯಾ, ನಾವು [1]ರಾತ್ರಿಯೆಲ್ಲಾ ಕಷ್ಟ ಮಾಡಿ
ದ್ದರೂ, ಏನೂ ಶಿಕ್ಕಲಿಲ್ಲ. ಆದಾಗ್ಯೂ ನಿನ್ನ ಮಾತಿನ ಮೇರೆಗೆ ಬಲೆ ಇಳಿಸುತ್ತೇನೆಂದು, ಅವನಿಗೆ ಹೇಳಿದನು.
೬ ಅದನ್ನು ಮಾಡಿ, ಮೀನುಗಳ ದೊಡ್ಡ ಸಮೂಹವನ್ನು ಕೂಡಿಸಿದರು. ಮತ್ತು ಅವರ ಬಲೆ ಹರಿದು ಹೋಯಿತು.
೭ ಆಗಲವರು ಬೇರೆ ಹಡಗದಲ್ಲಿದ್ದ ಜತೆಗಾರರಿಗೆ, ಬಂದು, ತಮಗೆ ಸಹಾಯ ಮಾಡ ಬೇಕೆಂದು ಸೌಜ್ಞೆ ಮಾಡಿ
ದರು. ಅವರು ಬಂದ ಮೇಲೆ, ಎರಡು ಹಡಗಗಳನ್ನೂ, ಅವು ಮುಣುಗುವಷ್ಟು, ತುಂಬಿಸಿದರು.
೮ ಸೀಮೋನ್ ಪೇತ್ರನು ಅದನ್ನು ನೋಡಿ, ಯೇಸುವಿನ ಮೊಣಕಾಲುಗಳ ಮುಂದೆ ಬಿದ್ದು, [2]ಕರ್ತನೇ, ನನ್ನನ್ನು
೯ ಬಿಟ್ಟು ಹೋಗು; ಪಾಪಿಯಾದ ಮನುಷ್ಯನಾಗಿದ್ದೇನೆ, ಅಂದನು. ಯಾಕಂದರೆ ಅವರು ಹಿಡಿದ ಮೀನು
೧೦ ಗಳ ರಾಶಿಯ ನಿಮಿತ್ತ ಅವನಿಗೂ ಅವನ ಸಂಗಡ ಇದ್ದವರೆಲ್ಲರಿಗೂ ದಿಗಿಲು ಹುಟ್ಟಿತು. ಸೀಮೋನನ ಪಾಲು
ಗಾರರಾದ ಜೆಬೆದಾಯನ ಮಕ್ಕಳಾದ ಯಾಕೋಬನಿಗೂ ಯೋಹಾನನಿಗೂ ಅದೇ ಪ್ರಕಾರವಾಯಿತು.
ಆಗ ಯೇಸು ಸೀಮೋನನಿಗೆ, ಭಯ ಪಡ ಬೇಡ; ಈಗಿನಿಂದ [3]ಮನುಷ್ಯರನ್ನು ಹಿಡಿಯುವವನಾಗಿರುವಿ, ಅಂದನು.
೧೧ ಮತ್ತು ಅವರು ಹಡಗಗಳನ್ನು ಧಡಕ್ಕೆ ತಂದು, [4]ಎಲ್ಲಾ ಬಿಟ್ಟು, ಅವನನ್ನು ಹಿಂಬಾಲಿಸಿದರು.

ಕ್ರಿಸ್ತನು ಒಬ್ಬ ಕುಷ್ಠರೋಗಿಯನ್ನು ಸ್ವಸ್ಥ ಮಾಡಿದ್ದು; ಆತನ ಕೀರ್ತಿಯನ್ನು ಕೇಳಿದ ಅನೇಕ ಜನರು ಆತನ ಬಳಿಗೆ ಬಂದದ್ದು;
ಪಾಪವನ್ನು ಮನ್ನಿಸ ತನಗೆ ಅಧಿಕಾರ ಉಂಟೆಂಬುವದಕ್ಕೆ ನ್ಯಾಯ ಹೇಳಿದ್ದು.

೧೨ ಇದಲ್ಲದೆ ಅವನು [5]ಒಂದಾನೊಂದು ಪಟ್ಣದಲ್ಲಿರುವಾಗ, ಇಗೋ, ಕುಷ್ಠ ತುಂಬಿದ ಮನುಷ್ಯನು ಯೇಸು
ವನ್ನು ನೋಡಿ, ಮೋರೆ ಕೆಳಗಾಗಿ ಬಿದ್ದು, ಅವನನ್ನು ಬೇಡಿ ಕೊಂಡು, ಕರ್ತನೇ, ನಿನಗೆ ಮನಸ್ಸಿದ್ದರೆ, ನನ್ನನ್ನು
೧೩ ಶುಚಿ ಮಾಡ ಬಲ್ಲಿ, ಅಂದನು. ಆಗಲವನು ಕೈ ಚಾಚಿ, ಅವನನ್ನು ಮುಟ್ಟಿ, ಮನಸ್ಸುಂಟು, ಶುಚಿಯಾಗು,
೧೪ ಅಂದನು; ಸಂಗಡಲೇ ಕುಷ್ಠವು ಅವನನ್ನು ಬಿಟ್ಟು ಹೋಯಿತು. ಇದಲ್ಲದೆ, ನೀನು ಯಾರಿಗೂ ಹೇಳ
ಬಾರದು; ಆದರೆ ಹೋಗಿ, ಅವರಿಗೆ ಸಾಕ್ಷಿಯಾಗಿ ಯಾಜಕನಿಗೆ ನಿನ್ನನ್ನು ತೋರಿಸಿ ಕೊಂಡು, ಮೋಶೆಯು
ಆಜ್ಞಾಪಿಸಿದ ಹಾಗೆ ನಿನ್ನ ಶುದ್ಧೀಕರಣಕ್ಕೋಸ್ಕರ ಅರ್ಪಿಸೆಂದು, ಅವನಿಗೆ ಅಪ್ಪಣೆ ಕೊಟ್ಟನು.
೧೫ ಆದರೆ ಅವನ ಸುದ್ದಿ ಹೆಚ್ಚಾಗಿ ಹಬ್ಬಿತು. ಮತ್ತು ಬಹು ಸಮೂಹಗಳು ಕೇಳುವದಕ್ಕೂ, ಅವನಿಂದ ತಮ್ಮ
೧೬ ಜಾಡ್ಯಗಳನ್ನು ವಾಶಿ ಮಾಡಿಸಿ ಕೊಳ್ಳುವದಕ್ಕೂ, ಕೂಡಿ ಬಂದವು. ಆಗಲವನು ಅರಣ್ಯಸ್ಥಳಗಳಿಗೆ [6]ಪ್ರತ್ಯೇ
ಕವಾಗಿ ಹೋಗಿ, ಪ್ರಾರ್ಥಿಸುತ್ತಿದ್ದನು.
೧೭ ಮತ್ತು ಒಂದಾನೊಂದು ದಿವಸದಲ್ಲಿ ಅವನು ಬೋಧಿಸುತ್ತಿರುವಾಗ, ಗಲಿಲಾಯ ಯೆಹೂದ ದೇಶಗಳ
ಸಕಲ ಗ್ರಾಮಗಳಿಂದಲೂ, ಯೆರೂಸಲೇಮಿನಿಂದಲೂ ಬಂದ ಫರಿಸಾಯರೂ ನ್ಯಾಯಶಾಸ್ತ್ರಿಗಳೂ ಕೂತು
ಕೊಂಡಿರಲು, ಕರ್ತನ ಬಲವು ಅವರನ್ನು ವಾಶಿ ಮಾಡುವದಕ್ಕೆ ಇತ್ತು.

1. ಮೀನು ಹಿಡಿಯುವದಕ್ಕೆ ರಾತ್ರಿಕಾಲವೇ ಒಳ್ಳೇದು. ರಾತ್ರಿಯೆಲ್ಲಾ ಅವರು ಕಷ್ಟ ಪಟ್ಟಾಗ್ಯೂ ಏನೂ ಶಿಕ್ಕದೆ ಇದ್ದದರಿಂದ, ಹಗಲಿನಲ್ಲಿ ಶಿಕ್ಕುವದೆಂಬ ನಂಬಿಕೆ ಅವರಿಗೆ ಇರಲಿಲ್ಲ. ಆದಾಗ್ಯೂ ಪೇತ್ರನು ಕರ್ತನ ಅಪ್ಪಣೆಯ ಪ್ರಕಾರ ಆತನ ಮಾತು ನಂಬಿ, ಆಳವಾದ ಸ್ಥಳದಲ್ಲಿ ಬಲೆಯನ್ನು ಹಾಕಿದನು. ಕರ್ತನು ತನ್ನ ಆಶೀರ್ವಾದವನ್ನು ತನ್ನ ದಾಸರಿಗೆ ದಯ ಪಾಲಿಸುವಾಗ, ಅವರ ಭಕ್ತಿವಿಶ್ವಾಸವನ್ನು ಶೋಧಿಸುವ ಉದ್ದಿಶ್ಯ ಆಳದಲ್ಲಿ ಇಳಿಯ ಹೇಳುವನು. ಹಾಗೆ ಆತನ ಮಾತನ್ನು ನಂಬಿ ಇಳಿಯುವವರಿಗೆ ಪರಮ ಭಾಗ್ಯ ಉಂಟಾಗುವದು.

2. ಯೇಸು ಕ್ರಿಸ್ತನ ಅತಿಶಯವಾದ ತ್ರಾಣವನ್ನು ಕಂಡ ಎಲ್ಲರೂ ಆಶ್ಚರ್ಯ ಪಟ್ಟರು. ಪೇತ್ರನು ತನ್ನ ಪಾಪವನ್ನು ಗ್ರಹಿಸಿ ಕೊಂಡು, ಕರ್ತನ ಪರಿಶುದ್ಧ ಸನ್ನಿಧಿಯಲ್ಲಿರುವದಕ್ಕೆ ತಾನು ಎಷ್ಟು ಮಾತ್ರ ಪಾತ್ರನಲ್ಲವೆಂದು ತಿಳಿದು, ಹೀಗೆ ಮಾತಾಡಿದನು. (ಯೋಬ. ೪೦. ೩—೫.)

3. ಇದು ಮನುಷ್ಯರನ್ನು ಜೀವದಿಂದ ಹಿಡಿಯುವವರೆಂಬ ಅರ್ಥವಾಗುತ್ತದೆ. ಅವನು ಹಿಡಿದ ಮೀನುಗಳು ಸ್ವಲ್ಪ ಹೊತ್ತಿನಲ್ಲಿ ಸತ್ತು ಹೋದವು. ಸುವಾರ್ತೆ ಎಂಬ ಬಲೆಯಿಂದ ಅವನು ಹಿಡಿಯುವ ಮನುಷ್ಯರಾದರೆ, ನಿತ್ಯಜೀವವನ್ನು ಹೊಂದಿ ಸದಾಕಾಲ ಬಾಳುವರು. ಪಂಚಾಶತ್ತಿನ ದಿವಸದಲ್ಲಿಯೂ, ಅದರ ತರುವಾಯದಲ್ಲಿಯೂ ಕರ್ತನ ವಾಕ್ಯದ ಪ್ರಕಾರ ಪೇತ್ರನಿಗೆ ಕೆಲಸ ಅನುಕೂಲವಾಯಿತು. (ಅಪೊ. ಕ್ರಿ. ೨. ೪೧; ೪. ೪.)

4. ಮತ್ತಾ. ೧೯. ೨೭. ವಚನದ ವ್ಯಾಖ್ಯಾನ ನೋಡ ಬೇಕು.

5. ೧೨—೧೬. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೧. ೪೦—೪೫. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

6. ಕರ್ತನು ಏಕಾಂತವಾಗಿದ್ದು ಜಪಧ್ಯಾನ ಮಾಡಿದ್ದನ್ನು ಬೇರೆ ಸುವಾರ್ತಿಕರಿಗಿಂತಲೂ ಲೂಕನು ವಿಶೇಷವಾಗಿ ಬರೆಯುತ್ತಾನೆ.



೧೮ ಮತ್ತು, ಇಗೋ, ಪಕ್ಷವಾಯುವಿನವನಾದ ಒಬ್ಬ ಮನುಷ್ಯನನ್ನು ಮಂಚದ ಮೇಲೆ ಹೊತ್ತು ಕೊಂಡ
೧೯ ಜನರು ಅವನನ್ನು ಒಳಗೆ ತಂದು, ಅವನ ಮುಂದೆ ಇಡ ಬೇಕೆಂದು, ಅವನನ್ನು ಒಳಗೆ ತರುವದಕ್ಕೆ ಸಮೂ
ಹದ ನಿಮಿತ್ತ ಮಾರ್ಗ ಕಾಣದೆ, ಮನೆಯ ಮೇಲೆ ಏರಿ, ಹೆಂಚುಗಳನ್ನು ತೆಗೆದು, [1]ಅವನನ್ನು ಮಂಚದ
೨೦ ಸಂಗಡ ಮಧ್ಯದಲ್ಲಿ ಯೇಸುವಿನ ಮುಂದಕ್ಕೆ ಇಳಿಸಿದರು. ಅವನು ಅವರ ವಿಶ್ವಾಸವನ್ನು ನೋಡಿ, ಮನು
ಷ್ಯನೇ, ನಿನ್ನ ಪಾಪಗಳು [2]ಮನ್ನಿಸಲ್ಪಟ್ಟವೆ, ಎಂದು ಅವನಿಗೆ ಹೇಳಿದನು.
೨೧ ಶಾಸ್ತ್ರಿಗಳೂ ಫರಿಸಾಯರೂ, [3]ದೂಷಣೆ ಹೇಳುವ ಇವನ್ಯಾರು? ದೇವರೊಬ್ಬನೇ ಹೊರ್ತು, ಪಾಪಗ
ಳನ್ನು ಮನ್ನಿಸ ಶಕ್ತನ್ಯಾರು? ಎಂದು ತಮ್ಮಲ್ಲಿ ಆಲೋಚಿಸಲಾರಂಭಿಸಿದಾಗ,
೨೨ ಯೇಸು ಅವರ ಆಲೋಚನೆಗಳನ್ನು ತಿಳಿದು, ಅವರಿಗೆ ಉತ್ತರ ಕೊಟ್ಟು ಹೇಳಿದ್ದೇನಂದರೆ, ನೀವು ನಿಮ್ಮ
೨೩ ಹೃದಯಗಳಲ್ಲಿ ಆಲೋಚಿಸಿ ಕೊಳ್ಳುವದೇನು? ಯಾವದು ಸುಲಭ? ನಿನ್ನ ಪಾಪಗಳು ನಿನಗೆ ಮನ್ನಿಸಲ್ಪಟ್ಟವೆ
೨೪ ಎಂದು ಹೇಳುವದೋ? ಇಲ್ಲವೆ ಎದ್ದು ತಿರುಗಾಡು ಎಂದು ಹೇಳುವದೋ? ಆದರೆ ಭೂಮಿಯ ಮೇಲೆ
ಪಾಪಗಳನ್ನು ಮನ್ನಿಸುವದಕ್ಕೆ ಮನುಷ್ಯನ ಮಗನಿಗೆ ಅಧಿಕಾರ ಉಂಟೆಂದು ನೀವು ತಿಳಿಯುವ ಹಾಗೆ,
ಅವನು ಪಕ್ಷವಾಯುವಿನವನಿಗೆ, ಎದ್ದು, [4]ನಿನ್ನ ಮಂಚ ಎತ್ತಿ ಕೊಂಡು, ನಿನ್ನ ಮನೆಗೆ ಹೋಗೆಂದು ನಿನಗೆ
೨೫ ಹೇಳುತ್ತೇನೆ, ಅಂದನು. ಸಂಗಡಲೇ ಅವನು ಅವರ ಮುಂದೆ ಎದ್ದು, ತಾನು ಮಲಗಿದ್ದ ಮಂಚವನ್ನು ಎತ್ತಿ
ಕೊಂಡು, ದೇವರನ್ನು ಮಹಿಮೆ ಪಡಿಸುತ್ತಾ, ತನ್ನ ಮನೆಗೆ ಹೋದನು.
೨೬ ಆಗ ವಿಸ್ಮಯವು ಎಲ್ಲರನ್ನು ಹಿಡಿಯಿತು; ಅವರು ದೇವರನ್ನು ಮಹಿಮೆ ಪಡಿಸಿ, ಇಂದು ಅಪರೂಪವಾದವು
ಗಳನ್ನು ನೋಡಿದ್ಧೇವೆಂದು ಹೇಳಿ, ಭಯ ತುಂಬಿದವರಾದರು.

ಲೇವಿಯು ಕರೆಯಲ್ಪಟ್ಟದ್ದು; ಸುಂಕದವರ ಸಹವಾಸ ಮಾಡುವದನ್ನು ಕುರಿತೂ, ಉಪವಾಸ ಮಾಡದೆ ಇರುವದನ್ನು
ಕುರಿತೂ ಸಂಭಾಷಿಸಿದ್ದು.

೨೭ [5]ಇವುಗಳಾದ ಮೇಲೆ ಅವನು ಹೊರಟು, ಸುಂಕಕ್ಕೆ ಕೂತು ಕೊಂಡ ಲೇವಿ ಎಂಬ ಸುಂಕದವನನ್ನು ನೋಡಿ,
೨೮ ಅವನಿಗೆ, ನನ್ನನ್ನು ಹಿಂಬಾಲಿಸು, ಅಂದನು. ಅವನು ಎಲ್ಲಾ ಬಿಟ್ಟು, ಎದ್ದು, ಅವನನ್ನು ಹಿಂಬಾಲಿಸಿದನು.
೨೯ ಆ ಮೇಲೆ ಲೇವಿಯು ತನ್ನ ಮನೆಯಲ್ಲಿ ಅವನಿಗೆ ದೊಡ್ಡ ಔತಣವನ್ನು ಮಾಡುವಾಗ, ಸುಂಕದವರೂ
೩೦ ಅವರ ಸಂಗಡ ಕೂತು ಕೊಂಡ ಬೇರೆ ಜನರೂ ಬಹು ಸಮೂಹವಾಗಿದ್ದರು. ಆಗಲವರ ಶಾಸ್ತ್ರಿಗಳೂ
ಫರಿಸಾಯರೂ, ಅವನ ಶಿಷ್ಯರ ಸಂಗಡ, ನೀವು ಸುಂಕದವರ ಪಾಪಿಷ್ಠರ ಸಂಗಡ ಉಂಡು ಕುಡಿಯುವದೇ
೩೧ ನೆಂದು ಗುಣುಗುಟ್ಟಿದರು. ಯೇಸು ಉತ್ತರ ಕೊಟ್ಟು ಅವರಿಗೆ, ಸ್ವಸ್ಥವಾಗಿರುವವರಿಗಲ್ಲ, ಅಸೌಖ್ಯವಾಗಿ
೩೨ ರುವವರಿಗೆ ವೈದ್ಯನು ಬೇಕು. ನೀತಿವಂತರನ್ನಲ್ಲ, ಪಾಪಿಷ್ಠರನ್ನು ಮಾನಸಾಂತರಕ್ಕೆ ಕರೆಯ ಬಂದೆನು,
ಅಂದನು.

1. ಮನೆಯ ಹೊರಗಡೆ ಇರುವ ಪಾವಟಿಗೆಗಳ ಮಾರ್ಗವಾಗಿ ಆಗಲಿ, ನೆರೆಮನೆಯ ಮಾರ್ಗವಾಗಿ ಆಗಲಿ, ರೋಗಿಷ್ಠನನ್ನು ಮಾಳಿಗೆಯ ಮೇಲಕ್ಕೆ ತೆಗೆದು ಕೊಂಡು ಹೋದರು. ಮೇಲಿನ ಮಾಳಿಗೆಯು ಸ್ಥಿರವಾದದ್ದಾಗಿ ಭದ್ರವಾಗಿ ಕಟ್ಟಲ್ಪಟ್ಟಿರದೆ, ಅವಸರಕ್ಕೆ ತೆಗೆಯ ತಕ್ಕ ಪ್ರಕಾರ ಕಟ್ಟಿರುವರು, ಅಥವಾ ಈ ದೇಶದ ತೊಟ್ಟಿ ಪಡಸಾಲೆಗಳುಳ್ಳ ಮನೆಯ ಹಾಗೆ ಕಟ್ಟಿರುವರು. ಆ ತೊಟ್ಟಿಯ ಮೇಲೆ ತೆಗೆದು ಇಡ ತಕ್ಕ ಒಂದು ಮುಚ್ಚಳವಾದರೆ, ಅದನ್ನು ತೆಗೆದಿಟ್ಟು, ಆ ರೋಗಿಷ್ಠನನ್ನು ಮಧ್ಯದಲ್ಲಿ ಯೇಸುವಿನ ಮುಂದೆ ಇಳಿಸಿರುವರು.

2. ಆ ಪಕ್ಷವಾಯುವಿನವನು ತನ್ನ ರೋಗವನ್ನು ಗ್ರಹಿಸಿ ಕೊಂಡ ಪ್ರಕಾರ ತನ್ನ ಪಾಪದ ರೋಗವನ್ನು ಸಹ ಗ್ರಹಿಸಿ ಕೊಂಡಿರುವನು. ಆದ್ದರಿಂದ ಕರ್ತನು ಅವನಿಗೆ ಆದರಣೆ ಉಂಟಾಗಲೂ, ಮಿಕ್ಕಾದವರಿಗೆ ಗ್ರಹಿಕೆಯುಂಟಾಗಲೂ ತಕ್ಕದ್ದಾಗಿ, ಎಲ್ಲಾ ರೋಗಗಳಿಗೂ ಕಾರಣವಾಗಿರುವ ಪಾಪರೋಗವನ್ನು ಮೊದಲು ನಿವರ್ತಿಸಿದನು. (ಮತ್ತಾ. ೮. ೧೭. ವಚನದ ವ್ಯಾಖ್ಯಾನ ನೋಡ ಬೇಕು.)

3. ಪಾಪ ಮನ್ನಿಸುವದು ದೇವರ ಕೆಲಸವೆಂದು ಅವರು ನೆನಸಿದ್ದು ಸರಿಯೇ; ಆದಾಗ್ಯೂ ಇಷ್ಟು ಅದ್ಭುತಸಾಮರ್ಥ್ಯವುಳ್ಳವನಾಗಿದ್ದ ಕ್ರಿಸ್ತನು ಮಹೋನ್ನತನಾದ ದೇವರೇ ಎಂದು ತಿಳಿಯದೆ ಹೋದದ್ದು ಆಶ್ಚರ್ಯ! (ಮತ್ತಾ. ೯. ೪.)

4. ಚಾಪೆ, ಅರಳೆ, ನಾರು ಮುಂತಾದವುಗಳಿಂದ ಮಾಡಿದ ಹಾಸಿಕೆಗಳನ್ನು ಸುಲಭವಾಗಿ ಎತ್ತಿ ಕೊಂಡು ಹೋಗ ಬಹುದು.

5. ೨೭—೩೯. ವಚನಗಳ ವ್ಯಾಖ್ಯಾನವನ್ನು ಮತ್ತಾ. ೯. ೯—೧೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

೩೩ ಅವರು ಅವನಿಗೆ, [1]ಯೋಹಾನನ ಶಿಷ್ಯರು, ಫರಿಸಾಯರ ಶಿಷ್ಯರು ಸಹ ಬಹಳ ಸಾರಿ ಉಪವಾಸ ಪ್ರಾರ್ಥ
೩೪ ನೆಗಳನ್ನು ಮಾಡಲಾಗಿ, ನಿನ್ನವರು ಯಾತಕ್ಕೆ ಉಂಡು ಕುಡಿಯುತ್ತಾರೆ? ಅಂದಾಗ; ಅವನು ಅವರಿಗೆ,
ನೀವು ಮದುವೆಯವರನ್ನು, ಮದಲಿಂಗನು ಅವರ ಸಂಗಡ ಇರುವಷ್ಟರಲ್ಲಿ, ಉಪವಾಸ ಮಾಡಿಸಲಾಗುವದೋ?
೩೫ ಆದರೆ ಮದಲಿಂಗನು ಅವರ ಬಳಿಯಿಂದ ವೈಯಲ್ಪಡುವ ದಿವಸಗಳು ಬರುವವು; ಆಗ, ಆ ದಿವಸಗಳಲ್ಲಿ ಉಪ
ವಾಸ ಮಾಡುವರು, ಅಂದನು.

೩೬ ಮತ್ತು ಅವನು ಅವರಿಗೆ ಹೇಳಿದ ಸಾಮ್ಯವೇನಂದರೆ, [2]ಹಳೇ ವಸ್ತ್ರಕ್ಕೆ ಹೊಸ ಬಟ್ಟೆಯ ತುಂಡು ಯಾವನೂ
ಹಚ್ಚುವದಿಲ್ಲ; ಹಚ್ಚಿದರೆ, ಹೊಸದು ಹರಿದು ಹೋಗುವದು. ಮತ್ತು ಹಳೇದಕ್ಕೆ ಹೊಸದರ ತುಂಡು ಸರಿ ಬೀಳು
೩೭ ವದಿಲ್ಲ. ಮತ್ತು ಹೊಸ ದ್ರಾಕ್ಷೇ ರಸವನ್ನು ಹಳೇ ಬುದ್ದಲಿಗಳಲ್ಲಿ ಯಾವನೂ ಹಾಕುವದಿಲ್ಲ; ಹಾಕಿದರೆ,
ಹೊಸ ದ್ರಾಕ್ಷೇ ರಸವು ಬುದ್ದಲಿಗಳನ್ನು ಒಡೆದು, ತಾನು ಚೆಲ್ಲಲ್ಪಡುವದು, ಮತ್ತು ಬುದ್ದಲಿಗಳು ಕೆಟ್ಟು
೩೮ ಹೋಗುವವು. ಆದರೆ ಹೊಸ ದ್ರಾಕ್ಷೇ ರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕ ಬೇಕು; ಆಗ ಎರಡೂ
೩೯ ಭದ್ರವಾಗಿರುವವು. ಮತ್ತು ಯಾವನಾದರೂ ಹಳೇದನ್ನು ಕುಡಿದ ಕೂಡಲೆ ಹೊಸದು ಬೇಕನ್ನುವದಿಲ್ಲ;
ಯಾಕಂದರೆ, [3]ಹಳೇದು ಲೇಸು, ಅನ್ನುವನು.

ಸಬ್ಬತಿನಲ್ಲಿ ಶಿಷ್ಯರು ತೆನೆಗಳನ್ನು ಕೊಯಿದದ್ದಕ್ಕೂ, ಯೇಸು ತಾನು ರೋಗಿಷ್ಠರನ್ನು ಸ್ವಸ್ಥ ಮಾಡಿದ್ದಕ್ಕೂ ಶತ್ರುಗಳು ಹೊರಿಸಿದ ಅಪರಾಧವನ್ನು ಪರಿಹರಿಸಿದ್ದು; ಶಾಸ್ತ್ರಿಗಳೂ ಫರಿಸಾಯರೂ ಆತನನ್ನು ಕೊಲ್ಲುವದಕ್ಕೆ ಆಲೋಚಿಸಿದ್ದು.

6. ಇದಲ್ಲದೆ [4]ಪಸ್ಕಕಾಲದ ಒಂದು [5]ಸಬ್ಬತ್ ದಿವಸದಲ್ಲಿ ಅವನು ಬೆಳೆಯ ಹೊಲಗಳನ್ನು ದಾಟ ಹೋಗು
೨ ವಾಗ, ಅವನ ಶಿಷ್ಯರು ತೆನೆಗಳನ್ನು ಕಿತ್ತು, ತಮ್ಮ ಕೈಗಳಲ್ಲಿ ಹೊಸಗಿ, ತಿನ್ನುತ್ತಿದ್ದರು. ಆದರೆ ಫರಿಸಾಯ
ರಲ್ಲಿ ಕೆಲವರು, ನೀವು ಸಬ್ಬತುಗಳಲ್ಲಿ ಮಾಡ ಬಾರದವುಗಳನ್ನು ಮಾಡುವದೇನೆಂದು ಅವರಿಗೆ ಹೇಳಿದಾಗ,
೩ ಯೇಸು ಅವರಿಗೆ ಪ್ರತ್ಯುತ್ತರವಾಗಿ, ದಾವೀದನು, ತಾನೂ ಅವನ ಸಂಗಡ ಇದ್ದವರೂ, ಹಸಿದಾಗ, ಏನು
೪ ಮಾಡಿದನೆಂದೂ, ಅವನು ದೇವರ ಮನೆಯಲ್ಲಿ ಪ್ರವೇಶಿಸಿ, ಯಾಜಕರು ಮಾತ್ರವೇ ಹೊರ್ತು, ಮತ್ತ್ಯಾರೂ
ತಿನ್ನ ಬಾರದ ಸಮ್ಮುಖದ ರೊಟ್ಟಿಗಳನ್ನು ತೆಗೆದು ಕೊಂಡು, ತಿಂದು, ತನ್ನ ಸಂಗಡ ಇದ್ದವರಿಗೆ ಸಹ ಕೊಟ್ಟ
೫ ನೆಂದೂ ನೀವು ಓದಲಿಲ್ಲವೋ? ಅಂದನು. ಮತ್ತು ಅವರಿಗೆ, ಮನುಷ್ಯನ ಮಗನು ಸಬ್ಬತಿಗೂ ಕರ್ತನಾಗಿ
ದ್ದಾನೆ, ಅಂದನು.
೬ ಇದಲ್ಲದೆ ಮತ್ತೊಂದು ಸಬ್ಬತಿನಲ್ಲಿ ಅವನು ಸಭೆಮನೆಯಲ್ಲಿ ಪ್ರವೇಶಿಸಿ ಬೋಧಿಸಲಾಗಿ, ಬಲಗೈ ಒಣಗಿದ
೭ ಒಬ್ಬ ಮನುಷ್ಯನು ಅಲ್ಲಿ ಇದ್ದನು. ಆದರೆ ಶಾಸ್ತ್ರಿಗಳೂ ಫರಿಸಾಯರೂ, ಅವನು ಸಬ್ಬತಿನಲ್ಲಿ ವಾಸಿ ಮಾಡು
೮ ವನೇನೋ? ಅವನ ಮೇಲೆ ತಪ್ಪು ಕಂಡು ಕೊಳ್ಳ ಬೇಕೆಂದು, ಅವನಿಗೆ ಹೊಂಚಿ ಕೊಂಡಿದ್ದರು. ಹೀಗಿರಲಾಗಿ

1. ಯೋಹಾನನು ಸನ್ಯಾಸಿಯ ಹಾಗೆ ಇದ್ದದರಿಂದ ತನ್ನ ಕಾಲವನ್ನು ಜಪಧ್ಯಾನದಲ್ಲಿ ಅಧಿಕವಾಗಿ ಕಳೆದನು. ಅವನ ಶಿಷ್ಯರು ಸಹ ಹಾಗೆಯೇ ಮಾಡಿರುವರು. ಕ್ರಿಸ್ತನೂ ಆತನ ಶಿಷ್ಯರೂ ಜನರ ಮಧ್ಯದಲ್ಲಿ ವಾಸಿಸಿ, ಅವರ ಸುಖ ದುಃಖಗಳಲ್ಲಿ ಅವರ ಸಂಗಡಲಿದ್ದು, ಮೇಲು ಮಾಡುತ್ತಾ ಬಂದರು.

2. ಹೊಸ ಬಟ್ಟೆಯ ತುಂಡನ್ನು ಹಳೇ ವಸ್ತ್ರಕ್ಕೆ ಹಚ್ಚುವವನು ಎರಡನ್ನೂ ಕೆಡಿಸಿ ಬಿಡುತ್ತಾನೆ.

3. ೩೩ನೇ ವಚನದಲ್ಲಿ ಫರಿಸಾಯರು ಮುಂತಾದವರು ಕೇಳಿದ ಪ್ರಶ್ನೆಗೆ ಕರ್ತನು ಕೊಟ್ಟ ಉತ್ತರವು ೩೯ನೇ ವಚನದಲ್ಲಿ ಉಂಟು. ಸುವಾರ್ತೆಯು ಹೊಸ ವಸ್ತ್ರಕ್ಕೂ ಹೊಸ ರಸಕ್ಕೂ ಸಮಾನವಾಗಿದೆ. ನ್ಯಾಯಪ್ರಮಾಣವು ಹಳೇ ವಸ್ತ್ರಕ್ಕೂ ಹಳೇ ರಸಕ್ಕೂ ಸಮಾನವಾಗಿದೆ. ಮಾಧುರ್ಯವುಳ್ಳ ಹೊಸ ರಸವನ್ನು ಕುಡಿದವರು ಮಾಧುರ್ಯವಿಲ್ಲದ ಹಳೇ ರಸವನ್ನು ಅಪೇಕ್ಷಿಸರು. ಹಾಗೆಯೇ ಹಳೇ ರಸವಾದ ನ್ಯಾಯಪ್ರಮಾಣವನ್ನು ಅನುಸರಿಸಿದವರು ಅದನ್ನು ಮುಖ್ಯವೆಂದು ಹೇಳುವರೇ ಹೊರ್ತು, ಸುವಾರ್ತೆಯ ಸುಕೃತೋಪದೇಶಗಳನ್ನು ಸಂಗಡಲೇ ಅಂಗೀಕರಿಸಲಾರರು.

4. ೧—೧೧. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೨. ೧—೧೩. ಮಾರ್ಕ. ೨. ೨೩—೨೮; ೩. ೧—೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

5. ಈ ದಿವಸ ಯಾವದೋ ಗೊತ್ತಾಗಿ ತಿಳಿಯದು. ಇದು ಪಸ್ಕ ಹಬ್ಬದ ಎರಡನೇ ದಿವಸದ ತರುವಾಯ ಬರುವ ಮೊದಲನೇ ಸಬ್ಬತೆಂದು ಕಾಣುತ್ತದೆ. ಆ ದಿವಸದಲ್ಲಿ ಜವೆಗೋಧಿಯ ಮೊದಲನೇ ಫಲಗಳನ್ನು ದೇವರಿಗೆ ಅರ್ಪಿಸುವರು. (ಲೇವಿ. ೨೩. ೧೦, ೧೧.) ಇದು ಪಸ್ಕ ಹಬ್ಬಕ್ಕೂ ಪಂಚಾಶತ್ತಿನ ದಿವಸಕ್ಕೂ ಮಧ್ಯದಲ್ಲಿ ಬರುವ ಏಳು ಸಬ್ಬತುಗಳಲ್ಲಿ ಮೊದಲನೇ ಸಬ್ಬತೆಂದು ನೆನಸುತಾರೆ.



ಅವನು, ಅವರ ಆಲೋಚನೆಗಳನ್ನು ತಿಳಿದು, ಒಣಗಿದ ಕೈಯುಳ್ಳ ಮನುಷ್ಯನಿಗೆ, ಎದ್ದು, ಮಧ್ಯದಲ್ಲಿ ನಿಂತುಕೋ
ಅನ್ನಲು; ಅವನು ಎದ್ದು, ನಿಂತನು.
೯ ಆಗ ಯೇಸು ಅವರಿಗೆ, ನಿಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ. ಸಬ್ಬತುಗಳಲ್ಲಿ ಯಾವದು ನ್ಯಾಯ? ಒ
ದನ್ನು ಮಾಡುವದೋ, ಕೆಟ್ಟದ್ದನ್ನು ಮಾಡುವದೋ, ಪ್ರಾಣವನ್ನು ರಕ್ಷಿಸುವದೋ, ನಾಶ ಮಾಡುವದೋ
೧೦ ಎಂದು ಹೇಳಿ, ಅವರೆಲ್ಲರನ್ನು ಸುತ್ತ ನೋಡಿ, ಆ ಮನುಷ್ಯನಿಗೆ, ನಿನ್ನ ಕೈ ಚಾಚು, ಅಂದನು. ಅ
೧೧ ಹಾಗೆ ಮಾಡಿದಾಗ, ಅವನ ಕೈ ಮತ್ತೊಂದರ ಹಾಗೆ ಸ್ವಸ್ಥವಾಯಿತು. ಆದರೆ ಅವರು [1]ಮೂರ್ಖತನದಿ
ತುಂಬಿದವರಾಗಿ, ಯೇಸುವಿಗೆ ಏನು ಮಾಡೋಣ? ಎಂದು ತಮ್ಮಲ್ಲಿ ಮಾತಾಡಿ ಕೊಂಡರು.

ಯೇಸು ಹನ್ನೆರಡು ಮಂದಿ ಅಪೊಸ್ತಲರನ್ನು ನೇಮಿಸಿದ್ದು; ಜನಸಮೂಹಗಳು ಆತನ ಬಳಿಗೆ ಬಂದದ್ದು.

೧೨ ಮತ್ತು [2]ಆ ದಿನಗಳಲ್ಲಿ ಏನಾಯಿತಂದರೆ, ಅವನು ಪ್ರಾರ್ಥನೆ ಮಾಡುವದಕ್ಕೆ ಹೊರಟು, ಒಂದು ಬೆಟ್ಟ
ಹೋಗಿ, ಅಲ್ಲಿ [3]ದೇವರ ಪ್ರಾರ್ಥನೆಯಲ್ಲಿ ರಾತ್ರಿಯೆಲ್ಲಾ ಕಳೆದನು.
೧೩ ಬೆಳಗಾದ ಮೇಲೆ ಅವನು ತನ್ನ ಶಿಷ್ಯರನ್ನು ಕರೆದು, ಅವರಲ್ಲಿ ಹನ್ನೆರಡು ಮಂದಿಯನ್ನು ಆದು ಕೊಂಡ
೧೪ ಅವರಿಗೆ ಅಪೊಸ್ತಲರೆಂದು ಹೆಸರಿಟ್ಟನು. ಅವರ್ಯಾರಂದರೆ, ಅವನು ಪೇತ್ರನೆಂದು ಕರೆದ ಸೀಮೋನನು; ಅ
ಸಹೋದರನಾದ ಅಂದ್ರೆಯನು; ಯಾಕೋಬನು; ಯೋಹಾನನು; ಫಿಲಿಪ್ಪನು; ಬಾರ್ತೊಲೊಮಾಯ
೧೫ ಮತ್ತಾಯನು; ತೋಮನು; ಅಲ್ಫಾಯನ ಮಗನಾದ ಯಾಕೋಬನು; ಜೆಲೋತನೆಂಬ ಸೀಮೋನ
೧೬ ಯಾಕೋಬನ ಮಗನಾದ ಯೂದನು; ಮತ್ತು ದ್ರೋಹಿಯಾದ ಇಸ್ಕರಿಯೋತೆಂಬ ಯೂದನು.
೧೭ [4]ಆ ಮೇಲೆ ಅವನು ಅವರ ಸಂಗಡ ಇಳಿದು, ತನ್ನ ಶಿಷ್ಯರ ಸಮೂಹವೂ, ಸಮಸ್ತ ಯೆಹೂದದಿಂ
ಲೂ ಯೆರೂಸಲೇಮಿನಿಂದಲೂ ತೂರ್ ಸಿದೋನಗಳ ಸಮುದ್ರತೀರದಿಂದಲೂ ಅವನನ್ನು ಕೇಳುವದಕ್ಕ
ತಮ್ಮ ರೋಗಗಳು ಗುಣವಾಗುವದಕ್ಕೂ ಬಂದ ದೊಡ್ಡ ಜನಸಮೂಹವೂ ಸಹಿತವಾಗಿ, [5]ಬೈಲು ಸ್ಥ
೧೮ ದಲ್ಲಿ ನಿಂತು ಕೊಂಡನು. ಅಶುದ್ಧಾತ್ಮಗಳಿಂದ ಉಪದ್ರ ಪಡುವವರು ಸಹ ಬಂದು ವಾಸಿಯಾದರ
೧೯ ಮತ್ತು ಅವನಿಂದ ಬಲವು ಹೊರಟು, ಎಲ್ಲರನ್ನು ಗುಣ ಮಾಡಿದದರಿಂದ, ಸಮೂಹವೆಲ್ಲಾ ಅವನನ್ನ
ಮುಟ್ಟ ಹುಡುಕಿದರು.

ಕ್ರಿಸ್ತನು ತನ್ನ ಶಿಷ್ಯರಿಗೆ ಪ್ರಸಂಗಿಸಿದ್ದು.

೨೦ ಇದಲ್ಲದೆ ಅವನು ತನ್ನ ಕಣ್ಣುಗಳನ್ನು ತನ್ನ ಶಿಷ್ಯರ ಕಡೆಗೆ ಎತ್ತಿ, ಹೇಳಿದ್ದೇನಂದರೆ,
[6]ಬಡವರಾದ ನೀವು ಭಾಗ್ಯವಂತರು; ಯಾಕಂದರೆ ದೇವರ ರಾಜ್ಯವು ನಿಮ್ಮದಾಗಿದೆ.
೨೧ ಈಗ ಹಸಿವೆ ಪಡುವವರಾದ ನೀವು ಭಾಗ್ಯವಂತರು; ಯಾಕಂದರೆ ತೃಪ್ತಿ ಹೊಂದುವಿರಿ.
ಈಗ ಅಳುವವರಾದ ನೀವು ಭಾಗ್ಯವಂತರು; ಯಾಕಂದರೆ ನಗುವಿರಿ.
೨೨ ಮನುಷ್ಯನ ಮಗನ ನಿಮಿತ್ತ ಮನುಷ್ಯರು ನಿಮ್ಮನ್ನು ಹಗೆ ಮಾಡಿ, ನಿಮ್ಮನ್ನು ಪ್ರತ್ಯೇಕಿಸಿ, ನಿಂದಿಸಿ, ನಿಮ
೨೩ ಹೆಸರನ್ನು ಕೆಟ್ಟದ್ದೆಂದು ತೆಗೆದು ಹಾಕಿದರೆ, ನೀವು ಭಾಗ್ಯವಂತರಾಗಿದ್ಧೀರಿ; ಆ ದಿವಸದಲ್ಲಿ ಸಂತೋಷ ಪಟ್ಟ

1. ಇದು ನ್ಯಾಯ ಅನ್ಯಾಯ ಎಂಬುವದನ್ನು ಪರಿಗ್ರಹಿಸದ ಮೂರ್ಖತನವೆಂದು ಅರ್ಥವಾಗುತ್ತದೆ. ಪಾಪವಿಲ್ಲದಂಥಾ ಕೋಪ ಮಾಡುವದು ನ್ಯಾಯವೇ. ಆದಾಗ್ಯೂ ಪಾಪವನ್ನು ಬೆಳಿಸ ತಕ್ಕ ಕೋಪವು ಒಳ್ಳೇದಲ್ಲ.

2. ೧೨—೪೯. ವಚನಗಳ ವರಿಗೂ ಹನ್ನೆರಡು ಮಂದಿ ಅಪೊಸ್ತಲರು ನೇಮಿಸಲ್ಪಟ್ಟದ್ದೂ, ಪರ್ವತಪ್ರಸಂಗವೂ ಅಡಗಿರುತ್ತದೆ. ಮತ್ತಾ. ೫. ೧, ೨. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು. ೧೨—೧೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೦. ೧—೪. ಮಾರ್ಕ. ೩. ೧೩—೧೯. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ೧೭—೪೯. ವಚನಗಳ ವ್ಯಾಖ್ಯಾನವನ್ನು ಮತ್ತಾ. ೫—೭ ಸಂಧಿಗಳ ವರಿಗೂ ಇರುವ ವ್ಯಾಖ್ಯಾನದಲ್ಲಿ ನೋಡ ಬೇಕು.

5. ಮತ್ತಾಯ. ೫. ೧. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

6. ಮತ್ತಾ. ೫. ೩ಲ್ಲಿ ಆತ್ಮದಲ್ಲಿ ದೀನರು ಎಂಬದಾಗಿ ಉಂಟು. ಮತ್ತಾಯನ ಸುವಾರ್ತೆಯಲ್ಲಿ ರಕ್ಷಕನು ಬಾಯಿ ತೆರೆದು ಹೇಳಿದ ವಚನದ ಜ್ಞಾನಾಭಿಪ್ರಾಯವನ್ನೂ ಈ ಸುವಾರ್ತೆಯಲ್ಲಿ ಅದರ ಉಪಮಾನವನ್ನೂ ಹೇಳಿಯದೆ. ಇದರಿಂದ ದೇವರ ಆಶೀರ್ವಾದ ಹೊಂದುವದಕ್ಕೆ, ಬಡತನವೂ ಕಷ್ಟವೂ ಆಟಂಕ ಮಾಡಲಾರವೆಂದು

ಕುಣಿದಾಡಿರಿ; ಯಾಕಂದರೆ, ಇಗೋ, ನಿಮ್ಮ ಪ್ರತಿಫಲವು ಪರಲೋಕದಲ್ಲಿ ಬಹಳವಾಗಿದೆ. ಅವರ ಪಿತೃಗಳು
ಪ್ರವಾದಿಗಳಿಗೆ ಹಾಗೆಯೇ ಮಾಡಿದರು.
೨೪ ಆದರೆ [1]ಐಶ್ವರ್ಯವಂತರಾದ ನಿಮಗೆ ಅಯ್ಯೋ! ಯಾಕಂದರೆ ನಿಮ್ಮ ಆದರಣೆ ಹೊಂದಿದ್ದೀರಿ.
೨೫ ತುಂಬಿದವರೇ, ನಿಮಗೆ ಅಯ್ಯೋ! ಯಾಕಂದರೆ ಹಶಿಯುವಿರಿ.
ಈಗ ನಗುವವರೇ, ನಿಮಗೆ ಅಯ್ಯೋ! ಯಾಕಂದರೆ ದುಃಖ ಪಟ್ಟು, ಅಳುವಿರಿ.
೨೬ [2]ಮನುಷ್ಯರೆಲ್ಲರು ನಿಮಗೆ ಒಳ್ಳೇ ಮಾತು ಹೇಳಿದರೆ, ನಿಮಗೆ ಅಯ್ಯೋ! ಯಾಕಂದರೆ ಅವರ ಪಿತೃಗಳು
ಸುಳ್ಳು ಪ್ರವಾದಿಗಳಿಗೆ ಹಾಗೆಯೇ ಮಾಡಿದರು.
೨೭ ಇದಲ್ಲದೆ ಕೇಳುವವರಾದ ನಿಮಗೆ ನಾನು ಹೇಳುವದೇನಂದರೆ, ನಿಮ್ಮ ಶತ್ರುಗಳನ್ನು ಪ್ರೀತಿ ಮಾಡಿರಿ;
೨೮ ನಿಮ್ಮನ್ನು ಹಗೆ ಮಾಡುವವರಿಗೆ ಉಪಕಾರ ಮಾಡಿರಿ; ನಿಮ್ಮನ್ನು ಶಪಿಸುವವರನ್ನು ಆಶೀರ್ವದಿಸಿರಿ;
೨೯ ನಿಮ್ಮನ್ನು ನಿಂದಿಸುವವರಿಗೋಸ್ಕರ ಪ್ರಾರ್ಥನೆ ಮಾಡಿರಿ. ಕೆನ್ನೆಯ ಮೇಲೆ ನಿನ್ನನ್ನು ಹೊಡೆಯುವವನಿಗೆ
ಮತ್ತೊಂದನ್ನೂ ತಿರುಗಿಸು. ಮತ್ತು ನಿನ್ನ ಅಂಗವಸ್ತ್ರವನ್ನು ತೆಗೆದು ಕೊಳ್ಳುವವನಿಗೆ ಅಂಗಿಯನ್ನು ತಡೆಯ
೩೦ ಬೇಡ. ಇದಲ್ಲದೆ ನಿನ್ನನ್ನು ಬೇಡಿ ಕೊಳ್ಳುವ ಪ್ರತಿ ಮನುಷ್ಯನಿಗೆ ಕೊಡು; ನಿನ್ನವುಗಳನ್ನು ತೆಗೆದು ಕೊಳ್ಳು
೩೧ ವವನಿಂದ ತಿರಿಗಿ ಕೇಳದಿರು. ಮತ್ತು ಮನುಷ್ಯರು ನಿಮಗೆ ಹ್ಯಾಗೆ ಮಾಡ ಬೇಕೆಂದು ಇಚ್ಛೈಸುತ್ತೀರೋ,
ಹಾಗೆಯೇ ನೀವೂ ಅವರಿಗೆ ಮಾಡಿರಿ.
೩೨ ನಿಮ್ಮನ್ನು ಪ್ರೀತಿ ಮಾಡುವವರನ್ನು ನೀವು ಪ್ರೀತಿ ಮಾಡಿದರೆ, ನಿಮಗೆ ವಿಶೇಷವೇನು? ಯಾಕಂದರೆ ಪಾಪಿ
೩೩ ಷ್ಠರು ಸಹ ತಮ್ಮನ್ನು ಪ್ರೀತಿ ಮಾಡುವವರನ್ನು ಪ್ರೀತಿ ಮಾಡುತ್ತಾರೆ. ಮತ್ತು ನಿಮಗೆ ಒಳ್ಳೇದನ್ನು ಮಾಡು
ವವರಿಗೆ ನೀವು ಒಳ್ಳೇದನ್ನು ಮಾಡಿದರೆ, ನಿಮಗೆ ವಿಶೇಷವೇನು? ಯಾಕಂದರೆ ಪಾಪಿಷ್ಠರು ಸಹ ಹಾಗೆಯೇ
೩೪ ಮಾಡುತ್ತಾರೆ. ಮತ್ತು ಅವರಿಂದ ತಿರಿಗಿ ಹೊಂದೇವೆಂದು ನಿರೀಕ್ಷಿಸುವವರಿಗೆ ಸಾಲ ಕೊಟ್ಟರೆ, ನಿಮಗೆ
ವಿಶೇಷವೇನು? ಯಾಕಂದರೆ ಪಾಪಿಷ್ಠರು ಸಹ, ಅದನ್ನು ತಿರಿಗಿ ಹೊಂದುವ ಹಾಗೆ, ಪಾಪಿಷ್ಠರಿಗೆ ಸಾಲ
೩೫ ಕೊಡುತ್ತಾರೆ. ಆದರೆ ನಿಮ್ಮ ಶತ್ರುಗಳನ್ನು ಪ್ರೀತಿ ಮಾಡಿರಿ. ಉಪಕಾರ ಮಾಡಿ, ಪ್ರತಿಯಾಗಿ ಏನೂ
ನಿರೀಕ್ಷಿಸದೆ, ಸಾಲ ಕೊಡಿರಿ; ಆಗ ನಿಮ್ಮ ಪ್ರತಿಫಲ ಬಹಳವಾಗಿರುವದು; ಮಹೋನ್ನತನ ಮಕ್ಕಳಾಗಿರುವಿರಿ.
೩೬ ಯಾಕಂದರೆ ಅವನು ದಯ ನೆನಸದವರಿಗೂ, ಕೆಟ್ಟವರಿಗೂ ಒಳ್ಳೆಯವನಾಗಿದ್ದಾನೆ. ಹೀಗಿರುವದರಿಂದ,
ನಿಮ್ಮ ತಂದೆಯು ಕನಿಕರವುಳ್ಳವನಾಗಿರುವ ಪ್ರಕಾರ, [3]ನೀವೂ ಕನಿಕರವುಳ್ಳವರಾಗಿರ್ರಿ.
೩೭ ಇದಲ್ಲದೆ ನ್ಯಾಯ ತೀರಿಸದಿರ್ರಿ; ಆಗ ನಿಮಗೂ ನ್ಯಾಯ ತೀರಿಸಲ್ಪಡದು. ಆಜ್ಞೆನಿರ್ಣಯಿಸದಿರ್ರಿ, ಆಗ
೩೮ ಆಜ್ಞೆನಿರ್ಣಯ ಹೊಂದದಿರುವಿರಿ. ಬಿಡಿಸಿರಿ, ಆಗ ಬಿಡಿಸಲ್ಪಡುವಿರಿ. ಕೊಡಿರಿ, ಆಗ ನಿಮಗೆ ಕೊಡಲ್ಪ
ಡುವದು; ಒತ್ತಿದ, ಗಲ್ಲಿಸಿದ, ಹೊರಳುವ, ಒಳ್ಳೇ ಅಳತೆಯನ್ನು [4]ನಿಮ್ಮ ಉಡಿಯಲ್ಲಿ ಕೊಡುವರು. ಯಾಕಂ
ದರೆ ನೀವು ಮಾಡುವ ಅಳತೆಯಿಂದಲೇ ನಿಮಗೆ ಬದಲಾಗಿ ಅಳೆಯಲ್ಪಡುವದು.
೩೯ ಮತ್ತು ಅವರಿಗೆ ಸಾಮ್ಯವನ್ನು ಹೇಳಿದನು; ಏನಂದರೆ, ಕುರುಡನು ಕುರುಡನನ್ನು ನಡಿಸ ಬಲ್ಲನೋ?
೪೦ ಇಬ್ಬರೂ ಕುಣಿಯೊಳಗೆ ಬೀಳುವರಲ್ಲವೋ? ಶಿಷ್ಯನು ತನ್ನ ಬೋಧಕನಿಗಿಂತ ಹೆಚ್ಚಲ್ಲ; ಆದರೆ ಸಂಪೂರ್ಣ
ವಾದ ಪ್ರತಿ ಮನುಷ್ಯನು ತನ್ನ ಬೋಧಕನ ಹಾಗೆ ಇರುವನು.

1. ದೇವರ ಆಶೀರ್ವಾದಗಳು ಹೇಳಲ್ಪಟ್ಟ ತರುವಾಯ ಶಾಪವು ಹೇಳಲ್ಪಡುವದನ್ನು ನೋಡಿದರೆ, ಆತನು ಕನಿಕರವುಳ್ಳವನಾಗಿರುವ ಪ್ರಕಾರ ನೀತಿಯೂ ಪರಿಶುದ್ಧತ್ವವೂ ಉಳ್ಳವನಾಗಿದ್ದಾನೆಂದು ತಿಳಿಯ ಬಹುದು. ಐಶ್ವರ್ಯವಂತರು ಎಂಬುವದು, ತಮ್ಮ ಐಶ್ವರ್ಯವೇ ನಿತ್ಯವೆಂದು ನಂಬಿರುವವರನ್ನು ಕುರಿತದ್ದು. (೧೮, ೨೪, ೨೫. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೧೦. ೨೪. ಮತ್ತಾ. ೧೯. ೨೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

2. ಸ್ವಂತ ಹೊಗಳಿಕೆಯನ್ನು ಹುಡುಕಿ ಎಲ್ಲರಿಗೂ ಸಮ್ಮತಿಯಾಗಿ ನಡಿಯ ಅಪೇಕ್ಷಿಸುವವರು ದೇವರಿಂದ ಮೆಚ್ಚಲ್ಪಡಲಾರರು. ಮನಸ್ಸಾಕ್ಷಿಯ ಪ್ರಕಾರ ಯಥಾರ್ಥವಾಗಿಯೂ ಖಂಡಿತವಾಗಿಯೂ ನಡಿಯುವವರನ್ನು ಸಮಸ್ತ ಜನರೂ ಮೆಚ್ಚಲಾರರು. (ಯೆಶಾ. ೩೦. ೧೦, ೧೧.)

3. ಮತ್ತಾ. ೫. ೪೮. ವಚನದ ವ್ಯಾಖ್ಯಾನ ನೋಡ ಬೇಕು.

4. (ನೆಹೇ. ೫. ೧೩.) ದೇವರೂ ಮನುಷ್ಯರೂ ಇಂಥಾ ಅಪಾರವಾದ ಫಲವನ್ನು ಕೊಡುವರು. ಇಂಥಾ ಅಮೂಲ್ಯವಾದ ವಾಗ್ದತ್ತವನ್ನು ಕೊಡುವವನು ಪರಮೋತ್ತಮನಾದ ದೇವರೇ. ಆತನೇ ಅದನ್ನು ಈಡೇರಿಸ ತಕ್ಕವನು.



೪೧ ಇದಲ್ಲದೆ ನೀನು ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ನೋಡಿ, ನಿನ್ನ ಸ್ವಂತ ಕಣ್ಣಿನಲ್ಲಿರುವ ತೊ
೪೨ ಯನ್ನು ಯೋಚಿಸದೆ ಇರುವದೇನು? ಇಲ್ಲವೆ ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ನೀನು ನೋಡದೆ, ನಿ
ಸಹೋದರನಿಗೆ, ಸಹೋದರನೇ, ಬಿಡು, ನಿನ್ನ ಕಣ್ಣಿನಲ್ಲಿರುವ ರವೆಯನ್ನು ತೆಗೆಯುತ್ತೇನೆಂದು, ಹ್ಯಾಗೆ ಹೇ
ಬಹುದು? ಕಪಟಸ್ಥನೇ! ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆ; ಆ ಮೇಲೆ ನಿನ್ನ ಸಹೋದರ
ಕಣ್ಣಿನಲ್ಲಿರುವ ರವೆಯನ್ನು ತೆಗೆಯುವದಕ್ಕೆ ಚನ್ನಾಗಿ ಕಾಣುವಿ.
೪೩ ಯಾಕಂದರೆ ಕೆಟ್ಟ ಫಲ ಫಲಿಸುವ ಮರವು ಒಳ್ಳೇದಲ್ಲ; ಒಳ್ಳೇ ಫಲ ಫಲಿಸುವ ಮರವು ಕೆಟ್ಟದ್ದ
೪೪ ಯಾಕಂದರೆ ಒಂದೊಂದು ಮರವು ಸ್ವಂತ ಫಲದಿಂದ ತಿಳಿಯಲ್ಪಡುವದು; ಹ್ಯಾಗಂದರೆ ಮುಳ್ಳುಗಳಿಂ
೪೫ ಅಂಜೂರಗಳನ್ನು ಕೂಡಿಸುವದಿಲ್ಲ; ಗಜುಗದಿಂದ ದ್ರಾಕ್ಷೆಯನ್ನು ಕೊಯ್ಯುವದಿಲ್ಲ. [1]ಒಳ್ಳೇ ಮನುಷ್ಯನ
ತನ್ನ ಹೃದಯದ ಒಳ್ಳೇ ಬೊಕ್ಕಸದೊಳಗಿಂದ ಒಳ್ಳೇದನ್ನು ಹೊರಗೆ ತರುತ್ತಾನೆ; ಕೆಟ್ಟ ಮನುಷ್ಯನು ತನ
ಹೃದಯದ ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟದ್ದನ್ನು ಹೊರಗೆ ತರುತ್ತಾನೆ; ಯಾಕಂದರೆ ಹೃದಯದ ಪೂರ್ತಿ
ಯಿಂದ ಅವನ ಬಾಯಿ ಮಾತಾಡುವದು.
೪೬ ಇದಲ್ಲದೆ ನೀವು ನನ್ನನ್ನು, ಕರ್ತನೇ, ಕರ್ತನೇ, ಎಂದು ಕರೆದು, ನಾನು ಹೇಳುವದನ್ನು ಮಾಡದೆ ಇರು
೪೭ ದೇನು? ನನ್ನ ಬಳಿಗೆ ಬಂದು, ನನ್ನ ವಾಕ್ಯಗಳನ್ನು ಕೇಳಿ, ಅವುಗಳನ್ನು ಮಾಡುವ ಮನುಷ್ಯನು ಯಾ
೪೮ ನಿಗೆ ಸಮಾನನೆಂದು ನಿಮಗೆ ತೋರಿಸುತ್ತೇನೆ. ಅವನು ಆಳವಾಗಿ ಅಗಿದು ಬಂಡೆಯ ಮೇಲೆ ತಳಾ
ಹಾಕಿ, ಮನೆ ಕಟ್ಟಿದ ಮನುಷ್ಯನಿಗೆ ಸಮಾನನಾಗಿದ್ದಾನೆ. ಪ್ರಳಯವು ಬಂದು, ಪ್ರವಾಹವು ಆ ಮ
ಯನ್ನು ಬಡಿದಾಗ, ಅದರ ತಳಾದಿ ಬಂಡೆಯ ಮೇಲೆ ಇದ್ದದರಿಂದ, ಅದನ್ನು ಚಲಿಸಲಾರದೆ ಹೋಯಿತು
೪೯ ಆದರೆ ಕೇಳಿ ಮಾಡದವನು ತಳಾದಿ ಇಲ್ಲದೆ ಭೂಮಿಯ ಮೇಲೆ ಮನೆ ಕಟ್ಟಿದ ಮನುಷ್ಯನಿಗೆ ಸಮಾನನಾ
ದ್ದಾನೆ; ಪ್ರವಾಹವು ಬಡಿದ ಕೂಡಲೆ, ಅದು ಬಿತ್ತು; ಮತ್ತು ಆ ಮನೆಯ ಬೀಳುವಿಕೆಯು ದೊಡ್ಡದಾಗಿತ್ತು.

ಕ್ರಿಸ್ತನು ರೋಗಿಷ್ಠರನ್ನು ಸ್ವಸ್ಥ ಮಾಡಿ, ಸತ್ತವರನ್ನು ಜೀವದಿಂದೆಬ್ಬಿಸಿದ್ದು; ಆತನ ಕೀರ್ತಿ ಪ್ರಸಿದ್ಧಿಯಾದದ್ದು.

**7.** [2]ಅವನು ತನ್ನ ವಾಕ್ಯಗಳನ್ನೆಲ್ಲಾ ಜನರ ಕಿವಿಗಳಲ್ಲಿ ತೀರಿಸಿದ ಮೇಲೆ ಕಪೆರ್ನಾಉಮಿನಲ್ಲಿ ಪ್ರವೇಶಿಸಿದನು.
೨ ಮತ್ತು ಒಬ್ಬ [3]ಶತಾಧಿಪತಿಗೆ ಪ್ರಿಯನಾಗಿರುವ ದಾಸನು ಅಸೌಖ್ಯವಾಗಿದ್ದು, ಸಾಯಲಾಗಿದ್ದನು.
೩ ಅವನು ಯೇಸುವಿನ ಸಮಾಚಾರವನ್ನು ಕೇಳಿ, ಬಂದು, ತನ್ನ ದಾಸನನ್ನು ಗುಣ ಮಾಡ ಬೇಕೆಂದು ಅವ
೪ ನನ್ನು ಬೇಡಿ ಕೊಳ್ಳ, ಅವನ ಬಳಿಗೆ ಯೆಹೂದ್ಯರ [4]ಹಿರಿಯರನ್ನು ಕಳುಹಿಸಿದನು. ಇವರು ಯೇಸುವಿನ
ಬಳಿಗೆ ಬಂದು, ಅವನನ್ನು ಬಹಳವಾಗಿ ಬೇಡಿ ಕೊಂಡು, ನೀನು ಅವನಿಗೆ ಇದನ್ನು ಮಾಡುವ ಹಾಗೆ ಅವನು

1. ಮತ್ತಾ. ೧೨. ೩೪, ೩೫. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಶತಾಧಿಪತಿಯ ಸೇವಕನಿಗೆ ಗುಣ ಮಾಡಿದ್ದರಿಂದಲೂ, ವಿಧವೆಯ ಮಗನನ್ನು ಜೀವದಿಂದ ಎಬ್ಬಿಸಿದ್ದರಿಂದಲೂ ಕ್ರಿಸ್ತನ ಕೀರ್ತಿಯು ಗಲಿಲಾಯ ಯೆಹೂದ ದೇಶಗಳಲ್ಲೆಲ್ಲಾ ಪ್ರಸಿದ್ಧಿಯಾಯಿತು. (೧—೧೬.) ಇದು ಶೆರೆಯಲ್ಲಿದ್ದ ಯೋಹಾನನಿಗೆ ತಿಳಿದಾಗ ತನ್ನ ಶಿಷ್ಯರನ್ನು ರಕ್ಷಕನ ಬಳಿಗೆ ಕಳುಹಿಸಿದನು. (೧೮—೨೦.) ಅವರ ಮುಂದೆ ಆತನು ಕೆಲವು ಅದ್ಭುತಗಳನ್ನು ಮಾಡಿ, ತಾವು ಕಂಡದ್ದನ್ನು ತಮ್ಮ ಗುರುವಿಗೆ ತಿಳಿಸಲಾಜ್ಞಾಪಿಸಿದನು. (೨೧—೨೩.) ಅವರು ಹೋದ ತರುವಾಯ ಕ್ರಿಸ್ತನು ಯೋಹಾನನನ್ನು ಹೊಗಳಿ, ಅವನು ಸನ್ಯಾಸಿಯ ಹಾಗಿದ್ದದರಿಂದ ಅವನನ್ನೂ, ಮನುಷ್ಯರ ಸುಖ ದುಃಖಗಳಿಗೆ ಸಮ್ಮಂಧ ಪಟ್ಟಿದ್ದದರಿಂದ ತನನ್ನೂ ಹೀನೈಸಿ ತಳ್ಳಿದ ಪರಿಸಾಯರು ಮುಂತಾದವರನ್ನು ಗದರಿಸಿದನು. (೨೪—೩೫.) ತರುವಾಯ ತನ್ನ ಬಳಿಗೆ ಬಂದ ಒಬ್ಬ ಪಾಪಿಷ್ಠಳಾದ ಸ್ತ್ರೀಗೆ ಆಶೀರ್ವಾದ ಕೊಟ್ಟನು. (೩೬—೫೦.)

3. ರೋಮಾಯ ಸೈನ್ಯದಲ್ಲಿ ನೂರು ಮಂದಿಗೆ ಒಬ್ಬ ಅಧಿಪತಿ ಇರುವನು. ಜನರಲ್ಲಿ ಕಲಹ ನಡಿಯದೆ ಸಮಾಧಾನವನ್ನು ಕಾಪಾಡುವದಕ್ಕಾಗಿ, ಒಂದೊಂದು ಮುಖ್ಯ ಪಟ್ಟಣದಲ್ಲಿಯೂ ಒಬ್ಬೊಬ್ಬ ಶತಾಧಿಪತಿ ಇರುವನು. ಈ ಶತಾಧಿಪತಿಯು ಯೆಹೂದ್ಯರಲ್ಲಿಯೂ ಅವರ ಮತಾಚಾರದಲ್ಲಿಯೂ ಅಭಿಮಾನವುಳ್ಳವನಾಗಿದ್ದನು. ಮತ್ತು ಕ್ರಿಸ್ತನು ಮಾಡಿದ ಅದ್ಭುತಗಳನ್ನು ಕೇಳಿ, ಆತನು ಮೆಸ್ಸೀಯನಾದ ಲೋಕರಕ್ಷಕನೆಂದು ನಂಬಿ ಇದ್ದನೆಂಬದಾಗಿ ತೋರುತ್ತದೆ.

4. ಇವರು ಪಟ್ಟಣದಲ್ಲಿ ದೊಡ್ಡ ಮನುಷ್ಯರಾಗಿ ಅಥವಾ ಸಭೆ ಮನೆಯ ಹಿರಿಯರಾಗಿ ಇರ ಬಹುದು.

೫ ಯೋಗ್ಯನು. ಯಾಕಂದರೆ ನಮ್ಮ ಜನಾಂಗವನ್ನು ಪ್ರೀತಿ ಮಾಡುತ್ತಾನೆ; ಮತ್ತು ಅವನೇ ನಮಗೆ [1]ಸಭೆ
೬ ಮನೆಯನ್ನು ಕಟ್ಟಿಸಿದ್ದಾನೆ, ಅಂದರು. ಆಗ ಯೇಸು ಅವರ ಸಂಗಡ ಹೋದನು.
ಅವನು ಮನೆಗೆ ಇನ್ನು ಸ್ವಲ್ಪ ದೂರವಿರುವಾಗ, ಶತಾಧಿಪತಿಯು ಸ್ನೇಹಿತರನ್ನು ಅವನ ಬಳಿಗೆ ಕಳುಹಿಸಿ,
ಅವನಿಗೆ ಹೇಳಿಸಿದ್ದೇನಂದರೆ, ಕರ್ತನೇ, ಬೇಸರಗೊಳ್ಳ ಬೇಡ; ಯಾಕಂದರೆ ನೀನು ನನ್ನ ಮಾಳಿಗೆಯ ಕೆಳಗೆ
೭ ಪ್ರವೇಶಿಸುವ ಹಾಗೆ ನಾನು ಯೋಗ್ಯನಲ್ಲ. ಆದದರಿಂದ ನಾನು ನಿನ್ನ ಬಳಿಗೆ ಬರುವದಕ್ಕೆ ಸಹ ನನ್ನನ್ನು
೮ ಅಯೋಗ್ಯನೆಂದು ಎಣಿಸಿ ಕೊಂಡೆನು; ಆದರೆ ಮಾತನ್ನು ಹೇಳಿದರೆ, ನನ್ನ ಆಳು ಗುಣವಾಗುವನು. ಯಾಕಂ
ದರೆ ನಾನು ಸಹ ಅಧಿಕಾರಕ್ಕೊಳಗಾದ ಮನುಷ್ಯನಾಗಿದ್ದೇನೆ; ನನ್ನ ಕೈಕೆಳಗೆ ರಾಣುವೆಯವರು ಇದ್ದಾರೆ;
ಮತ್ತು ಇವನಿಗೆ ಹೋಗಂದರೆ, ಹೋಗುತ್ತಾನೆ; ಮತ್ತೊಬ್ಬನಿಗೆ ಬಾ ಅಂದರೆ, ಬರುತ್ತಾನೆ; ಮತ್ತು ನನ್ನ
ದಾಸನಿಗೆ ಇದನ್ನು [2]ಮಾಡಂದರೆ, ಮಾಡುತ್ತಾನೆ.
೯ ಇವುಗಳನ್ನು ಯೇಸು ಕೇಳಿ, ಅವನನ್ನು ಕುರಿತು ಆಶ್ಚರ್ಯ ಪಟ್ಟು, ತಿರುಗಿ ಕೊಂಡು, ತನ್ನನ್ನು ಹಿಂಬಾ
ಲಿಸುವ ಸಮೂಹಕ್ಕೆ, ಇಸ್ರಯೇಲಿನಲ್ಲಿಯೂ ನಾನು ಇಷ್ಟು ದೊಡ್ಡ ವಿಶ್ವಾಸವನ್ನು ಕಾಣಲಿಲ್ಲವೆಂದು,
೧೦ ನಿಮಗೆ ಹೇಳುತ್ತೇನೆ, ಅಂದನು. ತರುವಾಯ ಕಳುಹಿಸಲ್ಪಟ್ಟವರು ಮನೆಗೆ ತಿರಿಗಿ ಬಂದು, ಅಸ್ವಸ್ಥವಾಗಿದ್ದ
ದಾಸನು ಕ್ಷೇಮವಾಗಿರುವದನ್ನು ಕಂಡರು.
೧೧ ಮಾರಣೆ ದಿವಸದಲ್ಲಿ ಅವನು [3]ನಾಯಿನೆಂಬ ಪಟ್ಣಕ್ಕೆ ಹೋದನು. ಮತ್ತು ಅವನ ಶಿಷ್ಯರಲ್ಲಿ ಅನೇಕರೂ
೧೨ ಬಹು ಸಮೂಹವೂ ಅವನ ಸಂಗಡ ಹೋದರು. ಆದರೆ ಅವನು ಪಟ್ಣದ ಬಾಗಲಿಗೆ ಸಮೀಪಿಸುವಾಗ,
ಅಗೋ, ತನ್ನ ತಾಯಿಗೆ ಒಬ್ಬನೇ ಮಗನಾದ ಒಬ್ಬ ಸತ್ತವನು [4]ಹೊರಗೆ ತರಲ್ಪಟ್ಟನು; ಮತ್ತು ಅವಳು ವಿಧ
೧೩ ವೆಯಾಗಿದ್ದಳು. ಮತ್ತು ಪಟ್ಣದವರ ಬಹು ಸಮೂಹವು ಅವಳ ಸಂಗಡ ಇತ್ತು. ಕರ್ತನು ಅವಳನ್ನು
೧೪ ನೋಡಿ, ಅವಳ ಮೇಲೆ [5]ಅಂತಃಕರಣವಿಟ್ಟು, ಅವಳಿಗೆ, ಅಳ ಬೇಡ, ಅಂದನು. ಮತ್ತು ಹತ್ತರ ಬಂದು, [6]ಪೆಟ್ಟಿ
ಗೆಯನ್ನು ಮುಟ್ಟಿದಾಗ, ಹೊರುವವರು ನಿಂತರು. ಆಗ, ಯೌವನಸ್ಥನೇ, [7]ಏಳೆಂದು ನಿನಗೆ ಹೇಳುತ್ತೇನೆ,
೧೫ ಅಂದನು. ಆಗ ಸತ್ತವನು ಎದ್ದು ಕೂತು ಕೊಂಡು, ಮಾತಾಡಲಾರಂಭಿಸಲು, ಅವನನ್ನು ಅವನ [8]ತಾಯಿಗೆ
ಕೊಟ್ಟನು.

---

1. ಕಪೆರ್ನೌಮ್ ಪಟ್ಣದಲ್ಲಿ ಅನೇಕ ಸಭೆಮನೆಗಳಿದ್ದವು. ಅವುಗಳಲ್ಲಿ ಒಂದನ್ನು ಈ ಶತಾಧಿಪತಿಯು ಕಟ್ಟಿಸಿ ಕೊಟ್ಟದ್ದರಿಂದ ಯೆಹೂದ್ಯ ಮಾರ್ಗದಲ್ಲಿ ಅವನಿಗಿದ್ದ ಅಭಿಮಾನವು ಪ್ರಕಟವಾಯಿತು.

2. ನನ್ನ ಅಂತಸ್ತೂ ಅಧಿಕಾರವೂ ಕಡಿಮೆಯಾಗಿದ್ದರೂ, ನನ್ನ ಕೆಲಸದವರು ನನ್ನ ಕಟ್ಟಳೆಯ ಪ್ರಕಾರ ಅಡ್ಡಿ ಇಲ್ಲದೆ ಮಾಡುತ್ತಾರೆ. ಸರ್ವಶಕ್ತಿಯೂ ಸರ್ವಾಧಿಕಾರವೂ ಉಳ್ಳ ನಿನ್ನ ಮಾತಿಗೆ ಏನಾದರೂ ಅಡ್ಡಿಯಾಗುವದೋ? ನೀನು ಒಂದು ಮಾತು ಮಾತ್ರ ಹೇಳಿದರೆ, ಈ ವ್ಯಾಧಿ ಎಷ್ಟು ಮಾತ್ರ ನಿಲ್ಲಲಾರದು ಎಂದು ಹೇಳಿದನು. ಇದರಿಂದ ಈ ಮನುಷ್ಯನಲ್ಲಿದ್ದ ಯಥಾರ್ಥವಾದ ವಿಶ್ವಾಸವು, ಭಕ್ತಿಯು ಮುಂತಾದ ಸದ್ಗುಣಗಳು ಚನ್ನಾಗಿ ಪ್ರಕಟವಾದವು.

3. ನಾಯಿನ್ ಪಟ್ಣವು ಗಲಿಲಾಯ ದೇಶದಲ್ಲಿ ಚಿಕ್ಕ ಹೆರ್ಮೋನ್ ಬೆಟ್ಟಕ್ಕೆ ಉತ್ತರವಾಗಿಯೂ, ತಾಬೋರು ಬೆಟ್ಟಕ್ಕೆ ಮೂರು ಮೈಲುಗಳು ದಕ್ಷಿಣವಾಗಿಯೂ ಇತ್ತು.

4. ಯೆಹೂದ್ಯರಲ್ಲಿ ಅರಸುಗಳು ಮೊದಲಾದ ದೊಡ್ಡವರ ಹೊರ್ತು ಮಿಕ್ಕಾದವರನ್ನು ಊರಿನ ಹೊರಗೆ ಹೂಣಿಡುವದು ವಾಡಿಕೆ. (೧ ಸಮು. ೨೮. ೩. ೨ ಅರ. ೨೧. ೧೮.)

5. ವಿಧವೆಗೆ ಇದ್ದ ಒಬ್ಬನೇ ಮಗನು ಸತ್ತು ಹೆಣವಾಗಿ ಪೆಟ್ಟಿಗೆಯಲ್ಲಿ ಹೊತ್ತು ಕೊಂಡು ಹೋಗುವದೂ, ತಾಯಿ ಹಿಂದಗಡೆ ಅಳುತ್ತಾ ಹೋಗುವದೂ ಆದ ಈ ಪರಿತಾಪ ನೋಟವನ್ನು ಕರುಣೆಯುಳ್ಳ ರಕ್ಷಕನು ಕಂಡಾಗ, ಆತನ ಮನಸ್ಸು ಬಹಳವಾಗಿ ಕರಗಿತು. ಇದರಿಂದ ದೈವತ್ವದ ಬಲವೂ, ಮನುಷ್ಯತ್ವಕ್ಕೆ ತಕ್ಕ ಕರುಣೆಯೂ ಆತನಲ್ಲಿ ಪ್ರಕಟವಾದದ್ದನ್ನು ತಿಳಿಯ ಬಹುದು.

6. ಹೆಣವನ್ನು ನಯವಾದ ಬಟ್ಟೆಯಿಂದ ಸುತ್ತಿ (ಯೋಹಾ. ೧೧. ೪೪.), ಪೆಟ್ಟಿಗೆಯಲ್ಲಿಟ್ಟು, ತೆಗೆದು ಕೊಂಡು ಹೋಗುತ್ತಿದ್ದರು.

7. ಎಲೀಯನು ಎಲೀಷನು ಮೊದಲಾದ ಪ್ರವಾದಿಗಳೂ, ಪೇತ್ರನು ಪೌಲನು ಮೊದಲಾದ ಅಪೊಸ್ತಲರೂ, ಸತ್ತವರನ್ನು ಜೀವದಿಂದ ಎಬ್ಬಿಸಿದ್ದಕ್ಕೂ, ಕ್ರಿಸ್ತನು ಸತ್ತವರನ್ನು ಎಬ್ಬಿಸಿದ್ದಕ್ಕೂ ವ್ಯತ್ಯಾಸವುಂಟು. ಅವರು ದೇವರನ್ನು ಪ್ರಾರ್ಥಿಸಿ, ದೇವರ ಕೃಪೆ ಹೊಂದಿ, ಸತ್ತವರನ್ನು ಎಬ್ಬಿಸಿದರು. (೧ ಅರ. ೧೭. ೧೭—೨೪. ೨ ಅರ. ೪. ೩೧—೩೭. ಅಪೊ. ಕ್ರಿ. ೯. ೩೯—೪೩; ೨೦. ೯—೧೨.) ಸರ್ವಶಕ್ತಿಯುಳ್ಳ ಕ್ರಿಸ್ತ ರಕ್ಷಕನು ಒಂದು ಮಾತಿನಿಂದ ಬಹು ಸುಲಭವಾಗಿ ಸತ್ತವರನ್ನು ಎಬ್ಬಿಸಿದನು. (ಲೂಕ. ೮. ೫೪. ಯೋಹಾ. ೧೧. ೪೩.)

8. ಅತ್ತು ಗೋಳಾಡುತ್ತಿದ್ದ ತಾಯಿಗೆ ಮಗನನ್ನು ಎಬ್ಬಿಸಿ ಕೊಟ್ಟದ್ದು ಎಷ್ಟು ಅತಿಶಯವಾದ ಪ್ರೀತಿಯು! ಕೃತಜ್ಞತೆಯಿಂದ ಅವಳ ಮನಸ್ಸು ಕರಗಿ, ತನ್ನ ಮಗನನ್ನು ತನ್ನ ರಕ್ಷಕನಿಗೆ ಎಂದೂ ಸೇವೆ ಮಾಡುವಂತೆ ಸಮರ್ಪಿಸಿರುವಳೆಂಬುವದಕ್ಕೆ ಸಂದೇಹ ವಿಲ್ಲ.



೧೬ ಆಗ ಎಲ್ಲರಿಗೆ ಭಯ ಹಿಡಿಯಿತು. ಅವರು ದೇವರನ್ನು ಮಹಿಮೆ ಪಡಿಸಿ, ಮಹಾ ಪ್ರವಾದಿಯು ನಮ್ಮಲ್ಲಿ
೧೭ ಎದ್ದಿದ್ದಾನೆ, ಮತ್ತು ದೇವರು ತನ್ನ [1]ಜನರನ್ನು ದರ್ಶಿಸಿದ್ದಾನೆ, ಅಂದರು. ಮತ್ತು ಈ ವಾಕ್ಯವು ಅವನ ವಿಷ
ಯವಾಗಿ ಯೆಹೂದವೆಲ್ಲಾದರಲ್ಲಿಯೂ, ಸುತ್ತಲಿರುವ ಎಲ್ಲಾ ದೇಶದಲ್ಲಿಯೂ ಹಬ್ಬಿತು.

ಸ್ನಾನಿಕನಾದ ಯೋಹಾನನ ಪ್ರಶ್ನೆ; ಕ್ರಿಸ್ತನ ಪ್ರತ್ಯುತ್ತರ; ಅವನ ವಿಷಯ ಆತನು ಕೊಟ್ಟ ಸಾಕ್ಷಿ.

೧೮, ೧೯ ಇದಲ್ಲದೆ [2]ಯೋಹಾನನಿಗೆ ಅವನ ಶಿಷ್ಯರು ಇವೆಲ್ಲವುಗಳ ವರ್ತಮಾನವನ್ನು ತಿಳಿಸಿದಾಗ, ಯೋಹಾ
ನನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕರೆದು, ಯೇಸುವಿನ ಬಳಿಗೆ ಕಳುಹಿಸಿ, ಬರುವವನು ನೀನೋ? ಮತ್ತೊಬ್ಬ
೨೦ ನನ್ನು ಎದುರು ನೋಡೋಣೋ? ಅಂದನು. ಅವರು ಅವನ ಬಳಿಗೆ ಬಂದು, ಸ್ನಾನಿಕನಾದ ಯೋಹಾನನು,
ಬರುವವನು ನೀನೋ? ಮತ್ತೊಬ್ಬನನ್ನು ಎದುರು ನೋಡೋಣೋ? ಎಂದು ಹೇಳಿ, ನಮ್ಮನ್ನು ನಿನ್ನ ಬಳಿಗೆ
ಕಳುಹಿಸಿದ್ದಾನೆ, ಅಂದರು.
೨೧ ಅದೇ ಸಮಯದಲ್ಲಿ ಅವನು ರೋಗಗಳೂ, ಜಾಡ್ಯಗಳೂ, [3]ದುರಾತ್ಮಗಳೂ, ಉಂಟಾಗಿರುವ ಅನೇಕರನ್ನು
೨೨ ಗುಣ ಮಾಡಿ, ಅನೇಕ ಕುರುಡರಿಗೆ ದೃಷ್ಟಿ ದಯ ಪಾಲಿಸುತ್ತಿದ್ದನು. ಹೀಗಿರಲಾಗಿ, ಯೇಸು ಉತ್ತರ
ಕೊಟ್ಟು, ಅವರಿಗೆ ಹೇಳಿದ್ದೇನಂದರೆ, ಹೋಗಿ, ನೀವು ನೋಡಿದವುಗಳನ್ನೂ ಕೇಳಿದವುಗಳನ್ನೂ ಯೋಹಾನ
ನಿಗೆ ತಿಳಿಸಿರಿ; ಏನಂದರೆ, ಕುರುಡರು ದೃಷ್ಟಿ ಹೊಂದುತ್ತಾರೆ; ಕುಂಟರು ನಡಿಯುತ್ತಾರೆ; ಕುಷ್ಠರೋಗಿಗಳು
ಶುಚಿಯಾಗುತ್ತಾರೆ; ಕಿವಡರು ಕೇಳುತ್ತಾರೆ; ಸತ್ತವರು ಎಬ್ಬಿಸಲ್ಪಡುತ್ತಾರೆ; ಬಡವರಿಗೆ ಸುವಾರ್ತೆ ಪ್ರಸಂ
೨೩ ಗಿಸಲ್ಪಡುತ್ತದೆ. ಮತ್ತು ನನ್ನಲ್ಲಿ ಆಟಂಕ ಪಡದವನ್ಯಾವನೋ, ಅವನೇ ಭಾಗ್ಯವಂತನು.
೨೪ ಯೋಹಾನನ ದೂತರು ಹೋದ ಮೇಲೆ, ಅವನು ಸಮೂಹಗಳಿಗೆ ಯೋಹಾನನ ವಿಷಯವಾಗಿ ಮಾತಾ
ಡಲಾರಂಭಿಸಿದ್ದೇನಂದರೆ, ಏನು ನೋಡ ಅರಣ್ಯಕ್ಕೆ ಹೊರಟಿರಿ? ಘಾಳಿಯಿಂದ ಅಲ್ಲಾಡುವ ದಂಟನ್ನೋ?
೨೫ ಇಲ್ಲವೆ ಏನು ನೋಡ ಹೊರಟಿರಿ? ನಯವಾದ ವಸ್ತ್ರಗಳನ್ನು ಧರಿಸಿದ ಮನುಷ್ಯನನ್ನೋ? ಇಗೋ, ಘನ
೨೬ ವಾದ ವಸ್ತ್ರಗಳೂ ಭೋಗವೂ ಉಳ್ಳವರು ಅರಮನೆಗಳಲ್ಲಿ ಇದ್ದಾರೆ. ಇಲ್ಲವೆ ಏನು ನೋಡ ಹೊರಟಿರಿ?
೨೭ ಪ್ರವಾದಿಯನ್ನೋ? ಹೌದು, ನಿಮಗೆ ಹೇಳುತ್ತೇನೆ, ಪ್ರವಾದಿಗಿಂತಲೂ ಅಧಿಕವಾದವನನ್ನು. ಇಗೋ, ನಾನು
ನನ್ನ ದೂತನನ್ನು ನಿನ್ನ ಮುಖದ ಮುಂದೆ ಕಳುಹಿಸುತ್ತೇನೆ; ಅವನು ನಿನ್ನ ಮಾರ್ಗವನ್ನು ನಿನ್ನ ಮುಂದೆ ಸಿದ್ಧ
೨೮ ಮಾಡುವನು, ಎಂದು ಯಾವನನ್ನು ಕುರಿತು ಬರೆದದೆಯೋ, ಅವನೇ ಇವನು. ಯಾಕಂದರೆ ಸ್ತ್ರೀಯರಿಂದ
ಹುಟ್ಟಿದವರಲ್ಲಿ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡ ಪ್ರವಾದಿಯು ಯಾವನೂ ಇಲ್ಲ; ಆದರೆ ದೇವರ
ರಾಜ್ಯದಲ್ಲಿ ಚಿಕ್ಕವನು ಅವನಿಗಿಂತ ದೊಡ್ಡವನಾಗಿದ್ದಾನೆಂದು ನಿಮಗೆ ಹೇಳುತ್ತೇನೆ.
೨೯ ಇದಲ್ಲದೆ ಕೇಳಿದ ಜನರೆಲ್ಲರೂ, ಸುಂಕದವರೂ ಯೋಹಾನನ ಸ್ನಾನ ಹೊಂದಿ [4]ದೇವರು ನೀತಿವಂತನೆಂದು
೩೦ ಒಪ್ಪಿ ಕೊಂಡರು. ಆದರೆ ಫರಿಸಾಯರೂ ನ್ಯಾಯಶಾಸ್ತ್ರಿಗಳೂ ಅವನಿಂದ ಸ್ನಾನ ಹೊಂದದೆ, ತಮ್ಮ
ವಿಷಯವಾಗಿರುವ ದೇವರ ಆಲೋಚನೆಯನ್ನು ಅಲಕ್ಷ್ಯ ಮಾಡಿದರು.

---

1. ಎಲೀಯನೂ ಎಲೀಷನೂ ಮಹಾ ದೊಡ್ಡ ಪ್ರವಾದಿಗಳೆಂದು ಹೊಗಳಲ್ಪಟ್ಟವರು. ಕ್ರಿಸ್ತನು ಪ್ರವಾದಿಗಳಿಂದ ಹೇಳಲ್ಪಟ್ಟ ಪ್ರಕಾರ ಎಲೀಯನೆಂದು ಕೆಲವರು ನೆನಸಿದ್ದರು. (ಮಲಕಿ. ೪. ೫.) ಈ ಅದ್ಭುತವನ್ನು ಕಂಡ ಜನರಲ್ಲಿ ಅನೇಕರು ಕ್ರಿಸ್ತನು ಲೋಕರಕ್ಷಕನೆಂದೂ, ಕೃಪೆಯುಳ್ಳ ದೇವರು ಆತನ ಮೂಲಕವಾಗಿ ತನ್ನ ಜನರನ್ನು ದರ್ಶಿಸಿದನೆಂದೂ ನೆನಸಿದಂತೆ ತೋರುತ್ತದೆ. (ಯೆಶಾ. ೫೯. ೧೬—೨೧.)

2. ೧೮—೩೫. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೧. ೨—೧೯. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ವೈದ್ಯನಾಗಿದ್ದ ಲೂಕನು ರೋಗಿಷ್ಠರನ್ನೂ ದೆವ್ವ ಹಿಡಿದವರನ್ನೂ ವ್ಯತ್ಯಾಸ ಮಾಡಿ ತೋರಿಸಿದ್ದಾನೆ.

4. ೨೯, ೩೦. ವಚನಗಳು ಲೂಕನ ಮಾತುಗಳಾಗಿ ಅಥವಾ ರಕ್ಷಕನ ಮಾತುಗಳಾಗಿ ಇರ ಬಹುದು. ಇದರಿಂದ ಸ್ನಾನಿಕನಾದ ಯೋಹಾನನ ಪ್ರಸಂಗವನ್ನು ಕೇಳಿ ಗುಣ ಪಟ್ಟವರು ತಗ್ಗಾದ ಸ್ಥಿತಿಯುಳ್ಳವರೆಂದು ತಿಳಿಯ ಬಹುದು. ಅವರು ಯೋಹಾನನನ್ನು ದೇವರ ದಾಸನೆಂದು ಅಂಗೀಕರಿಸಿ, ಅವನ ಬೋಧನೆಯ ಪ್ರಕಾರ ನಡೆದದರಿಂದ ದೇವರನ್ನು ನೀತಿಪರನೆಂದು ಹೇಳಿದರು. ಫರಿಸಾಯರು ಮುಂತಾದವರು ಅವನ ಬೋಧನೆಯನ್ನು ಒಪ್ಪಿ ಕೊಳ್ಳಲಿಲ್ಲ. ಆದದರಿಂದ ಕರ್ತನು ೩೧—೩೫. ವರಿಗೂ ಇರುವ ವಚನಗಳನ್ನು ಹೇಳಿದನು.

ಯಾದ ಯೋಹಾನಳೂ, [1]ಸುಸನ್ನಳೂ, ಬೇರೆ ಅನೇಕರೂ; ಇವರು ತಮಗುಂಟಾದವುಗಳಿಂದ ಅವನಿಗೆ
ಸೇವೆ ಮಾಡುತ್ತಿದ್ದರು.

ಬಿತ್ತುವವನ ಸಾಮ್ಯವೂ, ಅದರ ಅರ್ಥವೂ.

೪ ಬಹು ಸಮೂಹವು ಕೂಡಿ, [2]ಪ್ರತಿ ಪಟ್ಟಣದಿಂದ ಅವನ ಬಳಿಗೆ ಬರುವಾಗ, ಅವನು ಸಾಮ್ಯವಾಗಿ ಹೇಳಿ
೫ ದ್ದೇನಂದರೆ, ಬಿತ್ತುವವನು ತನ್ನ ಬೀಜವನ್ನು ಬಿತ್ತ ಹೊರಟನು. ಅವನು ಬಿತ್ತುವಾಗ, ಕೆಲವು ಮಾರ್ಗದ
೬ ಬಳಿಯಲ್ಲಿ ಬಿತ್ತು; ಅದು ತುಳಿಯಲ್ಪಟ್ಟಿತು; ಮತ್ತು ಆಕಾಶದ ಪಕ್ಷಿಗಳು ಅದನ್ನು ತಿಂದು ಬಿಟ್ಟವು. ಕೆಲವು
೭ ಬಂಡೆಯ ಮೇಲೆ ಬಿತ್ತು; ಅದು ಹುಟ್ಟಿ, ಅದಕ್ಕೆ ನೀರಿಲ್ಲದ ಕಾರಣ ಒಣಗಿ ಹೋಯಿತು. ಕೆಲವು ಮುಳ್ಳು
೮ ಗಳ ನಡುವೆ ಬಿತ್ತು; ಮುಳ್ಳುಗಳು ಸಂಗಡ ಹುಟ್ಟಿ, ಅದನ್ನು ಅಣಗಿಸಿ ಬಿಟ್ಟವು. ಕೆಲವು ಒಳ್ಳೇ ಭೂಮಿಯ
ಮೇಲೆ ಬಿದ್ದು, ಹುಟ್ಟಿ, ನೂರಷ್ಟಾಗಿ ಫಲ ಫಲಿಸಿತು. ಇವುಗಳನ್ನು ಹೇಳಿ, ಕೇಳ ಕಿವಿಗಳುಳ್ಳವನು ಕೇಳಲಿ,
ಎಂದು ಕೂಗಿದನು.
೯, ೧೦ ಅವನ ಶಿಷ್ಯರು, ಈ ಸಾಮ್ಯವು ಏನಾಗಿರ ಬಹುದೆಂದು, ಅವನನ್ನು ಕೇಳಿದಾಗ, ಅವನು ಹೇಳಿದ್ದೇನಂ
ದರೆ, ನಿಮಗೆ ದೇವರ ರಾಜ್ಯದ ಮರ್ಮಗಳ ತಿಳಿಯುವಿಕೆಯು ಕೊಟ್ಟದೆ; ಆದರೆ ಮಿಕ್ಕಾದವರಿಗೆ, ಅವರು
ನೋಡಿ ನೋಡದ ಹಾಗೆಯೂ, ಕೇಳಿ ಗ್ರಹಿಸದ ಹಾಗೆಯೂ, (ಯೆಶಾ. ೬. ೯.) ಸಾಮ್ಯಗಳಲ್ಲಿ ಕೊಟ್ಟದೆ.
೧೧, ೧೨ ಈ ಸಾಮ್ಯವು ಏನಂದರೆ, ಬೀಜವು ದೇವರ ವಾಕ್ಯವು; ಮಾರ್ಗದ ಬಳಿಯಲ್ಲಿ ಇರುವವರು ಕೇಳುವವರು;
ತರುವಾಯ ಪಿಶಾಚನು ಬಂದು, ಅವರು ವಿಶ್ವಾಸವಿಟ್ಟು, ರಕ್ಷಿಸಲ್ಪಡದ ಹಾಗೆ, ವಾಕ್ಯವನ್ನು ಅವರ ಹೃದ
೧೩ ಯದೊಳಗಿಂದ ತೆಗೆದು ಹಾಕುತ್ತಾನೆ. ಬಂಡೆಯ ಮೇಲಿರುವವರು ಕೇಳುವಾಗಲೇ ಸಂತೋಷವಾಗಿ
ವಾಕ್ಯವನ್ನು ಅಂಗೀಕರಿಸುವವರು; ಇವರು ಸ್ವಲ್ಪ ಕಾಲ ವಿಶ್ವಾಸವಿಟ್ಟು, ಶೋಧನೆಯ ಸಮಯದಲ್ಲಿ ತಿರುಗಿ
೧೪ ಬೀಳುವವರಾಗಿ, ಬೇರಿಲ್ಲದವರಾಗಿದ್ದಾರೆ. ಮುಳ್ಳುಗಳೊಳಗೆ ಬಿದ್ದದ್ದು ಕೇಳಿದ ಮೇಲೆ ಹೋಗಿ, ಜೀವದ
ಚಿಂತೆಗಳಿಂದಲೂ ಐಶ್ವರ್ಯದಿಂದಲೂ ಭೋಗಗಳಿಂದಲೂ ಅಣಗಿಸಲ್ಪಟ್ಟು, ಫಲ ಮಾಗಿಸದೆ ಇರುವವರು.
೧೫ ಆದರೆ ಒಳ್ಳೇ ಭೂಮಿಯಲ್ಲಿ ಇರುವಂಥಾದ್ದು, ವಾಕ್ಯವನ್ನು ಕೇಳಿ, ಒಳ್ಳೇ ಸದ್ಗುಣವುಳ್ಳ ಹೃದಯದಲ್ಲಿ ಇಟ್ಟು
ಕೊಂಡು, [3]ತಾಳ್ಮೆಯಿಂದ ಫಲ ಫಲಿಸುವವರೇ.
೧೬ ಇದಲ್ಲದೆ [4]ಯಾವನಾದರೂ ದೀಪ ಹಚ್ಚಿ, ಪಾತ್ರೆಯಲ್ಲಿ ಅಡಗಿಸುವದಿಲ್ಲ; ಮಂಚದ ಕೆಳಗೆ ಇಡುವದಿಲ್ಲ;
ಒಳಗೆ ಬರುವವರು ಬೆಳಕನ್ನು ನೋಡುವ ಹಾಗೆ ಅದನ್ನು ದೀಪಸ್ತಂಭದ ಮೇಲೆ ಇಡುವನು.
೧೭ ಯಾಕಂದರೆ ಬಹಿರಂಗವಾಗದಂಥ ಅಂತರಂಗವಾದದ್ದೂ, ತಿಳಿಯಲ್ಪಡಲಿರದಂಥ ಬಹಿರಂಗವಾಗಲಿರದಂಥ
೧೮ ಮರೆಯಾದದ್ದೂ, ಇಲ್ಲ. ಹಾಗಾದರೆ, ನೀವು ಹ್ಯಾಗೆ ಕೇಳುತ್ತೀರೆಂದು ನೋಡಿ ಕೊಳ್ಳಿರಿ; ಯಾಕಂದರೆ
ಇದ್ದವನಿಗೆ ಕೊಡಲ್ಪಡುವದು; ಮತ್ತು ಇಲ್ಲದವನಿಂದ, ಉಂಟೆಂದು ಅವನು ಎಣಿಸುವಂಥಾದ್ದು ಸಹ ತೆಗೆದು
ಹಾಕಲ್ಪಡುವದು.

ಕ್ರಿಸ್ತನನ್ನು ಆತನ ತಾಯಿಯೂ ಸಹೋದರರೂ ಹುಡುಕುತ್ತಾ ಬಂದದ್ದನ್ನು ಕುರಿತ ಸಂಭಾಷಣೆ.

೧೯ [5]ಆಗಲವನ ತಾಯಿಯೂ ಸಹೋದರರೂ ಅವನ ಬಳಿಗೆ ಬಂದು, ಸಮೂಹದ ನಿಮಿತ್ತ ಅವನ ಹತ್ತರ

1. ಇವಳ ವೃತ್ತಾಂತವೇನೂ ತಿಳಿಯಲಿಲ್ಲ. ಆದರೆ ಇವಳು ಸಹ ಭಕ್ತಿಯುಳ್ಳ ಬೇರೆ ಸ್ತ್ರೀಯರ ಸಂಗಡ ಕೂಡಿ ಕೊಂಡು, ತನ್ನ ಪ್ರಿಯ ರಕ್ಷಕನಿಗೆ ಸೇವೆ ಮಾಡುತ್ತಾ ಬಂದಳು.

2. ೪—೧೫. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೩. ೧—೨೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. "ತಾಳ್ಮೆ" ಎಂಬುವದು ಸಕಲ ಸಂಕಟಗಳನ್ನು ಸಹಿಸಿ ... ದೆ. (ರೋಮಾ. ೨. ೭.) ಇಂಥಾ ಸಾಧನೆ ಇಲ್ಲದವರಲ್ಲಿ ಪೂರ್ಣ ಫಲವುಂಟಾಗಲಾರದು. ಉಪದ್ರವನ್ನು ತಾಳ್ಮೆಯಿಂದ ಸಹಿಸಿ ಬ ಳ್ಳೇದನ್ನು ಸಾಧಿಸದಿದ್ದರೆ, ದೇವಭಕ್ತಿ ಪೂರ್ಣವಾಗಲಾರದು.

4. ೧೬—೧೮. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೪. ೨೧—೨೫. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

5. ೧೯—೨೧. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೨.



೨೦ ಸೇರಲಾರದೆ ಇದ್ದರು. ಜನರು, [1]ನಿನ್ನ ತಾಯಿಯೂ ಸಹೋದರರೂ ನಿನ್ನನ್ನು ನೋಡ ಬೇಕೆಂದು ಹೊರಗೆ
೨೧ ನಿಂತಿದ್ದಾರೆಂದು ಹೇಳಿ, ಅವನಿಗೆ ತಿಳಿಸಿದಾಗ, ಅವನು ಉತ್ತರ ಕೊಟ್ಟು, ದೇವರ ವಾಕ್ಯವನ್ನು ಕೇಳಿ,
ಮಾಡುವವರೇ ನನ್ನ ತಾಯಿಯೂ ಸಹೋದರರೂ ಎಂದು, ಅವರಿಗೆ ಹೇಳಿದನು.

ಕ್ರಿಸ್ತನು ತನ್ನ ಶಿಷ್ಯರ ಸಂಗಡ ಸಮುದ್ರವನ್ನು ದಾಟುವಾಗ ಘಾಳಿಯನ್ನು ಶಾಂತ ಪಡಿಸಿದ್ದು; ಆಚೇ ಧಡದಲ್ಲಿ ದೆವ್ವ ಹಿಡಿದವನನ್ನು ಸ್ವಸ್ಥ ಮಾಡಿ, ಸತ್ತ ಹುಡುಗಿಯನ್ನು ಜೀವದಿಂದ ಎಬ್ಬಿಸಿದ್ದು.

೨೨ [2]ಒಂದಾನೊಂದು ದಿವಸದಲ್ಲಿ ಅವನೂ ಅವನ ಶಿಷ್ಯರೂ ಹಡಗವನ್ನೇರಲಾಗಿ, ಅವನು ಅವರಿಗೆ, ಕೆರೆಯ
೨೩ ಆಚೆಗೆ ಹೋಗುವ, ಅಂದಾಗ, ಹೊರಟರು. ಅವರು ಹಡಗದಲ್ಲಿ ಹೋಗುವಾಗ, ಅವನು ನಿದ್ದೆ ಮಾಡಿ
೨೪ ದನು. ಬಿರುಘಾಳಿಯು ಕೆರೆಗೆ ಇಳಿದಾಗ, ಹಡಗ ತುಂಬಿ, ಗಂಡಾಂತರ ಪಟ್ಟರು. ಆಗಲವರು ಹತ್ತರ
ಬಂದು, ಅವನನ್ನು ಎಬ್ಬಿಸಿ, ಅಯ್ಯಾ, ಅಯ್ಯಾ, ನಾಶವಾಗುತ್ತೇವೆ, ಅಂದಾಗ; ಅವನು ಎದ್ದು, ಘಾಳಿ
೨೫ ಯನ್ನೂ ಉಕ್ಕುವ ನೀರನ್ನೂ ಗದರಿಸಿದನು; ಆಗಲವು ನಿಂತು, ಶಾಂತಿ ಆಯಿತು. ಮತ್ತು ಅವನು ಅವರಿಗೆ,
ನಿಮ್ಮ ವಿಶ್ವಾಸವು ಎಲ್ಲಿ? ಅಂದನು. ಆದರೆ ಅವರು ಭಯಸ್ಥರಾಗಿ, ಆಶ್ಚರ್ಯ ಪಟ್ಟು, ಇವನ್ಯಾರು? ಘಾಳಿ
ಗಳಿಗೂ ನೀರಿಗೂ ಅಪ್ಪಣೆ ಕೊಡುತ್ತಾನೆ; ಮತ್ತು ಅವನಿಗೆ ವಿಧೇಯವಾಗುತ್ತವೆ ಎಂದು, ತಮ್ಮೊಳಗೆ ಹೇಳಿ
ಕೊಂಡರು.
೨೬, ೨೭ [3]ಮತ್ತು ಗಲಿಲಾಯಕ್ಕೆ ಎದುರಾಗಿರುವ ಗದರೇನರ ದೇಶಕ್ಕೆ ಮುಟ್ಟಿದರು. ಅವನು ಭೂಮಿಗೆ ಇಳಿ
ದಾಗ, ಬಹು ಕಾಲದಿಂದ ದೆವ್ವ ಹಿಡಿದವನಾಗಿ, ವಸ್ತ್ರ ಹಾಕಿ ಕೊಳ್ಳದೆ, ಮನೆಯಲ್ಲಿ ಅಲ್ಲ, ಸಮಾಧಿಗಳಲ್ಲಿ
೨೮ ವಾಸ ಮಾಡುವ ಒಬ್ಬ ಮನುಷ್ಯನು ಪಟ್ಟಣದೊಳಗಿಂದ ಅವನೆದುರಿಗೆ ಬಂದನು. ಇವನು ಯೇಸುವನ್ನು
ನೋಡಿ, ಘಟ್ಟಿಯಾಗಿ ಕೂಗಿ, ಅವನ ಮುಂದೆ ಬಿದ್ದು, ಮಹಾ ಶಬ್ದದಿಂದ, ಮಹೋನ್ನತನಾದ ದೇವರ
ಮಗನಾಗಿರುವ ಯೇಸುವೇ, ನನಗೂ ನಿನಗೂ ಏನು? ನನ್ನನ್ನು ಬಾಧಿಸ ಬೇಡವೆಂದು ನಿನ್ನನ್ನು ಬೇಡಿ
೨೯ ಕೊಳ್ಳುತ್ತೇನೆ, ಅಂದನು. ಯಾಕಂದರೆ ಅವನು ಅಶುದ್ಧಾತ್ಮಕ್ಕೆ, ಆ ಮನುಷ್ಯನನ್ನು ಬಿಟ್ಟು ಹೋಗ
ಬೇಕೆಂದು, ಅಪ್ಪಣೆ ಕೊಟ್ಟಿದ್ದನು. ಯಾಕಂದರೆ ಅದು ಅನೇಕ ಕಾಲಗಳಲ್ಲಿ ಅವನನ್ನು ಹಿಡಿದಿತ್ತು. ಮತ್ತು
ಅವನು ಬಂಧಗಳಿಂದಲೂ ಸಂಕೋಲೆಗಳಿಂದಲೂ ಕಟ್ಟಲ್ಪಟ್ಟು, ಭದ್ರ ಮಾಡಲ್ಪಟ್ಟರೂ, ಬಂಧಗಳನ್ನು ಕಿತ್ತು
ಕೊಂಡು, ದೆವ್ವದಿಂದ ಅರಣ್ಯಕ್ಕೆ ಓಡಿಸಲ್ಪಟ್ಟನು.
೩೦ ಯೇಸು, ನಿನ್ನ ಹೆಸರೇನೆಂದು ಅವನನ್ನು ಕೇಳಿದಾಗ, ಅವನು, ಲೆಗೆಯೋನ್, ಅಂದನು; ಯಾಕಂದರೆ, ಅನೇಕ
೩೧ ದೆವ್ವಗಳು ಅವನೊಳಗೆ ಪ್ರವೇಶಿಸಿ ಇದ್ದವು. ಇದಲ್ಲದೆ ಅವು, [4]ಅಗಾಧದೊಳಗೆ ಹೋಗ ತಮಗೆ ಆಜ್ಞಾಪಿಸ
ಬಾರದೆಂದು, ಅವನನ್ನು ಬೇಡಿ ಕೊಂಡವು.
೩೨ ಹೀಗಿರಲಾಗಿ, ಅಲ್ಲಿ ಬೆಟ್ಟದ ಮೇಲೆ ಮೇಯುವ ಬಹಳ ಹಂದಿಗಳ ಮಂದೆಯು ಇದ್ದದರಿಂದ, ಅವುಗಳಲ್ಲಿ
ಪ್ರವೇಶಿಸ ತಮಗೆ ಅಪ್ಪಣೆ ಕೊಡ ಬೇಕೆಂದು ಅವು ಅವನನ್ನು ಬೇಡಿ ಕೊಂಡಾಗ, ಅವುಗಳಿಗೆ ಅಪ್ಪಣೆ ಕೊಟ್ಟನು.

1. ಮರಿಯಳ ಪುರುಷನಾದ ಯೋಸೆಫನು ಸತ್ತು ಹೋದದ್ದನ್ನು ಕುರಿತು ಯಾವ ಸುವಾರ್ತೆಯಲ್ಲಾದರೂ ಪ್ರಕಟವಾಗಿ ಹೇಳದೆ ಇದ್ದಾಗ್ಯೂ, ಕ್ರಿಸ್ತನು ಸ್ನಾನ ಹೊಂದುವದಕ್ಕಿಂತ ಮುಂಚೆ ಅವನು ಸತ್ತು ಹೋದನೆಂದು ನೆನಸ ಬಹುದು. ತಾಯಿಯೂ ಸಹೋದರರೂ ಆತನನ್ನು ಹುಡುಕುತ್ತಾ ಬಂದರೇ ಹೊರ್ತು, ಯೋಸೆಫನು ಬರಲಿಲ್ಲ. ಮಾರ್ಕ. ೬. ೩ಲ್ಲಿ ಆತನ ಮನೆಯವರನ್ನೆಲ್ಲಾ ಕುರಿತು ಹೇಳಿದಾಗ್ಯೂ, ಯೋಸೆಫನನ್ನು ಕುರಿತು ಏನೂ ಹೇಳಲಿಲ್ಲ. ಯೋಹಾ. ೨. ೧೨ಲ್ಲಿ ಆತನ ತಾಯಿ, ಸಹೋದರರು, ಶಿಷ್ಯರು, ಇವರನ್ನು ಕುರಿತು ಮಾತ್ರ ಹೇಳಿರಲಾಗಿ ಯೋಸೆಫನ ಹೆಸರು ಇಲ್ಲವೇ ಇಲ್ಲ. (ಯೋಹಾ. ೧೯. ೨೬. ಅಪೊ. ಕ್ರಿ. ೧. ೧೩, ೧೪.)

2. ೨೨—೨೫. ವಚನಗಳ ವ್ಯಾಖ್ಯಾನವನ್ನು ಮತ್ತಾ. ೮. ೨೩—೨೭. ಮಾರ್ಕ. ೪. ೩೬—೪೧. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

3. ೨೬—೪೦. ವಚನಗಳ ವ್ಯಾಖ್ಯಾನವನ್ನು ಮತ್ತಾ. ೮. ೨೮—೩೪. ಮಾರ್ಕ. ೫. ೧—೨೧. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

4. ಇಲ್ಲಿ "ಅಗಾಧ" ಅಂದರೆ ದುಷ್ಟ ಪಿಶಾಚಗಳು ವಾಸವಾಗಿರುವ ಪಾತಾಳವೆಂಬ ಸ್ಥಳವು. (ಪ್ರಕಟ. ೯. ೧, ೨.) ದೇವರ ಅಪ್ಪಣೆಯ ಪ್ರಕಾರ ಅಗಾಧದಲ್ಲಿರುವ ಈ ದುಷ್ಟ ಪಿಶಾಚಗಳು ಭೂಲೋಕಕ್ಕೆ ಬಂದು, ಕಡೆಯಲ್ಲಿ ಆತನ ಆಜ್ಞೆಯ ಪ್ರಕಾರ ಪಾತಾಳದಲ್ಲಿ ಬಿದ್ದು ನಾಶವಾಗಿ ಹೋಗುವವು.

೩೩ ಆಗ ದೆವ್ವಗಳು ಆ ಮನುಷ್ಯನನ್ನು ಬಿಟ್ಟು, ಹಂದಿಗಳೊಳಗೆ ಪ್ರವೇಶಿಸಲು, ಮಂದೆಯು ಇಳಿಜಾರಿನಿಂದ ಕೆರೆ
೩೪ ಯಲ್ಲಿ ಹಾರಿ, ಮುಣುಗಿ ಹೋಯಿತು. ಮೇಯಿಸುವವರು ಆದದ್ದನ್ನು ಕಂಡು, ಓಡಿ ಹೋಗಿ, ಪಟ್ಣದ
೩೫ ಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿಸಿದರು. ಅವರು ಆದದ್ದನ್ನು ನೋಡುವದಕ್ಕೆ ಹೊರಟು, ಯೇಸುವಿನ ಬಳಿಗೆ
ಬಂದು, ದೆವ್ವಗಳು ಹೊರಡಿಸಲ್ಪಟ್ಟ ಮನುಷ್ಯನು ವಸ್ತ್ರ ಹೊದ್ದು ಕೊಂಡವನಾಗಿಯೂ, ಮನೋಸ್ವಸ್ಥವುಳ್ಳ
೩೬ ವನಾಗಿಯೂ, ಯೇಸುವಿನ ಪಾದಗಳ ಬಳಿಯಲ್ಲಿ ಕೂತಿರುವದನ್ನು ಕಂಡು, ಭಯ ಪಟ್ಟರು. ಇದಲ್ಲದೆ
೩೭ ನೋಡಿದವರು ಸಹ, ಆ ದೆವ್ವ ಹಿಡಿದವನು ಸ್ವಸ್ಥವಾದ ಬಗೆಯನ್ನು ಅವರಿಗೆ ತಿಳಿಸಿದರು. ಆಗ ಗದರೇನರ
ಸುತ್ತಲಿರುವ ದೇಶದ ಸಮೂಹವೆಲ್ಲಾ ಮಹಾ ಭಯ ಹಿಡಿದವರಾಗಿ, ತಮ್ಮನ್ನು ಬಿಟ್ಟು ಹೋಗ ಬೇಕೆಂದು
ಅವನನ್ನು ಬೇಡಿ ಕೊಂಡಾಗ, ಅವನು ಹಡಗವನ್ನೇರಿ, ತಿರಿಗಿ ಹೋದನು.

೩೮ ಆದರೆ ದೆವ್ವಗಳು ಹೊರಡಿಸಲ್ಪಟ್ಟ ಮನುಷ್ಯನು ಅವನ ಸಂಗಡ ಇರ ಬೇಕೆಂದು ಬೇಡಿ ಕೊಂಡಾಗ,
೩೯ ಯೇಸು, ನಿನ್ನ ಮನೆಗೆ ಹೋಗಿ, ದೇವರು ನಿನಗೆ ಎಂಥವುಗಳನ್ನು ಮಾಡಿದನೋ, ವಿವರಿಸೆಂದು ಹೇಳಿ, ಅವ
ನನ್ನು ಕಳುಹಿಸಿ ಬಿಟ್ಟನು. ಆಗಲವನು ಹೋಗಿ, ಯೇಸು ತನಗೆ ಎಂಥವುಗಳನ್ನು ಮಾಡಿದನೋ, ಪಟ್ಣ
ದಲ್ಲೆಲ್ಲಾ ಸಾರಿದನು.

೪೦ ಯೇಸು ತಿರಿಗಿ ಹೋಗುವಾಗ, ಆದದ್ದೇನಂದರೆ, ಸಮೂಹವು ಅವನನ್ನು ಅಂಗೀಕರಿಸಿತು; ಯಾಕಂದರೆ
ಎಲ್ಲರು ಅವನಿಗೋಸ್ಕರ ಕಾದು ಕೊಂಡಿದ್ದರು.

೪೧ [1]ಆಗ, ಇಗೋ, ಸಭೆಮನೆಯ ಯಜಮಾನನಾಗಿರುವ ಯಾಯಿರನೆಂಬ ಒಬ್ಬ ಮನುಷ್ಯನು ಬಂದು,
ಯೇಸುವಿನ ಪಾದಗಳ ಮುಂದೆ ಬಿದ್ದು, ತನ್ನ ಮನೆಯೊಳಗೆ ಬರ ಬೇಕೆಂದು, ಅವನನ್ನು ಬೇಡಿ ಕೊಂಡನು.
೪೨ ಯಾಕಂದರೆ ಹೆಚ್ಚು ಕಡಿಮೆ ಹನ್ನೆರಡು ವರುಷದವಳಾದ ಒಬ್ಬಳೇ ಹುಟ್ಟಿದ ಮಗಳು ಅವನಿಗಿದ್ದಳು; ಇವಳು
ಸಾಯುವವಳಾಗಿದ್ದಳು.

೪೩ ಆದರೆ ಅವನು ಹೋಗುತ್ತಿರಲಾಗಿ, ಸಮೂಹಗಳು ಅವನನ್ನು ಇರಿಕಿಸಿದವು. ಮತ್ತು ಹನ್ನೆರಡು ವರುಷ
ದಿಂದ ರಕ್ತಕುಸುಮವುಳ್ಳಂಥ, ತನ್ನ ಬದುಕೆಲ್ಲಾ ವೈದ್ಯರಿಗೆ ವೆಚ್ಚ ಮಾಡಿ, ಯಾವನಿಂದಲಾದರೂ ಗುಣವಾ
೪೪ ಗಲಾರದಂಥ, ಒಬ್ಬ ಸ್ತ್ರೀಯು ಹಿಂದಿನಿಂದ ಬಂದು, ಅವನ ಅಂಗಿಯ ಶೆರಗನ್ನು ಮುಟ್ಟಿದಳು; ಸಂಗಡಲೇ
೪೫ ಅವಳ ರಕ್ತಕುಸುಮವು ನಿಂತು ಹೋಯಿತು. ತರುವಾಯ ಯೇಸು, ನನ್ನನ್ನು ಮುಟ್ಟಿದವನ್ಯಾರು?
ಅಂದನು. ಎಲ್ಲರು ಇಲ್ಲನ್ನುವಾಗ, ಪೇತ್ರನೂ ಅವನ ಸಂಗಡ ಇದ್ದವರೂ, ಅಯ್ಯಾ, ಸಮೂಹಗಳು
೪೬ ನಿನ್ನನ್ನು ಒತ್ತಿ ಇರಿಕಿಸಲಾಗಿ, ನನ್ನನ್ನು ಮುಟ್ಟಿದವನ್ಯಾರು? ಅನ್ನುತ್ತೀಯೋ? ಅಂದರು. ಆದರೆ ಯೇಸು,
ನನ್ನನ್ನು ಯಾರೋ ಮುಟ್ಟಿದರು; ಯಾಕಂದರೆ ಬಲವು ನನ್ನಿಂದ ಹೊರಟಿತೆಂದು ತಿಳಿದಿದ್ದೇನೆ, ಅಂದಾಗ;
೪೭ ಆ ಸ್ತ್ರೀಯು, ತಾನು ಮರೆಯಾಗಿರಲಿಲ್ಲವೆಂದು ತಿಳಿದು ಕೊಂಡು, ನಡುಗುತ್ತಾ ಬಂದು, ಅವನ ಮುಂದೆ
ಬಿದ್ದು, ತಾನು ಅವನನ್ನು ಮುಟ್ಟಿದ ಕಾರಣವನ್ನೂ, ಸಂಗಡಲೇ ವಾಶಿಯಾದದ್ದನ್ನೂ, ಜನರೆಲ್ಲರ ಮುಂದೆ
೪೮ ಅವನಿಗೆ ತಿಳಿಸಿದಳು. ಆದರೆ ಅವನು ಅವಳಿಗೆ, ಮಗಳೇ, ಧೈರ್ಯವಾಗಿರು; ನಿನ್ನ ವಿಶ್ವಾಸವು ನಿನ್ನನ್ನು
ರಕ್ಷಿಸಿ ಅದೆ; ಸಮಾಧಾನವಾಗಿ ಹೋಗು, ಅಂದನು.

೪೯ ಅವನು ಇನ್ನೂ ಮಾತಾಡುತ್ತಿರುವಾಗ, ಸಭೆಮನೆಯ ಯಜಮಾನನವರಲ್ಲಿ ಒಬ್ಬನು ಬಂದು, ನಿನ್ನ
೫೦ ಮಗಳು ಸತ್ತಿದ್ದಾಳೆ; ಬೋಧಕನನ್ನು ಬೇಸರಗೊಳಿಸ ಬೇಡೆಂದು ಅವನಿಗೆ ಹೇಳಿದನು. ಯೇಸು ಅದನ್ನು
ಕೇಳಿ, ಅವನಿಗೆ ಪ್ರತ್ಯುತ್ತರವಾಗಿ, ಭಯ ಪಡ ಬೇಡ; ವಿಶ್ವಾಸ ಮಾತ್ರವಿರಲಿ; ಆಗ ರಕ್ಷಿಸಲ್ಪಡುವಳು,
ಅಂದನು.

೫೧ ತರುವಾಯ ಮನೆಯಲ್ಲಿ ಪ್ರವೇಶಿಸಿ, ಪೇತ್ರನೂ, ಯಾಕೋಬನೂ, ಯೋಹಾನನೂ, ಹುಡುಗಿಯ ತಂದೆ ತಾ
೫೨ ಯಿಗಳೂ, ಇವರೇ ಹೊರ್ತು, ಯಾವನನ್ನೂ ಒಳಗೆ ಹೋಗಗೊಡಿಸಲಿಲ್ಲ. ಎಲ್ಲರು ಅವಳಿಗೋಸ್ಕರ ಅಳುತ್ತಾ

1. ೪೧—೫೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೯. ೧೮—೨೬. ಮಾರ್ಕ. ೫. ೨೨—೪೩. ವಚನಗಳ ವ್ಯಾಖ್ಯಾನಗಳಲ್ಲಿ ನೋಡಬೇಕು.



ಬಡುಕೊಳ್ಳುತ್ತಾ ಇರುವಾಗ, ಅವನು ಅಳ ಬೇಡಿರಿ; ಅವಳು ಸಾಯಲಿಲ್ಲ; ನಿದ್ದೆ ಮಾಡುತ್ತಾಳೆ, ಅಂದನು.
೫೩, ೫೪ ಆದರೆ ಅವರು, ಅವಳು ಸತ್ತಳೆಂದು ತಿಳಿದು, ಅವನನ್ನು ಹಾಸ್ಯ ಮಾಡಿದರು. ಆದರೆ ಅವನು ಎಲ್ಲರ
೫೫ ನ್ನು ಹೊರಗೆ ಹಾಕಿ, ಅವಳ ಕೈ ಹಿಡಿದು, ಮಗಳೇ, ಏಳೆಂದು ಕೂಗಿದನು. ಆಗಲವಳ ಆತ್ಮವು ತಿರಿಗಿ
ಬಂದು, ಅವಳು ಸಂಗಡಲೇ ಎದ್ದಳು. ಮತ್ತು ಯೇಸು, ಅವಳಿಗೆ ಊಟಕ್ಕೆ ಕೊಡ ಬೇಕೆಂದು ಅಪ್ಪಣೆ
೫೬ ಕೊಟ್ಟನು. ಅವಳ ಹೆತ್ತವರು ಆಶ್ಚರ್ಯ ಪಟ್ಟರು. ಆದರೆ ಅವನು, ಆದದ್ದನ್ನು ಯಾರಿಗೂ ಹೇಳ ಬೇಡ
ವೆಂದು, ಅವರಿಗೆ ಅಪ್ಪಣೆ ಕೊಟ್ಟನು.

ಸುವಾರ್ತೆಯನ್ನು ಸಾರಲೂ, ರೋಗಿಷ್ಠರನ್ನು ಸ್ವಸ್ಥ ಮಾಡಲೂ, ಹನ್ನೆರಡು ಮಂದಿ ಅಪೊಸ್ತಲರು ಕಳುಹಿಸಲ್ಪಟ್ಟದ್ದು.

9. ಇದಲ್ಲದೆ [1]ಅವನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕೂಡ ಕರೆದು, ಸಕಲ ದೆವ್ವಗಳ ಮೇಲೆಯೂ,
೨ ರೋಗಗಳನ್ನು ವಾಶಿ ಮಾಡುವದಕ್ಕೂ, ಅವರಿಗೆ ಬಲವನ್ನೂ ಅಧಿಕಾರವನ್ನೂ ಕೊಟ್ಟು, ದೇವರ ರಾಜ್ಯ
೩ ವನ್ನು ಪ್ರಸಂಗಿಸುವದಕ್ಕೂ, ಅಸ್ವಸ್ಥವಾಗಿರುವವರನ್ನು ಸ್ವಸ್ಥ ಮಾಡುವದಕ್ಕೂ, ಅವರನ್ನು ಕಳುಹಿಸಿ, ಅವರಿಗೆ
ಹೇಳಿದ್ದೇನಂದರೆ, ಮಾರ್ಗಕ್ಕೆ ಏನೂ ತಕ್ಕೊಳ್ಳ ಬೇಡಿರಿ; ಕೋಲುಗಳೂ, ಚೀಲವೂ, ರೊಟ್ಟಿಯೂ, [2]ಬೆಳ್ಳಿಯೂ,
೪ ಎರಡೆರಡು ಅಂಗಿಗಳೂ ನಿಮಗಿರ ಬಾರದು; ಮತ್ತು ಯಾವ ಮನೆಯಲ್ಲಿ ಪ್ರವೇಶಿಸುತ್ತೀರೋ, ಅಲ್ಲಿ ಇದ್ದು,
೫ ಅಲ್ಲಿಂದಲೇ ಹೊರಟು ಹೋಗಿರಿ. ಮತ್ತು ನಿಮ್ಮನ್ನು ಅಂಗೀಕರಿಸದವರ್ಯಾರೋ, ಆ ಪಟ್ಣದೊಳಗಿಂದ ಹೊ
ರಟು, ನಿಮ್ಮ ಪಾದಗಳ ಧೂಳನ್ನು ಅವರಿಗೆ ಸಾಕ್ಷಿಯಾಗಿ ಝಾಡಿಸಿರಿ.
೬ ಆಗಲವರು ಹೊರಟು, ಎಲ್ಲೆಲ್ಲಿಯೂ ಸುವಾರ್ತೆ ಪ್ರಸಂಗಿಸಿ, ಸ್ವಸ್ಥ ಮಾಡಿ, ಗ್ರಾಮಗಳನ್ನು ಹಾದು
ಹೋದರು.

ಕ್ರಿಸ್ತನ ಅದ್ಭುತಗಳನ್ನು ಕೇಳಿ ಹೆರೋದನು ಕಳವಳ ಪಟ್ಟದ್ದು.

೭ ಆದರೆ [3]ಚತುರಧಿಪತಿಯಾದ ಹೆರೋದನು ಅವನಿಂದಾದವುಗಳನ್ನೆಲ್ಲಾ ಕೇಳಿ, ಕೆಲವರು, ಯೋಹಾನನು
೮ ಸತ್ತವರೊಳಗಿಂದ ಎದ್ದಿದ್ದಾನೆಂದು, ಕೆಲವರು, ಎಲೀಯನು ಪ್ರತ್ಯಕ್ಷವಾದನೆಂದು, ಕೆಲವರು, ಪೂರ್ವದ ಪ್ರ
೯ ವಾದಿಗಳಲ್ಲಿ ಒಬ್ಬನು ಎದ್ದಿದ್ದಾನೆಂದು ಹೇಳುತ್ತಿರುವದರಿಂದ, ಸಂದೇಹ ಪಟ್ಟನು. ಹೀಗಿರಲಾಗಿ ಹೆರೋದ
ನು, ಯೋಹಾನನ ತಲೆಯನ್ನು ನಾನು ಕೊಯಿಸಿದ್ದೇನೆ; ಆದರೆ ಯಾವನನ್ನು ಕುರಿತು ಇವುಗಳನ್ನು ಕೇಳು
ತ್ತೇನೋ, ಅವನು ಯಾರೆಂದು ಹೇಳಿ, ಅವನನ್ನು ನೋಡ ಹುಡುಕಿದನು.

ಕ್ರಿಸ್ತನು ತನ್ನ ಶಿಷ್ಯರ ಸಂಗಡ ಒಂದು ಅರಣ್ಯಕ್ಕೆ ಹೋಗಿ, ಬಹಳ ಜನಸಮೂಹಗಳಿಗೆ
ಅದ್ಭುತವಾಗಿ ಆಹಾರ ಕೊಟ್ಟದ್ದು.

೧೦ [4]ಆಗ ಅಪೊಸ್ತಲರು ತಿರಿಗಿ ಬಂದು, ತಾವು ಮಾಡಿದವುಗಳನ್ನೆಲ್ಲಾ ಅವನಿಗೆ ವಿವರಿಸಿದ ಮೇಲೆ, ಅವನು

1. ೯. ೧—೫೦ಲ್ಲಿ ಕ್ರಿಸ್ತನು ಗಲಿಲಾಯ ದೇಶದಲ್ಲಿ ಮಾಡಿದ ದಿವ್ಯ ಸೇವೆಯನ್ನು ಕ್ರಮವಾಗಿ ತೋರಿಸಿ ಇದೆ. ಆತನು ತನ್ನ ಹನ್ನೆರಡು ಮಂದಿ ಅಪೊಸ್ತಲರನ್ನು ಸುವಾರ್ತೆ ಪ್ರಸಂಗಿಸುವದಕ್ಕೆ ಕಳುಹಿಸಿದನು. (೧—೬.) ಆತನ ಕೀರ್ತಿಯನ್ನು ಹೆರೋದನು ಕೇಳಿ, ಕಳವಳ ಪಟ್ಟನು. (೭—೯.) ಅಪೊಸ್ತಲರು ತಿರಿಗಿ ಬಂದ ತರುವಾಯ ಕ್ರಿಸ್ತನು ಅವರ ಸಂಗಡ ಸಮುದ್ರದ ಆಚೇಥಡಕ್ಕೆ ಹೋಗಿ, ಅವರ ಬಳಿಗೆ ಬಂದ ಜನಸಮೂಹಗಳಿಗೆ ಉಪದೇಶ ಮಾಡಿ, ಅದ್ಭುತವಾಗಿ ಆಹಾರ ಕೊಟ್ಟನು. (೧೦—೧೭.) ಪೇತ್ರನು ತನ್ನನ್ನು ಶ್ರೇಷ್ಠ ವಿಧವಾಗಿ ಅರಿಕೆ ಮಾಡಿದ ತರುವಾಯ ಆತನು ತನ್ನ ಮರಣವನ್ನು ಕುರಿತು ಮುಂತಿಳಿಸಿ, ಒಬ್ಬನು ತನ್ನನ್ನು ತಾನು ಬೊಂಕುವದು ಅವಶ್ಯವೆಂಬುವದರ ವಿಷಯ ಶಿಷ್ಯರಿಗೆ ಬೋಧಿಸಿದನು. (೧೮—೨೭.) ಬೆಟ್ಟದ ಮೇಲೆ ಮೂವರು ಶಿಷ್ಯರ ಮುಂದೆ ರೂಪಾಂತರವಾದನು. ಬೆಟ್ಟದ ಬುಡದಲ್ಲಿದ್ದ ಮಿಕ್ಕಾದ ಶಿಷ್ಯರ ಬಳಿಗೆ ಬಂದು, ಅವರು ಹೊರಡಿಸಲಾರದೆ ಹೋದ ದೆವ್ವವನ್ನು ಹೊರಡಿಸಿದನು. (೨೮—೪೨.) ಆತನ ಅದ್ಭುತಗಳನ್ನು ಕಂಡ ಜನರೆಲ್ಲರೂ ಆಶ್ಚರ್ಯ ಪಟ್ಟಾಗ, ಆತನು ತನ್ನ ಮರಣವನ್ನು ಕುರಿತು ಶಿಷ್ಯರ ಬಳಿಯಲ್ಲಿ ಮಾತಾಡಿ, (೪೩—೪೫.) ಅವರ ಅತ್ಯಾಶೆಯನ್ನೂ ಹೊಟ್ಟೇಕಿಚ್ಚನ್ನೂ ಖಂಡಿಸಿದನು. (೪೬—೫೦.) ೧—೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೦. ೧—೧೫. ಮಾರ್ಕ. ೬. ೭—೧೩. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

2. ಗ್ರೀಕರಲ್ಲಿ ಬಳಿಕೆಯಾದ ಬೆಳ್ಳಿಯ ನಾಣ್ಯವನ್ನು ಕುರಿತು ಈ ಸುವಾರ್ತೆಯಲ್ಲಿಯೂ, ರೋಮಾಯರಲ್ಲಿ ಬಳಿಕೆಯಾದ ತಾಂಬ್ರದ ನಾಣ್ಯವನ್ನು ಕುರಿತು ಮಾರ್ಕನ ಸುವಾರ್ತೆಯಲ್ಲಿಯೂ ಹೇಳಿರುತ್ತದೆ.

3. ೭—೧೦. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೬. ೧೪—೩೧. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ೧೦—೧೭. ವಚನಗಳ ವ್ಯಾಖ್ಯಾನವನ್ನು, ಮತ್ತಾ. ೧೪. ೧೩—೨೧. ಮಾರ್ಕ. ೬. ೩೧—೪೪. ಯೋಹಾ. ೬. ೧—೧೩. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

೧೧ ಅವರನ್ನು ಕರಕೊಂಡು, [1]ಬೆತ್ಸಾಯಿದವೆಂಬ ಪಟ್ಣದ ಅರಣ್ಯಸ್ಥಳಕ್ಕೆ ಪ್ರತ್ಯೇಕವಾಗಿ ಹೋದನು. ಆದರೆ
ಸಮೂಹಗಳು ಅದನ್ನು ತಿಳಿದು, ಅವನನ್ನು ಹಿಂಬಾಲಿಸಿದಾಗ, ಅವನು ಅವರನ್ನು ಅಂಗೀಕರಿಸಿ, ದೇವರ
ರಾಜ್ಯವನ್ನು ಕುರಿತು ಅವರ ಸಂಗಡ ಮಾತಾಡಿ, ಸ್ವಸ್ಥವಾಗ ಬೇಕಾದವರನ್ನು ಸ್ವಸ್ಥ ಮಾಡಿದನು.
೧೨ ಹೊತ್ತು ಸಂದು ಹೋಗಲಾರಂಭಿಸಿದಾಗ, ಹನ್ನೆರಡು ಮಂದಿಯು ಬಂದು, ಸಮೂಹವು ಹೋಗಿ, ಸುತ್ತ
ಲಿರುವ ಗ್ರಾಮಗಳಲ್ಲಿಯೂ ಹಳ್ಳಿಗಳಲ್ಲಿಯೂ ಇಳುಕೊಂಡು, ಆಹಾರವನ್ನು ಕಂಡು ಕೊಳ್ಳುವ ಹಾಗೆ, ಅವ
೧೩ ರನ್ನು ಕಳುಹಿಸಿ ಬಿಡು; ಯಾಕಂದರೆ ಇಲ್ಲಿ ಅರಣ್ಯಸ್ಥಳದಲ್ಲಿ ಇದ್ದೇವೆಂದು ಅವನಿಗೆ ಹೇಳಿದಾಗ, ಅವನು
ಅವರಿಗೆ, ನೀವೇ ಅವರಿಗೆ ಉಣ್ಣ ಕೊಡಿರಿ, ಅಂದನು. ಅವರು, ನಾವು ಹೋಗಿ, ಈ ಜನರಿಗೆಲ್ಲಾ ಆಹಾರವ
ನ್ನು ಕೊಂಡು ಕೊಂಡರೆ ಹೊರ್ತು, ಐದು ರೊಟ್ಟಿಗಳೂ ಎರಡು ಮೀನುಗಳೂ ಅಲ್ಲದೆ, ಮತ್ತೇನೂ ನಮ
೧೪ ಗಿಲ್ಲವಂದರು. ಹ್ಯಾಗಂದರೆ ಹೆಚ್ಚು ಕಡಿಮೆ ಐದು ಸಾವಿರ ಗಂಡಸರಿದ್ದರು. ಆಗಲವನು ತನ್ನ ಶಿಷ್ಯರಿಗೆ,
೧೫ ಅವರನ್ನು ಐವತ್ತೈವತ್ತಾಗಿ ಪಙ್ಕ್ತಿಗಳಾಗಿ ಕೂಡ್ರಿಸಿರಿ, ಅಂದಾಗ, ಅವರು ಹಾಗೆ ಮಾಡಿ, ಎಲ್ಲರನ್ನು ಕೂಡ್ರಿ
೧೬ ಸಿದರು. ಆಗಲವನು ಐದು ರೊಟ್ಟಿಗಳನ್ನೂ, ಎರಡು ಮೀನುಗಳನ್ನೂ ತೆಗೆದು ಕೊಂಡು, ಆಕಾಶವನ್ನು
೧೭ ದೃಷ್ಟಿಸಿ, ಅವುಗಳನ್ನು ಆಶೀರ್ವದಿಸಿ, ಮುರಿದು, ಸಮೂಹಕ್ಕೆ ಹಂಚುವದಕ್ಕೆ ಶಿಷ್ಯರಿಗೆ ಕೊಟ್ಟನು. ಎಲ್ಲರು
ತಿಂದು ತೃಪ್ತಿಯಾದರು. ಮತ್ತು ಅವರಿಗೆ ಮಿಕ್ಕ ತುಂಡುಗಳು ಹನ್ನೆರಡು ಪುಟ್ಟಿ ತುಂಬ ಎತ್ತಲ್ಪಟ್ಟವು.

ಪೇತ್ರನ ಅರಿಕೆ; ಕ್ರಿಸ್ತನು ತನ್ನ ಕಷ್ಟ, ಮರಣ, ಪುನರುತ್ಥಾನಗಳನ್ನು ಮುಂತಿಳಿಸಿದ್ದು; ಶಿಷ್ಯರು ಸತ್ಯದಲ್ಲಿ ನೆಲೆಯಾಗಿರ ಬೇಕೆಂದು ಹೇಳಿದ್ದು.

೧೮ [2]ಮತ್ತು ಅವನು ಒಂಟಿಯಾಗಿ ಪ್ರಾರ್ಥಿಸುತ್ತಿರುವಾಗ, ಶಿಷ್ಯರು ಅವನ ಸಂಗಡ ಇದ್ದರು. ಆಗಲವನು,
೧೯ ಸಮೂಹಗಳು ನನ್ನನ್ನು ಯಾರೆಂದು ಹೇಳುತ್ತಾರೆಂಬದಾಗಿ, ಅವರನ್ನು ಕೇಳಿದ್ದಕ್ಕೆ, ಅವರು ಪ್ರತ್ಯುತ್ತರ
ವಾಗಿ, ಸ್ನಾನಿಕನಾದ ಯೋಹಾನನೆಂದೂ, ಮತ್ತೊಬ್ಬರು, ಎಲೀಯನೆಂದೂ, ಬೇರೊಬ್ಬರು, ಪೂರ್ವದ ಪ್ರವಾ
೨೦ ದಿಗಳಲ್ಲಿ ಒಬ್ಬನು ಎದ್ದಿದ್ದಾನೆಂದೂ ಹೇಳುತ್ತಾರೆ, ಅಂದರು. ಅವನು ಅವರಿಗೆ, ಆದರೆ ನೀವು ನನ್ನನ್ನು
ಯಾರೆಂದು ಹೇಳುತ್ತೀರಿ? ಅಂದಾಗ, ಪೇತ್ರನು ಪ್ರತ್ಯುತ್ತರವಾಗಿ, ದೇವರ ಕ್ರಿಸ್ತನು, ಅಂದನು.
೨೧, ೨೨ ಆಗಲವನು ಅವರಿಗೆ ಆಜ್ಞಾಪಿಸಿ, ಇದನ್ನು ಯಾರಿಗೂ ಹೇಳ ಬಾರದೆಂದು ಅಪ್ಪಣೆ ಕೊಟ್ಟು, ಮನುಷ್ಯನ
ಮಗನು ಬಹಳ ಶ್ರಮೆ ಪಟ್ಟು, ಹಿರಿಯರಿಂದಲೂ ಪ್ರಧಾನ ಯಾಜಕರಿಂದಲೂ ಶಾಸ್ತ್ರಿಗಳಿಂದಲೂ ತಳ್ಳಲ್ಪಟ್ಟು,
ಕೊಲ್ಲಲ್ಪಟ್ಟು, ಮೂರನೇ ದಿವಸದಲ್ಲಿ ಎಬ್ಬಿಸಲ್ಪಡ ಬೇಕಾಗಿದೆ, ಅಂದನು.
೨೩ ಇದಲ್ಲದೆ ಅವನು ಎಲ್ಲರಿಗೆ ಹೇಳಿದ್ದೇನಂದರೆ, ಯಾವನಾದರೂ ನನ್ನ ಹಿಂದೆ ಬರ ಮನಸ್ಸಾಗಿದ್ದರೆ, ಅವನು
೨೪ ತನ್ನನ್ನು ಆಶಿಸದೆ, [3]ದಿನಾಲು, ತನ್ನ ಶಿಲುಬೆಯನ್ನು ಎತ್ತಿ ಕೊಂಡು, ನನ್ನನ್ನು ಹಿಂಬಾಲಿಸಲಿ. ಯಾಕಂದರೆ
ತನ್ನ ಪ್ರಾಣವನ್ನು ರಕ್ಷಿಸ ಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತ ತನ್ನ ಪ್ರಾಣ
೨೫ ವನ್ನು ಕಳಕೊಳ್ಳುವವನು ಅದನ್ನು ರಕ್ಷಿಸಿ ಕೊಳ್ಳುವನು. ಏನಂದರೆ ಒಬ್ಬ ಮನುಷ್ಯನು ಲೋಕವನ್ನೆಲ್ಲಾ
ಸಂಪಾದಿಸಿ ಕೊಂಡರೂ, ತನ್ನನ್ನು ಕಳಕೊಂಡರೆ, ಇಲ್ಲವೆ ನಷ್ಟ ಪಟ್ಟರೆ, ಅವನಿಗೆ ಪ್ರಯೋಜನವೇನು?
೨೬ ಯಾಕಂದರೆ ನನಗೂ ನನ್ನ ವಾಕ್ಯಗಳಿಗೂ ನಾಚಿಕೆ ಪಡುವವನ್ಯಾವನೋ, ಅವನಿಗೆ ಮನುಷ್ಯನ ಮಗನು,
ತನಗೂ ತಂದೆಗೂ [4]ಪರಿಶುದ್ಧ ದೂತರಿಗೂ ಇರುವ ಮಹಿಮೆಯಲ್ಲಿ ಬರುವಾಗ, ನಾಚಿಕೆ ಪಡುವನು.

1. ಇದು ಗಲಿಲಾಯ ಸಮುದ್ರದ ಉತ್ತರ ಪೂರ್ವ ದಿಕ್ಕಿನಲ್ಲಿರುವ ಸ್ಥಳ ಬೆತ್ಸಾಯಿದವು.

2. ೧೭, ೧೮ನೇ ವಚನಗಳಿಗೆ ಮಧ್ಯ ಬರ ತಕ್ಕ ಸಂಗತಿಗನ್ನು ಸುವಾರ್ತೆಯ ಸಂಗತಿಗಳ ಕ್ರಮದಲ್ಲಿ ೬೫—೬೭ನೇ ಪ್ರಕರಣಗಳಲ್ಲಿ ನೋಡ ಬೇಕು. ೧೮—೨೭. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೬. ೧೩—೨೮. ಮಾರ್ಕ. ೮. ೨೭—೩೮. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

3. ತನ್ನನ್ನು ತಾನು ಅಲ್ಲಗಳೆಯುವ ಸುಗುಣವು, ತನ್ನ ಶಿಲುಬೆಯನ್ನು ಎತ್ತಿಕೊಂಡು ಹೋಗುವದರಿಂದ ಪ್ರಕಟವಾಗುತ್ತದೆ. ಇದು ಒಂದೊಂದು ವೇಳೆ ಮಾತ್ರ ತೋರುವ ಗುಣವಾಗಿರದೆ ನಿತ್ಯವೂ ತೋರ ಬೇಕಾದ ಸದ್ಗುಣವಾಗಿರ ಬೇಕು.

4. ಸ್ವಂತ ಮಹಿಮೆ, ಉದ್ಯೋಗದ ಮಹಿಮೆ, ಊಳಿಗದವರಾದ ದೇವದೂತರ ಮಹಿಮೆಗಳಾದ ಮೂರು ವಿಧ ಮಹಿಮೆ ಹೊಂದಿದವನಾಗಿ ಪ್ರಸನ್ನನಾಗುವ ಪರಮ ಗುರುವನ್ನು ಲೋಕದವರ ಮುಂದೆ ಅರಿಕೆ ಮಾಡುವದಕ್ಕೆ ನಾಚಿಕೆ ಪಡುವದು ಎಷ್ಟು ಬುದ್ಧಿಹೀನವಾದದ್ದೆಂದು ಇದರಿಂದ ತಿಳಿಯ ಬಹುದು.



೨೭ ಇದಲ್ಲದೆ ನಿಜವಾಗಿ ನಿಮಗೆ ಹೇಳುತ್ತೇನೆ, ಇಲ್ಲಿ ನಿಂತವರಲ್ಲಿ ಕೆಲವರು, ದೇವರ ರಾಜ್ಯವನ್ನು ನೋಡುವ
ಮಟ್ಟಿಗೂ, ಮರಣವನ್ನು ರುಚಿ ನೋಡರು.

ಬೆಟ್ಟದ ಮೇಲೆ ಕ್ರಿಸ್ತನು ರೂಪಾಂತರವಾದದ್ದು.

೨೮ [1]ಈ ವಾಕ್ಯಗಳಾದ ಮೇಲೆ ಹೆಚ್ಚು ಕಡಿಮೆ ಎಂಟು ದಿವಸಗಳ ತರುವಾಯ ಆದದ್ದೇನಂದರೆ, ಅವನು ಪೇತ್ರ
ನನ್ನೂ ಯೋಹಾನನನ್ನೂ [2]ಯಾಕೋಬನನ್ನೂ ಕರಕೊಂಡು, ಪ್ರಾರ್ಥನೆ ಮಾಡುವದಕ್ಕೆ [3]ಬೆಟ್ಟವನ್ನೇರಿದನು.
೨೯ ಅವನು ಪ್ರಾರ್ಥಿಸುತ್ತಿರುವಾಗ, ಅವನ ಮುಖದ ಆಕಾರವು [4]ಬೇರೆಯಾಗಿ, ಅವನ ವಸ್ತ್ರವು ಬಿಳುಪಾಗಿ
೩೦ ಮಿಂಚುವಂಥಾದ್ದಾಯಿತು. ಆಗ, ಇಗೋ, ಇಬ್ಬರು ಪುರುಷರು ಅವನ ಸಂಗಡ ಮಾತಾಡಿದರು; ಯಾರಂ
೩೧ ದರೆ ಮೋಶೆಯೂ ಎಲೀಯನೂ. ಇವರು ಮಹಿಮೆಯಲ್ಲಿ ಕಾಣಿಸಿ ಕೊಂಡು, ಅವನು ಯೆರೂಸಲೇಮಿ
೩೨ ನಲ್ಲಿ ಪೂರೈಸ ಬೇಕಾದ [5]ಹೊರಡೋಣದ ವಿಷಯ ಮಾತಾಡಿದರು. ಆದರೆ ಪೇತ್ರನೂ ಅವನ ಸಂಗಡ
ಇದ್ದವರೂ [6]ನಿದ್ರಾಭಾರವಾಗಿದ್ದರು. ಎಚ್ಚತ್ತಾಗ, ಅವನ ಮಹಿಮೆಯನ್ನೂ, ಅವನ ಸಂಗಡ ನಿಂತ ಇಬ್ಬರು
ಪುರುಷರನ್ನೂ ನೋಡಿದರು.
೩೩ ಅವರು ಅವನನ್ನು ಬಿಟ್ಟು ಹೋಗುತ್ತಿರುವಾಗ, ಪೇತ್ರನು ಯೇಸುವಿಗೆ ಹೇಳಿದ್ದೇನಂದರೆ, ಅಯ್ಯಾ, ನಾವು
ಇಲ್ಲಿ ಇರುವದು ಒಳ್ಳೇದು; [7]ಮೂರು ಪರ್ಣಶಾಲೆಗಳನ್ನು ಮಾಡುವ; ನಿನಗೆ ಒಂದು, ಮೋಶೆಗೆ ಒಂದು,
೩೪ ಎಲೀಯನಿಗೆ ಒಂದು; ತಾನು ಹೇಳಿದ್ದೇನೆಂದು ಅವನಿಗೆ ತಿಳಿಯಲಿಲ್ಲ. ಇದನ್ನು ಅವನು ಹೇಳುತ್ತಿರುವಾಗ,
ಮೇಘವು ಬಂದು, ಅವರ ಮೇಲೆ ನೆರಳಾಗಿತ್ತು. ಅವರು ಆ [8]ಮೇಘದೊಳಗೆ ಪ್ರವೇಶಿಸುವಾಗ, ಭಯ
ಪಟ್ಟರು.
೩೫ ಇದಲ್ಲದೆ ಮೇಘದೊಳಗಿಂದ, ಇವನೇ [9]ನನ್ನ ಪ್ರಿಯ ಮಗನು; ಇವನನ್ನು ಕೇಳಿರಿ, ಎಂಬ ಶಬ್ದವು ಉಂಟಾ

1. ೨೮—೩೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೭. ೧—೯. ಮಾರ್ಕ. ೯. ೨—೧೦. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

2. ಮಾರ್ಕ. ೫. ೩೭. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು. ಈ ಮಹಿಮೆಯಾದ ನೋಟವನ್ನು ಕುರಿತು ಪೇತ್ರನು ತನ್ನ ಪತ್ರಿಕೆಯಲ್ಲಿ ಹೇಳುತ್ತಾನೆ. (೨ ಪೇತ್ರ. ೧. ೧೬—೧೮.) ಯೋಹಾನನು ಸಹ ಇದನ್ನು ಸಂಕೇತವಾಗಿ ಹೇಳಿದ್ದಾನೆ. (ಯೋಹಾ. ೧. ೧೪.)

3. ಇದು ತಾಬೋರು ಬೆಟ್ಟವೆಂದು ಪಾರಂಪರ್ಯವಾಗಿ ಹೇಳಿಕೊಳ್ಳುತ್ತಾರೆ. ಮತ್ತಾಯನ ಮಾರ್ಕನ ಸುವಾರ್ತೆಗಳಲ್ಲಿ ಎತ್ತರವಾದ ಬೆಟ್ಟವೆಂದು ಹೇಳಿರುವದರಿಂದ ಇದು ಹೆರ್ಮೋನ್ ಬೆಟ್ಟಕ್ಕೆ ಶೇರಿದ ಒಂದು ಶಿಖರವಾಗಿರ ಬಹುದು. ರಕ್ಷಕನು ಮಾಡಿದ ಪ್ರಯಾಣದಲ್ಲಿ ಈ ಬೆಟ್ಟವು ಉತ್ತರ ಮೇರೆಯಲ್ಲಿ ಇತ್ತೆಂದು ತೋರುತ್ತದೆ. ಜಪಧ್ಯಾನ ಮಾಡುವದಕ್ಕೆ ಬೆಟ್ಟಕ್ಕೆ ಹೋದನೆಂಬುವದನ್ನು ಈ ಸುವಾರ್ತೆಯಲ್ಲಿ ಮಾತ್ರ ಹೇಳಿ ಇದೆ.

4. ಸೂರ್ಯಪ್ರಭೆಯ ಹಾಗೆ ಆತನ ಮುಖದಲ್ಲಿಯೂ ವಸ್ತ್ರದಲ್ಲಿಯೂ ಪ್ರಕಾಶಿಸಿದ ಮಹಿಮೆಯನ್ನು ಕುರಿತು ಮಾತ್ರ ಇದರಲ್ಲಿ ಹೇಳಿ ಇದೆ. (ಹೊರ. ೩೪. ೨೯—೩೫.) ಆ ಮಹಿಮೆಯನ್ನು ಯಾರಿಂದಲೂ ವಿವರಿಸಲಳವಲ್ಲ.

5. ಹೊರಡೋಣ ಅಂದರೆ ಪರಲೋಕಕ್ಕೆ ಏರಿ ಹೋಗುವದನ್ನು ಸೂಚಿಸುತ್ತದೆ. (ಯೋಹಾ. ೧೬. ೨೮.)

6. ಹಗಲಲ್ಲಿ ಮಾಡಿದ ಕೆಲಸದಿಂದಲೂ ಎತ್ತರವಾದ ಬೆಟ್ಟಕ್ಕೆ ಏರಿದ್ದರಿಂದಲೂ ಶಿಷ್ಯರು ದಣಿದು, ಆಯಾಸದಿಂದ ನಿದ್ರಾಭಾರವಾಗಿದ್ದರು. ಇದರಿಂದ ಆ ನೋಟವು ರಾತ್ರಿಯಲ್ಲಿ ನಡಿಯಿತೆಂದು ತೋರುತ್ತದೆ. ಫಕ್ಕನೆ ಉಂಟಾದ ಅಧಿಕ ಪ್ರಕಾಶದಿಂದ ಶಿಷ್ಯರ ನಿದ್ರೆಯು ತೀರಿ, ಅವರು ದಿಗುಲು ಪಟ್ಟು ಎದ್ದು, ತಮ್ಮ ಪರಮ ಗುರುವಿನ ಮಹಿಮೆಯನ್ನು ಕಂಡರು.

7. ಆಶ್ಚರ್ಯದಿಂದ ಭ್ರಮೆಗೊಂಡಿದ್ದ ಪೇತ್ರನು ತಾನು ಮಾತಾಡಿದ್ದೇನೆಂದು ತಿಳಿಯದೆ, ಮೋಕ್ಷದ ಮನೆಯ ಹಾಗಿದ್ದ ಆ ಬೆಟ್ಟದಲ್ಲಿ ವಾಸ ಮಾಡುವದು ಒಳ್ಳೇದು ಎಂಬುವ ಒಂದು ಸಾಧಾರಣ ನೆನಪಿನಿಂದ ತನ್ನ ಪರಮ ಗುರುವೂ ಆತನ ಶಿಷ್ಯರೂ ವಾಸ ಮಾಡುವದಕ್ಕೆ ತಕ್ಕ ಪರ್ಣಶಾಲೆಗಳನ್ನು ಮಾಡ ಬಹುದೋ? ಎಂದು ಕೇಳಿದನು.

8. ಪರಿಶುದ್ಧ ಸನ್ನಿಧಿಗೆ ಗುರುತಾಗಿರುವ "ಷೆಕೀನಾ" ಎಂಬುವ ಪ್ರಕಾಶವುಳ್ಳ ಮೇಘದಂತೆ ಇರುವ ಒಂದು ಮೇಘವು ಬಂದು, ಕ್ರಿಸ್ತನನ್ನೂ, ಪರಲೋಕವಾಸಿಗಳಾದ ಮೋಶೆ ಎಲೀಯ ಎಂಬವರನ್ನೂ ಮುಚ್ಚಿ ಕೊಂಡಾಗ ಶಿಷ್ಯರು ದಿಗುಲು ಪಟ್ಟರು.

9. ಕ್ರಿಸ್ತನ ಅದ್ಭುತವಾದ ಪುಣ್ಯ ಕ್ರಿಯೆಯನ್ನು ಅಂಗೀಕರಿಸಿದ್ದಕ್ಕೆ ಸಾಕ್ಷಿಯಾಗಿ ಪರಲೋಕದಿಂದ ಅಶರೀರಿವಾಕ್ಕು ಮೂರು ಸಾರಿ ಆಯಿತು. ಒಂದೊಂದು ಸಾರಿಯೂ ಆತನು ಪ್ರಾರ್ಥನೆ ಮಾಡಿದಾಗಲೇ ಆ ಶಬ್ದವಾಯಿತೆಂದು ತೋರುತ್ತದೆ. (೯. ವ. ೩. ೨೧, ೨೨. ಯೋಹಾ. ೧೨. ೨೭, ೨೮.) ಈ ಅತಿಶಯವಾದ ನೋಟವು, ಕರ್ತನು ಕಡೇ ಸಾರಿ ಯೆರೂಸಲೇಮಿಗೆ ಪ್ರಯಾಣ ಮಾಡುವದಕ್ಕಿಂತ ಸ್ವಲ್ಪ ಮುಂಚೆ ಉಂಟಾದದರಿಂದ ಅಲ್ಲಿ ಸಂಭವಿಸಲಿಕ್ಕಿದ್ದ ಮಹಾ ಮುಖ್ಯವಾದ ಕಾರ್ಯಗಳಿಗೆ ತಕ್ಕ ಯತ್ನವಾಗಿತ್ತು. ಮತ್ತು ಭೂಲೋಕದಲ್ಲಿ ತನ್ನ ಪುಣ್ಯ ಕರ್ಮವನ್ನು ಈಡೇರಿಸಿದ ತರುವಾಯ ಪರಲೋಕದಲ್ಲಿ ಆತನಿಗೆ ಉಂಟಾಗುವ ಮಹಿಮೆ ಇಂಥಾದ್ದೆಂದು ಶಿಷ್ಯರು ತಿಳಿದು ಕೊಳ್ಳುವದಕ್ಕೆ ಅನುಕೂಲ

೧೮ ನಮಗೆ ವಿಧೇಯವಾಗಿವೆ, ಅಂದಾಗ; ಅವನು ಅವರಿಗೆ ಹೇಳಿದ್ದೇನಂದರೆ, ಸೈತಾನನು ಮಿಂಚಿನ ಹಾಗೆ
೧೯ ಆಕಾಶದಿಂದ ಬೀಳುವದನ್ನು [1]ನೋಡಿದೆನು. ಇಗೋ, ಸರ್ಪಗಳನ್ನೂ [2]ಚೇಳುಗಳನ್ನೂ ಶತ್ರುವಿನ ಸಮಸ್ತ
ಬಲವನ್ನೂ ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಡುತ್ತೇನೆ; ಯಾವದೂ ನಿಮಗೆ ಹ್ಯಾಗೂ ನಷ್ಟ
೨೦ ಮಾಡದು. ಆದಾಗ್ಯೂ, ಆತ್ಮಗಳು ನಿಮಗೆ ವಿಧೇಯವಾಗಿವೆ ಎಂದು ಸಂತೋಷ ಪಡದೆ, ನಿಮ್ಮ ಹೆಸರು
ಗಳು [3]ಪರಲೋಕದಲ್ಲಿ ಬರೆಯಲ್ಪಟ್ಟವೆ, ಎಂದು ಹೆಚ್ಚಾಗಿ ಸಂತೋಷ ಪಡಿರಿ.
೨೧ [4]ಅದೇ ತಾಸಿನಲ್ಲಿ ಯೇಸು ಆತ್ಮದಲ್ಲಿ [5]ಆನಂದ ಪಟ್ಟು, ಹೇಳಿದ್ದೇನಂದರೆ, ಪರಲೋಕ ಭೂಲೋಕಗಳ
ಕರ್ತನಾದ ತಂದೆಯೇ, ನೀನು ಇವುಗಳನ್ನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಮರೆ ಮಾಡಿ, ಬಾಲಕರಿಗೆ
ಪ್ರಕಟ ಮಾಡಿದದರಿಂದ ನಿನಗೆ ಸ್ತೋತ್ರ ಮಾಡುತ್ತೇನೆ; ಹೌದು, ತಂದೆಯೇ, ಯಾಕಂದರೆ ಹೀಗೆ ನಿನ್ನ
೨೨ ಮುಂದೆ ಒಳ್ಳೇದಾಗಿ ತೋಚಿತು. ಎಲ್ಲವುಗಳು ನನ್ನ ತಂದೆಯಿಂದ ನನಗೆ ಒಪ್ಪಿಸಲ್ಪಟ್ಟವೆ; ಮತ್ತು ಮಗನು
ಯಾರೆಂದು, ತಂದೆಯಲ್ಲದೆ ಯಾರೂ ಅರಿಯರು. ಮತ್ತು ತಂದೆಯು ಯಾರೆಂದು, ಮಗನಲ್ಲದೆ, ಯಾರಿಗೆ
ಪ್ರಕಟ ಮಾಡುವದಕ್ಕೆ ಮಗನಿಗೆ ಮನಸ್ಸುಂಟೋ ಅವನಲ್ಲದೆ, ಯಾರೂ ಅರಿಯರು.
೨೩ ಆಗಲವನು ಶಿಷ್ಯರ ಬಳಿಗೆ ತಿರುಗಿ ಕೊಂಡು, ಪ್ರತ್ಯೇಕವಾಗಿ ಹೇಳಿದ್ದೇನಂದರೆ, ನೀವು ನೋಡುವವುಗಳನ್ನು
೨೪ ನೋಡುವ ಕಣ್ಣುಗಳು ಭಾಗ್ಯವುಳ್ಳವುಗಳು. ಹ್ಯಾಗಂದರೆ ಅನೇಕ ಪ್ರವಾದಿಗಳೂ ಅರಸರೂ ನೀವು ನೋ
ಡುವವುಗಳನ್ನು ನೋಡ ಇಚ್ಛೈಸಿ, ನೋಡಲಿಲ್ಲ; ನೀವು ಕೇಳುವವುಗಳನ್ನು ಕೇಳ ಇಚ್ಛೈಸಿ, ಕೇಳಲಿಲ್ಲವೆಂದು,
ನಿಮಗೆ ಹೇಳುತ್ತೇನೆ.

ನ್ಯಾಯಶಾಸ್ತ್ರಿ ಕೇಳಿದ ಪ್ರಶ್ನೆಗೆ ಕ್ರಿಸ್ತನು ಉತ್ತರ ಕೊಟ್ಟದ್ದು; ಉತ್ತಮ ಸಮಾರ್ಯನನ್ನು ಕುರಿತ ಸಾಮ್ಯ.

೨೫ ಆಗ, ಇಗೋ, [6]ಒಬ್ಬ ನ್ಯಾಯಶಾಸ್ತ್ರಿಯು ಎದ್ದು, ಅವನನ್ನು [7]ಶೋಧಿಸಿ, ಬೋಧಕನೇ, ನಿತ್ಯಜೀವವನ್ನು
೨೬ ಬಾಧ್ಯವಾಗಿ ಹೊಂದುವದಕ್ಕೆ ನಾನೇನು ಮಾಡ ಬೇಕು? ಅಂದಾಗ, ಅವನಿಗೆ, ನ್ಯಾಯಪ್ರಮಾಣದಲ್ಲಿ
೨೭ ಏನು ಬರೆದದೆ? ಹ್ಯಾಗೆ ಓದುತ್ತೀ? ಅನ್ನಲು; ಅವನು ಪ್ರತ್ಯುತ್ತರವಾಗಿ ನಿನ್ನ ದೇವರಾಗಿರುವ ಕರ್ತನನ್ನು
ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ, ನಿನ್ನ
ಪೂರ್ಣ ಬುದ್ಧಿಯಿಂದಲೂ, ಮತ್ತು ನಿನ್ನ ನೆರೆಯವನನ್ನು [8]ನಿನ್ನ ಹಾಗೆಯೂ, ಪ್ರೀತಿ ಮಾಡ ಬೇಕು,

1. ಶಿಷ್ಯರು ಕಂಡದ್ದು ಒಂದು ಪಾಲು, ಪರಮ ಗುರುವಾದ ಕ್ರಿಸ್ತನು ಕಂಡದ್ದು ಬಹಳ ಅಧಿಕವಾದದ್ದು. ಪಿಶಾಚಗಳ ಮುಖ್ಯಸ್ಥನಾದ ಸೈತಾನನು ತನ್ನ ಅಧಿಕಾರವನ್ನು ಕಳಕೊಂಡು, ಪೂರ್ಣವಾಗಿ ನಾಶವಾಗುವದನ್ನು ಸರ್ವಜ್ಞನಾಗಿರುವ ದೇವರಾದ ಕ್ರಿಸ್ತನು ಮುಂದರಿತು, ಅವರಿಗೆ ಹೇಳಿದನು. ಫರೋಹನನು ಸಮುದ್ರದ ಅಗಾಧದಲ್ಲಿ ಮುಣುಗಿ ಹೋದ ಪ್ರಕಾರ, ದೇವರಿಗೂ ಮನುಷ್ಯರಿಗೂ ಕ್ರೂರ ಶತ್ರುವಾದ ಪಿಶಾಚನು ಅಗ್ನಿಸಮುದ್ರದ ಅಗಾಧದಲ್ಲಿ ಬಿದ್ದು, ನಾಶವಾಗಿ ಹೋಗುವನು. ರಕ್ಷಕನು ಹೇಳಿದ ಈ ಉಪಮಾನವು ಯೆಶಾ. ೧೪. ೧೨. ವಚನಕ್ಕೆ ಸರಿಯಾಗಿದೆ.

2. ಇದು ದುಷ್ಟಾತ್ಮಗಳ ವಿಷವಾದ ಬಲವನ್ನು ಸೂಚಿಸುತ್ತದೆ. (ಕೀರ್ತ. ೯೧. ೧೩. ಎಜೇಕಿ. ೨. ೬.) ಇಂಥಾ ದುರಾತ್ಮಗಳನ್ನು ಸಹ ಕ್ರಿಸ್ತನ ದಾಸರು ಆತನ ಕೃಪೆಯಿಂದ ಜಯಿಸುವರು.

3. ಅದ್ಭುತಗಳನ್ನು ಮಾಡ ತಕ್ಕ ವರವನ್ನು ಹೊಂದಿರುವದಕ್ಕಿಂತಲೂ, ಅದ್ಭುತನಾಥನಾದ ಕ್ರಿಸ್ತನ ಜೀವಪುಸ್ತಕದಲ್ಲಿ ಹೆಸರು ಬರಿಯಲ್ಪಟ್ಟಿರುವದು ಅಧಿಕ ಮಹಿಮೆಯಾದದ್ದು. (ಪ್ರಕಟ. ೨೧. ೨೭. ಮತ್ತಾ. ೭. ೨೨, ೨೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

4. (ಮತ್ತಾ. ೧೧. ೨೫—೨೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ಕ್ರಿಸ್ತನು ಆನಂದಪರವಶನಾಗಿ, ಪರಮ ತಂದೆಯನ್ನು ಆಗಾಗ್ಯೆ ಸ್ತುತಿಸಿದನೆಂದು ಇದರಿಂದ ತಿಳಿಯುತ್ತದೆ.

5. ಶಿಷ್ಯರು ಅದ್ಭುತಗಳನ್ನು ಮಾಡುವ ವರವನ್ನು ಹೊಂದಿದ್ದಕ್ಕಾಗಿ ಸಂತೋಷ ಪಟ್ಟರು. ಕ್ರಿಸ್ತನು, ಲೋಕದವರಿಂದ ಹೀನವಾಗಿ ಎಣಿಸಲ್ಪಟ್ಟವರಿಗೆ ಪರಮ ಭಾಗ್ಯ ಉಂಟಾಗುವದನ್ನು ಕಂಡು, ಆನಂದ ಪಟ್ಟನು. (೨೩, ೨೪. ವ.) ಆತನ ಆನಂದವು ಎಷ್ಟು ಶುದ್ಧವೂ ದಯವೂ ಉಳ್ಳದ್ದು!

6. ಇವನು ಮೋಶೆಯ ನ್ಯಾಯಪ್ರಮಾಣವನ್ನು ಬೋಧಿಸುವವನು. ಈ ವಚನಗಳಲ್ಲಿರುವ ಸಂಗತಿಯು ಲೂಕ. ೧೮. ೧೮—೩೦. ಮತ್ತಾ. ೧೯. ೧೬—೩೦. ವರಿಗೂ ಇರುವ ವಚನಗಳಲ್ಲಿ ಹೇಳಲ್ಪಟ್ಟ ಸಂಗತಿಗಳಿಗೆ ಇದು ಒಂದು ವೇಳೆ ಸಮವಾಗಿದೆ.

7. ಮತ್ತಾ. ೨೨. ೩೪. ವಚನದ ವ್ಯಾಖ್ಯಾನ ನೋಡ ಬೇಕು.

8. ಕ್ರಿಸ್ತನು ಆಗಾಗ್ಯೆ ವೇದವಾಕ್ಯಗಳಿಂದ ಉತ್ತರ ಹೇಳಿದ ಪ್ರಕಾರ, ಈಗಲೂ ಅದರಿಂದಲೇ ಉತ್ತರ ಬರುವಂತೆ ಅವನನ್ನು ಪ್ರಶ್ನೆ ಮಾಡಿದನು. (ಮಾರ್ಕ. ೧೨. ೨೮—೩೧.) ಅವನು ಆ ಕಟ್ಟಳೆಗಳನ್ನು ಚನ್ನಾಗಿ ತಿಳಿದವನಾಗಿದ್ದರೂ, ಅವುಗಳನ್ನು ಸರಿಯಾಗಿ ಕೈಕೊಂಡವನಲ್ಲ. ನೆರೆಯವನು ಯಾರೆಂದು ಅವನು ಕೇಳಿದ್ದರಿಂದ ಅನ್ಯ ಜನಾಂಗಗಳವರನ್ನು ಪ್ರೀತಿ ಮಾಡ ಬೇಕೆಂದು ಅವನು ನೆನಸಲಿಲ್ಲವೆಂದು ತೋರುತ್ತದೆ.



೨೮ (ದ್ವಿತೀಯ ನ್ಯಾ. ೬. ೫. ಲೇವಿ. ೧೯. ೧೮.) ಅಂದನು. ಅವನು ಅವನಿಗೆ, ಸರಿಯಾಗಿ ಉತ್ತರ ಕೊಟ್ಟೆ;
ಇದನ್ನು ಮಾಡಿದರೆ, ಬದುಕುವಿ, ಅಂದನು.
೨೯ ಆದರೆ ಅವನು, ತಾನು [1]ನೀತಿವಂತನು ಅನ್ನಿಸಿ ಕೊಳ್ಳ ಬೇಕೆಂದು, ಯೇಸುವಿಗೆ, ಹಾಗಾದರೆ ನನ್ನ ನೆರೆಯ
ವನು ಯಾರು? ಅಂದನು.
೩೦ ಅದಕ್ಕೆ ಯೇಸು ಹೇಳಿದ್ದೇನಂದರೆ, ಒಬ್ಬ ಮನುಷ್ಯನು, ಯೆರೂಸಲೇಮಿನಿಂದ [2]ಯೆರಿಕೋವಿಗೆ ಇಳಿದು
ಹೋಗುವಾಗ, ಕಳ್ಳರೊಳಗೆ ಬಿದ್ದನು. ಇವರು ಅವನ ವಸ್ತ್ರಗಳನ್ನು ತೆಗೆದು, ಪೆಟ್ಟು ಹೊಡೆದು, ಅವನನ್ನು
೩೧ ಅರೆಪ್ರಾಣದಲ್ಲಿ ಬಿಟ್ಟು ಹೋದರು. ಆಗ ಅಕಸ್ಮಾತ್ತಾಗಿ ಆ ಮಾರ್ಗದಲ್ಲಿ ಒಬ್ಬ ಯಾಜಕನು ಇಳಿದು
೩೨ ಹೋಗುವಾಗ, ಅವನನ್ನು ನೋಡಿ, ವಾರೆಯಾಗಿ ಹೋದನು. ಅದೇ ಪ್ರಕಾರ ಒಬ್ಬ ಲೇವ್ಯನು ಆ ಸ್ಥಳಕ್ಕೆ
೩೩ ಸೇರಿ, ಬಂದು, ನೋಡಿ, ವಾರೆಯಾಗಿ ಹೋದನು. ಆದರೆ [3]ಒಬ್ಬ ಸಮಾರ್ಯನು ಪ್ರಯಾಣವಾಗಿ ಅವನ
೩೪ ಹತ್ತರ ಬಂದು, ಅವನನ್ನು ನೋಡಿ, ಅಂತಃಕರಣ ಪಟ್ಟು, ಹತ್ತರ ಹೋಗಿ, ಅವನ ಘಾಯಗಳಲ್ಲಿ ಎಣ್ಣೆ
ಯನ್ನೂ [4]ದ್ರಾಕ್ಷೇ ರಸವನ್ನೂ ಹೊಯಿದು, ಕಟ್ಟಿ, ಅವನನ್ನು ಸ್ವಂತ ವಾಹನದ ಮೇಲೆ ಏರಿಸಿ, ಛತ್ರಕ್ಕೆ ಅವ
೩೫ ನನ್ನು ತಕ್ಕೊಂಡು ಹೋಗಿ, ಅವನನ್ನು ಪರಾಮರಿಸಿದನು. ಮಾರಣೇ ದಿವಸದಲ್ಲಿ ಅವನು ಹೊರಟು
ಹೋಗುವಾಗ, ಎರಡು [5]ಹಣಗಳನ್ನು ತೆಗೆದು ಕೊಂಡು, ಛತ್ರದವನಿಗೆ ಕೊಟ್ಟು, ಅವನಿಗೆ ಹೇಳಿದ್ದೇನಂದರೆ,
ಇವನನ್ನು ಪರಾಮರಿಸು; ಮತ್ತು ನೀನು ಹೆಚ್ಚು ಏನಾದರೂ ವೆಚ್ಚ ಮಾಡಿದರೆ, ನಾನು ತಿರಿಗಿ ಬರುವಾಗ,
೩೬ ನಿನಗೆ ಕೊಡುತ್ತೇನೆ. ಆದದರಿಂದ ಈ ಮೂವರಲ್ಲಿ ಯಾವನು ಕಳ್ಳರೊಳಗೆ ಬಿದ್ದವನಿಗೆ ನೆರೆಯವನಾಗಿದ್ದ
ನೆಂದು ನಿನಗೆ ಕಾಣುತ್ತದೆ?
೩೭ ಇವನು, ಅವನಿಗೆ ಕರುಣೆ ತೋರಿಸಿದವನೇ, ಅಂದನು. ಆದದರಿಂದ ಯೇಸು ಅವನಿಗೆ, [6]ನೀನು ಹೋಗಿ,
ಅದೇ ಪ್ರಕಾರ ಮಾಡು, ಅಂದನು.

1. ಕರ್ತನು ಹೇಳಿದ ಮಾತನ್ನು ಕೇಳಿ, ಆಶ್ಚರ್ಯ ಪಟ್ಟು, ಯೆಹೂದ್ಯರ ಅಭಿಪ್ರಾಯದ ಪ್ರಕಾರವೇ "ನೆರೆಯವನು" ಎಂಬ ಪದಕ್ಕೆ ಅರ್ಥ ಹೇಳುವನೇನೋ ಎಂದು ನೆನಸಿ, ನನ್ನ ನೆರೆಯವನು ಯಾರೆಂದು ಕೇಳಿದನು. (ಮತ್ತಾ. ೫. ೪೩. ವಚನದ ವ್ಯಾಖ್ಯಾನ ನೋಡ ಬೇಕು.) ಆತನು ಆ ಮಾತಿಗೆ ಅರ್ಥ ಹೇಳಿದರೆ, ತಾನು ತಪ್ಪಿಸಿ ಕೊಳ್ಳ ಬಹುದೆಂದು ನೆನಸಿದನು. ಆದರೆ ಕರ್ತನು ಸಮಾರ್ಯನನ್ನು ಕುರಿತ ಈ ಒಳ್ಳೇ ಸಾಮ್ಯವನ್ನು ಹೇಳಿದಾಗ, ಅವನು ಆ ವಿಷಯದಲ್ಲಿ ನೆರೆಯವನನ್ನು ಪ್ರೀತಿ ಮಾಡಿದವನಲ್ಲವೆಂಬ ದೋಷ ಅವನ ಮೇಲೆ ಬಂತು.

2. (ಮತ್ತಾ. ೨೦. ೨೯. ವಚನದ ವ್ಯಾಖ್ಯಾನ ನೋಡ ಬೇಕು.) ಯೆರೂಸಲೇಮಿನಿಂದ ಯೆರಿಕೋವಿಗೆ ಇಳಿದು ಹೋಗುವ ಮಾರ್ಗವು ಇಳಿಜಾರಾಗಿಯೂ, ಕಳ್ಳರು ಅಡಗಿರ ತಕ್ಕ ಗುಡ್ಡಗಳೂ ಹಳ್ಳಗಳೂ ಉಳ್ಳದ್ದಾಗಿಯೂ ಇತ್ತು. ಇದಕ್ಕೆ ಜೆರೋಮ್ ಎಂಬವನು ರಕ್ತದ ಮಾರ್ಗವೆಂದು ಹೆಸರಿಟ್ಟಿದ್ದಾನೆ. ಯೆರಿಕೋ ಪಟ್ಣದಲ್ಲಿ ಯಾಜಕರು ಅನೇಕರು ವಾಸಿಸುತ್ತಾ ಇದ್ದರು.

3. ಯೆಹೂದ್ಯರಿಗೂ ಸಮಾರ್ಯರಿಗೂ ತೀರದ ಹಗೆಯುಂಟು. (ಲೂಕ. ೯. ೫೨, ೫೩.) ಕಳ್ಳರ ಕೈಯಲ್ಲಿ ಬಿದ್ದು, ಎಲ್ಲವನ್ನು ಕೊಳ್ಳೆ ಕೊಟ್ಟು, ಅರೆಪ್ರಾಣವಾಗಿ ಬಿದ್ದಿದ್ದ ಶತ್ರುವಾದ ಯೆಹೂದ್ಯನಿಗೆ ಕನಿಕರ ತೋರಿಸಿ, ಉಪಕಾರ ಮಾಡಿದ ಉತ್ತಮನಾದ ಈ ಸಮಾರ್ಯನ ದೃಷ್ಟಾಂತದಿಂದ ಆಪ್ತಬಾಂಧವನೂ, ಕೃಪಾಸಾಗರನೂ ಆದ ಕ್ರಿಸ್ತನ ಅಪಾರ ಕರುಣೆಯು ತೋರಿಸಲ್ಪಟ್ಟದೆ. ಆ ಮಾರ್ಗವಾಗಿ ಹೋದ ಯಾಜಕನೂ ಲೇವ್ಯನೂ ಎಂಬ, ದೇವರ ವಾಕ್ಯವನ್ನೂ ಆತನ ಕರುಣೆಯನ್ನೂ ತಿಳಿದ ಇಬ್ಬರು ಗೃಹಸ್ಥರು, ಅವನು ತಮಗೆ ನೆರೆಯವನಲ್ಲವೆಂದೂ, ಮಾರ್ಗದಲ್ಲಿ ತಾಮಸ ಮಾಡಿದರೆ, ಅವನಿಗೆ ಬಂದ ಆಪತ್ತು ತಮಗೂ ಸಂಭವಿಸುವದೆಂದೂ, ಅವನಿಗೆ ಬಹಳ ಘಾಯಗಳಾಗಿರುವದರಿಂದ, ತಾವು ನೋಡಿದರೂ ಫಲವಾಗಲಾರದೆಂದೂ, ನಾನಾ ನೆವಗಳನ್ನು ಎಣಿಸಿ, ಅವನನ್ನು ಕರುಣಿಸದೆ ಹೋದರು. ಧರ್ಮಿಷ್ಠನಾದ ಆ ಸಮಾರ್ಯನು ಇಂಥಾ ನೆವಗಳೇನೂ ಎಣಿಸದೆ, ಆಪತ್ತಿಗೆ ಅಂಜದೆ, ಆ ಬಡವನಿಗೆ ಉಪಕಾರ ಮಾಡುವದೇ ಧರ್ಮವೆಂದು ನೆನಸಿ, ಹಾಗೆಯೇ ನಡೆದು ಕೊಂಡನು.

4. ಪ್ರಯಾಣಿಕರು ಎಣ್ಣೆಯನ್ನೂ ದ್ರಾಕ್ಷೇ ರಸವನ್ನೂ ಕೈಯಲ್ಲಿ ತೆಗೆದು ಕೊಂಡು ಹೋಗುವ ಪದ್ಧತಿಯುಂಟು. (ಉತ್ಪ. ೨೮. ೧೮. ಯೆಹೋಶು. ೯. ೧೩.) ಇವುಗಳನ್ನು ಹುಣ್ಣುಗಳಿಗೂ ಘಾಯಗಳಿಗೂ ಪ್ರಯೋಗಿಸುವದುಂಟು. (ಯೆಶಾ. ೧. ೬.) ಹುಣ್ಣನ್ನು ತೊಳೆಯುವದಕ್ಕೆ ದ್ರಾಕ್ಷೇ ರಸವನ್ನೂ, ಮಾಯಿಸುವದಕ್ಕೆ ಎಣ್ಣೆಯನ್ನೂ ಉಪಯೋಗಿಸುವರು.

5. ಮತ್ತಾ. ೨೦. ೨. ವಚನದ ವ್ಯಾಖ್ಯಾನ ನೋಡ ಬೇಕು.

6. "ನೆರೆಯವನು ಯಾರು?" ಎಂದು ಕೇಳಿದ ಶಾಸ್ತ್ರಿಗೆ ಕರ್ತನು ಕೊಟ್ಟ ಉತ್ತರವು ಎಷ್ಟು ಆಶ್ಚರ್ಯವಾದದ್ದು! ಸಂಕಟದಲ್ಲಿ ಶಿಕ್ಕಿ ಬಿದ್ದಿದ್ದ ಆ ದಿಕ್ಕಿಲ್ಲದವನಿಗೆ ಕರುಣೆ ತೋರಿಸಿದ ನೆರೆಯವನು ಸಮಾರ್ಯನೆಂದು, ಶಾಸ್ತ್ರಿಯು ನೆಟ್ಟಗೆ ಹೇಳದೆ ಇದ್ದಾಗ್ಯೂ, ಅವನೇ ಎಂದು ಸತ್ಯವನ್ನು ಒಪ್ಪಿ ಕೊಂಡನು. ಸಂಗಡಲೇ ಕರ್ತನು, ನೀನೂ ಅವನ ಹಾಗೆಯೇ ಸದ್ಗುಣವುಳ್ಳವನಾಗಿ ನಡೆದರೆ, ನೀನು ಮೋಕ್ಷರಾಜ್ಯವನ್ನು ಹೊಂದುವಿ ಎಂದು ಬೋಧಿಸಿದನು. ಇದು, ದುಷ್ಟ ಪಿಶಾಚನ ಕೈಯಲ್ಲಿಯೂ, ಪಾಪದ ದಾಸತ್ವ

೩೮ ಅವನನ್ನು ಕೇಳಿದಾಗ, ಅವನು ಒಳಗೆ ಹೋಗಿ, ಕೂತು ಕೊಂಡನು. ಆದರೆ ಫರಿಸಾಯನು, ಅವನು
೩೯ [1]ಊಟಕ್ಕೆ ಮುಂಚೆ ತೊಳಕೊಳ್ಳಲಿಲ್ಲವೆಂದು ನೋಡಿ, ಆಶ್ಚರ್ಯ ಪಟ್ಟನು. ಆಗ ಕರ್ತನು ಅವನಿಗೆ ಹೇಳಿದ್ದು,
ಈಗ [2]ಫರಿಸಾಯರಾದ ನೀವು ಪಂಚಪಾತ್ರೆ ಬಟ್ಲುಗಳ ಹೊರಗಡೆಯನ್ನು ಶುಚಿ ಮಾಡುತ್ತೀರಿ; ಆದರೆ ನಿಮ್ಮ
೪೦ ಒಳಗಡೆಯು ಸುಲಿಗೆಯಿಂದಲೂ ಕೆಟ್ಟತನದಿಂದಲೂ ತುಂಬಿ ಅದೆ. [3]ಬುದ್ಧಿಹೀನರೇ! ಹೊರಗಿನದನ್ನು ಮಾಡಿ
೪೧ ದವನು ಒಳಗಿನದನ್ನು ಸಹ ಮಾಡಲಿಲ್ಲವೋ? ಆದಾಗ್ಯೂ [4]ಉಂಟಾದವುಗಳಲ್ಲಿ ಧರ್ಮ ಕೊಡಿರಿ; ಆಗ,
ಇಗೋ, ಎಲ್ಲಾ ನಿಮಗೆ ಶುಚಿಯಾಗಿರುವದು.
೪೨ ಆದರೆ ಫರಿಸಾಯರಾದ ನಿಮಗೆ ಅಯ್ಯೋ! ಯಾಕಂದರೆ ಮರಗುಪತ್ರೆ ಸೋಮಲತೆ ಮೊದಲಾದ ಸಕಲ
ಪಲ್ಯಗಳಲ್ಲಿ ಹತ್ತರಲ್ಲೊಂದು ಕೊಟ್ಟು, ನ್ಯಾಯತೀರ್ವಿಕೆಯನ್ನೂ ದೇವರ ಪ್ರೀತಿಯನ್ನೂ ಬಿಟ್ಟು ಹೋಗು
ತ್ತೀರಿ. [5]ಅವುಗಳನ್ನು ಬಿಡದೆ, ಇವುಗಳನ್ನು ಮಾಡ ಬೇಕಾಗಿತ್ತು.
೪೩ ಫರಿಸಾಯರಾದ ನಿಮಗೆ ಅಯ್ಯೋ! ಯಾಕಂದರೆ ಸಭೆಮನೆಗಳಲ್ಲಿ ಮೊದಲನೇ ಪೀಠವನ್ನೂ, ಅಂಗಡಿ
೪೪ ಬೀದಿಗಳಲ್ಲಿ ವಂದನೆಗಳನ್ನೂ ಆಶಿಸುತ್ತೀರಿ. ವಂಚಕರಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅಯ್ಯೋ!
ಯಾಕಂದರೆ [6]ಮರೆಯಾಗಿರುವ ಸಮಾಧಿಗಳ ಹಾಗಿದ್ಧೀರಿ; ಅವುಗಳ ಮೇಲೆ ತಿರುಗಾಡುವ ಮನುಷ್ಯರಿಗೆ
ಅವು ತಿಳಿಯದೆ ಇರುವವು.
೪೫ ಆಗ ನ್ಯಾಯಶಾಸ್ತ್ರಿಗಳಲ್ಲಿ ಒಬ್ಬನು ಪ್ರತ್ಯುತ್ತರ ಕೊಟ್ಟು, ಅವನಿಗೆ, ಬೋಧಕನೇ, ಇವುಗಳನ್ನು ಹೇಳಿ,
ನಮ್ಮನ್ನು ಸಹ ನಿಂದಿಸುತ್ತೀ, ಅಂದಾಗ;
೪೬ ಅವನು ಹೇಳಿದ್ದೇನಂದರೆ, ನ್ಯಾಯಶಾಸ್ತ್ರಿಗಳಾದ ನಿಮಗೂ ಅಯ್ಯೋ! ಯಾಕಂದರೆ ನೀವು ಮನುಷ್ಯರ
ಮೇಲೆ ಹೊರಲಾರದ ಹೊರೆಗಳನ್ನು ಹೊರಿಸಿ, ನೀವು ನಿಮ್ಮ ಬೆರಳುಗಳಲ್ಲಿ ಒಂದರಿಂದಾದರೂ ಆ ಹೊರೆಗ
ಳನ್ನು ಮುಟ್ಟುವದಿಲ್ಲ.
೪೭ ನಿಮಗೆ ಅಯ್ಯೋ! ಯಾಕಂದರೆ ಪ್ರವಾದಿಗಳ ಸಮಾಧಿಗಳನ್ನು ಕಟ್ಟುತ್ತೀರಿ; ಆದರೆ ನಿಮ್ಮ ತಂದೆಗಳು ಅವ
೪೮ ರನ್ನು ಕೊಂದು ಹಾಕಿದರು. ಹೀಗಿರುವದರಿಂದ ನಿಮ್ಮ ತಂದೆಗಳ ಕ್ರಿಯೆಗಳಿಗೆ ಸಾಕ್ಷಿ ಕೊಟ್ಟು, ಸಮ್ಮತಿಸು
ತ್ತೀರಿ; ಹ್ಯಾಗಂದರೆ ಅವರು ಅವರನ್ನು ಕೊಂದು ಹಾಕಿದರು; ಆದರೆ ನೀವು ಅವರ ಸಮಾಧಿಗಳನ್ನು ಕಟ್ಟಿಸುತ್ತೀರಿ.
೪೯ ಆದದರಿಂದ [7]ದೇವರ ಜ್ಞಾನವು ಹೇಳಿದ್ದೇನಂದರೆ, ನಾನು ಅವರಿಗೆ ಪ್ರವಾದಿಗಳನ್ನೂ ಅಪೊಸ್ತಲರನ್ನೂ ಕಳು
೫೦ ಹಿಸುವೆನು; ಅವರಲ್ಲಿ ಕೆಲವರನ್ನು ಕೊಂದು ಹಾಕಿ, ಹಿಂಸಿಸುವರು. ಹೀಗೆ ಹೇಬೆಲನ ರಕ್ತ ಮೊದಲಾಗಿ
೫೧ ಬಲಿಪೀಠಕ್ಕೂ ಮಂದಿರಕ್ಕೂ ಮಧ್ಯದಲ್ಲಿ ಸಂಹರಿಸಲ್ಪಟ್ಟ ಜಕರೀಯನ ರಕ್ತದ ಪರ್ಯಂತರ ಜಗದುತ್ಪತ್ತಿ
ಮೊದಲ್ಗೊಂಡು ಚೆಲ್ಲಲ್ಪಟ್ಟ ಪ್ರವಾದಿಗಳೆಲ್ಲರ ರಕ್ತವು ಈ ಸಂತತಿಯಿಂದ ಕೇಳಲ್ಪಡುವದು. ಹೌದು, ನಿಮಗೆ
ಹೇಳುತ್ತೇನೆ, ಆದು [8]ಈ ಸಂತತಿಯಿಂದ ಕೇಳಲ್ಪಡುವದು.

1. ಊಟಕ್ಕೆ ಮುಂಚೆ ಕೈಗಳನ್ನು ಚನ್ನಾಗಿ ತೊಳಕೊಳ್ಳುವದು ಫರಿಸಾಯರ ಪದ್ಧತಿಯು. (ಮಾರ್ಕ. ೭. ೩. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.) ಅದನ್ನು ಅವರು ಒಂದು ವ್ಯರ್ಥ ಆಚಾರವಾಗಿ ಮಾಡಿದ್ದರಿಂದ ಕ್ರಿಸ್ತನು ಅದನ್ನು ಅನುಸರಿಸಲಿಲ್ಲವೆಂದು ತೋರುತ್ತದೆ.

2. ೩೯—೫೨. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೩. ಸಂಧಿಯ ವ್ಯಾಖ್ಯಾನದಲ್ಲಿ ನೋಡ ಬೇಕು.

3. ದೇವರು ಮನುಷ್ಯನನ್ನು ಆತ್ಮವೂ ದೇಹವೂ ಉಳ್ಳವನಾಗಿ ಸೃಷ್ಟಿಸಿದ್ದಾನೆ. ಆದದರಿಂದ ಹೊರಗಿನ ಶರೀರಕರ್ಮಗಳನ್ನು ಪೂರೈಸಿ, ಆತ್ಮರಕ್ಷಣೆಯ ಉದ್ದಿಶ್ಯ ಭಕ್ತಿಯ ವೃದ್ಧಿಗೆ ತಕ್ಕ ಮುಖ್ಯ ಕಾರ್ಯಗಳನ್ನು ಮಾಡದೆ ಇರುವದು ಬುದ್ಧಿಹೀನತ್ವವೆಂಬುವದಕ್ಕೆ ಸಂದೇಹವಿಲ್ಲ.

4. ನೀವು ನಿಮ್ಮ ಹೃದಯವನ್ನೇ ಕರ್ತನಿಗೆ ತಕ್ಕ ಕಾಣಿಕೆ ... ಹಾಗೆ ಧರ್ಮ ಮಾಡಿರಿ ಎಂದೂ ಈ ವಚನದ ಅಭಿಪ್ರಾಯವಾಗಬಹುದು. ಆ ಕಾಲದ ಯೆಹೂದ್ಯರಲ್ಲಿ ದ್ರವ್ಯಾಶೆ ಅಧಿಕವಾಗಿದ್ದದರಿಂದ ಕರ್ತನು ಆಗಾಗ್ಯೆ ಅವರಿಗೆ ಧರ್ಮ ಮಾಡ ಬೇಕೆಂದು ಆಜ್ಞಾಪಿಸಿದನು. (೧೨. ೩೩; ೧೬. ೧೪.) ಹೀಗೆ ದೇವರ ಕೃಪೆಯಿಂದ ಪಾಪದ ಪಾಶಗಳನ್ನು ಹರಿದು ಬಿಸಾಡುವವರು ಭಕ್ತಿಯಲ್ಲಿಯೂ ಪರಿಶುದ್ಧತ್ವದಲ್ಲಿಯೂ ಬೆಳೆಯುವರು.

5. ಒಂದು ಕೆಲಸವನ್ನು ಅಲಕ್ಷ್ಯ ಮಾಡಿ ತಳ್ಳುವದಕ್ಕೆ ಇನ್ನೊಂದು ಕೆಲಸವನ್ನು ಮಾಡುವದರಿಂದ ನೆವವಾಗಿರಲಾರದು.

6. ಈ ಉಪಮಾನವು ಮತ್ತಾ. ೨೩. ೨೭ಲ್ಲಿ ಬರುತ್ತದೆ. ಆ ಸ್ಥಳದಲ್ಲಿ ಫರಿಸಾಯರ ಹೊರಗಿನ ಡಂಭವನ್ನೂ, ಇಲ್ಲಿ ಅವರ ಅಂತರ್ಯದ ದುರ್ಗುಣವನ್ನೂ ತೋರಿಸಿ ಹೇಳಲ್ಪಟ್ಟದೆ.

7. ಇದು ೨ ದಿನಚ. ೨೪. ೧೮—೨೨. ವಾಕ್ಯಗಳ ತಾತ್ಪರ್ಯಕ್ಕೆ ಸ್ವಲ್ಪ ಸಮವಾಗಿದೆ. (ಮತ್ತಾ. ೨೩. ೩೪.)



೫೨ ನ್ಯಾಯಶಾಸ್ತ್ರಿಗಳಾದ ನಿಮಗೆ ಅಯ್ಯೋ! ಯಾಕಂದರೆ [1]ತಿಳುವಿಕೆಯ ಬೀಗದ ಕೈ ತೆಗೆದು ಬಿಟ್ಟಿದ್ಧೀರಿ;
ನೀವು ಪ್ರವೇಶಿಸಲಿಲ್ಲ, ಮತ್ತು ಪ್ರವೇಶಿಸುವವರನ್ನು ತಡೆದಿರಿ.
೫೩ ಅವನು ಇವುಗಳನ್ನು ಅವರಿಗೆ ಹೇಳುವಾಗ, ಶಾಸ್ತ್ರಿಗಳೂ ಫರಿಸಾಯರೂ ಅವನನ್ನು ಬಹಳವಾಗಿ ದಣಿಸಿ,
೫೪ ಅನೇಕವಾದವುಗಳ ವಿಷಯ [2]ಮಾತಾಡಿಸಲಾರಂಭಿಸಿ, ಅವನ ಮೇಲೆ ದೂರು ಹೇಳುವ ಹಾಗೆ ಅವನ
ಬಾಯಿಯೊಳಗಿಂದ ಏನಾದರೂ ಹಿಡಿಯ ಹುಡುಕಿ, ಅವನಿಗೋಸ್ಕರ ಹೊಂಚಿ ನೋಡಿದರು.

ಕ್ರಿಸ್ತನು ಕಪಟವನ್ನು ಕುರಿತು ತನ್ನ ಶಿಷ್ಯರಿಗೆ ಎಚ್ಚರಿಸಿದ್ದು; ಕ್ರಿಸ್ತನನ್ನು ಅರಿಕೆ ಮಾಡುವವರಿಗೆ ಧೈರ್ಯ ಹೇಳಿದ್ದು.

12. [3]ಅಷ್ಟರಲ್ಲಿ ಸಮೂಹದ ಸಾವಿರಗಳು ಒಬ್ಬರನ್ನೊಬ್ಬರು ತುಳಿಯುವ ಹಾಗೆ ಕೂಡಿ ಬಂದಿರಲಾಗಿ, ಅವನು
ಮೊದಲು ತನ್ನ ಶಿಷ್ಯರಿಗೆ ಹೇಳಲಾರಂಭಿಸಿದ್ದೇನಂದರೆ, [4]ಫರಿಸಾಯರ ಹುಳಿ ಎಂಬ ಕಪಟಕ್ಕೆ ಎಚ್ಚರಿಕೆಯಾ
೨ ಗಿರ್ರಿ. ಆದರೆ [5]ಪ್ರಕಟವಾಗಲಿರದ ಮರೆಯಾದದ್ದೂ, ತಿಳಿಯಲ್ಪಡಲಿರದ ಅಂತರಂಗವಾದದ್ದೂ, ಒಂದೂ ಇಲ್ಲ.
೩ ಹೀಗಿರುವದರಿಂದ ನೀವು ಕತ್ತಲೆಯಲ್ಲಿ ಹೇಳಿದ್ದೆಲ್ಲಾ ಬೆಳಕಿನಲ್ಲಿ ಕೇಳ ಬರುವದು; ಮತ್ತು ನೀವು ಕೊಠಡಿಗ
ಳಲ್ಲಿ ಕಿವಿಯಲ್ಲಿ ಮಾತಾಡಿದ್ದು ಮಾಳಿಗೆಗಳ ಮೇಲೆ ಸಾರಲ್ಪಡುವದು.
೪ ಆದರೆ ನಾನು ನನ್ನ ಸ್ನೇಹಿತರಾದ ನಿಮಗೆ ಹೇಳುವದೇನಂದರೆ, ಶರೀರವನ್ನು ಕೊಂದು, ಆ ಮೇಲೆ ಅಧಿಕ
೫ ವಾದದ್ದೇನಾದರೂ ಮಾಡಲಾರದವರಿಗೆ ಭಯ ಪಡ ಬೇಡಿರಿ. ಆದರೆ ಯಾರಿಗೆ ಭಯ ಪಡ ಬೇಕೋ,
ನಿಮಗೆ ತೋರಿಸುತ್ತೇನೆ; ಕೊಂದು ಹಾಕಿದ ಮೇಲೆ ನರಕದಲ್ಲಿ ಹಾಕುವದಕ್ಕೆ ಅಧಿಕಾರ ಉಂಟಾದವನಿಗೆ
೬ ಭಯ ಪಡಿರಿ; ಹೌದು, ನಿಮಗೆ ಹೇಳುತ್ತೇನೆ, ಅವನಿಗೆ ಭಯ ಪಡಿರಿ. ಐದು ಗುಬ್ಬಿಗಳನ್ನು ಎರಡು
ಕಾಸಿಗೆ ಮಾರುವದಿಲ್ಲವೋ? ಆದಾಗ್ಯೂ ಅವುಗಳಲ್ಲಿ ಒಂದಾದರೂ ದೇವರ ಮುಂದೆ ಮರೆತು ಹೋದದ್ದಲ್ಲ.
೭ ಇದಲ್ಲದೆ ನಿಮ್ಮ ತಲೇ ಕೂದಲುಗಳೆಲ್ಲಾ ಸಹ ಲೆಖ್ಖ ಮಾಡಲ್ಪಟ್ಟವೆ. ಹೀಗಿರುವದರಿಂದ ಭಯ ಪಡ ಬೇಡಿರಿ;
ಬಹಳ ಗುಬ್ಬಿಗಳಿಗಿಂತ ಹೆಚ್ಚಾಗಿದ್ಧೀರಿ.
೮ ಇದಲ್ಲದೆ ನಿಮಗೆ ಹೇಳುತ್ತೇನೆ, [6]ಮನುಷ್ಯರ ಮುಂದೆ ನನ್ನನ್ನು ಅರಿಕೆ ಮಾಡುವವನ್ಯಾವನೋ, ಅವನನ್ನು
೯ ಮನುಷ್ಯನ ಮಗನು ಸಹ ದೇವದೂತರ ಮುಂದೆ ಅರಿಕೆ ಮಾಡುವನು. ಆದರೆ ಮನುಷ್ಯರ ಮುಂದೆ
ನನ್ನನ್ನು ಬೊಂಕುವವನು ದೇವದೂತರ ಮುಂದೆ ಬೊಂಕಲ್ಪಡುವನು.

1. ಮತ್ತಾ. ೨೩. ೧೩. ವಚನದ ವ್ಯಾಖ್ಯಾನ ನೋಡ ಬೇಕು.

2. ಅಕಟವಿಕಟವಾದ ಪ್ರಶ್ನೆಗಳಿಂದಲೂ, ವ್ಯರ್ಥವಾದ ಆಕ್ಷೇಪಣೆಗಳಿಂದಲೂ, ವಿಪರೀತವಾದ ಅರ್ಥಗಳಿಂದಲೂ, ಹಾಸ್ಯದ ಮಾತುಗಳಿಂದಲೂ, ಆತನನ್ನು ತೊಂದರೆಗೊಳಿಸಿ, ಆತನ ಮಾತುಗಳಲ್ಲಿ ಏನಾದರೂ ತಪ್ಪು ಕಂಡು ಹಿಡಿಯ ಬೇಕೆಂದು ಯತ್ನಯಿಸಿದರು. ಆದರೆ ಆತನಲ್ಲಿ ಒಂದು ತಪ್ಪನ್ನಾದರೂ ಕಂಡು ಹಿಡಿಯಲಿಲ್ಲ.

3. "ಅಷ್ಟರಲ್ಲಿ" ಎಂಬುವದು ಆ ಕಾರ್ಯಗಳು ನಡಿಯುವ ಸಮಯದಲ್ಲಿ ಎಂಬ ಅರ್ಥವಾಗುತ್ತದೆ. ಇದು ಆತನು ಫರಿಸಾಯನ ಮನೆಯಲ್ಲಿ ಊಟ ಮಾಡಿದಾಗ, ಅಥವಾ ಆತನು ತನ್ನ ಊಳಿಗವನ್ನು ಈಡೇರಿಸಿದಾಗ ಸಂಭವಿಸಿದವುಗಳನ್ನು ಕುರಿತದ್ದಾಗಿದೆ. ಕರ್ತನ ಬೋಧನೆಯನ್ನು ಕೇಳಿದ ಜನರು ಬಹಳವಾಗಿ ಆತನ ಬಳಿಗೆ ಕೂಡಿ ಬಂದರು. ೧ನೇ ವಚನವನ್ನು ನೋಡುವಾಗ ಆತನು ಫರಿಸಾಯರ ಸಂಗಡ ಮಾಡಿದ ಸಂಭಾಷಣೆಯನ್ನು ಕುರಿತು ಹೇಳಲ್ಪಟ್ಟಂತೆ ತೋರುತ್ತದೆ. (೧೧. ೩೭—೫೪.) ಸರ್ವಾಂತರ್ಯಾಮಿಯಾಗಿರುವ ದೇವರ ಮುಂದೆ ಮನಸ್ಸಿನಲ್ಲಿ ಒಂದು ಪ್ರಕಾರ, ಮಾತಿನಲ್ಲಿ ಒಂದು ಪ್ರಕಾರ ನಡಿಯದೆ, ಯಥಾರ್ಥವಾಗಿ ... (೧—೭.) ತನ್ನನ್ನು ಅರಿಕೆ ಮಾಡುವವರಿಗೆ ಸಂತೋಷವೂ, ಹಾಗೆ ಅರಿಕೆ ಮಾಡದೆ, ಸೈತಾನನ ಸಹಾಯದಿಂದ ಆತನು ಅದ್ಭುತಗಳನ್ನು ಮಾಡಿದನೆಂದು ಹೇಳಿದ ದುರ್ಮಾರ್ಗರಿಗೆ ಉಪದ್ರವೂ ಬರುವದೆಂದು ಹೇಳಿದನು. (೮—೧೦.) ಮತ್ತು ಎಲ್ಲಾ ಸಮಯಗಳಲ್ಲಿಯೂ, ಆಪತ್ಕಾಲದಲ್ಲಿಯೂ, ತನ್ನ ಭಕ್ತರು ಪರಿಶುದ್ಧಾತ್ಮನ ಕೃಪೆಯನ್ನು ಕೋರಿ ನಡಿಯ ಬೇಕೆಂದು ಆಜ್ಞಾಪಿಸಿದನು. (೧೧, ೧೨. ವ.)

4. ಸ್ವಲ್ಪ ಹುಳಿಹಿಟ್ಟು ತನ್ನ ಹುಳಿಯನ್ನು ಮಿಕ್ಕ ಹಿಟ್ಟಿನಲ್ಲೆಲ್ಲಾ ವ್ಯಾಪಿಸ ಮಾಡುವ ಪ್ರಕಾರ, ಕೆಟ್ಟ ದುರ್ಗುಣವಾದ ಕಪಟವು ಮನುಷ್ಯನ ಸುಗುಣಗಳನ್ನೆಲ್ಲಾ ಕೆಡಿಸಿ ಬಿಡುವದು.

5. ೨—೯. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೦. ೨೬—೩೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

6. ಕ್ರಿಸ್ತನೇ ಸಮಸ್ತವನ್ನು ಸೃಷ್ಟಿಸಿ ಆಳುವವನಾಗಿಯೂ, ಸರ್ವ ಸೃಷ್ಟಿಗಳಿಂದಲೂ ವಂದಿಸಲ್ಪಡುವವನಾಗಿಯೂ ಇದ್ಧಾನೆಂದು, ಲೋಕದವರ ಮುಂದೆ ಧೈರ್ಯವಾಗಿ ಅರಿಕೆ ಮಾಡುವ ಉ...

೧೦ ಮತ್ತು [1]ಮನುಷ್ಯನ ಮಗನಿಗೆ ವಿರೋಧವಾಗಿ ಮಾತು ಹೇಳುವವನ್ಯಾವನೋ, ಅವನಿಗೆ ಮನ್ನಿಸಲ್ಪಡು
ವದು; ಆದರೆ ಪರಿಶುದ್ಧಾತ್ಮವನ್ನು ದೂಷಿಸಿದವನಿಗೆ ಮನ್ನಿಸಲ್ಪಡದು.
೧೧ ಇದಲ್ಲದೆ ಅವರು ನಿಮ್ಮನ್ನು [2]ಸಭೆಮನೆಗಳಿಗೂ ಅಧಿಪತಿಗಳ ಅಧಿಕಾರಿಗಳ ಬಳಿಗೂ ತಕ್ಕೊಂಡು ಹೋಗು
ವಾಗ, ಉತ್ತರ ಕೊಡುವದು ಹ್ಯಾಗೋ? ಏನೋ? ಏನು ಹೇಳ ಬೇಕೋ? ಎಂದು ಚಿಂತೆ ಪಡ ಬೇಡಿರಿ.
೧೨ ಯಾಕಂದರೆ ಪರಿಶುದ್ಧಾತ್ಮವು, ಆ ತಾಸಿನಲ್ಲಿ ನೀವು ಹೇಳ ಬೇಕಾದವುಗಳನ್ನು ನಿಮಗೆ ಬೋಧಿಸುವದು.

ಕ್ರಿಸ್ತನು ದ್ರವ್ಯಾಶೆಯನ್ನು ಖಂಡಿಸಿದ್ದು; ಯಥಾರ್ಥತ್ವ, ವಿಶ್ವಾಸ, ಎಚ್ಚರಿಕೆ ಎಂಬುವ ಸದ್ಗುಣಗಳ
ವಿಷಯವಾಗಿ ಬೋಧಿಸಿದ್ದು.

೧೩ ಆಗ ಸಮೂಹದಲ್ಲಿ ಒಬ್ಬನು ಅವನಿಗೆ, ಬೋಧಕನೇ, ನನ್ನ ಸಹೋದರನಿಗೆ, ನನ್ನ ಸಂಗಡ ಬಾಧ್ಯತೆಯನ್ನು
೧೪ ಪಾಲಿಡ ಬೇಕೆಂದು ಹೇಳು, ಅಂದಾಗ; ಅವನಿಗೆ, ಮನುಷ್ಯನೇ, ನನ್ನನ್ನು ನಿಮ್ಮ ಮೇಲೆ [3]ನ್ಯಾಯಾಧಿಪತಿ
ಯಾಗಿಯೂ ಹಂಚುವವನಾಗಿಯೂ ಇಟ್ಟವನ್ಯಾರು? ಅಂದನು.
೧೫ ಮತ್ತು ಅವರಿಗೆ ಹೇಳಿದ್ದೇನಂದರೆ, ಲೋಭಕ್ಕೆ ನೋಡಿ ಕೊಂಡು, ಎಚ್ಚರಿಕೆಯಾಗಿರ್ರಿ. ಯಾಕಂದರೆ ಒಬ್ಬ
ನಿಗೆ ಐಶ್ವರ್ಯ ಹೆಚ್ಚುವಾಗ, ಅವನ [4]ಜೀವವು ಅವನ ಆಸ್ತಿಯಿಂದ ಉಂಟಾಗುವದಿಲ್ಲ.
೧೬ ಮತ್ತು ಅವರಿಗೆ ಸಾಮ್ಯವನ್ನು ಹೇಳಿದನು; ಏನಂದರೆ, ಐಶ್ವರ್ಯವಂತನಾದ ಒಬ್ಬ ಮನುಷ್ಯನ ಭೂಮಿಯು
೧೭ ಚನ್ನಾಗಿ ಫಲಿಸಿತು. ಆಗಲವನು, ನಾನೇನು ಮಾಡಲಿ? ಯಾಕಂದರೆ ನನ್ನ ಫಲಗಳನ್ನು ಕೂಡಿಸಿಡುವ
೧೮ ದಕ್ಕೆ ನನಗೆ ಸ್ಥಳವಿಲ್ಲವೆಂದು, ತನ್ನೊಳಗೆ ಆಲೋಚಿಸಿ ಕೊಂಡನು. ಮತ್ತು ಇದನ್ನು ಮಾಡುತ್ತೇನೆ, ನನ್ನ
ಕಣಜಗಳನ್ನು ತೆಗೆದು ಹಾಕಿ, ಅವುಗಳಿಗಿಂತ ದೊಡ್ಡವುಗಳನ್ನು ಕಟ್ಟಿಸುತ್ತೇನೆ; ಮತ್ತು ಅಲ್ಲಿ ನನ್ನ ಬೆಳೆಗಳ
೧೯ ನ್ನೆಲ್ಲಾ, [5]ನನ್ನ ಆಸ್ತಿಯನ್ನೆಲ್ಲಾ ಕೂಡಿಸಿಡುತ್ತೇನೆ. ಮತ್ತು ನನ್ನ ಪ್ರಾಣಕ್ಕೆ, ಪ್ರಾಣವೇ, ಅನೇಕ ವರುಷ
ಗಳಿಗೆ ನಿನಗೆ ಬಹಳ ಆಸ್ತಿ ಇಟ್ಟದೆ; ವಿಶ್ರಮಿಸಿಕೋ; ಉಣ್ಣು, ಕುಡಿ, ಆನಂದವಾಗಿರು, ಎಂದು ಹೇಳು
೨೦ ತ್ತೇನೆ, ಅಂದನು. ಆದರೆ ದೇವರು ಅವನಿಗೆ, ಬುದ್ಧಿಹೀನನೇ, [6]ಈ ರಾತ್ರಿ ನಿನ್ನ ಪ್ರಾಣವನ್ನು ನಿನ್ನಿಂದ ಕೇಳು

1. ಮತ್ತಾ. ೧೨. ೩೧, ೩೨. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಮತ್ತಾ. ೧೦. ೧೯. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

3. ಪರಮ ಗುರುವು ಬೋಧಿಸುತ್ತಿರುವಾಗ ಆತನು ಹೇಳಿದ ಪರಮ ಭಾಗ್ಯವನ್ನು ಕುರಿತು ನಿಶ್ಚಿಂತೆಯಾಗಿದ್ದ ಒಬ್ಬ ಮನುಷ್ಯನು ಆತನಿಗೆ ತಡೆ ಮಾಡಿ, ಲೋಕದ ಆಸ್ತಿಯನ್ನು ಹಂಚುವ ವಿಷಯವಾಗಿ, ತನಗೂ ತನ್ನ ಸಹೋದರನಿಗೂ ಸಂಭವಿಸಿರುವ ವ್ಯಾಜ್ಯವನ್ನು ತೀರಿಸ ಬೇಕೆಂದು ಬೇಡಿ ಕೊಂಡನು. ಅದಕ್ಕೆ ಕರ್ತನು ಈ ವಚನದಲ್ಲಿರುವ ಉತ್ತರ ಕೊಟ್ಟನು. ಧೊರೆತನಕ್ಕೆ ಸಮ್ಮಂಧಪಟ್ಟ ವ್ಯಾಜ್ಯಗಳನ್ನು ತೀರಿಸುವದೂ, ದೇಶದಲ್ಲಿ ಪ್ರಮಾಣಗಳನ್ನು ಏರ್ಪಡಿಸುವದೂ, ದಾಯಾದಿಗಳ ವ್ಯಾಜ್ಯಗಳನ್ನು ಹರಿಸುವದೂ ಆತನ ಕೆಲಸವಲ್ಲ. ಪ್ರೀತಿಯ ಪ್ರಮಾಣವನ್ನು ಸಾರುವದೂ, ಮನುಷ್ಯರಲ್ಲಿ ಸ್ವಾಭಾವಿಕವಾಗಿರುವ ದ್ರವ್ಯಾಶೆಯನ್ನು ಖಂಡಿಸುವದೂ, ಪರಲೋಕದ ಭಾಗ್ಯವು ಶಾಶ್ವತವಾದದ್ದೆಂದು ಪ್ರಸಂಗಿಸುವದೂ, ಇದೇ ಆತನು ಈಡೇರಿಸ ಬೇಕಾದ ದಿವ್ಯ ಕೆಲಸವಾಗಿತ್ತು. ಮನುಷ್ಯರು ಕಡೆತೇರುವದಕ್ಕೆ ದೊಡ್ಡ ಅಭ್ಯಂತರವಾಗಿರುವ ದ್ರವ್ಯಾಶೆ ಎಂಬ ಪಾಪವನ್ನು ಖಂಡಿಸುವದಕ್ಕೆ ಕರ್ತನು ಮುಂದೆ ಬರುವ ಸಾಮ್ಯವನ್ನು ಹೇಳಿದನು. ಲೌಕಿಕ ದ್ರವ್ಯದ ಮೇಲೆ ಪೂರ್ಣ ಮನಸ್ಸಿಡುವವರು ಪರಮ ಭಾಗ್ಯವನ್ನು ಕುರಿತು ಚಿಂತೆ ಇಲ್ಲದೆ ಇರುವರು ಎಂಬುವದನ್ನೂ, ಲೋಕದ ಭಾಗ್ಯವು ಎಷ್ಟು ಪರಿಮಿತವಾಗಿ ಇದ್ದಾಗ್ಯೂ, ಅದರಿಂದ ಆತ್ಮಿಕ ಭಾಗ್ಯವೂ ಸುಖವೂ ದೊರಕಲಾರದೆಂಬುವದನ್ನೂ, ಈ ಸಾಮ್ಯದಿಂದ ತಿಳಿದು ಕೊಳ್ಳ ಬೇಕು.

4. ಬಹಳ ಐಶ್ವರ್ಯದಿಂದ ಶರೀರದ ಜೀವ ಬದುಕುವದು ಕಷ್ಟವಾದರೆ, ಅದರಿಂದ ಆತ್ಮದ ಜೀವವನ್ನೂ ನಿತ್ಯಜೀವವನ್ನೂ ಹೊಂದುವದು ಅಸಾಧ್ಯವು. ಐಶ್ವರ್ಯವುಳ್ಳವರು ಅದು ಶಾಶ್ವತವಾದದ್ದೆಂದು ನಂಬಿ ಕೊಂಡು ಆಗಾಗ್ಯೆ ಆತ್ಮವನ್ನು ಕೊಳ್ಳೆ ಕೊಡುತ್ತಾರೆ.

5. ನನ್ನ ಧಾನ್ಯಗಳೆಂದೂ, ನನ್ನ ಕಣಜಗಳೆಂದೂ, ನನ್ನ ಆಸ್ತಿಎಂದೂ, ಅವನು ಎಲ್ಲಾ ತನ್ನ ಸ್ವಂತವೆಂದು ಹಿಗ್ಗಿದನೇ ಹೊರ್ತು, ಅವುಗಳನ್ನೆಲ್ಲಾ ದಯಪಾಲಿಸಿದ ಕೃಪೆಯುಳ್ಳ ದೇವರನ್ನು ಸ್ವಲ್ಪವಾದರೂ ತನ್ನ ಮನಸ್ಸಿನಲ್ಲಿ ಎಣಿಸಲಿಲ್ಲ. ಸೃಷ್ಟಿಕರ್ತನನ್ನು ಮರೆತು, ಸೃಷ್ಟಿಸಲ್ಪಟ್ಟ ವಸ್ತುಗಳನ್ನು ದೇವರೆಂದು ಆರಾಧಿಸಿದ ದ್ರೋಹಿಯು. ಅವನು ತನ್ನ ಭೂಮಿಯು ಹೇರಳವಾಗಿ ಬೆಳೆದು, ತನ್ನ ಬದುಕು ಹೆಚ್ಚಿದಾಗ, ದಯಾಳನಾದ ದೇವರಿಗೆ ಏನು ಕೊಡುವ? ಹಸಿವೆಯಿಂದಲೂ ಬಡತನದಿಂದಲೂ ಕಷ್ಟ ಪಡುವ ನನ್ನ ಬಡ ಸಹೋದರರಿಗೆ ಏನು ಧರ್ಮ ಕೊಡುವ? ಎಂದು, ಅವನು ಒಂದೂ ಚಿಂತಿಸಲಿಲ್ಲ.

6. ದೊಡ್ಡ ಕಣಜಗಳನ್ನು ಕಟ್ಟಿ, ಅನೇಕ ವರುಷಗಳಿಗೆ ಬಹಳ ಧಾನ್ಯಗಳನ್ನು ಶೇರಿಸಿ ಇಟ್ಟು ಕೊಂಡ ಬುದ್ಧಿವಂತನು ಬುದ್ಧಿಹೀನನಾಗುತ್ತಾನೆ. ಅನೇಕ ವರುಷಗಳು ಬದುಕುವೆನೆಂದು ನೆನಸಿದವನ ಪ್ರಾಣವು ಆ ರಾತ್ರಿಯಲ್ಲಿಯೇ ಹೋಗುತ್ತದೆ. ಮತ್ತು ಅವನು ಸಂಪಾದಿಸಿ, ನಂಬಿ ಕೊಂಡ ಆಸ್ತಿಯಲ್ಲಿ ಸ್ವಲ್ಪವಾದರೂ ಅವನು ತಕ್ಕೊಂಡು ಹೋಗ ಕೂಡದು. ಎಲ್ಲವನ್ನು ಬಿಟ್ಟು ಹೋಗ ಬೇಕು.



೨೧ ವರು; ಆಗ ನೀನು ಸಿದ್ಧ ಮಾಡಿದವುಗಳು ಯಾರಿಗಾಗುವವು? ಅಂದನು. [1]ತನಗೆ ದ್ರವ್ಯ ಇಟ್ಟು ಕೊಂಡು,
ದೇವರ ವಿಷಯವಾಗಿ ಐಶ್ವರ್ಯವಂತನಾಗದೆ ಇರುವವನು ಹೀಗೆ.
೨೨ ಮತ್ತು ಅವನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ, ಇದಕ್ಕೋಸ್ಕರ ನಿಮಗೆ ಹೇಳುತ್ತೇನೆ, ನೀವು ನಿಮ್ಮ [2]ಪ್ರಾಣ
ಕ್ಕೆ, ಏನು ಉಣ್ಣುವ? ಎಂದೂ, ನಿಮ್ಮ ಶರೀರಕ್ಕೆ, ಏನು ಹೊದ್ದು ಕೊಳ್ಳುವ? ಎಂದೂ, ಚಿಂತೆ ಪಡ ಬೇಡಿರಿ.
೨೩, ೨೪ ಆಹಾರಕ್ಕಿಂತ ಪ್ರಾಣವು, ವಸ್ತ್ರಕ್ಕಿಂತ ಶರೀರವು, ಹೆಚ್ಚಾಗಿದೆ. [3]ಕಾಗೆಗಳನ್ನು ಯೋಚಿಸಿರಿ; ಅವು
ಬಿತ್ತುವದಿಲ್ಲ, ಕೊಯ್ಯುವದಿಲ್ಲ, ಅವುಗಳಿಗೆ ಉಗ್ರಾಣವೂ ಕಣಜವೂ ಇಲ್ಲ; ಆದಾಗ್ಯೂ ದೇವರು ಅವು
೨೫ ಗಳನ್ನು ಸಾಕುತ್ತಾನೆ. ಪಕ್ಷಿಗಳಿಗಿಂತ ನೀವು ಎಷ್ಟೋ ಹೆಚ್ಚಾಗಿದ್ಧೀರಿ! ಇದಲ್ಲದೆ ನಿಮ್ಮಲ್ಲಿ ಯಾವನು
೨೬ ಚಿಂತೆ ಪಟ್ಟು, ತನ್ನ ನೀಳಕ್ಕೆ ಒಂದು ಮೊಳವನ್ನು ಹೆಚ್ಚು ಮಾಡ ಬಲ್ಲನು? ಹಾಗಾದರೆ ಬಹಳ ಸಣ್ಣದು
೨೭ ಸಹ ನಿಮ್ಮಿಂದ ಆಗದೆ ಹೋದರೆ, ಮಿಕ್ಕಾದವುಗಳಿಗೋಸ್ಕರ ನೀವು ಚಿಂತೆ ಪಡುವದೇನು? ಹೂವುಗಳು
ಹ್ಯಾಗೆ ಬೆಳಿಯುತ್ತವೆಂದು ಯೋಚಿಸಿರಿ. ಅವು ಕಷ್ಟ ಪಡುವದಿಲ್ಲ, ನೇಯುವದಿಲ್ಲ; ಆದಾಗ್ಯೂ ಸೊಲೊ
ಮೋನನು ಸಹ ತನ್ನ ಸಮಸ್ತ ಮಹಿಮೆಯಲ್ಲಿ ಇವುಗಳಲ್ಲಿ ಒಂದರ ಹಾಗೆ ಹೊದ್ದು ಕೊಳ್ಳಲಿಲ್ಲವೆಂದು,
೨೮ ನಿಮಗೆ ಹೇಳುತ್ತೇನೆ. ಹಾಗಾದರೆ ಈ ಹೊತ್ತು ಇದ್ದು, ನಾಳೆ ಒಲೆಗೆ ಹಾಕಲ್ಪಡುವ ಹೊಲದ ಹುಲ್ಲನ್ನು
ದೇವರು ಈ ಪ್ರಕಾರ ಹೊದ್ದಿಸಿದರೆ, ಎಷ್ಟೋ ಹೆಚ್ಚಾಗಿ ನಿಮ್ಮನ್ನು ಹೊದ್ದಿಸುವನು, ಅಲ್ಪ ವಿಶ್ವಾಸಿಗಳೇ!
೨೯, ೩೦ ಮತ್ತು ಏನು ಉಣ್ಣುವ? ಏನು ಕುಡಿಯುವ? ಎಂದು ಹುಡುಕದೆ, [4]ಸಂಶಯ ಪಡದೆ, ಇರ್ರಿ. ಯಾಕಂದರೆ
ಇವುಗಳನ್ನೆಲ್ಲಾ ಲೋಕದ ಜನಾಂಗಗಳು ಹುಡುಕುತ್ತವೆ; ಆದರೆ ಅವು ನಿಮಗೆ ಬೇಕೆಂದು, ನಿಮ್ಮ ತಂದೆಗೆ
೩೧ ತಿಳಿದದೆ. ಆದರೆ ದೇವರ ರಾಜ್ಯವನ್ನು ಹುಡುಕಿರಿ; ಆಗ ಇವೆಲ್ಲಾ ನಿಮಗೆ ಕೂಡಿಡಲ್ಪಡುವವು.
೩೨ [5]ಚಿಕ್ಕ ಮಂದೆಯೇ, ಭಯ ಪಡ ಬೇಡಿರಿ; ಯಾಕಂದರೆ ರಾಜ್ಯವನ್ನು ನಿಮಗೆ ಕೊಡುವದಕ್ಕೆ, ನಿಮ್ಮ ತಂ
೩೩ ದೆಗೆ ಸುಚಿತ್ತವುಂಟು. ನಿಮಗುಂಟಾದವುಗಳನ್ನು [6]ಮಾರಿ ಬಿಟ್ಟು, ಧರ್ಮ ಕೊಡಿರಿ. ಹಳೇವಾಗದ ಚೀಲಗ
ಳನ್ನೂ ನಿರಂತರವಾದ ದ್ರವ್ಯವನ್ನೂ ಪರಲೋಕದಲ್ಲಿ ನಿಮಗೆ ಉಂಟು ಮಾಡಿ ಕೊಳ್ಳಿರಿ. ಅಲ್ಲಿ ಕಳ್ಳನು ಸಮೀ
೩೪ ಪಕ್ಕೆ ಬರುವದಿಲ್ಲ, [7]ನುಸಿಯು ಕೆಡಿಸುವದಿಲ್ಲ. ಯಾಕಂದರೆ ನಿಮ್ಮ ದ್ರವ್ಯವು ಎಲ್ಲಿಯೋ, ಅಲ್ಲಿ ನಿಮ್ಮ ಹೃದ
ಯವು ಸಹ ಇರುವದು.
೩೫, ೩೬ ನಿಮ್ಮ ನಡುವು ಕಟ್ಟಲ್ಪಟ್ಟಿರಲಿ; ನಿಮ್ಮ ದೀಪಗಳು ಉರಿಯುತ್ತಾ ಇರಲಿ. ಮತ್ತು ನೀವು ಮದುವೆ
ಯಿಂದ ಬರುವ ತಮ್ಮ ಕರ್ತನಿಗೋಸ್ಕರ, ಅವನು ಬಂದು ತಟ್ಟುವಾಗ, ಅವನಿಗೆ ಬೇಗ ತೆರೆಯುವ ಹಾಗೆ,
೩೭ ಕಾದು ಕೊಂಡಿರುವ ಮನುಷ್ಯರಿಗೆ ಸಮಾನವಾಗಿರ್ರಿ. ಕರ್ತನು ಬಂದು, ಯಾರನ್ನು ಎಚ್ಚರವಾಗಿ ಕಂಡು
ಕೊಳ್ಳುವನೋ, ಆ ದಾಸರು ಭಾಗ್ಯವಂತರು. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಅವನು ನಡು ಕಟ್ಟಿ

1. ದ್ರವ್ಯಾಶೆಯುಳ್ಳವರ ಕಥೆ ಹೀಗೆಯೇ ಮುಗಿಯುತ್ತದೆ. ಅವರು ಓಡ್ಯಾಡಿ ಸಂಪಾದಿಸಿದ ದ್ರವ್ಯವೆಲ್ಲಾ ವ್ಯರ್ಥವಾಗಿ ಹೋಗುತ್ತದೆ. ಮತ್ತು ನಾಶವಾಗದ ಅವರ ಆತ್ಮವು ಪರಮ ಗತಿ ಹೊಂದದೆ, ಎಂದೆಂದಿಗೂ ನಾಶವಾಗುವದು. ಆದದರಿಂದ ನಮ್ಮ ಬೊಕ್ಕಸಗಳನ್ನು ಈ ಭೂಮಿಯಲ್ಲಿ ಶೇರಿಸಿಡದೆ, ಪರಲೋಕದಲ್ಲಿ ಶೇರಿಸಿ ಇಡುವವರಾಗಿರ ಬೇಕು.

2. ೨೨—೩೧. ವಚನಗಳ ವ್ಯಾಖ್ಯಾನವನ್ನು ಮತ್ತಾ. ೬. ೨೫—೩೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ಅಲ್ಪ ಜೀವಿಗಳೆಂದು ಮನುಷ್ಯರು ಅಲಕ್ಷ್ಯ ಮಾಡುವ ಪಕ್ಷಿಗಳಾದ ಕಾಗೆಗಳನ್ನು ಕುರಿತು ದೇವರು ಚಿಂತಿಸುತ್ತಾನೆ. (ಯೋಬ. ೩೮. ೪೧. ಕೀರ್ತ. ೧೪೭. ೯.)

4. ತೆರೆಗಳುಳ್ಳ ಸಮುದ್ರದಲ್ಲಿ ತೇಲುವ ಹಡಗವು ನೆಲೆಯಾಗಿ ನಿಲ್ಲದೆ, ಅಲ್ಲಿಗೂ ಇಲ್ಲಿಗೂ ಚಲಿಸುವ ಪ್ರಕಾರ ನಿಮ್ಮ ಮನಸ್ಸು ಸಂದೇಹದಿಂದಲೂ, ಅಪನಂಬಿಕೆಯಿಂದಲೂ, ಚಲಿಸ ಕೂಡದೆಂದು ಹೇಳಿದನು.

5. ಒಳ್ಳೇ ಕುರುಬನಾಗಿರುವ ಕ್ರಿಸ್ತನ ಮಂದೆಯು ಚಿಕ್ಕದ್ದಾಗಿಯೂ, ಲೋಕದವರ ದೃಷ್ಟಿಗೆ ಅಲ್ಪವಾಗಿಯೂ ಇದ್ದರೂ, ಪರಲೋಕರಾಜ್ಯವು ಅವರಿಗೆ ಸ್ವಂತವಾಗಿದೆ. (೩೧. ವ.) ಪರಮ ಚಿಂತೆಯೂ, ಜಾಗ್ರತೆಯೂ, ಎಚ್ಚರಿಕೆಯೂ ಉಳ್ಳ, ಉತ್ತಮ ದಾಸರಿಗೆ ಅದನ್ನು ದಯಪಾಲಿಸುವದೇ ದೇವರ ನಿರ್ಣಯವು. (೩೩—೪೦.)

6. ಮತ್ತಾ. ೬. ೧೯. ವಚನದ ವ್ಯಾಖ್ಯಾನ ನೋಡ ಬೇಕು.

7. ಅದು ಕೊರತೆಯಾಗದಂಥಾ, ಎಂದಿಗೂ ನಾಶವಾಗದಂಥಾ ಬೊಕ್ಕಸದ ಹಾಗೆ ಪರಲೋಕದಲ್ಲಿ ಭದ್ರವಾಗಿರುವದು.

೪ ಇದ್ದರೆ, ನೀವೆಲ್ಲರು ಹಾಗೆಯೇ [1]ನಾಶವಾಗಿ ಹೋಗುವಿರಿ. ಇಲ್ಲವೆ [2]ಸಿಲೋವಮಿನಲ್ಲಿರುವ ಗೋಪುರವು
ಬಿದ್ದು, ಕೊಂದು ಹಾಕಿದ ಆ ಹದಿನೆಂಟು ಮಂದಿ ಯೆರೂಸಲೇಮಿನಲ್ಲಿ ವಾಸ ಮಾಡುವ ಮನುಷ್ಯರೆಲ್ಲರಿ
೫ ಗಿಂತ ಅಪರಾಧಿಗಳಾಗಿದ್ದರೆಂದು ನೆನಸುತ್ತೀರೋ? ಅಲ್ಲವೆಂದು ನಿಮಗೆ ಹೇಳುತ್ತೇನೆ; ಆದರೆ ಮಾನಸಾಂ
ತರ ಪಡದೆ ಇದ್ದರೆ, ನೀವೆಲ್ಲರು ಹಾಗೆಯೇ ನಾಶವಾಗಿ ಹೋಗುವಿರಿ.

೬ ಮತ್ತು ಅವರಿಗೆ ಹೇಳಿದ [3]ಸಾಮ್ಯವೇನಂದರೆ, ಒಬ್ಬನಿಗೆ ತನ್ನ ದ್ರಾಕ್ಷೇ ತೋಟದಲ್ಲಿ ನೆಟ್ಟ ಅಂಜೂರದ
೭ ಮರವಿತ್ತು; ಅವನು ಬಂದು, ಅದರಲ್ಲಿ ಫಲ ಹುಡುಕಿದಾಗ, ಶಿಕ್ಕಲಿಲ್ಲ. ಆಗ ತೋಟದವನಿಗೆ, ಇಗೋ,
[4]ಮೂರು ವರುಷದಿಂದ ನಾನು ಬಂದು, ಈ ಅಂಜೂರದ ಮರದಲ್ಲಿ ಫಲ ಹುಡುಕಿ, ಕಂಡು ಕೊಳ್ಳಲಿಲ್ಲ;
೮ ಅದನ್ನು ಕಡಿದು ಬಿಡು; ಯಾಕೆ [5]ಭೂಭಾರವಾಗಿದೆ? ಅನ್ನಲು; ಅವನು ಪ್ರತ್ಯುತ್ತರವಾಗಿ, ಅಯ್ಯಾ, ನಾನು
೯ ಅದರ ಸುತ್ತಲು ಅಗಿದು, ಗೊಬ್ಬರ ಹಾಕುವ ಪರ್ಯಂತರ, ಈ ವರುಷಕ್ಕೂ ಅದನ್ನು ಬಿಡು; ಫಲ ಫಲಿಸಿ
ದರೆ, ಸರಿ; ಇಲ್ಲದಿದ್ದರೆ, ಆ ಮೇಲೆ ಅದನ್ನು ಕಡಿದು ಹಾಕ ಬಹುದೆಂದು, ಅವನಿಗೆ ಹೇಳಿದನು.

ಕ್ರಿಸ್ತನು ಸಬ್ಬತಿನಲ್ಲಿ ಒಬ್ಬ ರೋಗಿಷ್ಠಳನ್ನು ಗುಣ ಮಾಡಿದ್ದಕ್ಕಾಗಿ ಶತ್ರುಗಳು ಹೊರಿಸಿದ ಅಪರಾಧವನ್ನು ಪರಿಹರಿಸಿದ್ದು; ಸಾಸಿವೆಕಾಳು, ಹುಳಿಹಿಟ್ಟು, ಇವುಗಳನ್ನು ಕುರಿತ ಸಾಮ್ಯಗಳು.

೧೦, ೧೧ ಇದಲ್ಲದೆ ಅವನು ಸಬ್ಬತಿನಲ್ಲಿ ಒಂದು ಸಭೆಮನೆಯಲ್ಲಿ ಬೋಧಿಸುತ್ತಿರಲಾಗಿ, ಇಗೋ, ಹದಿನೆಂಟು ವರು
ಷದಿಂದ [6]ರೋಗದ ಆತ್ಮವುಳ್ಳ ಒಬ್ಬ ಸ್ತ್ರೀಯು; ಅವಳು ಬೊಗ್ಗಿ ಕೊಂಡು, ಎಂದಾದರೂ ಮೈ ಎತ್ತಲಾರದೆ
೧೨ ಇದ್ದಳು. ಯೇಸು ಅವಳನ್ನು ನೋಡಿ, ಹತ್ತರ ಕರೆದು, ಸ್ತ್ರೀಯೇ, ನಿನ್ನ ರೋಗದಿಂದ ಬಿಡುಗಡೆಯಾದಿ,

1. ಆ ಗಲಿಲಾಯರು ಭಯಂಕರ ವಿಧವಾಗಿ ನಾಶವಾದದ್ದು ಹ್ಯಾಗೆ ನಿಶ್ಚಯವೋ, ಹಾಗೆಯೇ ಗುಣ ಪಡದ ಪಾಪಿಗಳೂ ಭಯಂಕರ ವಿಧವಾಗಿ ನಾಶವಾಗುವದು ನಿಶ್ಚಯವು. ತಾವು ಒಳ್ಳೆಯವರೆಂದೂ, ಪಿಲಾತನಿಂದ ಕೊಲ್ಲಲ್ಪಟ್ಟ ಗಲಿಲಾಯದವರು ಮಹಾ ಪಾತಕರೆಂದೂ ಎಣಿಸಿದವರಿಗೆ ಇದು ಒಳ್ಳೇ ಪ್ರಸಂಗವಾಗಿದೆ. ರಕ್ಷಕನು ಹೇಳಿದ ಪ್ರಕಾರ ಅನೇಕ ಸಹಸ್ರ ಯೆಹೂದ್ಯರು ದೇವಾಲಯದಲ್ಲಿ ಬಲಿಗಳನ್ನು ಅರ್ಪಿಸುತ್ತಿರುವಾಗ, ರೋಮಾಯರಿಂದ ಸಂಹರಿಸಲ್ಪಟ್ಟು, ನಾಶವಾದರು. ಗುಣ ಪಡದ ಪಾಪಿಷ್ಠರಿಗೆ ಈ ಲೋಕದಲ್ಲಿ ಅಂಥಾ ನಾಶ ಸಂಭವಿಸದೆ ಇದ್ದರೂ, ಮತ್ತೊಂದು ಲೋಕದಲ್ಲಿ ನಿತ್ಯನಾಶನ ಬರುವದಕ್ಕೆ ಸಂದೇಹವಿಲ್ಲ.

2. ಇದು ಯೆರೂಸಲೇಮು ಪಟ್ಣದಲ್ಲಿರುವ ಸಿಲೋವಮಿನ ಕೊಳಕ್ಕೆ ಸಮೀಪದಲ್ಲಿರುವ ಒಂದು ಕೊಳವಾಗಿರುವದು. (ನೆಹೇಮಿ. ೩. ೧೫. ಯೋಹಾ. ೯. ೭.) ಅವರು ಹೇಳಿದ ಸಂಗತಿಯ ಹಾಗೆ ರಕ್ಷಕನು ಸಹ ಒಂದು ಸಂಗತಿಯನ್ನು ಹೇಳಿದನು. ಈ ಎರಡು ಆಪತ್ತುಗಳಲ್ಲಿಯೂ ಶಿಕ್ಕಿ ನಾಶವಾದವರು ಮಹಾ ಪಾಪಿಷ್ಠರು; ನಮಗೆ ಇಂಥಾ ಆಪತ್ತು ಸಂಭವಿಸದೆ ಇದ್ದದರಿಂದ, ನಾವು ಅಷ್ಟು ಪಾಪಿಷ್ಠರಲ್ಲವೆಂದು ನೆನಸಿದರೆ, ಮೋಸ ಹೋಗುವಿರಿ; ನೀವು ಸಹ ಗುಣ ಪಡದೆ ಇದ್ದರೆ, ಅಂಥಾ ನಾಶವೇ ನಿಮಗೂ ಬರುವದೆಂದು ಹೇಳಿದನು.

3. ಆ ಕಾಲದಲ್ಲಿದ್ದ ಯೆಹೂದ್ಯರ ಹಾಗೆಯೂ, ಈ ಕಾಲದಲ್ಲಿರುವ ಅನೇಕ ಜನರ ಹಾಗೆಯೂ, ನಾನಾ ವಿಧ ಆಶೀರ್ವಾದಗಳನ್ನು ಹೊಂದಿದವರು, ತಾವು ದೇವರ ಕೃಪೆಯನ್ನು ವಿಶೇಷ ವಿಧವಾಗಿ ಹೊಂದಿದವರೆಂದೂ, ತಮಗೆ ಯಾವ ಅಭ್ಯಂತರವಾದರೂ ಕಷ್ಟವಾದರೂ ಸಂಭವಿಸಲಾರದೆಂದೂ, ಹೆಚ್ಚಳ ಪಡುವವರ ಹೆಚ್ಚಳವು ಈ ಸಾಮ್ಯದಿಂದ ವ್ಯರ್ಥವಾಗುವದೆಂದು ತೋರಿಸುತ್ತಾನೆ. ಅವರು ಹೊಂದಿ ಅನುಭವಿಸುವ ಆಶೀರ್ವಾದಗಳು ಕರುಣೆಯುಳ್ಳ ದೇವರ ಉಚಿತವಾದ ದಾನವೆಂದೂ, ಆತನ ದೀರ್ಘಶಾಂತಿಯು ಒಂದು ಕಾಲದಲ್ಲಿ ನಿಂತು ಹೋಗುವದೆಂದೂ, ಅದನ್ನು ಆಲೋಚಿಸದೆ ನಡಿಯುವ ಪಾಪಿಷ್ಠರಿಗೆ ಕಡೆಯಲ್ಲಿ ಹೆಚ್ಚಾದ ದಂಡನೆ ಪ್ರಾಪ್ತಿಸುವದೆಂದೂ ಈ ಸಾಮ್ಯದಿಂದ ತಿಳಿದು ಕೊಳ್ಳ ಬಹುದು.

4. ಅಂಜೂರ ಮರವನ್ನು ನೆಟ್ಟ ಮೂರು ವರುಷಗಳೊಳಗೆ ಫಲ ಕೊಡುವದುಂಟು.

5. ಇದು ಭೂಮಿಯನ್ನು ಮುಚ್ಚಿ ಕೊಂಡಿರುವದು ಮಾತ್ರವಲ್ಲದೆ ಅದನ್ನು ಕೆಡಿಸುತ್ತಾ ಇರುವದು. ಅದು ಭೂಮಿಯ ಸಾರವನ್ನು ಹೀರಿ ಕೊಂಡು, ಅದನ್ನು ನಿಸ್ಸಾರ ಮಾಡುವದು. ಮತ್ತು ಆ ಮರದ ನಿಷ್ಫಲವಾದ ದುಸ್ಸಾರವು ಭೂಮಿಯಲ್ಲಿ ವ್ಯಾಪಿಸಿ, ಅದನ್ನು ಕೆಡಿಸುವದು. ಈ ದ್ರಾಕ್ಷೇ ತೋಟದ ಯಜಮಾನನು ಮಹೋನ್ನತನಾದ ದೇವರೇ. ದ್ರಾಕ್ಷೇ ತೋಟವೇ ಯೆಹೂದ್ಯರ ಸಭೆಯು. ಅಂಜೂರದ ಮರವು ಆ ಸಭೆಗೆ ಶೇರಿದವರು. ಫಲವು ಸದ್ಗುಣ, ಸತ್ಕ್ರಿಯೆಗಳೇ. ತೋಟದವನು ನಮ್ಮ ಕಾರ್ಯಕರ್ತನಾದ ಕ್ರಿಸ್ತನೇ. ಗೊಬ್ಬರವು ಅವರು ಫಲ ಕೊಡುವಂತೆ ದೇವರ ಕೃಪೆಯಿಂದಾಗುವ ಅನುಕೂಲಗಳೇ. ಹಾಗೆ ಅವರು ಫಲ ಕೊಡದೆ ಹೋದದರಿಂದ ದೇವರ ಉಗ್ರ ಕೋಪಕ್ಕೊಳಗಾದರು. ದೇವರ ಜನರಾದ ಅವರಿಗೆ ಇಂಥಾ ನಾಶ ಬಂದರೆ, ಗುಣ ಪಡದ ಪಾಪಿಷ್ಠರಿಗೆ ಅಯ್ಯೋ! ಎಂಥಾ ನಾಶ ಬರುವದೋ!

6. ಯೋಬನಿಗೆ ದುಷ್ಟ ಸೈತಾನನಿಂದ ಉಪದ್ರ ಸಂಭವಿಸಿದ ಪ್ರಕಾರ ಇವಳಿಗೂ ಅವನಿಂದ (೧೬. ವ.) ಬಲಹೀನ ಪ್ರಾಪ್ತಿಯಾಯಿತು. (ಯೋಬ. ೨. ೭.) ಆದರೆ ಕ್ರಿಸ್ತನು ಅವಳನ್ನು ಬಲಹೀನ ಮಾಡಿದ ದೆವ್ವಗಳನ್ನು ಹೊರಡಿಸಿದನೆಂದು ಹೇಳದೆ ಇರುವದರಿಂದ ಅವಳು ದೆವ್ವ ಹಿಡಿದವಳಲ್ಲವೆಂದು ತೋರುತ್ತದೆ.



೧೩ ಎಂದು ಅವಳಿಗೆ ಹೇಳಿ, ಕೈಗಳನ್ನು ಅವಳ ಮೇಲೆ ಇಟ್ಟನು. ಸಂಗಡಲೇ ಅವಳು ನೆಟ್ಟಗಾಗಿ, ದೇವರನ್ನು
ಮಹಿಮೆ ಪಡಿಸಿದಳು.
೧೪ ಆಗ [1]ಸಭೆಮನೆಯ ಯಜಮಾನನು, ಯೇಸು ಸಬ್ಬತಿನಲ್ಲಿ ಸ್ವಸ್ಥ ಮಾಡಿದ್ದರಿಂದ ಕೋಪ ಮಾಡಿ, ಸಮೂ
ಹಕ್ಕೆ, ಕೆಲಸ ಮಾಡ ತಕ್ಕ ಆರು ದಿವಸಗಳುಂಟು; ಆದದರಿಂದ ಅವುಗಳಲ್ಲಿ ಬಂದು, ಸ್ವಸ್ಥ ಮಾಡಿಸಿ ಕೊಳ್ಳಿರಿ;
ಸಬ್ಬತ್ ದಿವಸದಲ್ಲಿ ಬೇಡ, ಅಂದನು.
೧೫ ಅವನಿಗೆ ಕರ್ತನು ಉತ್ತರ ಕೊಟ್ಟು, ಹೇಳಿದ್ದೇನಂದರೆ, [2]ಕಪಟಸ್ಥನೇ, ನಿಮ್ಮಲ್ಲಿ ಒಬ್ಬೊಬ್ಬನು ಸಬ್ಬತಿನಲ್ಲಿ ತನ್ನ
ಎತ್ತನ್ನಾದರೂ ಕತ್ತೆಯನ್ನಾದರೂ ಗೋದಲಿಯಿಂದ ಬಿಚ್ಚಿ, ತಕ್ಕೊಂಡು ಹೋಗಿ, ಕುಡಿಸುವದಿಲ್ಲವೇ?
೧೬ ಆದರೆ ಅಬ್ರಹಾಮನ ಮಗಳಾಗಿಯೂ, ಇಗೋ, ಹದಿನೆಂಟು ವರುಷ ಸೈತಾನನಿಂದ ಬಂಧಿಸಲ್ಪಟ್ಟವಳಾ
ಗಿಯೂ ಇರುವ ಇವಳನ್ನು ಈ ಬಂಧದಿಂದ [3]ಸಬ್ಬತ್ ದಿವಸದಲ್ಲಿ ಬಿಡಿಸ ಬಾರದೋ?
೧೭ ಇವುಗಳನ್ನು ಅವನು ಹೇಳುವಾಗ, ಅವನ ಎದುರಾಳಿಗಳೆಲ್ಲರು ನಾಚಿಕೆ ಪಟ್ಟರು; ಮತ್ತು ಸಮೂಹವೆಲಾ
ಅವನಿಂದಾದ ಎಲ್ಲಾ ಮಹಾ ಕ್ರಿಯೆಗಳಿಗೆ ಸಂತೋಷ ಪಟ್ಟರು.
೧೮ ಇದಲ್ಲದೆ [4]ಅವನು ಹೇಳಿದ್ದೇನಂದರೆ, ದೇವರ ರಾಜ್ಯವು ಯಾವದಕ್ಕೆ ಸಮಾನವಾಗಿದೆ? ಯಾವದಕ್ಕೆ
೧೯ ಅದನ್ನು ಸಮಾನ ಮಾಡಲಿ? ಅದು ಸಾಸಿವೆಕಾಳಿಗೆ ಸಮಾನವಾಗಿದೆ; ಅದನ್ನು ಒಬ್ಬ ಮನುಷ್ಯನು ತೆಗೆದು,
ತನ್ನ ತೋಟದಲ್ಲಿ ಹಾಕಿದಾಗ, ಅದು ಬೆಳೆದು, ದೊಡ್ಡ ಮರವಾಯಿತು; ಮತ್ತು ಆಕಾಶದ ಪಕ್ಷಿಗಳು ಅದರ
ಕೊಂಬೆಗಳಲ್ಲಿ ವಾಸ ಮಾಡಿದವು.
೨೦, ೨೧ ಮತ್ತು ಅವನು ಹೇಳಿದ್ದು, ದೇವರ ರಾಜ್ಯವನ್ನು ಯಾವದಕ್ಕೆ ಸಮಾನ ಮಾಡಲಿ? ಅದು ಹುಳಿಗೆ
ಸಮಾನವಾಗಿದೆ; ಅದನ್ನು ಒಬ್ಬ ಸ್ತ್ರೀಯು ತೆಗೆದು ಕೊಂಡು, ಮೂರು ಶೇರು ಹಿಟ್ಟಿನಲ್ಲಿ, ಅದೆಲ್ಲಾ ಹುಳಿ
ಯಾಗುವ ತನಕ, ಅಡಗಿಸಿದಳು.

ಕ್ರಿಸ್ತನು ಯೆರೂಸಲೇಮಿಗೆ ಪ್ರಯಾಣ ಮಾಡಿದ್ದು; ರಕ್ಷಿಸಲ್ಪಡುವವರು ಎಷ್ಟು ಮಂದಿ ಎಂಬ ಪ್ರಶ್ನೆಗೆ ಉತ್ತರ ಕೊಟ್ಟದ್ದು.

೨೨ ತರುವಾಯ [5]ಅವನು ಬೋಧಿಸುತ್ತಾ, ಯೆರೂಸಲೇಮಿಗೆ ಪ್ರಯಾಣ ಮಾಡುತ್ತಾ, ಪಟ್ಣ ಗ್ರಾಮಗಳನ್ನು
ಹಾದು ಹೋದನು.

1. ಮಾರ್ಕ. ೫. ೨೨. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಆ ಸಭೆಮನೆಯ ಯಜಮಾನನು ಯಥಾರ್ಥವಂತನಲ್ಲ. ತನ್ನ ಅಭಿಪ್ರಾಯಕ್ಕೆ ಸರಿಯಾಗಿ ವೇದವಚನಗಳನ್ನು ಮಾರ್ಪಡಿಸಿ, ಕ್ರಿಸ್ತನ ಮೇಲೆ ಕೋಪ ಮಾಡುವ ಮನಸ್ಸುಳ್ಳವನಾಗಿ, ಜನರ ಮೇಲೆ ಕೋಪ ಮಾಡಿದ್ದರಿಂದ ಅವನು ಕಪಟಸ್ಥನೆಂಬುವದಕ್ಕೆ ಸಂದೇಹವಿಲ್ಲ.

3. ಮತ್ತಾ. ೧೨. ೧೧. ವಚನದಲ್ಲಿರುವ ನ್ಯಾಯಕ್ಕಿಂತ ಈ ವಚನದಲ್ಲಿರುವ ನ್ಯಾಯವು ಅಧಿಕ ಬಲವುಳ್ಳದ್ದು. ಅದರಲ್ಲಿ ಆಪತ್ತಿಗೊಳಗಾಗಿರುವ ಮೃಗಗಳಿಗೆ ಸಹಾಯ ಮಾಡುವದು ಅವಶ್ಯವೆಂದೂ, ಇದರಲ್ಲಿ ಮೃಗಗಳನ್ನು ಬಿಚ್ಚಿ ನೀರು ಕುಡಿಸುವದು ವಾಡಿಕೆ ಎಂದೂ ತೋರಿಸಿ ಇರುತ್ತದೆ. ಸಬ್ಬತಿನಲ್ಲಿ ಮೃಗಗಳನ್ನು ಪರಾಮರಿಸ ತಕ್ಕ ವಿಧವನ್ನು ಕುರಿತು ನ್ಯಾಯಪ್ರಮಾಣದಲ್ಲಿ ಏನೂ ಹೇಳಲ್ಪಡಲಿಲ್ಲ. ಬಾಯಿ ಇಲ್ಲದ ಮೃಗಗಳಿಗೆ ಮನುಷ್ಯರು ಸ್ವಾಭಾವಿಕವಾಗಿ ಕನಿಕರ ತೋರಿಸುವರು. ಆದದರಿಂದ ಅವುಗಳನ್ನು ಕುರಿತು ಒಂದು ಕಟ್ಟಳೆಯೂ ಕೊಡಲ್ಪಡಲಿಲ್ಲ.

4. (೧೮—೨೧. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೩. ೩೧—೩೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ಕ್ರಿಸ್ತನು ಈ ಅದ್ಭುತದಂಥಾ ಇನ್ನೂ ಕೆಲವು ಅದ್ಭುತಗಳನ್ನು ಆ ದಿವಸದಲ್ಲಿ ಮಾಡಿ ಇರುವನೆಂದು ೧೭ನೇ ವಚನದಿಂದ ನಿಧಾನಿಸ ಬಹುದು. ಅವುಗಳನ್ನೆಲ್ಲಾ ಜನರು ಕಂಡು, ಸಂತೋಷ ಪಟ್ಟರು; ಶತ್ರುಗಳು ನಾಚಿಕೆ ಪಟ್ಟರು. ಆಗ ಈ ಮುಂದಿನ ವಚನಗಳಲ್ಲಿ ಹೇಳಿದ ಸಾಮ್ಯಗಳನ್ನು ಕುರಿತು ಯೋಚಿಸುವಾಗ, ಸಣ್ಣ ಸಾಸಿವೆಕಾಳು ಅಲ್ಪವಾಗಿ ಎಣಿಸಲ್ಪಡುವ ಪ್ರಕಾರ, ಸುವಾರ್ತೆಯ ಮಾರ್ಗವು ಅಲ್ಪವಾಗಿ ಎಣಿಸಲ್ಪಟ್ಟಾಗ್ಯೂ, ಸಾಸಿವೆ ಗಿಡದ ಪ್ರಕಾರ ಬೆಳದು, ಅದು ಲೋಕದಲ್ಲೆಲ್ಲಾ ಪ್ರವೇಶಿಸಿ, ಅಭಿವೃದ್ಧಿಯಾಗುವದೆಂದು ಹೇಳಿದನು.

5. ೧೩. ೨೨ — ೧೯. ೨೮. ವರಿಗೂ ಕ್ರಿಸ್ತನು ಗಲಿಲಾಯವನ್ನು ಬಿಟ್ಟು ಹೊರಟು, ಪಿರೀಯ ದೇಶದ ಮಾರ್ಗವಾಗಿ ಯೆರೂಸಲೇಮಿನಲ್ಲಿ ರಾಜಕೀಯ ಪ್ರವೇಶ ಮಾಡಿದ ವರಿಗೂ ಬೇರೆ ಬೇರೆ ಕಾಲಗಳಲ್ಲಿ ನಡೆದ ಸಂಗತಿಗಳು ಅಡಗಿ ಇರುತ್ತವೆ. ಇವುಗಳೆಲ್ಲಾ ಯೋಹಾ. ೧೧. ೫೪ಲ್ಲಿ ಹೇಳಿದ ಕಾಲಕ್ಕೆ ತರುವಾಯ ನಡೆದವುಗಳೆಂದು ತೋರುತ್ತದೆ. ೧೮. ೧೫ — ೪೩. ವಚನಗಳ ವರಿಗೂ ಇರುವ ಸಂಗತಿಗಳ ಹೊರ್ತು, ಮಿಕ್ಕಾದವುಗಳೆಲ್ಲಾ ಈ ಒಂದು ಸುವಾರ್ತೆಯಲ್ಲಿ ಮಾತ್ರ ಇರುತ್ತವೆ.

೧೧ ವನು. ಆಗ ನಿನ್ನ ಸಂಗಡ ಕೂತವರ ಸನ್ನಿಧಿಯಲ್ಲಿ ನಿನಗೆ [1]ಮಾನ ಉಂಟಾಗುವದು. ಯಾಕಂದರೆ ತನ್ನನ್ನು
ಹೆಚ್ಚಿಸಿ ಕೊಳ್ಳುವ ಪ್ರತಿ ಮನುಷ್ಯನು ತಗ್ಗಿಸಲ್ಪಡುವನು; ಮತ್ತು ತನ್ನನ್ನು ತಗ್ಗಿಸಿ ಕೊಳ್ಳುವವನು ಹೆಚ್ಚಿಸ
ಲ್ಪಡುವನು.
೧೨ ಮತ್ತು ಅವನು ತನ್ನನ್ನು ಕರೆದವನಿಗೆ ಹೇಳಿದ್ದೇನಂದರೆ, ನೀನು ಮಧ್ಯಾಹ್ನಕ್ಕಾಗಲಿ, ರಾತ್ರಿಗಾಗಲಿ, ಔತಣ
ವನ್ನು ಮಾಡಿಸುವಾಗ, ನಿನ್ನ ಸ್ನೇಹಿತರನ್ನಾದರೂ, ನಿನ್ನ ಸಹೋದರರನ್ನಾದರೂ, ನಿನ್ನ ನೆಂಟರನ್ನಾದರೂ,
ಐಶ್ವರ್ಯವಂತರಾದ ನಿನ್ನ ನೆರೆಯುವರನ್ನಾದರೂ [2]ಕರಿಸ ಬೇಡ. ಯಾಕಂದರೆ ಅವರು ಸಹ ನಿನ್ನನ್ನು ಕರೆ
೧೩ ದಾರು; ಆಗ ನಿನಗೆ ಪ್ರತ್ಯುಪಕಾರವಾದೀತು. ಆದರೆ ನೀನು ಔತಣವನ್ನು ಮಾಡಿಸುವಾಗ, ಬಡವರನ್ನೂ,
೧೪ ಊಣರನ್ನೂ, ಕುಂಟರನ್ನೂ, ಕುರುಡರನ್ನೂ ಕರಿಸು. ಆಗ ಅವರು ಪ್ರತ್ಯುಪಕಾರ ಮಾಡಲಾರದ ಕಾರಣ,
ಭಾಗ್ಯವಂತನಾಗಿರುವಿ; ಯಾಕಂದರೆ ನೀತಿವಂತರ ಪುನರುತ್ಥಾನದಲ್ಲಿ ನಿನಗೆ ಪ್ರತ್ಯುಪಕಾರ ಉಂಟಾಗುವದು.
೧೫ ಸಂಗಡ ಕೂತು ಕೊಂಡವರಲ್ಲಿ ಒಬ್ಬನು ಇದನ್ನು ಕೇಳಿ, ದೇವರ ರಾಜ್ಯದಲ್ಲಿ ರೊಟ್ಟಿ ತಿನ್ನುವವನು ಭಾಗ್ಯ
ವಂತನೆಂದು, ಅವನಿಗೆ ಹೇಳಿದಾಗ;
೧೬ ಅವನು ಅವನಿಗೆ ಹೇಳಿದ್ದೇನಂದರೆ, ಒಬ್ಬ ಮನುಷ್ಯನು ದೊಡ್ಡ ಔತಣ ಮಾಡಿಸಿ, ಬಹು ಜನರನ್ನು ಕರೆಸಿ,
೧೭ ಔತಣದ ಹೊತ್ತಿಗೆ ಕರೆಯಲ್ಪಟ್ಟವರಿಗೆ, ಬನ್ನಿರಿ, ಈಗಲೇ [3]ಎಲ್ಲಾ ಸಿದ್ಧವಾಗಿದೆ ಎಂದು ಹೇಳ, ತನ್ನ ದಾಸ
೧೮ ನನ್ನು ಕಳುಹಿಸಿದಾಗ; ಅವರೆಲ್ಲರು ಒಂದೇ ಮನಸ್ಸಾಗಿ, ಮನ್ನಿಸ ಬೇಕೆಂದು ಅನ್ನಲಾರಂಭಿಸಿದರು. ಮೊದ
ಲನೆಯುವನು ಅವನಿಗೆ, ಹೊಲವನ್ನು ಕೊಂಡು ಕೊಂಡಿದ್ದೇನೆ; ಅದನ್ನು ಹೋಗಿ ನೋಡ ಬೇಕು; ನನ್ನನ್ನು
೧೯ ಮನ್ನಿಸ ಬೇಕೆಂದು ನಿನ್ನನ್ನು ಬೇಡಿ ಕೊಳ್ಳುತ್ತೇನೆ, ಅಂದನು. ಬೇರೊಬ್ಬನು, ನಾನು ಐದು ಜೋಡು ಎತ್ತು
ಗಳನ್ನು ಕೊಂಡು ಕೊಂಡಿದ್ದೇನೆ; ಅವುಗಳನ್ನು ಪರೀಕ್ಷಿಸ ಹೋಗುತ್ತೇನೆ; ನನ್ನನ್ನು ಮನ್ನಿಸ ಬೇಕೆಂದು
೨೦ ನಿನ್ನನ್ನು ಬೇಡಿ ಕೊಳ್ಳುತ್ತೇನೆ, ಅಂದನು. ಬೇರೊಬ್ಬನು, ಹೆಣ್ಣು ಮದುವೆ ಮಾಡಿ ಕೊಂಡಿದ್ದೇನೆ; ಅದ
೨೧ ಕ್ಕೋಸ್ಕರ ಬರಲಾರೆನು, ಅಂದನು. ಆ ದಾಸನು ಬಂದು, ತನ್ನ ಯಜಮಾನನಿಗೆ ಇವುಗಳನ್ನು ತಿಳಿಸಿ
ದಾಗ, ಮನೇ ಯಜಮಾನನು ಕೋಪಿಸಿ ಕೊಂಡು, ತನ್ನ ದಾಸನಿಗೆ ಹೇಳಿದ್ದೇನಂದರೆ, ಪಟ್ಟಣದ ಬೀದಿಗಳಿಗೂ
ಸಂದುಗಳಿಗೂ ಬೇಗ ಹೋಗಿ, ಬಡವರನ್ನೂ ಊಣರನ್ನೂ ಕುಂಟರನ್ನೂ ಕುರುಡರನ್ನೂ ಇಲ್ಲಿಗೆ ಕರ
೨೨ ಕೊಂಡು ಬಾ. ಆ ದಾಸನು, ಅಯ್ಯಾ, ನೀನು ಅಪ್ಪಣೆ ಕೊಟ್ಟ ಹಾಗಾಯಿತು; ಮತ್ತು ಇನ್ನೂ ಸ್ಥಳ
೨೩ ಉಂಟು, ಅಂದಾಗ; ಯಜಮಾನನು ದಾಸನಿಗೆ, ನೀನು ಹಾದಿಗಳಿಗೂ ಬೇಲಿಗಳಿಗೂ ಹೋಗಿ, ನನ್ನ ಮನೆ
೨೪ ತುಂಬುವ ಹಾಗೆ ಒಳಗೆ ಬರುವದಕ್ಕೆ ಅವರನ್ನು [4]ಬಲವಂತ ಮಾಡು; ಯಾಕಂದರೆ ನಿಮಗೆ ಹೇಳುತ್ತೇನೆ,
ಕರೆಯಲ್ಪಟ್ಟ ಆ ಜನರಲ್ಲಿ ಒಬ್ಬನಾದರೂ ನನ್ನ ಔತಣವನ್ನು ರುಚಿ ನೋಡನು, ಅಂದನು.

1. ಘನವನ್ನು ಅಪೇಕ್ಷಿಸಿ, ಮೊದಲನೇ ಸ್ಥಳದಲ್ಲಿ ಕುಳಿತು ಕೊಳ್ಳದೆ, ಕಡೇ ಸ್ಥಳದಲ್ಲಿ ಕುಳಿತು ಕೊಳ್ಳುವದೇ ಒಳ್ಳೇದೆಂದು ಎಣಿಸಿ ನಡೆದರೆ, ಅದರಿಂದ ಘನತೆ ಬರುವದೇ ಹೊರ್ತು ಘನ ಹೀನತೆ ಬರಲಾರದು.

2. ಸ್ನೇಹಕ್ಕೆ ಗುರುತಾಗಿ ಮನುಷ್ಯರೊಳಗೆ ನಡೆಯುವ ಉಪಚಾರಗಳನ್ನೂ ಔತಣಗಳನ್ನೂ ಕುರಿತು ಕ್ರಿಸ್ತನು ಅವು ತಪ್ಪೆಂದು ಹೇಳುತ್ತಾನೆಂಬದಾಗಿ ನೆನಸ ಬಾರದು. (ಮತ್ತಾ. ೧೧. ೧೮, ೧೯.) ಆದರೆ ಪ್ರತ್ಯುಪಕಾರ ಮಾಡ ತಕ್ಕವರಿಗೆ ಮಾತ್ರ ಉಪಕಾರ ಮಾಡುವದೂ, ಔತಣ ಮುಂತಾದ ಉಪಚಾರ ಮಾಡುವದೂ, ತನ್ನನ್ನು ತಾನೇ ಸ್ನೇಹಿಸುವ ಅವಗುಣವೇ ಹೊರ್ತು ಸುಗುಣವಲ್ಲ. ಬದಲು ಮೇಲು ಮಾಡ ಶಕ್ತಿ ಇಲ್ಲದ ಬಡವರಿಗೆ ಮೇಲು ಮಾಡುವದೇ ಕ್ರೈಸ್ತಮಾರ್ಗದ ಶ್ರೇಷ್ಠ ಗುಣವು. ಹೀಗೆ ಮಾಡುವವರಿಗೆ ದೇವರು ಪ್ರತಿಫಲ ಕೊಡದೆ ಇರುವದಿಲ್ಲ.

3. ಮತ್ತಾ. ೨೨. ೩. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

4. ಬೇಲಿಗಳ ಅಂಚಿನಲ್ಲಿಯೂ ಬೀದಿಗಳಲ್ಲಿಯೂ ಅಲೆಯುವ ಬಡವರು ದೊಡ್ಡ ಔತಣಕ್ಕೆ ಬರ ಬೇಕೆಂದು ಕರೆಯಲ್ಪಡುವಾಗ ಅದನ್ನು ನಂಬಲಾರರು. ಆದದರಿಂದ ಹಲವು ನ್ಯಾಯಗಳನ್ನು ಹೇಳಿ, ಅವರನ್ನು ಬಲವಂತವಾಗಿ ಕರೆಯ ಬೇಕು. ಈ ಔತಣವು ಕೃಪೆಯುಳ್ಳ ದೇವರು ಏರ್ಪಡಿಸಿದ ರಕ್ಷಣೆಯ ಔತಣವಾಗಿದೆ. ಅದಕ್ಕೆ ಮೊದಲು ಕರೆಯಲ್ಪಟ್ಟವರು ಯೆಹೂದ್ಯರು. ಅವರನ್ನು ಕರೆದ ದಾಸರು ಪ್ರವಾದಿಗಳು ಮುಂತಾದ ದೇವರ ಸೇವಕರು. ಲೋಕಸ್ನೇಹವೆಂಬ ಪಾಶದಿಂದ ಕಟ್ಟಲ್ಪಟ್ಟ ಯೆಹೂದ್ಯರು ಪರಮ ಔತಣವನ್ನು ಅಲಕ್ಷ್ಯ ಮಾಡಿದಾಗ, ಅನ್ಯ ಜನಾಂಗಗಳವರು ಕರೆಯಲ್ಪಟ್ಟರು. ಅವರಲ್ಲಿ ಅನೇಕರು ಅದನ್ನು ಅಂಗೀಕರಿಸಿ, ದೇವರ ಈಡಿಲ್ಲದ ಉಚಿತವಾದ ರಕ್ಷಣೆಯ ಮೇಲುಗಳನ್ನು



ಜನಸಮೂಹಗಳು ಕ್ರಿಸ್ತನನ್ನು ಹಿಂಬಾಲಿಸಿದ್ದು; ಉತ್ತಮ ಶಿಷ್ಯರು ಯಾರೆಂಬುವದನ್ನು ಕುರಿತು ಬೋಧಿಸಿದ್ದು.

೨೫ ಇದಲ್ಲದೆ ಬಹು ಸಮೂಹಗಳು ಅವನ ಸಂಗಡ ಪ್ರಯಾಣ ಮಾಡಲಾಗಿ, ಅವನು ತಿರುಗಿ ಕೊಂಡು,
೨೬ ಅವರಿಗೆ ಹೇಳಿದ್ದೇನಂದರೆ, [1]ಒಬ್ಬನು ನನ್ನ ಬಳಿಗೆ ಬಂದು, ತನ್ನ ತಂದೆಯನ್ನೂ ತಾಯಿಯನ್ನೂ ಹೆಂಡತಿ
ಯನ್ನೂ ಮಕ್ಕಳನ್ನೂ ಸಹೋದರರನ್ನೂ ಸಹೋದರಿಗಳನ್ನೂ, ಮತ್ತು ಸ್ವಂತ ಪ್ರಾಣವನ್ನು ಸಹ, [2]ಹಗೆ
೨೭ ಮಾಡದೆ ಇದ್ದರೆ, ನನ್ನ ಶಿಷ್ಯನಾಗಿರಲಾರನು. ಮತ್ತು ತನ್ನ ಶಿಲುಬೆ ಹೊತ್ತು ಕೊಂಡು, ನನ್ನ ಹಿಂದೆ ಬಾರ
ದವನು ನನ್ನ ಶಿಷ್ಯನಾಗಿರಲಾರನು.
೨೮ ಯಾಕಂದರೆ [3]ನಿಮ್ಮಲ್ಲಿ ಯಾವನು ಗೋಪುರ ಕಟ್ಟ ಮನಸ್ಸಾಗಿದ್ದು, ಮೊದಲು ಕೂತು ಕೊಂಡು, ಅದನ್ನು
೨೯ ತೀರಿಸುವದಕ್ಕೆ ತನಗುಂಟೋ? ಎಂದು ವೆಚ್ಚ ಲೆಖ್ಖ ಮಾಡುವದಿಲ್ಲ? ಮಾಡದಿದ್ದರೆ, ಅವನು ತಳಾದಿ
೩೦ ಹಾಕಿ, ತೀರಿಸಲಾರದಿದ್ದರೆ, ನೋಡುವವರೆಲ್ಲರು ಅವನನ್ನು ಹಾಸ್ಯ ಮಾಡಲಾರಂಭಿಸಿ, ಈ ಮನುಷ್ಯನು
ಮನೆ ಕಟ್ಟುವದಕ್ಕೆ ಆರಂಭ ಮಾಡಿ, ತೀರಿಸಲಾರದೆ ಹೋದನೆಂದು, ಹೇಳುವದಿಲ್ಲವೋ?
೩೧ ಮತ್ತು ಯಾವ ಅರಸನು ಬೇರೆ ಅರಸನ ಸಂಗಡ ಯುದ್ಧ ಮಾಡ ಹೋಗುವಾಗ, ಮೊದಲು ಕೂತು
ಕೊಂಡು, ತಾನು ಹತ್ತು ಸಾವಿರ ಜನರಿಂದ, ತನ್ನ ಮೇಲೆ ಇಪ್ಪತ್ತು ಸಾವಿರ ಜನರ ಸಂಗಡ ಬರುವವನನ್ನು
೩೨ ಎದುರಿಸ ಶಕ್ತನೋ? ಎಂದು ಆಲೋಚನೆ ಮಾಡದೆ ಇರುವನು? ಇಲ್ಲವೆ, ಅವನು ಇನ್ನೂ ದೂರದಲ್ಲಿರು
ವಾಗ, ರಾಯಭಾರಿಗಳನ್ನು ಕಳುಹಿಸಿ, ಸಮಾಧಾನದ ವಿಷಯವಾಗಿ ಬಿನ್ನಹ ಮಾಡುವನು.
೩೩ ಹಾಗೆಯೇ ನಿಮ್ಮಲ್ಲಿ ಯಾವನಾದರೂ ತನಗುಂಟಾದವುಗಳನ್ನೆಲ್ಲಾ ಬಿಟ್ಟು ಬಿಡದೆ ಇದ್ದರೆ, ನನ್ನ ಶಿಷ್ಯನಾ
ಗಿರಲಾರನು.
೩೪, ೩೫ ಉಪ್ಪು ಒಳ್ಳೇದೇ; ಆದರೆ ಉಪ್ಪು ನಿಸ್ಸಾರವಾದರೆ, [4]ಯಾವದರಿಂದ ರುಚಿಯಾದೀತು? ಅದು ಭೂಮಿ
ಗಾದರೂ ಗೊಬ್ಬರಕ್ಕಾದರೂ ಬರುವದಿಲ್ಲ; ಅದನ್ನು ಹೊರಗೆ ಹಾಕುತ್ತಾರೆ. ಕೇಳ ಕಿವಿಗಳುಳ್ಳವನು
ಕೇಳಲಿ.

1. (೨೬, ೨೭. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೦. ೩೭, ೩೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ಫರಿಸಾಯನ ಮನೆಯಲ್ಲಿ ಕರ್ತನು ಮಾಡಿದ ಅದ್ಭುತವನ್ನು ಕುರಿತು ಕೇಳಿದ ಜನರು ಸಮೂಹವಾಗಿ ಕೂಡಿ, ಆತನ ಬಳಿಗೆ ಬಂದಾಗ, ತಾನು ತನ್ನ ಶಿಷ್ಯರಿಗೆ ಮುಂಚೆ ಹೇಳಿದ್ದ ಉಪದೇಶವನ್ನು ತಿರಿಗಿ ಹೇಳಿದನು.

2. ಅಪೇಕ್ಷೆಯೂ ತಿರಸ್ಕಾರವೂ ಮನುಷ್ಯರಲ್ಲಿ ಸಹಜವಾದ ಗುಣಗಳು. ಒಂದು ವಸ್ತುವಿಗಿಂತ ಇನ್ನೊಂದು ವಸ್ತುವನ್ನು ಅಧಿಕವಾಗಿ ಅಪೇಕ್ಷಿಸುವಾಗ, ಅಪೇಕ್ಷಿಸುವ ವಸ್ತುವನ್ನು ಪ್ರೀತಿ ಮಾಡುವ ವಸ್ತುವೆಂದೂ, ಅಪೇಕ್ಷಿಸದ ವಸ್ತುವನ್ನು ತಿರಸ್ಕರಿಸುವ ವಸ್ತುವೆಂದೂ ಹೇಳುವದೇ ಈ ವಚನದ ಅರ್ಥವು. (ಮತ್ತಾ. ೧೦. ೩೭.) ತಂದೆ ತಾಯಿಗಳನ್ನು ಪ್ರೀತಿ ಮಾಡುವದು ಕ್ರಿಸ್ತನ ಮಾರ್ಗದ ಶ್ರೇಷ್ಠ ಬೋಧನೆ. ತನ್ನ ಪ್ರಾಣವನ್ನು ಪ್ರೀತಿ ಮಾಡುವದು ಮುಖ್ಯವಾದ ಸ್ವಾಭಾವಿಕ ಪ್ರಮಾಣವು. ಆದರೆ ಸದ್ಗುರುವಾದ ಕ್ರಿಸ್ತನನ್ನು ಪ್ರೀತಿ ಮಾಡುವದಕ್ಕೆ ಈ ಪ್ರಮಾಣಗಳು ಅಭ್ಯಂತರವಾಗಿರ ಬಾರದು. ಈ ಅಭ್ಯಂತರಗಳಿಂದ ಆತನನ್ನು ಹಿಂಬಾಲಿಸದೆ ಹೋಗುವವರು ಆತನಿಗೆ ಉತ್ತಮ ಶಿಷ್ಯರಲ್ಲ. ಬಂಧು ಬಳಗ, ಸುಖ, ದ್ರವ್ಯ, ಪ್ರಾಣ, ಇವುಗಳೆಲ್ಲಾ ಆ ಮಹಾ ರಕ್ಷಕನ ಕಟಾಕ್ಷಕ್ಕೆ ಸರಿಯಾದವುಗಳಲ್ಲ. ಆ ಕಟಾಕ್ಷವನ್ನು ಅಪೇಕ್ಷಿಸುವದರಿಂದ ಮಿಕ್ಕಾದವುಗಳನ್ನೆಲ್ಲಾ ತಿರಸ್ಕರಿಸುವ ಮನಸುಳ್ಳವನಾಗಿರ ಬೇಕು. ಇಂಥಾ ತಿರಸ್ಕಾರದಿಂದ ತನಗೂ ಮಿಕ್ಕಾದವರಿಗೂ ಮೇಲಾಗುವದೇ ಹೊರ್ತು ಕೇಡಾಗುವದಿಲ್ಲ.

3. ಈ ಸುವಾರ್ತೆಯಲ್ಲಿ ಮಾತ್ರ ಬರುವ ಈ ಎರಡು ಉಪಮಾನಗಳಿಂದ ತಮ್ಮನ್ನು ಪೂರ್ಣವಾಗಿ ಅಲ್ಲಗಳೆಯುವ ಕ್ರಿಸ್ತನ ಉತ್ತಮ ಶಿಷ್ಯರು ಎಲ್ಲವುಗಳನ್ನೂ ಚನ್ನಾಗಿ ಪರೀಕ್ಷಿಸಿ, ಲಾಭ ನಷ್ಟಗಳನ್ನು ತೂಗಿ ನೋಡಿ, ಕ್ರಿಸ್ತನ ಶಿಷ್ಯರಾಗ ಬೇಕೇ ಹೊರ್ತು, ಯೋಚನೆ ಇಲ್ಲದೆ ಶಿಷ್ಯರಾಗ ಬಾರದು. ರಸವಿಲ್ಲದ ಕಬ್ಬು ನಿಷ್ಪ್ರಯೋಜನವಾದ ಹಿಪ್ಪೆಯಾಗಿರುವ ಪ್ರಕಾರ ಯಥಾರ್ಥವಿಲ್ಲದ ಭಕ್ತಿಯೂ ಕೆಲಸಕ್ಕೆ ಬಾರದು. ತಕ್ಕ ಯೋಚನೆ ಇಲ್ಲದೆ ಮನೆ ಕಟ್ಟುವ ಮನುಷ್ಯನೂ, ಯುದ್ಧ ಮಾಡುವ ಅರಸನೂ, ತಾವು ಪ್ರಾರಂಭಿಸಿದ ಕಾರ್ಯವು ಕೈಕೂಡಿ ಬಾರದೆ ಹೋಗುವದರಿಂದ ಅಪಕೀರ್ತಿ ಹೊಂದುವ ಪ್ರಕಾರ, ತಕ್ಕ ಯೋಚನೆ ಇಲ್ಲದೆ, ಸರಿಯಾದ ಗ್ರಹಿಕೆ ಇಲ್ಲದೆ ಕ್ರಿಸ್ತನ ಮಾರ್ಗದಲ್ಲಿ ಶೇರುವವರು ಉಪದ್ರಕಾಲದಲ್ಲಿ ಎಡವಿ ಬಿದ್ದು, ನಾಚಿಕೆಗೆ ಒಳಗಾಗುವರು. ಅವರಿಂದ ಸತ್ಯ ಮಾರ್ಗಕ್ಕೆ ಅಪಕೀರ್ತಿ ಉಂಟಾಗುವದು. ಯಥಾರ್ಥವಾದ ದೃಢ ಮನಸ್ಸಿನಿಂದ ಶೇರುವವರು ಮಾರ್ಗಕ್ಕೆ ಅಲಂಕಾರವಾಗಿರುವದಲ್ಲದೆ ಮೋಕ್ಷರಾಜ್ಯದ ಭಾಗ್ಯವನ್ನು ಫಲವಾಗಿ ಹೊಂದುವರು.

4. ಮತ್ತಾ. ೫. ೧೩. ಮಾರ್ಕ. ೯. ೫೦. ವಚನಗಳ ವ್ಯಾಖ್ಯಾನಗಳಲಿ ನೋಡ ಬೇಕು.

ಮನುಷ್ಯರು ಮುಕ್ತಿ ಹೊಂದುವದನ್ನು ಕುರಿತು ದೇವರಿಗೆ ಇರುವ ಸಂತೋಷವನ್ನು
ತೋರಿಸುವ ಸಾಮ್ಯಗಳು.

15. ಇದಲ್ಲದೆ [1]ಎಲ್ಲಾ ಸುಂಕದವರೂ ಪಾಪಿಗಳೂ ಅವನನ್ನು ಕೇಳುವದಕ್ಕೆ ಅವನ ಸಮೀಪಕ್ಕೆ ಬರಲಾಗಿ,
೨ ಫರಿಸಾಯರೂ ಶಾಸ್ತ್ರಿಗಳೂ, ಇವನು ಪಾಪಿಗಳನ್ನು ಅಂಗೀಕರಿಸಿ, ಅವರ ಸಂಗಡ ಉಣ್ಣುತ್ತಾನೆಂದು ಗುಣು
ಗುಟ್ಟಿದರು.
೩, ೪ ಆದರೆ ಅವನು ಅವರಿಗೆ ಹೇಳಿದ ಸಾಮ್ಯವೇನಂದರೆ, ನಿಮ್ಮಲ್ಲಿ ಯಾವ ಮನುಷ್ಯನು, ನೂರು ಕುರಿಗ
ಳಿದ್ದು, ಅವುಗಳಲ್ಲಿ ಒಂದನ್ನು ಕಳಕೊಂಡರೆ, ತೊಂಭತ್ತೊಂಭತ್ತನ್ನೂ [2]ಅರಣ್ಯದಲ್ಲಿ ಬಿಟ್ಟು, ಕಳಕೊಂಡದ್ದನ್ನು,
೫ [3]ಅದು ಶಿಕ್ಕುವ ಪರ್ಯಂತರ, ಹುಡುಕದೆ ಇರುವನು? ಶಿಕ್ಕಿದ ಮೇಲೆ, ಸಂತೋಷ ಪಟ್ಟು, ಅದನ್ನು ತನ್ನ
೬ [4]ಹೆಗಲಿನ ಮೇಲೆ ಇಟ್ಟು ಕೊಂಡು, ಮನೆಗೆ ಬಂದು, ಸ್ನೇಹಿತರನ್ನೂ ನೆರೆಯವರನ್ನೂ ಕೂಡಾ ಕರೆದು, ನನ್ನ
ಸಂಗಡ ಸಂತೋಷ ಪಡಿರಿ; ಯಾಕಂದರೆ ಕಳಕೊಂಡ ನನ್ನ ಕುರಿಯು ನನಗೆ ಶಿಕ್ಕಿತೆಂದು, ಅವರಿಗೆ ಹೇಳುವನು.
೭ ಈ ಪ್ರಕಾರ ಮಾನಸಾಂತರ ಅವಶ್ಯವಿಲ್ಲದ ತೊಂಭತ್ತೊಂಭತ್ತು [5]ನೀತಿವಂತರಿಗಿಂತ ಮಾನಸಾಂತರ ಪಡುವ
ಒಬ್ಬ ಪಾಪಿಗೋಸ್ಕರ ಪರಲೋಕದಲ್ಲಿ ಸಂತೋಷವು ಇರುವದೆಂದು, ನಿಮಗೆ ಹೇಳುತ್ತೇನೆ.
೮ ಮತ್ತು ಯಾವ ಸ್ತ್ರೀಯು, ಹತ್ತು [6]ಹಣಗಳಿದ್ದು, ಒಂದು ಹಣ ಕಳಕೊಂಡರೆ, ದೀಪ ಹಚ್ಚಿ, ಮನೆ ಗುಡಿಸಿ,
೯ ಅದು ಶಿಕ್ಕುವ ಪರ್ಯಂತರ, ಜಾಗ್ರತೆಯಾಗಿ ಹುಡುಕದೆ ಇರುವಳು? ಶಿಕ್ಕಿದ ಮೇಲೆ, ಗೆಳತಿಯರನ್ನೂ ನೆರೆ
ಯವರನ್ನೂ ಕೂಡಾ ಕರೆದು, ನನ್ನ ಸಂಗಡ ಸಂತೋಷ ಪಡಿರಿ; ಯಾಕಂದರೆ ನಾನು ಕಳಕೊಂಡ ಹಣವು
೧೦ ಶಿಕ್ಕಿತೆಂದು ಹೇಳುವಳು. ಈ ಪ್ರಕಾರ ಮಾನಸಾಂತರ ಪಡುವ ಒಬ್ಬ ಪಾಪಿಗೋಸ್ಕರ ದೇವದೂತರ
ಮುಂದೆ ಸಂತೋಷವು ಇರುವದೆಂದು, ನಿಮಗೆ ಹೇಳುತ್ತೇನೆ.

1. ೧೫ನೇ ಸಂಧಿಯಲ್ಲಿ ಫರಿಸಾಯರು ಮುಂತಾದವರು ಕ್ರಿಸ್ತನ ಮೇಲೆ ಹೊರಿಸಿದ ಅಪರಾಧಗಳನ್ನು ಪರಿಹರಿಸ ತಕ್ಕ ಸಾಮ್ಯಗಳೂ, ೧೬ನೇ ಸಂಧಿಯಲ್ಲಿ ಅವರ ದ್ರವ್ಯಾಶೆಯನ್ನು ಖಂಡಿಸ ತಕ್ಕ ಸಾಮ್ಯಗಳೂ ಅಡಗಿರುತ್ತವೆ. ಸುಂಕದವರನ್ನು ಕರ್ತನು ಅಂಗೀಕರಿಸಿದ್ದಕ್ಕಾಗಿ ಫರಿಸಾಯರು ಗುಣುಗುಟ್ಟಿದರು. (೧, ೨.) ಕರ್ತನು ಅವರ ಬಾಯಿ ಮುಚ್ಚ ತಕ್ಕದ್ದಾಗಿ ಮೂರು ಶ್ರೇಷ್ಠ ಸಾಮ್ಯಗಳನ್ನು ಹೇಳಿದನು. ಇವುಗಳಿಂದ ಮಹಾ ಪಾಪಿಷ್ಠರಿಗೆ ದೇವರು ತೋರಿಸುವ ಅಧಿಕ ಪ್ರೀತಿಯು ಪ್ರಕಟವಾಗುತ್ತದೆ. ತಪ್ಪಿ ಹೋದ ಕುರಿಯು, ಕಳಕೊಂಡ ಹಣವು, ದೂರವಾಗಿ ಹೋದ ಕೆಟ್ಟ ಮಗನು, ಆದ ತಪ್ಪಿ ಹೋದ ವಸ್ತುಗಳನ್ನು ಕುರಿತೇ ಈ ಮೂರು ಸಾಮ್ಯಗಳಲ್ಲಿ ಹೇಳಿರುತ್ತದೆ. ಹೀಗೆ ಕಾಣದೆ ಹೋದ ವಸ್ತುಗಳಲ್ಲಿಯೂ ಒಂದಕ್ಕಿಂತ ಒಂದು ಶ್ರೇಷ್ಠವಾಗಿರುವದನ್ನು ಕುರಿತು ಯೋಚಿಸ ಬೇಕು. ನೂರು ಕುರಿಗಳಲ್ಲಿ ತಪ್ಪಿ ಹೋದ ಒಂದು ಕುರಿಯು ಶ್ರೇಷ್ಠವಾದರೆ, ಹತ್ತು ಹಣಗಳಲ್ಲಿ ಕಾಣದೆ ಹೋದ ಒಂದು ಹಣವು ಅಧಿಕ ಶ್ರೇಷ್ಠವಾದದ್ದೇ. ಇಬ್ಬರು ಮಕ್ಕಳಲ್ಲಿ ದೂರವಾಗಿ ಹೋದ ಒಬ್ಬ ಮಗನು ಎಲ್ಲವುಗಳಿಗಿಂತ ಅಧಿಕ ಶ್ರೇಷ್ಠನೆಂದು ಹೇಳ ಬೇಕು. ಕಾಣದೆ ಹೋದ ಈ ವಸ್ತುಗಳೆಲ್ಲಾ ಕಂಡು ಹಿಡಿಯಲ್ಪಟ್ಟದರಿಂದ ಎಷ್ಟೋ ಸಂತೋಷ ಉಂಟಾಯಿತು.

2. ಮತ್ತಾ. ೩. ೧. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

3. ಈ ಸಾಮ್ಯವನ್ನು ಎಜೇಕಿ. ೩೪. ೧೬, ೨೩ನೇ ವಚನಗಳ ಸಂಗಡ ಸರಿ ನೋಡಿದರೆ, ಇದರ ಅಲಂಕಾರವು ಚನ್ನಾಗಿ ತೋರುವದು.

4. ಕುರಿಯು ಮಂದೆಯನ್ನು ಬಿಟ್ಟು ಓಡಿ ಹೋದದಕ್ಕೋಸ್ಕರ ಅದನ್ನು ಹೊಡಿಯಲಿಲ್ಲ, ತಿರಿಗಿ ಅದನ್ನು ಕಾಡಿಗೆ ಓಡಿಸಲಿಲ್ಲ, ಮತ್ತೊಬ್ಬರು ಅದನ್ನು ಹೊರುವ ಹಾಗೆ ಮಾಡಲಿಲ್ಲ. ಆ ಒಳ್ಳೇ ಕುರುಬನು ತಾನೇ ಅದನ್ನು ತನ್ನ ಹೆಗಲಿನ ಮೇಲೆ ಹೊತ್ತು ಕೊಂಡು ಹೋದನು. ಇದು ಎಷ್ಟೋ ಪ್ರೀತಿಯು!

5. (ಮತ್ತಾ. ೯. ೧೨, ೧೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ಇದು ತಮ್ಮನ್ನು ನೀತಿವಂತರೆಂದು ಹೆಚ್ಚಳ ಪಟ್ಟ ಫರಿಸಾಯರನ್ನು ಕುರಿತದ್ದು. ಈ ಸಾಮ್ಯದಲ್ಲಿ ಹೇಳಲ್ಪಟ್ಟ ಕುರುಬನು ಲೋಕರಕ್ಷಕನಾದ ಕ್ರಿಸ್ತನೇ. ತಪ್ಪಿ ಹೋದ ಕುರಿಯು ಪಾಪ ಮಾಡಿದ ಮನುಷ್ಯಜಾತಿಯೇ. ದಯಾನಿಧಿಯಾದ ಕ್ರಿಸ್ತನು ದೇವದೂತರ ಮಧ್ಯದಲ್ಲಿ ಆಸೀನನಾಗಿದ್ದು, ಪರಮ ಸಭೆಯನ್ನು ಬಿಟ್ಟು, ಕೆಟ್ಟು ಹೋದ ಪಾಪಿಷ್ಠರನ್ನು ಹುಡುಕಿ, ಕಂಡು ಹಿಡಿಯುವದಕ್ಕಾಗಿ ಈ ಹಾಳು ಲೋಕಕ್ಕೆ ಬಂದು, ಅಜ್ಞಾನಾಂಧಕಾರ ತುಂಬಿದ ಅರಣ್ಯದಲ್ಲಿ ದಾರಿ ತಪ್ಪಿ ಅಲೆಯುವ ಪಾಪಿಷ್ಠನನ್ನು ಕಂಡು, ಅವನನ್ನು ದಯವಾಗಿ ಅಂಗೀಕರಿಸಿ, ತನ್ನ ಸಭೆಯಲ್ಲಿ ಶೇರಿಸುತ್ತಾನೆ. ಆಗ ದೇವದೂತರು ಸಂತೋಷ ಪಡುತ್ತಾರೆ. ಈ ಸತ್ಯಗಳೆಲ್ಲಾ ಈ ಸಾಮ್ಯದಲ್ಲಿ ಚನ್ನಾಗಿ ತೋರ ಬರುತ್ತವೆ.

6. ಬೆಳ್ಳಿ ಹಣ ಎಂಬುವದು ದೇವರ ಹೋಲಿಕೆಯಾಗಿ ಸೃಷ್ಟಿಸಲ್ಪಟ್ಟ ಮನುಷ್ಯರನ್ನು ಸೂಚಿಸುತ್ತದೆ. ಕಾಣದೆ ಹೋದ ಹಣವು ದೇವರ ಹೋಲಿಕೆಯನ್ನು ಕಳಕೊಂಡ ಪಾಪಿಷ್ಠನು. ಹಣ ಕಂಡು ಹಿಡಿಯಲ್ಪಟ್ಟ ಮೇಲೆ ಸ್ನೇಹಿತರು ಸಂತೋಷ ಪಡುವದು, ಪಾಪಿಯು ಗುಣ ಪಡುವಾಗ ಪರಮ ಸಭೆಯಲ್ಲಿ ಉಂಟಾಗುವ ಸಂತೋಷವನ್ನು ಸೂಚಿಸುತ್ತದೆ.



೧೧, ೧೨ ಮತ್ತು ಅವನು ಹೇಳಿದ್ದೇನಂದರೆ, ಒಬ್ಬ ಮನುಷ್ಯನಿಗೆ [1]ಇಬ್ಬರು ಮಕ್ಕಳಿದ್ದರು. ಅವರಲ್ಲಿ ಚಿಕ್ಕವನು
ತಂದೆಗೆ, ತಂದೆಯೇ, ಆಸ್ತಿಯಲ್ಲಿ [2]ನನಗೆ ಬರ ತಕ್ಕ ಪಾಲನ್ನು ನನಗೆ ಕೊಡು, ಅಂದಾಗ, ಬದುಕನ್ನು ಅವ
೧೩ ರಿಗೆ ಪಾಲಿಟ್ಟನು. ಕೆಲವು ದಿನಗಳ ಮೇಲೆ ಚಿಕ್ಕ ಮಗನು ಎಲ್ಲಾ ಕೂಡಿಸಿ ಕೊಂಡು, ದೂರ ದೇಶಕ್ಕೆ
೧೪ ಹೊರಟು, ಅಲ್ಲಿ ದುಂದುಗಾರನಾಗಿ ಬದುಕಿ, ತನ್ನ ಆಸ್ತಿಯನ್ನು ಹಾಳು ಮಾಡಿ ಬಿಟ್ಟನು. ಅವನು ಎಲ್ಲಾ
ವೆಚ್ಚ ಮಾಡಿದ ಮೇಲೆ, ಆ ದೇಶದಲ್ಲಿ [3]ಘೋರವಾದ ಬರ ಉಂಟಾಗಿ, ಅವನು ಕೊರತೆ ಪಡಲಾರಂಭಿಸಿದನು.
೧೫ ಆಗ ಹೋಗಿ, ಆ ದೇಶಸ್ಥರಲ್ಲಿ ಒಬ್ಬನನ್ನು ಹೊಂದಿ ಕೊಂಡನು. ಇವನು ಅವನನ್ನು, [4]ಹಂದಿಗಳನ್ನು ಮೇಯಿ
೧೬ ಸುವದಕ್ಕೆ, ತನ್ನ ಹೊಲಗಳಿಗೆ ಕಳುಹಿಸಿದನು. ಹೀಗಿರಲಾಗಿ, ಹಂದಿಗಳು ತಿನ್ನುವ [5]ಹಿಂಡಿಯಿಂದ ತನ್ನ
ಹೊಟ್ಟೆ ತುಂಬಿಸಿ ಕೊಳ್ಳ ಅಪೇಕ್ಷಿಸಿದಾಗ, ಯಾರೂ ಅವನಿಗೆ ಕೊಡಲಿಲ್ಲ.
೧೭ ಆಗ ಅವನು ತೆಪ್ಪರಿಸಿ ಕೊಂಡು, ನನ್ನ ತಂದೆಯ ಹತ್ತರ ಎಷ್ಟೋ ಮಂದಿ ಕೂಲಿಯವರಿಗೆ ತುಂಬ ರೊಟ್ಟಿ
೧೮ ಉಂಟು! ಆದರೆ ನಾನು ಹಶಿವೆಯಿಂದ ಸಾಯುತ್ತೇನೆ; ನಾನು ಎದ್ದು, ನನ್ನ ತಂದೆಯ ಬಳಿಗೆ ಹೋಗಿ,
ಅವನಿಗೆ, ತಂದೆಯೇ! [6]ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ ಮುಂದೆಯೂ, ಪಾಪ ಮಾಡಿದ್ದೇನೆ;
೧೯ ನಾನು ಇನ್ನೂ ನಿನ್ನ ಮಗನೆಂದು ಕರೆಯಲ್ಪಡ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯವರಲ್ಲಿ ಒಬ್ಬನಂತೆ
೨೦ ಮಾಡು, ಅನ್ನುವೆನೆಂದು ಹೇಳಿ, ಎದ್ದು, ತನ್ನ ತಂದೆಯ ಬಳಿಗೆ ಬಂದನು. ಅವನು ಇನ್ನು ದೂರದಲ್ಲಿರು
ವಾಗ, ಅವನ ತಂದೆ ಅವನನ್ನು ನೋಡಿ, ಅಂತಃಕರಣ ಪಟ್ಟು, ಓಡಿ ಬಂದು, ಅವನ ಕೊರಳಿನ ಮೇಲೆ ಬಿದ್ದು,
೨೧ ಅವನನ್ನು ಮುದ್ದಿಟ್ಟನು. ಆದರೆ ಮಗನು ಅವನಿಗೆ, ತಂದೆಯೇ! ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ

1. ಕೆಟ್ಟ ಮಗನ ಸಾಮ್ಯವು ಸಾಮ್ಯಗಳ ಕಿರೀಟವೆಂದೂ, ಮುತ್ತು ಎಂದೂ, ಹೇಳಲ್ಪಡುತ್ತದೆ. ಈ ಇಬ್ಬರು ಮಕ್ಕಳ ತಂದೆ ಎಂಬುವದು ಸರ್ವಜೀವದಯಾಪರನಾಗಿರುವ ತ್ರಿಯೇಕ ದೇವರೆಂದು ಸೂಚಿಸುತ್ತದೆ. (ಮಲಕಿ. ೨. ೧೦.) ದೊಡ್ಡ ಮಗನೆಂಬುವದು ಯೆಹೂದ್ಯರನ್ನೂ, ಚಿಕ್ಕ ಮಗನೆಂಬುವದು ಅನ್ಯ ಜನಾಂಗಗಳವರನ್ನೂ ಸೂಚಿಸುತ್ತದೆ.

2. ಜ್ಯೇಷ್ಠ ಪುತ್ರನಿಗೆ ಆಸ್ತಿಯಲ್ಲಿ ಎರಡು ಭಾಗಗಳೂ, ಬೇರೆ ಮಕ್ಕಳಿಗೆ ಒಂದೊಂದು ಭಾಗವೂ ಬರ ತಕ್ಕದ್ದು ಯೆಹೂದ್ಯರ ಪ್ರಮಾಣವು. (ದ್ವಿತೀಯ ನ್ಯಾ. ೨೧. ೧೭.) ಈ ಪ್ರಮಾಣದ ಪ್ರಕಾರ ಆ ಚಿಕ್ಕ ಮಗನಿಗೆ ತನ್ನ ತಂದೆಯ ಆಸ್ತಿಯಲ್ಲಿ ಮೂರರಲ್ಲಿ ಒಂದು ಭಾಗ ಬರುವದು. ಮನೆಯ ಕ್ರಮವನ್ನೂ ತಂದೆಯ ಅಧಿಕಾರವನ್ನೂ ತಿರಸ್ಕರಿಸಿದ ಇವನು ತನಗೆ ನ್ಯಾಯವಾಗಿ ಬರ ಬೇಕಾದ ಭಾಗವನ್ನು ಕೊಡ ಬೇಕೆಂದು ವ್ಯಾಜ್ಯವಾಡಿದನು. ಹೀಗೆಯೇ ಗುಣ ಪಡದ ಪಾಪಿಷ್ಟನು ದೇವರ ಪ್ರಮಾಣಕ್ಕೆ ಒಳಗಾಗದೆ, ತನ್ನ ಇಷ್ಟದ ಪ್ರಕಾರ ನಡಿಯ ಬೇಕೆಂದು ಅಪೇಕ್ಷಿಸಿ, ಆತನು ಕೊಡುವ ವರಗಳನ್ನು ತನಗೆ ಸ್ವಂತವಾದವುಗಳೆಂದು ಎಣಿಸಿ, ಅವುಗಳನ್ನು ಹಾಳು ಮಾಡುತ್ತಾನೆ.

3. ಈ ದುಷ್ಟ ಮಗನು ತನ್ನ ಭಾಗಕ್ಕೆ ಬಂದ ಆಸ್ತಿಯನ್ನೆಲ್ಲಾ ಕೂಡಿಸಿ, ಹಣವಾಗಿ ಕಟ್ಟಿ ಕೊಂಡು, ತಂದೆಯ ದೃಷ್ಟಿಗೆ ದೂರವಾದ ಸ್ಥಳಕ್ಕೆ ಹೋಗಿ, ದುರ್ಜನರ ಸಹವಾಸ ಮಾಡಿ, ದುರ್ವಿಷಯಗಳಲ್ಲಿ ತನ್ನ ದ್ರವ್ಯವನ್ನೆಲ್ಲಾ ವ್ರಯ ಮಾಡಿ ಬಿಟ್ಟನು. ಕೊರತೆ ಸಂಭವಿಸಿದ್ದರ ಕೂಡ ದೇಶದಲ್ಲಿ ಘೋರ ಬರ ಉಂಟಾಯಿತು. ಪಾಪದ ಮಾರ್ಗದಲ್ಲಿ ನಡಿಯುವವರಿಗೆ ಕಷ್ಟವೂ ಇಕ್ಕಟ್ಟೂ ಬರುವದೇ ಹೊರ್ತು ಮತ್ತೇನೂ ಫಲ ಬಾರದು.

4. ದರಿದ್ರ ಸಂಭವಿಸಿದಾಗಲೇ ತಂದೆಯ ಮನೆಯನ್ನು ಹುಡುಕಿ ಹೋಗ ಬೇಕಾಗಿತ್ತು. ಆದರೆ ಇವನು ಆ ದೇಶದ ಒಬ್ಬ ಒಕ್ಕಲಿಗನ ಮನೆಗೆ ಹೋಗಿ, ಅವನನ್ನು ಹೊಂದಿ ಕೊಂಡನು. ಅವನು ಇವನಿಗೆ ಹಂದಿಗಳನ್ನು ಮೇಯಿಸುವ ಮಹಾ ನೀಚವಾದ ಕೆಲಸವನ್ನು ಕೊಟ್ಟನು. ಅಯ್ಯೋ! ಲೋಕಕ್ಕೆ ಸೇವೆ ಮಾಡುವವನಿಗೆ ಲೋಕದಿಂದ ಬರುವ ಫಲವು ಇದೇ ಅಲ್ಲವೋ? ಮಾಡ ಬಾರದ ಕೆಲಸ ಮಾಡುವವರಿಗೆ ಬರ ಬಾರದ ಕಷ್ಟ ಪ್ರಾಪ್ತಿಸುವದು ಎಂಬುವದು ನಿಶ್ಚಯವೇ.

5. ಹಿಂಡಿ ಎಂಬುವದು ಮೂಲ ಭಾಷೆಯಲ್ಲಿ ಒಂದು ವಿಧವಾದ ಕಾಡು ಕಾಯಿಗಳನ್ನು ಸೂಚಿಸುತ್ತದೆ. ಹಂದಿಗಳು ತಿನ್ನುವ ಈ ಕಾಯಿಗಳನ್ನು ಕೆಲವು ಬಡವರು ಸಹ ತಿನ್ನುವದುಂಟು. ಕೆಲವು ಸಮಯಗಳಲ್ಲಿ ಇಂಥಾ ಕಾಯಿಗಳನ್ನು ಸಹ ಅವನಿಗೆ ಕೊಡುವವರಿಲ್ಲ. ಮಹಾ ಸೌಖ್ಯದಲ್ಲಿ ಬೆಳೆದ ಮಗನು ಗತಿ ಕೆಟ್ಟು, ಯತ್ನ ತಪ್ಪಿ, ಈ ಹೀನ ಸ್ಥಿತಿಗೊಳಗಾದದ್ದು ಎಷ್ಟು ಪರಿತಾಪವಾದದ್ದು! ಪಾಪದ ಮಾರ್ಗದಲ್ಲಿ ನಡಿಯುವವರಿಗೆ ಇಂಥಾ ಹೀನತ್ವ ಪ್ರಾಪ್ತಿಸುವದೇ ಹೊರ್ತು ಘನ ಬರುವದಿಲ್ಲ.

6. ಪೈತ್ಯಗಾರನ ಹಾಗಿದ್ದ ಇವನಿಗೆ ಕಡೆಯಲ್ಲಿ ಬುದ್ಧಿ ಬಂತು. ಬುದ್ಧಿಹೀನತ್ವವು ಅಥವಾ ಪೈತ್ಯವೇ ಪಾಪವು. (ಪ್ರಸಂಗಿ. ೯. ೩.) ಇವನಿಗೆ ಬುದ್ಧಿ ಬಂದಾಗ ತನ್ನ ಹೀನ ಸ್ಥಿತಿಯನ್ನೂ, ತಂದೆಯ ಮನೆಯಲ್ಲಿರುವ ಸೌಖ್ಯವನ್ನೂ, ಅಲ್ಲಿರುವ ಸೇವಕರ ಮೇಲಾದ ಸ್ಥಿತಿಯನ್ನೂ ನೆನಸಿ ಕೊಂಡನು. ಏಕಾಂಗಿಯಾಗಿದ್ದದರಿಂದ ಬಹಳ ಕಣ್ಣೀರು ಬಿಟ್ಟಿರುವನು. ತಂದೆಯ ಮನೆಗೆ ತಿರಿಗಿ ಹೋಗಿ, ತನ್ನ ದ್ರೋಹವನ್ನೂ, ದೇವರಿಗೆ ವಿರೋಧವಾಗಿ ತಾನು ಮಾಡಿದ ಪಾಪವನ್ನೂ ಅರಿಕೆ ಮಾಡಿ, ಆ ಮನೆಯಲ್ಲಿ ತಾನು ದಾಸನಾಗಿರುವದೇ ತಕ್ಕದ್ದೆಂದು ಎಣಿಸಿ ಕೊಂಡನು. ದೇವರ ಕೃಪೆಯಿಂದ ಅವನಲ್ಲಿ ನಿಜವಾದ ಪಶ್ಚಾತ್ತಾಪ ಉಂಟಾದದರಿಂದ ತಾನು ಮಾಡಿದ ದ್ರೋಹವು ದೇವರಿಗೆ ವಿರೋಧವಾದ ಪಾಪವೆಂದು ಗೋಳಾಡಿದನು. (ಕೀರ್ತ. ೫೧. ೪.)

೧೫ ಆದರೆ ಅವರಲ್ಲಿ ಒಬ್ಬನು, ಗುಣವಾದೆನೆಂದು ನೋಡಿ, ಮಹಾ ಶಬ್ದದಿಂದ ದೇವರನ್ನು ಮಹಿಮೆ ಪಡಿಸಿ,
೧೬ ತಿರುಗಿ ಕೊಂಡು, ಅವನ ಪಾದಗಳ ಬಳಿಯಲ್ಲಿ ಅಡ್ಡ ಬಿದ್ದು, ಅವನಿಗೆ ಸ್ತೋತ್ರ ಮಾಡಿದನು; ಮತ್ತು
೧೭ ಅವನು ಸಮಾರ್ಯನಾಗಿದ್ದನು. ಆಗ ಯೇಸು ಉತ್ತರ ಕೊಟ್ಟು, ಹತ್ತು ಮಂದಿ ಶುಚಿಯಾಗಲಿಲ್ಲವೋ?
೧೮ ಒಂಭತ್ತು ಮಂದಿ ಎಲ್ಲಿ? [1]ಈ ಪರದೇಶಿಯೇ ಹೊರ್ತು, ದೇವರಿಗೆ ಮಹಿಮೆ ಕೊಡುವದಕ್ಕೆ ತಿರುಗಿ ಕೊಳ್ಳ
೧೯ ವವರು ಶಿಕ್ಕಲಿಲ್ಲವೆಂದು ಹೇಳಿ, ಅವನಿಗೆ, ಎದ್ದು ಹೋಗು; ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ, ಅಂದನು.

### ಪರಮರಾಜ್ಯವನ್ನು ಕುರಿತು ಫರಿಸಾಯರು ಕೇಳಿದ ಪ್ರಶ್ನೆಗೆ ಕ್ರಿಸ್ತನು ಪ್ರತ್ಯುತ್ತರ ಕೊಟ್ಟದ್ದು.

೨೦ ಇದಲ್ಲದೆ, ದೇವರ ರಾಜ್ಯವು ಯಾವಾಗ ಬರುತ್ತದೆಂದು, ಫರಿಸಾಯರು ಅವನನ್ನು ಕೇಳಿದಾಗ, ಅವರಿಗೆ
೨೧ ಪ್ರತ್ಯುತ್ತರವಾಗಿ, ದೇವರ ರಾಜ್ಯವು [2]ಪ್ರತ್ಯಕ್ಷವಾಗಿ ಬರುವದಿಲ್ಲ; ಮತ್ತು, ಇಗೋ, ಇಲ್ಲಿ! ಅಗೋ, ಅಲ್ಲಿ!
ಎಂದು ಹೇಳರು; ಯಾಕಂದರೆ ದೇವರ ರಾಜ್ಯವು [3]ನಿಮ್ಮೊಳಗೆ ಅದೆ, ಅಂದನು.

೨೨ ಮತ್ತು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ, [4]ನೀವು ಮನುಷ್ಯನ ಮಗನ ದಿನಗಳಲ್ಲಿ ಒಂದನ್ನು ನೋಡ ಅಪೇ
೨೩ ಕ್ಷಿಸಿ, ನೋಡದೆ ಇರುವ ದಿವಸಗಳು ಬರುವವು. ಜನರು ನಿಮಗೆ, [5]ಇಗೋ, ಇಲ್ಲಿ! ಅಗೋ, ಅಲ್ಲಿ! ಅಂದರೆ,
೨೪ ಹೋಗ ಬೇಡಿರಿ; ಹಿಂಬಾಲಿಸ ಬೇಡಿರಿ; ಯಾಕಂದರೆ ಆಕಾಶದ ಒಂದು ದಿಕ್ಕಿನಿಂದ ಮಿಂಚುವ ಮಿಂಚು
ಆಕಾಶದ ಮತ್ತೊಂದು ದಿಕ್ಕಿನ ಪರ್ಯಂತರ ಹೊಳೆಯುವ ಹಾಗೆ, ಮನುಷ್ಯನ ಮಗನು ತನ್ನ ದಿವಸದಲ್ಲಿ
೨೫ ಇರುವನು. ಆದರೆ ಮೊದಲು ಅವನು ಬಹಳ ಶ್ರಮೆ ಪಟ್ಟು, ಈ [6]ಸಂತತಿಯಿಂದ ತಿರಸ್ಕರಿಸಲ್ಪಡ ಬೇಕು.

---

ಅವರ ರೋಗವು ಆಗಲೇ ವಾಶಿಯಾಗದಿದ್ದರೂ, ಕರ್ತನ ಅಪ್ಪಣೆಯ ಪ್ರಕಾರ ಹೋದರೆ, ದಾರಿಯಲ್ಲಿ ವಾಶಿಯಾಗುವದೆಂದು ನಂಬಿ ಹೋದರು. ದೇವರನ್ನು ಬೇಡಿ ಕೊಳ್ಳ ತಕ್ಕ ವಿಶ್ವಾಸವು ಆತನ ಕಟ್ಟಳೆಗಳಿಗೆ ವಿಧೇಯವಾಗುವ ಹಾಗೆಯೂ ಮಾಡುವದು.

1. (ಯೋಹಾ. ೪. ೯. ವಚನದ ವ್ಯಾಖ್ಯಾನ ನೋಡ ಬೇಕು.) ಕರ್ತನ ಮಾತನ್ನು ನಂಬಿ ಹೋದ ಹತ್ತು ಮಂದಿ ಕುಷ್ಠರೋಗಿಗಳು ದಾರಿಯಲ್ಲಿ ಸ್ವಸ್ಥವಾದವರಲ್ಲಿ ಯೆಹೂದ್ಯರಾದ ಒಂಭತ್ತು ಮಂದಿ ತಮ್ಮ ಮನೆಗಳಿಗೆ ಹೋಗಲಾಗಿ, ಸಮಾರ್ಯನಾದ ಒಬ್ಬ ಅನ್ಯನು ಮಾತ್ರ ಕೃತಜ್ಞತೆಯಿಂದ ಕರ್ತನಿಗೆ ಸ್ತೋತ್ರ ಕೊಡುವದಕ್ಕೆ ಬಂದನು. ಇವನಲ್ಲಿ ಜಯವುಂಟು ಮಾಡ ತಕ್ಕ ಪೂರ್ಣ ವಿಶ್ವಾಸವಿತ್ತು. ದೇವರಿಂದ ಅಪಾರ ಮೇಲು ಹೊಂದಿದ ಜನರಲ್ಲಿ ಎಷ್ಟು ಸ್ವಲ್ಪ ಮಂದಿ ಆತನ ಪ್ರೀತಿಯನ್ನರಿತು ಆತನಿಗೆ ಸ್ತೋತ್ರ ಕೊಡುತ್ತಾರೆ! ಒಂಭತ್ತು ಮಂದಿ ಎಲ್ಲಿ? ಎಂದು ಆತನು ಕೇಳಿದ ಪ್ರಶ್ನೆಯನ್ನು ನಾವು ಮರೆಯದೆ ಇರುವ.

2. ದೇವರ ರಾಜ್ಯವು ಅಂತರಂಗವಾಗಿ ದಿನ ಕ್ರಮೇಣ ಬರುವದೇ ಹೊರ್ತು, ಪ್ರತ್ಯಕ್ಷವಾಗಿ ಬರುವದಿಲ್ಲ.

3. ನಿಮ್ಮೊಳಗೆ ಎಂಬುವದು, ಯೆಹೂದ್ಯರಾದ ನಿಮ್ಮೊಳಗೆ ಎಂಬ ಅರ್ಥವು. ಫರಿಸಾಯರ ಭಕ್ತಿ ಹೊರಗಿನ ಭಕ್ತಿಯೇ ಹೊರ್ತು (ಮತ್ತಾ. ೨೩. ೨೮.) ಅಂತರ್ಯದ ನಿಜವಾದ ಭಕ್ತಿಯಲ್ಲ. ಆದದರಿಂದ ದೇವರ ರಾಜ್ಯವು ಅವರೊಳಗೆ ಇರಲಿಲ್ಲ. ಅದು ಉತ್ತಮ ಭಕ್ತರೆಲ್ಲರಲ್ಲಿಯೂ ಇರುತ್ತದೆ. (ರೋಮಾ. ೧೪. ೧೭.) ಅವರ ಹೃದಯಕಮಲದಲ್ಲಿ ದೇವರು ವಾಸವಾಗಿರುತ್ತಾನೆ. ದೇವರ ರಾಜ್ಯವನ್ನು ಸ್ಥಾಪಿಸಿದ ಕ್ರಿಸ್ತನು ಅವರೊಳಗೆ ಇದ್ದದರಿಂದ, ಆ ರಾಜ್ಯವು ನಿಮ್ಮಲ್ಲಿ ಅದೆ ಎಂದು ಹೇಳಿದನು. (ಯೋಹಾ. ೧. ೨೬.)

4. ಫರಿಸಾಯರ ಬಳಿಯಲ್ಲಿ ಮಾತಾಡಿದ ತರುವಾಯ ದೇವರ ರಾಜ್ಯವು ಸಂಗಡಲೆ ಬರುವದೆಂದು ನೆನಸಿದ್ದ ತನ್ನ ಶಿಷ್ಯರಿಗೆ ಈ ಮಾತುಗಳನ್ನು ಹೇಳುತ್ತಾನೆ. ನಿಮಗೆ ಉಪದ್ರದ ಕಾಲವು ಬರುವದು. ಆ ಕಾಲದಲ್ಲಿ ಈಗ ನನ್ನನ್ನು ನೋಡಿ, ನನ್ನ ಬೋಧನೆ ಕೇಳ ತಕ್ಕ ಭಾಗ್ಯ ಪ್ರಾಪ್ತಿಯಾದ ಈ ದಿವಸಗಳ ಹಾಗೆ ಒಂದು ದಿವಸವು ದೊರಕುವದೆಂದು ನೀವು ಅಪೇಕ್ಷಿಸಿದರೂ ದೊರಕಲಾರದೆಂದು ಹೇಳಿದನು.

5. ೨೩—೩೭. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೪. ೨೩—೪೧. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

6. ದೇವರ ರಾಜ್ಯವೆಂದು ಅವರು ನೆನಸಿದ್ದಕ್ಕೂ, ಅದನ್ನು ಕುರಿತು ಕ್ರಿಸ್ತನು ಹೇಳಿದ್ದಕ್ಕೂ, ಬಹಳ ವ್ಯತ್ಯಾಸ ಉಂಟು. ಆತನು ಮಹಿಮೆ ಪಡುವದಕ್ಕಿಂತ ಮುಂಚೆ ಉಪದ್ರ ಪಡ ಬೇಕಾದದ್ದು ಅವಶ್ಯವಾಗಿದೆ. ಹಾಗೆಯೇ ಆತನ ಶಿಷ್ಯರು ಸಹ ಅನುಭವಿಸ ಬೇಕು. (ಮತ್ತಾ. ೧೦. ೨೪, ೨೫. ರೋಮಾ. ೮. ೧೭. ೧ ಪೇತ್ರ. ೪. ೧೩.) ಭಕ್ತಿಹೀನರಾದ ಆ ಸಂತತಿಯವರಿಗೆ ಆ ದಿವಸವು ದೇವರ ಉಗ್ರ ಕೋಪವನ್ನು ಪ್ರಕಟ ಮಾಡುವ ಭಯಂಕರವಾದ ದಿವಸವಾಗಿರುವದು. ನೀತಿವಂತನಾದ ನೋಹನು ಹಡಗದಲ್ಲಿ ಪ್ರವೇಶಿಸಿದಾಗಲೇ ಜಲಪ್ರಳಯದಿಂದ ದುರ್ಮಾರ್ಗರು ನಾಶವಾದ ಪ್ರಕಾರವೂ, ಲೋಟನು ಸೊದೋಮನ್ನು ಬಿಟ್ಟು ಹೊರಟಾಗಲೇ ಅಕ್ರಮ ತುಂಬಿದ ಆ ಪಟ್ಣವು ಬೆಂಕಿಯಿಂದ ನಾಶವಾದ ಪ್ರಕಾರವೂ, ಕ್ರಿಸ್ತನು ಆ ಸಂತತಿಯವರಿಂದ ತಳ್ಳಲ್ಪಟ್ಟು, ಆತನ ಶಿಷ್ಯರು ಅವರನ್ನು ಬಿಟ್ಟು ಹೊರಟಾಗಲೇ ಸೊದೋಮಿಗೆ ಸಮಾನವಾದ ಯೆರೂಸಲೇಮು ಪಟ್ಣಕ್ಕೂ, ಅದರಲ್ಲಿ ವಾಸಿಸುವ ಭಕ್ತಿಹೀನರಿಗೂ, ಫಕ್ಕನೆ ನಾಶ ಬರುವದು. (ಯೆಶಾ. ೧. ೧೦. ಯೆರೆ. ೨೩. ೧೪.)



೨೬ ಮತ್ತು ನೋಹನ ದಿವಸಗಳಲ್ಲಿ ಆದ ಹಾಗೆ, ಮನುಷ್ಯನ ಮಗನ ದಿವಸಗಳಲ್ಲಿಯೂ ಆಗುವದು.
೨೭ ನೋಹನು ನಾವೆಯಲ್ಲಿ ಶೇರಿದ ದಿನದ ವರಿಗೂ ಉಣ್ಣುತ್ತಾ, ಕುಡಿಯುತ್ತಾ, ಮದುವೆ ಮಾಡುತ್ತಾ,
೨೮ ಮದುವೆಯಾಗುತ್ತಾ ಇದ್ದರು. ಆಗ ಜಲಪ್ರಳಯವು ಬಂದು, ಎಲ್ಲರನ್ನು ಸಂಹರಿಸಿತು. ಅದೇ ಪ್ರಕಾರ
ಲೋಟನ ದಿವಸಗಳಲ್ಲಿ ಆದ ಹಾಗೆ, ಉಣ್ಣುತ್ತಾ, ಕುಡಿಯುತ್ತಾ, ಕ್ರಯ ವಿಕ್ರಯ ಮಾಡುತ್ತಾ, ನೆಡುತ್ತಾ,
೨೯ ಮನೆ ಕಟ್ಟುತ್ತಾ ಇದ್ದರು. ಆದರೆ ಲೋಟನು ಸೊದೋಮಿನಿಂದ ಹೊರಟ ದಿವಸದಲ್ಲಿ ಬೆಂಕಿಯೂ ಗಂಧ
೩೦ ಕವೂ ಆಕಾಶದಿಂದ ಗರೆದು, ಎಲ್ಲರನ್ನು ಸಂಹರಿಸಿದವು. ಮನುಷ್ಯನ ಮಗನು ಪ್ರತ್ಯಕ್ಷವಾಗುವ ದಿವಸದಲ್ಲಿ
ಹಾಗೆಯೇ ಆಗುವದು.

೩೧ ಆ ದಿವಸದಲ್ಲಿ [1]ಮಾಳಿಗೆಯ ಮೇಲೆ ಇರುವವನು ಮನೆಯಲ್ಲಿ ಇರುವ ತನ್ನ ಸಾಮಗ್ರಿಗಳನ್ನು ತಕ್ಕೊಂಡು
ಹೋಗುವದಕ್ಕೆ ಇಳಿದು ಹೋಗದೆ ಇರಲಿ. ಅದೇ ಪ್ರಕಾರ ಹೊಲದಲ್ಲಿ ಇರುವವನು ಹಿಂದಕ್ಕೆ ತಿರುಗದೆ
೩೨, ೩೩ ಇರಲಿ. [2]ಲೋಟನ ಹೆಂಡತಿಯನ್ನು ಜ್ಞಾಪಕ ಮಾಡಿ ಕೊಳ್ಳಿರಿ. ತನ್ನ ಪ್ರಾಣವನ್ನು ರಕ್ಷಿಸ ಬೇಕೆಂ
ದಿರುವವನು ಅದನ್ನು ಕಳಕೊಳ್ಳುವನು; ಮತ್ತು ಅದನ್ನು ಕಳಕೊಳ್ಳುವವನು ಅದನ್ನು ಬದುಕಿಸುವನು.
೩೪ ಆ ರಾತ್ರಿಯಲ್ಲಿ ಇಬ್ಬರು ಒಂದೇ ಮಂಚದ ಮೇಲೆ ಇರುವರು; ಒಬ್ಬನು ತಕ್ಕೊಳ್ಳಲ್ಪಡುವನು, ಮತ್ತೊ
೩೫ ಬ್ಬನು ಬಿಡಲ್ಪಡುವನು. ಇಬ್ಬರು ಸ್ತ್ರೀಯರು ಕೂಡ ಬೀಸುವರು; ಒಬ್ಬಳು ತಕ್ಕೊಳ್ಳಲ್ಪಡುವಳು, ಮತ್ತೊ
೩೬ ಬ್ಬಳು ಬಿಡಲ್ಪಡುವಳು. ಇಬ್ಬರು ಹೊಲದಲ್ಲಿರುವರು; ಒಬ್ಬನು ತೆಗೆದು ಕೊಂಡು ಹೋಗಲ್ಪಡುವನು,
ಮತ್ತೊಬ್ಬನು ಬಿಡಲ್ಪಡುವನು, ಎಂದು ನಿಮಗೆ ಹೇಳುತ್ತೇನೆ.
೩೭ ಅವರು ಉತ್ತರ ಕೊಟ್ಟು, ಅವನಿಗೆ, ಕರ್ತನೇ, [3]ಎಲ್ಲಿ? ಅಂದಾಗ, ಅವನು ಅವರಿಗೆ, ಹೆಣವು ಎಲ್ಲಿಯೋ, ಅಲ್ಲಿ
ಹದ್ದುಗಳು ಕೂಡಿ ಕೊಳ್ಳುವವು, ಅಂದನು.

### ಯಥಾರ್ಥವಾದ ಪ್ರಾರ್ಥನೆಯ ಸ್ವಭಾವವನ್ನು ತಿಳಿಯ ಪಡಿಸುವ ಸಾಮ್ಯಗಳು.

**18.** ಇದಲ್ಲದೆ [4]ಆಯಾಸ ಪಡದೆ, ಯಾವಾಗಲೂ ಪ್ರಾರ್ಥನೆ ಮಾಡ ಬೇಕೆಂದು, ಒಂದು ಸಾಮ್ಯವನ್ನು
೨ ಅವರಿಗೆ ಹೇಳಿದನು. ಏನಂದರೆ, [5]ದೇವರಿಗೆ ಭಯ ಪಡದೆ, ಮನುಷ್ಯನನ್ನು ಲಕ್ಷ್ಯ ಮಾಡದೆ ಇರುವ,

---

1. ಮತ್ತಾ. ೨೪. ೧೭. ವಚನದ ವ್ಯಾಖ್ಯಾನ ನೋಡ ಬೇಕು.

2. (ಉತ್ಪ. ೧೯. ೧೭, ೨೬.) ದೇವದೂತನಿಂದ ಎಳೆಯಲ್ಪಟ್ಟು, ಪಟ್ಣವನ್ನು ಬಿಟ್ಟು ಓಡಿ ಹೋದವಳು ತನ್ನ ಪ್ರಾಣ ತಪ್ಪಿಸಿ ಕೊಳ್ಳದೆ ಉಪ್ಪಿನ ಸ್ತಂಭವಾದದ್ದು ಆಶ್ಚರ್ಯವೇ. ಪ್ರಪಂಚದ ಬದುಕು ನಿತ್ಯವೆಂದು ನಂಬುವವರಿಗೂ, ದುರ್ಜನರ ಸಹವಾಸವನ್ನು ಪ್ರೀತಿ ಮಾಡುವವರಿಗೂ, ಲೋಟನ ಹೆಂಡತಿಯ ಸಂಗತಿಯು ಒಳ್ಳೇ ಪ್ರಸಂಗವಾಗಿದೆ.

3. ಎಲ್ಲಿ? ಎಂದು ಶಿಷ್ಯರು ಕೇಳಿದ ಪ್ರಶ್ನೆಗೆ, ಕರ್ತನು ದೇವರ ಆಜ್ಞೆನಿರ್ಣಯಗಳೂ ದಂಡನೆಗಳೂ ಯೆರೂಸಲೇಮಿನಲ್ಲಿ ಮಾತ್ರವಲ್ಲ, ಅಕ್ರಮವು ಅಧಿಕವಾಗಿರುವ ಎಲ್ಲಾ ಸ್ಥಳಗಳಲ್ಲಿಯೂ ಸಂಭವಿಸುವವೆಂದು ಹೇಳಿದನು. ಕಡೇ ಮಟ್ಟಿಗೂ ಸನ್ಮಾರ್ಗರೂ ದುರ್ಮಾರ್ಗರೂ ಒಂದಾಗಿ ಕಲತಿರುವರು. ಕಡೇ ತುತೂರಿಯ ಧ್ವನಿಯಾಗುವಾಗ, ನೀತಿವಂತರು ದೇವರ ಆಶೀರ್ವಾದವನ್ನೂ, ಅನೀತಿವಂತರು ದೇವರ ಶಾಪವನ್ನೂ ಹೊಂದುವದಕ್ಕಾಗಿ ಪ್ರತ್ಯೇಕವಾಗುವರು.

4. ಯಥಾರ್ಥವಾದ ಪ್ರಾರ್ಥನೆಯ ಸ್ವಭಾವವನ್ನು ತೋರಿಸುವದಕ್ಕೆ ಕ್ರಿಸ್ತನು ಎರಡು ಸಾಮ್ಯಗಳನ್ನು ಹೇಳಿದನು. ೧ನೇದು, ನಿಜವಾದ ಪ್ರಾರ್ಥನೆಯು ಆಸಕ್ತಿಯೂ ಸ್ಥಿರಸಾಧನೆಯೂ ಉಳ್ಳದ್ದಾಗಿರ ಬೇಕು. (೧—೮.) ೨ನೇದು, ಪ್ರಾರ್ಥಿಸುವವರು ತಮ್ಮ ಪಾಪವನ್ನೂ ನೀಚತ್ವವನ್ನೂ ಚನ್ನಾಗಿ ಗ್ರಹಿಸಿ ಕೊಳ್ಳ ಬೇಕು. (೯—೧೪.) ಅನೀತಿಯುಳ್ಳ ನ್ಯಾಯಾಧಿಪತಿಯ ಬಳಿಯಲ್ಲಿ ಎಡೆಬಿಡದೆ ಬೇಡಿ ಕೊಂಡು, ನ್ಯಾಯತೀರ್ಪು ಮಾಡಿ ಕೊಂಡ ವಿಧವೆಯ ಸಂಗತಿಯಿಂದ, ದೇವರು ಉತ್ತಮ ಭಕ್ತರು ಮಾಡುವ ವಿಜ್ಞಾಪನೆಗಳನ್ನು ಆಲೈಸಿ ಪ್ರತ್ಯುತ್ತರ ಕೊಡುವನೆಂದು ತಿಳಿಯ ತಕ್ಕದ್ದು. ಸುಂಕದವನನ್ನೂ ಫರಿಸಾಯನನ್ನೂ ಕುರಿತ ಸಾಮ್ಯದಲ್ಲಿ ಸ್ವಪುಣ್ಯವನ್ನು ಅರಿಕೆ ಮಾಡಿದ ಮನುಷ್ಯನ ಸ್ವಭಾವವನ್ನೂ, ತನ್ನ ಪಾಪವನ್ನು ಯಥಾರ್ಥವಾಗಿ ಗ್ರಹಿಸಿದ ಮನುಷ್ಯನ ಗುಣವನ್ನೂ ಚನ್ನಾಗಿ ಕಾಣ ಬಹುದು. ಮಕ್ಕಳನ್ನು ಆಶೀರ್ವದಿಸಿದ ಸಂಗತಿಯಲ್ಲಿ ದೀನತ್ವವು ಅವಶ್ಯವೆಂದೂ, (೧೫—೧೭.) ಅಧಿಪತಿಗೆ ಹೇಳಿದ ಬೋಧನೆಯಿಂದ ದೇವಭಕ್ತರು ತಮ್ಮನ್ನು ಅಲ್ಲಗಳೆದು ನಡಿಯ ಬೇಕೆಂದೂ (೧೮—೩೦.) ತೋರಿಸಿ, ಈ ಸತ್ಯ ಸಂಗತಿಗಳನ್ನು ದೃಷ್ಟಾಂತ ಪಡಿಸುವದಕ್ಕೆ ತಾನೇ ಮರಣ ಹೊಂದುವೆನೆಂದು ಹೇಳಿದನು. (೩೧—೩೪.) ಮಾರ್ಗದಲ್ಲಿ ಭಿಕ್ಷ ಕೇಳುತ್ತಿದ್ದ ಕುರುಡನಿಗೆ ದೃಷ್ಟಿಯನ್ನು ಕೊಟ್ಟು, (೩೫—೪೩.) ಸುಂಕದವನಾದ ಜಕ್ಕಾಯನ ಮನೆಗೆ ಹೋದನು. (೧೯. ೨—೧೦.) ಹತ್ತು ವರಹಗಳನ್ನು ಕುರಿತ ಸಾಮ್ಯದೊಂದಿಗೆ ಈ ಭಾಗವು ಮುಗಿಯುತ್ತದೆ. (೧೧—೨೭.)

5. ಇವನ ದುರ್ಮಾರ್ಗತನವನ್ನು ಇವನ ಕೆಟ್ಟ ಗುಣಗಳಿಂದ ತಿಳಿಯ ಬಹುದು. ಇವನು ದೇವರಿಗೆ ಭಯ ಪಟ್ಟವನಲ್ಲ. ಲೋ

೩ ಒಬ್ಬ ನ್ಯಾಯಾಧಿಪತಿಯು ಒಂದು ಪಟ್ಟಣದಲ್ಲಿ ಇದ್ದನು. ಆ ಪಟ್ಟಣದಲ್ಲಿ ಒಬ್ಬ ವಿಧವೆ ಇದ್ದಳು. ಅವಳು
ಅವನ ಬಳಿಗೆ ಬಂದು, ನನ್ನ [1]ಎದುರಾಳಿಯಿಂದ ನನ್ನನ್ನು ಬಿಡಿಸಿ, ನನಗೆ ನ್ಯಾಯ ತೀರಿಸು, ಅಂದಳು.
೪ ಸ್ವಲ್ಪ ಕಾಲ ಅವನಿಗೆ ಮನಸ್ಸಿರಲಿಲ್ಲ. ಆ ಮೇಲೆ, ನಾನು ದೇವರಿಗೆ ಭಯ ಪಡದೆ, ಮನುಷ್ಯನನ್ನು ಲಕ್ಷ್ಯ
೫ ಮಾಡದೆ ಇದ್ದಾಗ್ಯೂ, ಈ ವಿಧವೆ ನನಗೆ ತೊಂದರೆ ಪಡಿಸುವ ಕಾರಣ, ಅವಳು ಕಡೇ ವರಿಗೂ ಬಂದು,
ನನ್ನನ್ನು ಪೀಡಿಸದ ಹಾಗೆ, ಅವಳಿಗೆ ನ್ಯಾಯ ತೀರಿಸುವೆನು ಅಂದು ಕೊಂಡನೆಂದು ಹೇಳಿದನು.
೬, ೭ ಕರ್ತನು ಹೇಳಿದ್ದು, ಅನ್ಯಾಯವಾದ ನ್ಯಾಯಾಧಿಪತಿ ಹೇಳುವದನ್ನು ಕೇಳಿರಿ. ಹೀಗಿದ್ದರೆ, ದೇವರು,
ರಾತ್ರಿ ಹಗಲು ತನಗೆ [2]ಮೊರೆ ಇಡುವ ತಾನು ಆದು ಕೊಂಡವರಿಗೆ, ಅವರಿಗೆ ದೀರ್ಘಶಾಂತನಾಗಿದ್ದು,
೮ ನ್ಯಾಯ ತೀರಿಸನೋ? ನಿಮಗೆ ಹೇಳುತ್ತೇನೆ, ಅವರಿಗೆ [3]ಬೇಗ ನ್ಯಾಯ ತೀರಿಸುವನು. ಆದಾಗ್ಯೂ ಮನು
ಷ್ಯನ ಮಗನು ಬರುವಾಗ, [4]ಭೂಮಿಯ ಮೇಲೆ ವಿಶ್ವಾಸವನ್ನು ಕಂಡು ಕೊಳ್ಳುವನೋ?
೯ ಮತ್ತು ತಾವು ನೀತಿವಂತರೆಂದು ನಿಶ್ಚಯಿಸಿ ಕೊಂಡು, [5]ಮಿಕ್ಕಾದವರನ್ನು ಅಸಡ್ಡೆ ಮಾಡುವ ಕೆಲವರಿಗೆ
೧೦ ಈ ಸಾಮ್ಯವನ್ನು ಹೇಳಿದನು; ಏನಂದರೆ, ಇಬ್ಬರು ಮನುಷ್ಯರು ಪ್ರಾರ್ಥನೆ ಮಾಡ ದೇವಾಲಯಕ್ಕೆ ಏರಿ
೧೧ ಹೋದರು; ಒಬ್ಬನು ಫರಿಸಾಯನು, ಮತ್ತೊಬ್ಬನು ಸುಂಕದವನು. ಫರಿಸಾಯನು ನಿಂತು ಕೊಂಡು,
ತನ್ನಲ್ಲಿ ಪ್ರಾರ್ಥಿಸಿದ್ದೇನಂದರೆ, ದೇವರೇ, ಕಳ್ಳರೂ ಅನೀತಿವಂತರೂ ವ್ಯಭಿಚಾರಿಗಳೂ ಆಗಿರುವ ಮಿಕ್ಕಾದ
ಮನುಷ್ಯರ ಹಾಗೆಯೂ, ಈ ಸುಂಕದವನ ಹಾಗೆಯೂ, ನಾನಲ್ಲದ ಕಾರಣ ನಿನಗೆ ಸ್ತೋತ್ರ ಮಾಡುತ್ತೇನೆ;
೧೨ ನಾನು ವಾರಕ್ಕೆ ಎರಡು ಸಾರಿ ಉಪವಾಸ ಮಾಡುತ್ತೇನೆ; [6]ನನ್ನ ಎಲ್ಲಾ ಸಂಪಾದನೆಯಲ್ಲಿ ಹತ್ತರಲ್ಲೊಂದು
೧೩ ಕೊಡುತ್ತೇನೆ. ಆದರೆ ಸುಂಕದವನು [7]ದೂರದಲ್ಲಿ ನಿಂತು, ಕಣ್ಣುಗಳನ್ನಾದರೂ ಆಕಾಶಕ್ಕೆ ಎತ್ತ ಮನಸ್ಸಿ

ಕಕ್ಕೆ ಅಂಜುವವನಲ್ಲ. ದೇವರಿಗೆ ಭಯ ಪಡದವರಾದರೂ, ಲೋಕಕ್ಕೆ ಅಂಜಿ, ಒಳ್ಳೇ ಮಾರ್ಗದಲ್ಲಿ ನಡಿಯುವವರ ಹಾಗೆ ಇರುವರು. ಆದರೆ ಈ ನ್ಯಾಯಾಧಿಪತಿಯು ಯಾರಿಗೂ ಅಂಜದೆ, ತನ್ನ ಮನಸೋಇಚ್ಛೆಯ ಪ್ರಕಾರ ನಡೆದ ದುರ್ಮಾರ್ಗನಾಗಿದ್ದನು.

1. ವಿಧವೆಗಳಿಗೆ ಹಗೆಯವರು ಅನೇಕರು ಇರುವರು. ಸ್ನೇಹಿತರು ಇರುವದು ಅಪರೂಪ. ಅವರಿಗೆ ಪ್ರಾಪ್ತಿಸುವ ಕಷ್ಟಗಳನ್ನು ಕುರಿತು, ಹೊರ. ೨೨. ೨೨. ಮಲಕಿ. ೩. ೫ಲ್ಲಿಯೂ ನೋಡ ಬಹುದು. ಫರಿಸಾಯರು ಅವರನ್ನು ಬಹಳ ಕುಗ್ಗಿಸಿದರು. (ಮಾರ್ಕ. ೧೨. ೪೦.)

2. ತಮ್ಮ ಪ್ರಾರ್ಥನೆಗಳಲ್ಲಿಯೂ (ಪ್ರಕಟ. ೬. ೧೦.) ತಾವು ತಾಳ್ಮೆಯಿಂದ ಸಹಿಸುವ ಉಪದ್ರಗಳಲ್ಲಿಯೂ ಕೂಗುವವರು. (ಉತ್ಪ. ೪. ೧೦.) ಸ್ವಲ್ಪ ಕಾಲ ಎಡೆಬಿಡದೆ ಹೋರಾಡಿದ ವಿಧವೆಗೆ ಅನೀತಿಯುಳ್ಳ ನ್ಯಾಯಾಧಿಪತಿಯು ನ್ಯಾಯ ತೀರಿಸುವನಾದರೆ, ರಾತ್ರಿ ಹಗಲು ಬೇಸರ ಪಡದೆ ಕೂಗುವ ತನ್ನ ಭಕ್ತರಿಗೆ ನೀತಿನ್ಯಾಯಾಧಿಪತಿಯಾದ ದೇವರು ನ್ಯಾಯ ತೀರಿಸದೆ ಇರುವನೋ?

3. ದೇವರು ನ್ಯಾಯ ತೀರಿಸುವದು ಆಲಸ್ಯವೆಂದು ಮನುಷ್ಯರಿಗೆ ತೋರಿದಾಗ್ಯೂ, ಅದು ಬೇಗ ಆಗುವದೇ ಹೊರ್ತು ಆಲಸ್ಯವಾಗುವದಿಲ್ಲ. (೨ ಪೇತ್ರ. ೩. ೮—೧೦.)

4. ದೇವರು ನ್ಯಾಯ ತೀರಿಸುವ ದಿವಸ ಬರುವಾಗ ಭೂಮಿಯ ಮೇಲೆ ವಾಸಿಸುವವರಲ್ಲಿ ಕೆಲವು ಮಂದಿ ಮಾತ್ರ ವಿಶ್ವಾಸವೂ ಭಕ್ತಿಯೂ ಉಳ್ಳವರಾಗಿ ಕಾಣಲ್ಪಡುವರೆಂದು ತೋರುತ್ತದೆ. ಭಕ್ತಿಹೀನರು, ದೇವರನ್ನು ಕಂಡವರ್ಯಾರು? ಮೋಕ್ಷವನ್ನು ಕಂಡವರ್ಯಾರು? ಎಂದು ಹೇಳಿ, ತಮ್ಮ ಮನಸೋಇಚ್ಛೆಯಾಗಿ ದುರ್ಮಾರ್ಗದಲ್ಲಿ ನಡಿಯುತ್ತಾರೆ. ಭಕ್ತರು ತಮಗೆ ಪ್ರಾಪ್ತಿಸುವ ಕ್ರೂರ ಉಪದ್ರಗಳಲ್ಲಿ ಮನಸೋತು, ದುರ್ಬಲವುಳ್ಳವರಾಗುತ್ತಾರೆ. ಆದದರಿಂದ ನಾವು ಈ ದಿವ್ಯ ಬೋಧನೆಯನ್ನು ನೆನಸಿ, ಯಾವಾಗಲೂ ಎಚ್ಚರಿಕೆಯೂ ಜಾಗ್ರತೆಯೂ ಉಳ್ಳವರಾಗಿರ ಬೇಕು.

5. ಫರಿಸಾಯರು ದೇವರನ್ನು ನಂಬದೆ, ತಮ್ಮನ್ನೇ ನಂಬಿಕೊಂಡಿದ್ದರು. ತಮ್ಮ ಹೃದಯದ ಕೆಟ್ಟತನವನ್ನು ನೋಡದೆ, ಮಿಕ್ಕಾದವರನ್ನು ಅಲ್ಪವಾಗಿ ಎಣಿಸಿದರು. ದೇವರನ್ನು ನಂಬದವರು ತಮ್ಮನ್ನೇ ನಂಬಿ ಕೊಂಡು, ಉಳಿದವರನ್ನು ಅಲಕ್ಷ್ಯವಾಗಿ ಎಣಿಸಿ ನಡಿಯುವರೆಂಬುವದಕ್ಕೆ ಸಂದೇಹವಿಲ್ಲ.

6. (ಮತ್ತಾ. ೨೩. ೨೩. ವಚನದ ವ್ಯಾಖ್ಯಾನ ನೋಡ ಬೇಕು.) ಫರಿಸಾಯನು ಎಲ್ಲರೂ ನೋಡ ತಕ್ಕ ಹಾಗೆ ನಿಂತು ಕೊಂಡು, ಲೋಕದಲ್ಲಿರುವ ಮಿಕ್ಕಾದವರ ಹಾಗೆ ತಾನು ಇಂಥಿಂಥ ಪಾಪಗಳನ್ನು ಮಾಡದೆ ಇರುವ ಪರಿಶುದ್ಧನೆಂದೂ, ಇಂಥಿಂಥ ಧರ್ಮಗಳನ್ನು ಮಾಡಿದ ಪುಣ್ಯವಂತನೆಂದೂ, ತನ್ನ ಸ್ವಂತ ನೀತಿಯನ್ನು ವಿವರಿಸುತ್ತಾನೆ. ಅವನು ಪ್ರಾರ್ಥಿಸುವಾಗ ದೂರದಲ್ಲಿ ನಿಂತಿದ್ದ ಸುಂಕದವನನ್ನು ಸಹ ಕೂಡಿಸಿ ಕೊಂಡು, ಅವನನ್ನು ನಿಂದೆಯಾಗಿ ಮಾತಾಡುತ್ತಾನೆ. ತನ್ನ ಕೊರತೆಯನ್ನು ಕುರಿತು ಒಂದು ಮಾತಾದರೂ ಹೇಳಲಿಲ್ಲ. ತನ್ನ ಪಾಪವನ್ನು ಕುರಿತು ಸ್ವಲ್ಪವಾದರೂ ಅರಿಕೆ ಮಾಡಲಿಲ್ಲ. ಇದು ಮಹಾ ಪರಿಶುದ್ಧ ದೇವರ ಮುಂದೆ ಮಾಡ ತಕ್ಕ ಪ್ರಾರ್ಥನೆಯೋ?

7. ಫರಿಸಾಯನ ಹಾಗೆ ಸುಂಕದವನು ಪರಿಶುದ್ಧ ಸ್ಥಳದ ಸಮೀಪಕ್ಕೆ ಹೋಗದೆ, ದೂರವಾಗಿ ನಿಂತು, ಪರಲೋಕದ ಕಡೆಗೆ ತನ್ನ ಕಣ್ಣುಗಳನ್ನು ಎತ್ತಲಾರದೆ, (ಯೆಶಾ. ೬. ೨.) ಪಾಪವು ನೆಲೆಗೊಂಡಿದ್ದ ತನ್ನ ಎದೆಯ ಮೇಲೆ ಬಡುಕೊಂಡು, "ಪಾಪಿಯಾದ ನನ್ನನ್ನು ಕರುಣಿಸು" ಎಂದು ಒಂದು ಕ್ಲುಪ್ತವಾದ ಪ್ರಾರ್ಥನೆ ಮಾಡಿದನು. ಹೇಳಿದ ಮಾತುಗಳನ್ನು ತನ್ನ ಅಂತರ್ಯದಲ್ಲಿ ಗ್ರಹಿಸಿ ಹೇಳಿದನು. ಫರಿಸಾಯನ ಯೋಚನೆಯಲ್ಲಿ ತಾನು ಪುಣ್ಯವಂತನು, ಉಳಿದವರೆಲ್ಲರೂ ಪಾಪಿಷ್ಠರು. ಸುಂಕದವನ ಯೋಚ



೧೪ ಲ್ಲದೆ, ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಎಂದು ಹೇಳಿ, ತನ್ನ ಎದೆ ಬಡುಕೊಂಡನು. ನಿಮಗೆ
ಹೇಳುತ್ತೇನೆ, ಅವನಿಗಿಂತ ಇವನು [1]ನೀತಿನಿರ್ಣಯ ಪಟ್ಟವನಾಗಿ ತನ್ನ ಮನೆಗೆ ಇಳಿದು ಹೋದನು. ಯಾಕಂ
ದರೆ ತನ್ನನ್ನು ಹೆಚ್ಚಿಸಿ ಕೊಳ್ಳುವವನು ತಗ್ಗಿಸಲ್ಪಡುವನು; ಆದರೆ ತನ್ನನ್ನು ತಗ್ಗಿಸಿ ಕೊಳ್ಳುವವನು [2]ಹೆಚ್ಚಿ
ಸಲ್ಪಡುವನು.

### ಕ್ರಿಸ್ತನು ಕೂಸುಗಳನ್ನು ಆಶೀರ್ವದಿಸಿದ್ದು.

೧೫ ಇದಲ್ಲದೆ ಅವುಗಳನ್ನು ಮುಟ್ಟುವ ಹಾಗೆ, [3]ಕೂಸುಗಳನ್ನು ಸಹ ಅವನ ಬಳಿಗೆ ತಂದರು. ಶಿಷ್ಯರು ಅದನ್ನು
೧೬ ನೋಡಿ, ಅವರನ್ನು ಗದರಿಸಿದರು. ಆದರೆ ಯೇಸು ಅವುಗಳನ್ನು ಹತ್ತರ ಕರೆದು, ಹೇಳಿದ್ದೇನಂದರೆ, ನನ್ನ
ಬಳಿಗೆ ಬರುವದಕ್ಕೆ ಕೂಸುಗಳನ್ನು ಬಿಡಿರಿ; ಅವುಗಳನ್ನು ಅಡ್ಡಿ ಮಾಡ ಬೇಡಿರಿ; ಯಾಕಂದರೆ ದೇವರ ರಾಜ್ಯವು
೧೭ ಇಂಥವರದಾಗಿದೆ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಕೂಸಾಗಿ ದೇವರ ರಾಜ್ಯವನ್ನು ಹೊಂದದವನು
ಅದರಲ್ಲಿ ಪ್ರವೇಶಿಸುವದಿಲ್ಲ.

### ನಿತ್ಯಜೀವ ಹೊಂದುವದಕ್ಕೆ ಒಬ್ಬ ಶ್ರೇಷ್ಠನು ಕೇಳಿದ ಪ್ರಶ್ನೆಗೆ ಕ್ರಿಸ್ತನ ಉತ್ತರವು. ಐಶ್ವರ್ಯದಿಂದುಂಟಾಗುವ ಅಪಾಯವು; ಕ್ರಿಸ್ತನಿಗಾಗಿ ಹೊಂದುವ ನಷ್ಟದಿಂದ ಬರುವ ಲಾಭವು.

೧೮ ಆಗ [4]ಒಬ್ಬ ಅಧಿಪತಿ, ಒಳ್ಳೇ ಬೋಧಕನೇ, ನಿತ್ಯಜೀವವನ್ನು ಬಾಧ್ಯವಾಗಿ ಹೊಂದುವದಕ್ಕೆ ನಾನೇನು
೧೯ ಮಾಡ ಬೇಕೆಂದು, ಅವನನ್ನು ಕೇಳಿದಾಗ, ಯೇಸು ಅವನಿಗೆ ಹೇಳಿದ್ದೇನಂದರೆ, ನನ್ನನ್ನು ಒಳ್ಳೆಯವನೆಂದು
೨೦ ಯಾಕೆ ಹೇಳುತ್ತೀ? ದೇವರೊಬ್ಬನೇ ಹೊರ್ತು, ಒಳ್ಳೆಯವನು ಯಾವನೂ ಇಲ್ಲ. ವ್ಯಭಿಚಾರ ಮಾಡ
ಬೇಡ; ಕೊಲ್ಲ ಬೇಡ; ಕದಿಯ ಬೇಡ; ಅಪಸಾಕ್ಷಿ ಹೇಳ ಬೇಡ; ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು,
೨೧ (ಹೊರ. ೨೦. ೧೨.) ಎಂಬ ಆಜ್ಞೆಗಳನ್ನು ಬಲ್ಲಿ. ಅದಕ್ಕವನು, ಇವುಗಳನ್ನೆಲ್ಲಾ ನನ್ನ ಚಿಕ್ಕತನದಿಂದ
ಕೈಕೊಂಡಿದ್ದೇನೆ, ಅಂದನು.
೨೨ ಯೇಸು ಅದನ್ನು ಕೇಳಿ, ಅವನಿಗೆ ಹೇಳಿದ್ದು, ಇನ್ನೂ ನಿನಗೆ ಒಂದು ಕಡಿಮೆಯಾಗಿದೆ; ನಿನಗಿರುವವುಗಳ
ನ್ನೆಲ್ಲಾ ಮಾರಿ ಬಿಟ್ಟು, ಬಡವರಿಗೆ ಹಂಚಿ ಕೊಡು; ಆಗ ಪರಲೋಕದಲ್ಲಿ ನಿನಗೆ ದ್ರವ್ಯವಿರುವದು. ಮತ್ತು
೨೩ ಬಂದು, ನನ್ನನ್ನು ಹಿಂಬಾಲಿಸು. ಇದನ್ನು ಕೇಳಿ, ಅವನು ಬಹಳ ದುಃಖವುಳ್ಳವನಾದನು; ಯಾಕಂದರೆ
ಬಹಳ ಐಶ್ವರ್ಯವಂತನಾಗಿದ್ದನು.
೨೪ ಆದರೆ ಯೇಸು, ಅವನು ದುಃಖ ಪಡುವದನ್ನು ನೋಡಿ, ಹೇಳಿದ್ದೇನಂದರೆ, ಹಣ ಉಂಟಾದವರು ದೇವರ
೨೫ ರಾಜ್ಯದಲ್ಲಿ ಶೇರುವದು ಎಷ್ಟೋ ಕಷ್ಟ! ಹ್ಯಾಗಂದರೆ ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಶೇರುವದಕ್ಕಿಂತ
೨೬ ಒಂಟೆಯು ಸೂಜಿಯ ಬೆಜ್ಜದಲ್ಲಿ ತೂರುವದು ಸುಲಭವಾಗಿದೆ. ಕೇಳಿದವರು, ಹಾಗಾದರೆ, ಯಾರು
೨೭ ರಕ್ಷಿಸಲ್ಪಡ ಬಹುದು? ಅಂದಾಗ, ಅವನು, ಮನುಷ್ಯರಿಗೆ ಅಸಾಧ್ಯವಾದದ್ದು ದೇವರಿಗೆ ಸಾಧ್ಯವಾಗಿದೆ,
ಅಂದನು.
೨೮, ೨೯ ಪೇತ್ರನು, ಇಗೋ, ನಾವು ಎಲ್ಲಾ ಬಿಟ್ಟು, ನಿನ್ನನ್ನು ಹಿಂಬಾಲಿಸಿದೆವು, ಅಂದಾಗ, ಅವನು ಅವರಿಗೆ,
ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಮನೆಯನ್ನಾದರೂ, ಹೆತ್ತವರನ್ನಾದರೂ, ಸಹೋದರರನ್ನಾದರೂ, ಹೆಂ
೩೦ ಡತಿಯನ್ನಾದರೂ, ಮಕ್ಕಳನ್ನಾದರೂ, ದೇವರ ರಾಜ್ಯದ ನಿಮಿತ್ತ ಬಿಟ್ಟವನು, ಈ ಕಾಲದಲ್ಲಿ ಅತ್ಯಧಿಕವಾ
ದವುಗಳನ್ನೂ, ಬರುವ ಲೋಕದಲ್ಲಿ ನಿತ್ಯಜೀವವನ್ನೂ, ಹೊಂದದೆ ಇರುವದೇ ಇಲ್ಲ, ಅಂದನು.

ನೆಯಲ್ಲಿ ಉಳಿದವರೆಲ್ಲರೂ ಪುಣ್ಯವಂತರು, ತಾನು ಒಬ್ಬನೇ ಪಾಪಿ, ಎಂಬಹಾಗಿ ಇತ್ತು. ಆದದರಿಂದ, ನನ್ನನ್ನು ಕರುಣಿಸು, ಅಂದನು.

1. ಸುಂಕದವನು ತನ್ನ ಪಾಪಪರಿಹಾರ ಹೊಂದಿ, ದೇವರ ಕೃಪೆ ಹೊಂದಿ, ಸಂತೋಷದಿಂದ ತನ್ನ ಮನೆಗೆ ಹೋದನು. ಫರಿಸಾಯನು ಹ್ಯಾಗೆ ಬಂದನೋ ಹಾಗೆಯೇ ಬರಿಗೈಯವನಾಗಿ ಹೋದನು. ತನ್ನನ್ನು ತಗ್ಗಿಸಿ ಕೊಂಡವನಿಗೆ ಮಾನವೂ, ತನ್ನನ್ನು ಹೆಚ್ಚಿಸಿ ಕೊಂಡವನಿಗೆ ನಾಚಿಕೆಯೂ ಪ್ರಾಪ್ತಿಸಿತು.

2. ಲೂಕ. ೧೪. ೧೧. ಮತ್ತಾ. ೨೩. ೧೨. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

3. ೧೫—೧೭. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೧೦. ೧೩—೧೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ೧೮—೩೦. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೯. ೧೬—೨೯. ಮಾರ್ಕ. ೧೦. ೧೭—೩೧. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

ಯೆರೂಸಲೇಮಿಗೆ ಹೋಗುವ ಮಾರ್ಗದಲ್ಲಿ ಕ್ರಿಸ್ತನು ತನ್ನ ಕಷ್ಟ, ಮರಣ, ಪುನರುತ್ಥಾನಗಳನ್ನು ಕುರಿತು ಸ್ಪಷ್ಟವಾಗಿ ತಿಳಿಸಿದ್ದು.

೩೧ ಇದಲ್ಲದೆ [1]ಅವನು ಹನ್ನೆರಡು ಮಂದಿಯನ್ನು ಕರಕೊಂಡು, ಅವರಿಗೆ ಹೇಳಿದ್ದೇನಂದರೆ, ಇಗೋ, ಯೆರೂಸ
ಲೇಮಿಗೆ ಏರಿ ಹೋಗುತ್ತೇವೆ; ಮತ್ತು ಪ್ರವಾದಿಗಳಿಂದ ಮನುಷ್ಯನ ಮಗನನ್ನು ಕುರಿತು ಬರೆಯಲ್ಪಟ್ಟವುಗ
೩೨ ಳೆಲ್ಲಾ ಪೂರೈಸಲ್ಪಡ ಬೇಕು. ಹ್ಯಾಗಂದರೆ, ಅವನನ್ನು ಜನಾಂಗಗಳಿಗೆ ಒಪ್ಪಿಸಿ, ಹಾಸ್ಯ ಮಾಡಿ, ನಿಂದಿಸಿ,
೩೩ ಅವನ ಮೇಲೆ ಉಗುಳುವರು; ಮತ್ತು ಅವನನ್ನು ಚಬುಕಿನಿಂದ ಹೊಡೆದು, ಅವನನ್ನು ಕೊಂದು ಹಾಕು
೩೪ ವರು; ಮತ್ತು ಮೂರನೇ ದಿವಸದಲ್ಲಿ ಏಳುವನು. ಆದರೆ ಅವರು ಇವುಗಳಲ್ಲಿ [2]ಒಂದನ್ನೂ ಗ್ರಹಿಸಲಿಲ್ಲ.
ಆ ಮಾತು ಅವರಿಗೆ ಮರೆಯಾಗಿದ್ದದರಿಂದ, ಹೇಳಿದ್ದನ್ನು ತಿಳಿಯದೆ ಹೋದರು.

ಯೇಸು ಯೆರಿಕೋವಿನಲ್ಲಿ ಒಬ್ಬ ಕುರುಡನಿಗೆ ದೃಷ್ಟಿ ಕೊಟ್ಟದ್ದು.

೩೫ [3]ಅವನು ಯೆರಿಕೋವಿಗೆ ಸಮೀಪ ಬಂದಿರಲಾಗಿ, ಒಬ್ಬ ಕುರುಡನು ಭಿಕ್ಷ ಬೇಡುತ್ತಾ, ಮಾರ್ಗದ ಬಳಿ
೩೬ ಯಲ್ಲಿ ಕೂತು ಕೊಂಡಿದ್ದನು. ಇವನು ಹಾದು ಹೋಗುವ ಸಮೂಹವನ್ನು ಕೇಳಿ, ಅದೇನೆಂದು ವಿಚಾ
೩೭ ರಿಸಿದನು. ಅವರು, ನಜರೇತಿನವನಾದ ಯೇಸು ಹಾದು ಹೋಗುತ್ತಾನೆಂದು ಅವನಿಗೆ ತಿಳಿಸಿದರು.
೩೮, ೩೯ ಆಗಲವನು, ದಾವೀದನ ಮಗನಾದ ಯೇಸುವೇ, ನನ್ನನ್ನು ಕರುಣಿಸು, ಎಂದು ಕೂಗಿದನು. ಮುಂದೆ
ಹೋಗುವವರು, ಸುಮ್ಮನಿರ ಬೇಕೆಂದು, ಅವನನ್ನು ಗದರಿಸಿದಾಗ, ಅವನು ಬಹಳ ಹೆಚ್ಚಾಗಿ, ದಾವೀದನ
೪೦ ಮಗನೇ, ನನ್ನನ್ನು ಕರುಣಿಸೆಂದು ಕೂಗಿದನು. ಆಗ ಯೇಸು ನಿಂತು, ಅವನನ್ನು ತನ್ನ ಬಳಿಗೆ ತರಲಾಜ್ಞಾ
ಪಿಸಿದನು.

೪೧ ಅವನು ಹತ್ತರ ಬಂದಾಗ, ನಾನು ನಿನಗೆ ಏನು ಮಾಡ ಬೇಕೆಂದು ಕೇಳಿದನು. ಅವನು, ಕರ್ತನೇ, ದೃಷ್ಟಿ
೪೨ ಕೊಡ ಬೇಕು, ಅಂದನು. ಯೇಸು ಅವನಿಗೆ, ದೃಷ್ಟಿ ಹೊಂದು; ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ,
೪೩ ಅಂದನು. ಸಂಗಡಲೇ ಅವನು ದೃಷ್ಟಿ ಹೊಂದಿ, [4]ದೇವರನ್ನು ಮಹಿಮೆ ಪಡಿಸುತ್ತಾ, ಅವನನ್ನು ಹಿಂಬಾಲಿ
ಸಿದನು. ಜನರೆಲ್ಲರು ಅದನ್ನು ನೋಡಿ, ದೇವರನ್ನು ಹೊಗಳಿದರು.

ಕ್ರಿಸ್ತನು ಜಕ್ಕಾಯನ ಮನೆಗೆ ಹೋದದ್ದು.

**19.** ಮತ್ತು ಯೆರಿಕೋವಿನಲ್ಲಿ ಪ್ರವೇಶಿಸಿ, ಹಾದು ಹೋದನು. (೨) ಆಗ, ಇಗೋ, [5]ಜಕ್ಕಾಯನೆಂಬ
ಒಬ್ಬ ಮನುಷ್ಯನು ಇದ್ದನು. ಅವನು [6]ಸುಂಕದವರಲ್ಲಿ ಮುಖ್ಯಸ್ಥನೂ ಐಶ್ವರ್ಯವಂತನೂ ಆಗಿದ್ದನು.
೩ ಯೇಸುವನ್ನು, ಅವನ್ಯಾರೆಂದು, ನೋಡ ಹುಡುಕುತ್ತಾ, ಗಿಡ್ಡನಾಗಿದ್ದದರಿಂದ, ಸಮೂಹದ ನಿಮಿತ್ತ

1. ೩೧—೩೪. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೦. ೧೭—೧೯. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಮಾರ್ಕ ೯. ೩೨. ವಚನದ ವ್ಯಾಖ್ಯಾನ ನೋಡ ಬೇಕು.

3. ೩೫—೪೩. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೦. ೨೯—೩೪. ಮಾರ್ಕ. ೧೦. ೪೬—೫೨. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

4. ಕರ್ತನು ಮಾಡಿದ ಅದ್ಭುತದಿಂದ ದೃಷ್ಟಿ ಹೊಂದಿದ ಕುರುಡನು ಕೃತಜ್ಞತೆಯಿಂದ ಆತನನ್ನು ಸ್ತುತಿಸಿದನು. ಅದನ್ನು ಕಂಡ ಜನರು ಸಹ ಅಧಿಕ ಆಶ್ಚರ್ಯ ಪಟ್ಟು, ದೇವರನ್ನು ಮಹಿಮೆ ಪಡಿಸಿದ ಸಂಗತಿಯನ್ನು ಲೂಕನು ವಿಶೇಷವಾಗಿ ತೋರಿಸುತ್ತಾನೆ. (೫. ೨೬; ೯. ೪೩; ೧೩. ೧೭.)

5. ಯೇಸು ಕ್ರಿಸ್ತನ ಅದ್ಭುತ ಕ್ರಿಯೆಗಳನ್ನೂ, ಆತನು ಸುಂಕದವರಿಗೆ ಸ್ನೇಹಿತನೆಂಬುವದನ್ನೂ ಕೇಳಿ, ಆತನನ್ನು ನೋಡುವದಕ್ಕೆ ಜಕ್ಕಾಯನು ಪ್ರಯತ್ನ ಮಾಡಿರುವನು. ಈಗ ಆತನು ತನ್ನ ಊರಿಗೆ ಬಂದ ಈ ಒಳ್ಳೇ ಸಮಯವನ್ನು ವ್ಯರ್ಥವಾಗಿ ಕಳಿಯದೆ, ಆತನನ್ನು ನೋಡುವದಕ್ಕೆ ಜಾಗ್ರತೆಯಿಂದ ಯತ್ನ ಮಾಡಿದನು.

6. (ಮತ್ತಾ. ೫. ೪೬. ವಚನದ ವ್ಯಾಖ್ಯಾನ ನೋಡ ಬೇಕು.) ಸುಂಕದವರಲ್ಲಿ ಮುಖ್ಯಸ್ಥನಾದ ಜಕ್ಕಾಯನು ಗುತ್ತಿಗೆದಾರನ ಹಾಗೆ ಯೆರಿಕೋವನ್ನೂ ಅದರ ಸುತ್ತಲಿರುವ ದೇಶವನ್ನೂ ಗುತ್ತಿಗೆಗೆ ತೆಗೆದು ಕೊಂಡು, ತನ್ನ ಕೈಕೆಳಗೆ ಬೇರೊಬ್ಬರಿಗೆ ಕೊಡುವವನಾಗಿ, ಅಥವಾ ತೆರಿಗೆಯನ್ನು ವಸೂಲು ಮಾಡುವ ಕೆಳಗಿನ ಉದ್ಯೋಗಸ್ಥರಿಂದ ಒಟ್ಟಾಗಿ ಹಣವನ್ನು ತೆಗೆದು ಕೊಳ್ಳುವವನಾಗಿ ಇರ ಬಹುದು. ಇವನು ಐಶ್ವರ್ಯವಂತನಾಗಿಯೂ ದ್ರವ್ಯವನ್ನು ಪ್ರೀತಿ ಮಾಡುವವನಾಗಿಯೂ ಇದ್ದನು.



೪ ನೋಡಲಾರದೆ ಇದ್ದನು. ಆಗ ಮುಂದೆ ಓಡಿ ಹೋಗಿ, ಅವನನ್ನು ನೋಡುವ ಹಾಗೆ, ಒಂದು [1]ಆಲದ
೫ ಮರದ ಮೇಲೆ ಏರಿದನು; ಯಾಕಂದರೆ ಆ ಮಾರ್ಗವಾಗಿ ಅವನು ಹಾದು ಬರ ಬೇಕಾಗಿತ್ತು. ಯೇಸು
ಆ ಸ್ಥಳಕ್ಕೆ ಬಂದಾಗ, ಮೇಲಕ್ಕೆ ನೋಡಿ, ಅವನನ್ನು ಕರೆದು, ಅವನಿಗೆ, ಜಕ್ಕಾಯನೇ, ಬೇಗ ಇಳಿದು
೬ ಬಾ; ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇರ ಬೇಕು, ಅಂದನು. ಆಗಲವನು ಬೇಗ ಇಳಿದು, ಅವ
ನನ್ನು ಸಂತೋಷದಿಂದ ಅಂಗೀಕರಿಸಿದನು.

೭ ಎಲ್ಲರು ಅದನ್ನು ನೋಡಿ, ಅವನು ಪಾಪಿಯಾದ ಮನುಷ್ಯನ ಬಳಿಯಲ್ಲಿ ಇರುವದಕ್ಕೆ ಶೇರಿದ್ದಾನೆಂದು,
೮ ಗುಣುಗುಟ್ಟಿದರು. ಆದರೆ ಜಕ್ಕಾಯನು ನಿಂತು ಕೊಂಡು, ಕರ್ತನಿಗೆ, ಇಗೋ, ಕರ್ತನೇ, ನನಗುಂಟಾದ
ವುಗಳಲ್ಲಿ ಅರೆವಾಶಿಯನ್ನು ಬಡವರಿಗೆ ಕೊಡುತ್ತೇನೆ; ಮತ್ತು [2]ಒಬ್ಬನ ಮೇಲೆ ದೂರು ಹೇಳಿ, ಏನಾದರೂ
೯ ಮೋಸ ಮಾಡಿದ್ದಾದರೆ, ನಾಲ್ಕಷ್ಟು ಬದಲು ಕೊಡುತ್ತೇನೆ, ಅಂದನು. ಆಗ ಯೇಸು ಅವನಿಗೆ ಹೇಳಿದ್ದು,
೧೦ ಈ ಹೊತ್ತು ಈ ಮನೆಗೆ ರಕ್ಷಣೆ ಉಂಟಾಯಿತು; ಇವನು ಸಹ [3]ಅಬ್ರಹಾಮನ ಮಗನಲ್ಲವೋ? ಯಾಕಂ
ದರೆ, ಮನುಷ್ಯನ ಮಗನು ಕೆಟ್ಟು ಹೋದದ್ದನ್ನು ಹುಡುಕುವದಕ್ಕೂ ರಕ್ಷಿಸುವದಕ್ಕೂ ಬಂದನು.

ಹತ್ತು ವರಹಗಳ ಸಾಮ್ಯವು.

೧೧ ಅವರು ಇವುಗಳನ್ನು ಕೇಳಿದಾಗ, ಅವನು ಯೆರೂಸಲೇಮಿಗೆ ಸಮೀಪವಾಗಿದ್ದದರಿಂದಲೂ, ಅವರು, ದೇವರ
ರಾಜ್ಯವು [4]ಆಗಲೇ ಪ್ರತ್ಯಕ್ಷವಾಗುತ್ತದೆಂದು ನೆನಸಿದದರಿಂದಲೂ, ಇನ್ನೂ ಮತ್ತೊಂದು ಸಾಮ್ಯವನ್ನು
ಹೇಳಿದನು.

1. ಗಿಡ್ಡನಾಗಿದ್ದ ಜಕ್ಕಾಯನು ಸಮೂಹದಲ್ಲಿ ಕ್ರಿಸ್ತನನ್ನು ನೋಡ ಕೂಡದ್ದರಿಂದ ಮಾರ್ಗದಲ್ಲಿದ್ದ ಆಲದ ಮರದ ಮೇಲೆ ಏರಿದನು. ಹ್ಯಾಗಾದರೂ ಆತನನ್ನು ಕಂಡು ಕೊಳ್ಳ ಬೇಕೆಂಬ ಅಪೇಕ್ಷೆಯಿಂದ ಹೀಗೆ ಮಾಡಿದನು. ಅಂಜೂರದ ಮರದ ಕೆಳಗೆ ಪ್ರಾರ್ಥನೆ ಮಾಡುತ್ತಿದ್ದ ನತನಯೇಲನನ್ನು ಕಂಡು ಕೊಂಡ ಕರ್ತನು ಆಲದ ಮರದ ಮೇಲೆ ಹತ್ತಿ ಕೊಂಡಿದ್ದ ಜಕ್ಕಾಯನನ್ನು ಕಂಡು, ಅವನ ಮನೆಗೆ ಹೋದನು.

2. ಕ್ರಿಸ್ತನು ಜಕ್ಕಾಯನ ಮನೆಗೆ ಹೋದದ್ದನ್ನು ಕಂಡವರು ಆತನ ಪ್ರೀತಿಗೆ ಆತನನ್ನು ಸ್ತುತಿಸ ತಕ್ಕದ್ದು. ಆದರೆ ಅವರು, ಆತನು ಪಾಪಿಯಾದವನ ಮನೆಯಲ್ಲಿ ಊಟಕ್ಕೆ ಹೋದನೆಂದು ಹಾಸ್ಯ ಮಾಡಿದರು. ಕರ್ತನು ಅವನ ಮನೆಯಲ್ಲಿ ಪಙ್ತಿಯಲ್ಲಿರುವಾಗ ಅನೇಕ ವಿಧ ಬುದ್ಧಿಮಾತುಗಳನ್ನು ಹೇಳಿರುವನು. ಅವನು ಅವುಗಳನ್ನು ಕೇಳಿ, ತನ್ನ ತಪ್ಪುಗಳನ್ನು ತಿಳಿದು ಕೊಂಡು, ಇನ್ನು ಮೇಲೆ ಹಾಗೆ ನಡಿಯ ಬಾರದೆಂದು ನಿರ್ಣಯ ಮಾಡಿ ಕೊಂಡು, ತಾನು ಗುಣ ಪಟ್ಟದ್ದಕ್ಕೆ ಗುರುತಾಗಿ ತನ್ನ ಆಸ್ತಿಯಲ್ಲಿ ಅರೆವಾಶಿಯನ್ನು ಬಡವರಿಗೆ ಕೊಡುವೆನೆಂದೂ, ತಾನು ಅನ್ಯಾಯವಾಗಿ ಒಬ್ಬನಿಂದ ಅಪಹರಿಸಿದ್ದಕ್ಕೆ ನಾಲ್ಕಷ್ಟು ಬದಲು ಕೊಡುವೆನೆಂದೂ ಅರಿಕೆ ಮಾಡಿದನು. ಒಂದಕ್ಕೆ ಎರಡಷ್ಟು ಕೊಡುವದು ಯೆಹೂದ್ಯರ ಪ್ರಮಾಣವು. (ಹೊರ. ೨೨. ೪, ೯.) ತಪ್ಪು ರುಜುವಾದರೆ, ತೆಗೆದು ಕೊಂಡದ್ದನ್ನೂ ಅದರ ಐದನೇ ಭಾಗವನ್ನೂ ಕೊಡ ತಕ್ಕದ್ದು. (ಲೇವಿ. ೫. ೬, ೭.) ಒಂದಕ್ಕೆ ನಾಲ್ಕಷ್ಟು ಕೊಡುವದು ರೋಮಾಯರ ಪದ್ಧತಿ. ತಮ್ಮ ಪಾಪಗಳನ್ನೂ ವಿಶೇಷವಾದ ಪಾಪಗಳನ್ನೂ ಅರಿಕೆ ಮಾಡಿ, ಅದರಿಂದುಂಟಾದ ಕೇಡುಗಳನ್ನು ನಿವರ್ತಿ ಮಾಡ ಪ್ರಯಾಸ ಪಡುವದು ನಿಜವಾಗಿ ಗುಣ ಪಡುವದರ ಲಕ್ಷಣವು. ಸದ್ಗುರುವಾದ ಕ್ರಿಸ್ತನನ್ನು ದರ್ಶಿಸ ತಕ್ಕ ಭಾಗ್ಯ ಹೊಂದಿದ ಜಕ್ಕಾಯನ ವಿಷಯದಲ್ಲಿ ಹಳೆಯವುಗಳೆಲ್ಲಾ ಗತಿಸಿ ಹೋಗಿ, ಸಕಲವೂ ಹೊಸದಾಯಿತೆಂದು ಹೇಳ ಬಹುದು.

3. ಕ್ರಿಸ್ತನನ್ನು ಕಂಡು ನಂಬಿ ಕೊಂಡ ಜಕ್ಕಾಯನು ಹುಟ್ಟುವಿಕೆಯ ಪ್ರಕಾರ ಮಾತ್ರವಲ್ಲ, ಆತ್ಮದ ಪ್ರಕಾರವಾಗಿಯೂ ಅಬ್ರಹಾಮನ ಮಗನಾದನು. ಅವನಲ್ಲಿ ಉಂಟಾದ ಮಾರ್ಪಡುವಿಕೆಯು ಕರ್ತನ ಕೃಪೆಯಿಂದಲೇ ಹೊರ್ತು ಬೇರೆ ಅಲ್ಲ.

4. ಕರ್ತನು ಯೆರೂಸಲೇಮಿಗೆ ೧೫ ಮೈಲು ದೂರದಲ್ಲಿದ್ದದರಿಂದಲೂ, ಅನೇಕ ಅದ್ಭುತಗಳನ್ನು ಮಾಡಿದ್ದರಿಂದಲೂ, ಆತನು ಆ ಪಟ್ಣಕ್ಕೆ ಶೇರುವಾಗಲೇ ತನ್ನ ರಾಜ್ಯವನ್ನು ಬಹಿರಂಗವಾಗಿ ಸ್ಥಾಪಿಸುವನೆಂದೂ, ಆತನನ್ನು ಹಿಂಬಾಲಿಸಿದ ಸಮೂಹದ ಜನರು ನೆನಸಿದರು. (೩೭. ವ.) ಅವರ ತಪ್ಪಾದ ಯೋಚನೆಯನ್ನು ಖಂಡಿಸಿ, ಅವರು ಸಹಿಸಿ ಕೊಂಡು ದೇವರಿಗೆ ತಕ್ಕ ಸೇವೆ ಮಾಡುವ ಹಾಗೆ ಹತ್ತು ವರಹಗಳ ಸಾಮ್ಯವನ್ನು ಜಕ್ಕಾಯನ ಮನೆಯಲ್ಲಿ ಹೇಳಿದನು. ಈ ಸಾಮ್ಯಕ್ಕೂ ಮತ್ತಾ. ೨೫. ೧೪—೩೦ಲ್ಲಿ ಹೇಳಿರುವ ಸಾಮ್ಯಕ್ಕೂ ಕೆಲವು ವಿಷಯಗಳಲ್ಲಿ ಸಮ್ಮಂಧ ಇದ್ದಾಗ್ಯೂ, ಕೆಲವು ವಿಷಯಗಳಲ್ಲಿ ಭೇದವುಂಟು. ಅದು ಹೇಳಲ್ಪಟ್ಟ ಕಾಲವು ಬೇರೆ; ಇದು ಹೇಳಲ್ಪಟ್ಟ ಕಾಲವು ಬೇರೆ. ತಲಾಂತುಗಳ ಸಾಮ್ಯದಲ್ಲಿ ಒಬ್ಬ ಯಜಮಾನನು ಅನೇಕ ಹಣಗಳನ್ನು, ತನ್ನ ಸೇವಕರ ಸಾಮರ್ಥ್ಯಕ್ಕೆ ತಕ್ಕದ್ದಾಗಿ ಅವರಿಗೆ ಹಂಚಿ ಕೊಟ್ಟು ಹೋದನೆಂದೂ, ತಿರಿಗಿ ಬಂದು ಆ ದ್ರವ್ಯವನ್ನು ಅಭಿವೃದ್ಧಿ ಮಾಡಿದ ಸೇವಕರನ್ನು ಒಂದೇ ಪ್ರಕಾರ ಹೊಗಳಿದನೆಂದೂ ತೋರಿಸಿ ಇದೆ. ವರಹಗಳ ಸಾಮ್ಯದಲ್ಲಿ ಒಬ್ಬ ರಾಜಪ್ರಭುವು ಹತ್ತು ವರಹಗಳನ್ನು ಹತ್ತು ಮಂದಿ ಸೇವಕರಿಗೆ ಕೊಟ್ಟು ಹೋದನೆಂದೂ, ಅವನು ತಿರಿಗಿ ಬಂದು, ಅವರಲ್ಲಿ ಒಬ್ಬೊಬ್ಬನು ವ್ಯತ್ಯಾಸವಾಗಿ ದ್ರವ್ಯಾಭಿವೃದ್ಧಿ ಮಾಡಿರುವದನ್ನು ಕಂಡು, ಅವರ ಯಥಾರ್ಥತ್ವಕ್ಕೂ

೧೨ ಏನಂದರೆ, ಕುಲೀನನಾದ ಒಬ್ಬ ಮನುಷ್ಯನು ರಾಜ್ಯವನ್ನು ಸಂಪಾದಿಸಿ ಕೊಂಡು, [1]ತಿರಿಗಿ ಬರುವದಕ್ಕೆ,
೧೩ ದೂರ ದೇಶಕ್ಕೆ ಹೊರಟನು. ಅವನು ತನ್ನ ಹತ್ತು ಮಂದಿ ದಾಸರನ್ನು ಕರೆದು, [2]ಹತ್ತು ವರಹ ಅವರಿಗೆ
೧೪ ಕೊಟ್ಟು, ನಾನು ಬರುವ ತನಕ [3]ವ್ಯಾಪಾರ ಮಾಡಿರೆಂದು, ಅವರಿಗೆ ಹೇಳಿದನು. ಆದರೆ ಅವನ ಪಟ್ಣದ
ವರು ಅವನನ್ನು ಹಗೆ ಮಾಡಿ, ಇವನು ನಮ್ಮನ್ನು ಆಳುವದು ನಮಗೆ ಮನಸ್ಸಿಲ್ಲವೆಂದು, ಅವನ ಹಿಂದೆ ರಾಯ
೧೫ ಭಾರವನ್ನು ಕಳುಹಿಸಿದರು. ಅವನು ರಾಜ್ಯವನ್ನು ಸಂಪಾದಿಸಿ ಕೊಂಡು, ತಿರಿಗಿ ಬಂದಾಗ, ವ್ಯಾಪಾರ
ದಿಂದ ಯಾರ್ಯಾರು ಎಷ್ಟೆಷ್ಟು ಲಾಭ ಪಡಕೊಂಡರೆಂದು ತಿಳಿಯುವದಕ್ಕೆ, ತಾನು ಹಣ ಕೊಟ್ಟ ಆ ದಾಸ
ರನ್ನು ತನ್ನ ಬಳಿಗೆ ಕರಿಸಿದನು.
೧೬ ಈ ಪ್ರಕಾರ ಮೊದಲನೆಯವನು ಬಂದು, ಧೊರೆಯೇ, ನಿನ್ನ ವರಹ ಬೇರೆ ಹತ್ತು ವರಹ ಹೊಂದಿತು,
೧೭ ಅಂದಾಗ; ಅವನು ಅವನಿಗೆ, ಚನ್ನಾಯಿತು, ಒಳ್ಳೇ ದಾಸನೇ; ನೀನು ಬಹಳ ಸ್ವಲ್ಪವಾದದರಲ್ಲಿ ನಂಬಿಕೆಯು
೧೮ ಳ್ಳವನಾದದರಿಂದ [4]ಹತ್ತು ಪಟ್ಣಗಳ ಮೇಲೆ ಅಧಿಕಾರ ಉಂಟಾದವನಾಗಿರು, ಅಂದನು. ಎರಡನೆಯವನು
೧೯ ಬಂದು, ಧೊರೆಯೇ, ನಿನ್ನ ವರಹ ಐದು ವರಹ ಉಂಟು ಮಾಡಿತು, ಅಂದಾಗ; ಅವನಿಗೂ, ನೀನು ಸಹ
ಐದು ಪಟ್ಣಗಳಿಗೆ ಅಧಿಕಾರಿಯಾಗು, ಅಂದನು.
೨೦, ೨೧ ಮತ್ತೊಬ್ಬನು ಬಂದು, ಧೊರೆಯೇ, ಇಗೋ, ನಿನ್ನ ವರಹ! ನೀನು ಇಡದೆ ಇರುವದನ್ನು ಎತ್ತಿ, ಬಿತ್ತದೆ
ಇರುವದನ್ನು ಕೊಯ್ಯುವ ಕಠಿಣವಾದ ಮನುಷ್ಯನಾಗಿರುವದರಿಂದ, ನಿನಗೆ ಭಯ ಪಟ್ಟು, ಅದನ್ನು ಕೈವಸ್ತ್ರ
೨೨ ದಲ್ಲಿ ಮಡಗಿ, ಇಟ್ಟು ಕೊಂಡೆನು, ಅಂದಾಗ; ಅವನು ಅವನಿಗೆ, ಕೆಟ್ಟ ದಾಸನೇ, ನಿನ್ನ ಬಾಯಿಯಿಂದ ನಿನಗೆ
ನ್ಯಾಯ ತೀರಿಸುವೆನು; ನಾನು ಇಡದೆ ಇರುವದನ್ನು ಎತ್ತಿ, ಬಿತ್ತದೆ ಇರುವದನ್ನು ಕೊಯ್ಯುವ, ಕಠಿಣ
೨೩ ಮನುಷ್ಯನೆಂದು ನಿನಗೆ ತಿಳಿಯಿತೋ? ಹಾಗಾದರೆ ಯಾಕೆ ನನ್ನ ಹಣವನ್ನು ಚಿನಿವಾರರಿಗೆ ಕೊಡಲಿಲ್ಲ?
೨೪ ಕೊಟ್ಟಿದ್ದರೆ, ನಾನು ಬಂದು, ಅದನ್ನು ಬಡ್ಡಿಯ ಸಂಗಡ ತಕ್ಕೊಳ್ಳ ಬಹುದಾಗಿತ್ತು, ಅಂದನು. ಆಗ ಹತ್ತರ
ನಿಂತವರಿಗೆ ಅವನು, ಆ ವರಹ ಅವನಿಂದ ತೆಗೆದು, ಹತ್ತು ವರಹ ಉಂಟಾದವನಿಗೆ ಕೊಡಿರಿ, ಅಂದನು.
೨೫, ೨೬ ಅವರು ಅವನಿಗೆ, ಧೊರೆಯೇ, ಅವನಿಗೆ ಹತ್ತು ವರಹ ಉಂಟು, ಅಂದರು. ಯಾಕಂದರೆ ಉಂಟಾಗಿ
ರುವ ಪ್ರತಿ ಮನುಷ್ಯನಿಗೆ ಕೊಡಲ್ಪಡುವದು; ಆದರೆ ಇಲ್ಲದವನಿಂದ [5]ಅವನಿಗಿದ್ದದ್ದು ಸಹ ತೆಗೆಯಲ್ಪಡುವ
ದೆಂದು, ನಿಮಗೆ ಹೇಳುತ್ತೇನೆ.
೨೭ ಆದರೆ ನಾನು ತಮ್ಮನ್ನು ಆಳ ಮನಸ್ಸಿಲ್ಲದೆ ಇದ್ದ ಆ ನನ್ನ ಶತ್ರುಗಳನ್ನು ಇಲ್ಲಿಗೆ ತಂದು, ನನ್ನ ಮುಂದೆ
ಕಡಿದು ಹಾಕಿರಿ, ಅಂದನು.

ಕಾರ್ಯಸಿದ್ಧಿಗೂ ತಕ್ಕ ಹಾಗೆ ಅವರಿಗೆ ದಯಾಳವಾಗಿ ಫಲ ಕೊಟ್ಟನೆಂದೂ ಹೇಳಿರುತ್ತದೆ. ಶಿಷ್ಯರು ಜಾಗ್ರತೆಯಾಗಿ ನಡಿಯ ಬೇಕೆಂಬುವದೇ ತಲಾಂತುಗಳ ಸಾಮ್ಯದ ಅಭಿಪ್ರಾಯವು. ತಲಾಂತುಗಳ ಸಾಮ್ಯದಲ್ಲಿ ಅಡಗಿರುವ ಈ ಸತ್ಯವನ್ನೂ, ಯೆಹೂದ್ಯರ ಹಾಗೆ ರಕ್ಷಕನ ಅಧಿಕಾರವನ್ನು ತಳ್ಳುವ ದುರ್ಮಾರ್ಗರಿಗೆ ನಾಶ ಬರುವದೆಂಬ ಸತ್ಯವನ್ನೂ ತೋರಿಸುವದೇ ವರಹಗಳ ಸಾಮ್ಯದ ಅಭಿಪ್ರಾಯವು.

1. ದೊಡ್ಡ ಹೆರೋದನ ಮಗನಾದ ಅರ್ಖೆಲಾವನು ರಾಜ್ಯಾಧಿಕಾರ ಹೊಂದುವದಕ್ಕೆ ರೋಮ ಪಟ್ಣಕ್ಕೆ ಔಗುಸ್ತ ಕೈಸರನ ಬಳಿಗೆ ಹೋದನು. ಯೆಹೂದ್ಯರು ಅವನಿಗೆ ಆ ಅಧಿಕಾರವನ್ನು ಕೊಡ ಬಾರದೆಂದು ಅರಸನಿಗೆ ತಿಳಿಸುವದಕ್ಕೆ ಆಳನ್ನು ಕಳುಹಿಸಿದರು. ಹಾಗಿದ್ದಾಗ್ಯೂ, ಅವನು ರಾಜಪಟ್ಟವನ್ನು ಹೊಂದಿ, ತಿರಿಗಿ ಬಂದು, ಕಲಹಗಾರರನ್ನು ಕೊಂದು ಹಾಕಿ, ಯೆರಿಕೋವಿನಲ್ಲಿ ಒಂದು ದೊಡ್ಡ ಅರಮನೆಯನ್ನು ಕಟ್ಟಿಸಿದನು. ಈ ಸಂಗತಿಗಳೆಲ್ಲಾ ಅಡಗಿರುವ ಈ ಸಾಮ್ಯವನ್ನು ಕರ್ತನು ಹೇಳುವಾಗ, ಆ ಅರಮನೆಯು ಆತನ ದೃಷ್ಟಿಗೆ ಗೋಚರವಾಗಿರುವದು.

2. ವರಹ ಎಂಬುವದು ತಲಾಂತಿನಲಿ ಒಂದು ಚಿಕ್ಕ ಭಾಗವು. ಇದು ಸ್ವಲ್ಪ ಹೆಚ್ಚು ಕಡಿಮೆ ಮೂವತ್ತು ರೂಪಾಯಿಗಳಿಗೆ ಸರಿಯಾಗಿರುವದು.

3. ಮತ್ತಾ. ೨೫. ೧೪. ವಚನದ ವ್ಯಾಖ್ಯಾನ ನೋಡ ಬೇಕು.

4. ಯಥಾರ್ಥವಾಗಿ ಕೆಲಸ ಮಾಡುವ ಉದ್ಯೋಗಸ್ಥರಿಗೆ ನಾಡುಗಳನ್ನೂ ಪಟ್ಣಗಳನ್ನೂ ಮಾನ್ಯವಾಗಿ ಕೊಡುವದು ಪಶ್ಯ ಖಂಡದವರ ಪದ್ಧತಿಯು. ಅದೇ ಪ್ರಕಾರ ಬುದ್ಧಿಯಾಗಿ ದ್ರವ್ಯಾಭಿವೃದ್ಧಿ ಮಾಡಿದ ಈ ದಾಸರಿಗೆ ದೊರಕಿತು.

5. (ಮತ್ತಾ. ೧೩. ೧೨. ವಚನದ ವ್ಯಾಖ್ಯಾನ ನೋಡ ಬೇಕು.) ಈ ಸಾಮ್ಯಕ್ಕೂ ಜ್ಞಾನಾರ್ಥವುಂಟು. ಇದರಲ್ಲಿ ಹೇಳಲ್ಪಟ್ಟ ಪ್ರಭುವು ದೇವರ ಮಗನಾದ ಕ್ರಿಸ್ತನು. ರಾಜ್ಯವೆಂಬುವದು, ಭೂಲೋಕದಲ್ಲಿ ಸ್ಥಾಪಿಸಲ್ಪಡುವ ಪರಲೋಕರಾಜ್ಯವು. ದಾಸರೆಂಬುವದು ಕ್ರಿಸ್ತನ ಸೇವಕರು. ವರಹ ಎಂಬುವದು ಸುಖ, ಕಾಲ, ವಿದ್ಯ, ದ್ರವ್ಯ, ವಾಕ್ಶಕ್ತಿ ಮುಂತಾದ ವರಗಳು. ಅವುಗಳನ್ನು ಅನುಗ್ರಹಿಸಿದ ದೇವರ ಮಹಿಮೆಯು ಪ್ರಕಟವಾಗ ತಕ್ಕದ್ದಾಗಿ ಅವುಗಳನ್ನು ವೃದ್ಧಿ ಪಡಿಸುವ ಭಕ್ತರಿಗೆ ಮೋಕ್ಷಾನಂದವೂ, ವೃದ್ಧಿ ಮಾಡದೆ ಇರುವ ಭಕ್ತಿಹೀನರಿಗೆ ನರಕವೇದನೆಯೂ ಉಂಟಾಗುವದು.



ಕ್ರಿಸ್ತನು ಯೆರೂಸಲೇಮಿನಲ್ಲಿ ರಾಜಕೀಯ ಪ್ರವೇಶ ಮಾಡಿದ್ದು; ಅದನ್ನು ನೋಡಿ ದುಃಖಿಸಿದ್ದು; ದೇವಾಲಯವನ್ನು ಶುದ್ಧ ಮಾಡಿದ್ದು; ಯೆಹೂದ್ಯರ ಅಧಿಕಾರಿಗಳು ಆತನನ್ನು ಕೊಲ್ಲ ಯತ್ನಯಿಸಿದ್ದು.

೨೮ ಅವನು ಇವುಗಳನ್ನು ಹೇಳಿ, ಯೆರೂಸಲೇಮಿಗೆ ಏರುವ ಮಾರ್ಗದಲ್ಲಿ [1]ಮುಂದೆ ಹೋದನು.
೨೯ ಮತ್ತು ಆದದ್ದೇನಂದರೆ, [2]ಅವನು ಇಪ್ಪೇ ಗುಡ್ಡವೆಂಬ ಗುಡ್ಡದ ಹತ್ತರ ಇರುವ ಬೇತ್ಫಗೆಗೂ, ಬೇತಾನ್ಯಕ್ಕೂ
೩೦ ಸಮೀಪಿಸಿದಾಗ, ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ ಹೇಳಿದ್ದೇನಂದರೆ, ಎದುರಾಗಿರುವ ಗ್ರಾಮಕ್ಕೆ
ಹೋಗಿರಿ; ಅದರೊಳಗೆ ಪ್ರವೇಶಿಸುವಾಗ, ಮನುಷ್ಯರಲ್ಲಿ ಯಾವನಾದರೂ ಕೂತು ಕೊಳ್ಳದಂಥ, ಕಟ್ಟಿರು
೩೧ ವಂಥ ಕತ್ತೇ ಮರಿಯು ನಿಮಗೆ ಶಿಕ್ಕುವದು; ಅದನ್ನು ಬಿಚ್ಚಿ, ತೆಗೆದು ಕೊಂಡು ಬನ್ನಿರಿ. ಮತ್ತು, ಯಾಕೆ
ಬಿಚ್ಚುತ್ತೀರೆಂದು ಯಾರಾದರು ನಿಮ್ಮನ್ನು ಕೇಳಿದರೆ, ಅವನಿಗೆ, ಅದು ಕರ್ತನಿಗೆ ಬೇಕು, ಅನ್ನಿರಿ.
೩೨, ೩೩ ಕಳುಹಿಸಲ್ಪಟ್ಟವರು ಹೋಗಿ, ಅವನು ತಮಗೆ ಹೇಳಿದ ಹಾಗೆ ಕಂಡರು. ಅವರು ಮರಿ ಬಿಚ್ಚುವಾಗ,
೩೪ ಅದರ ಯಜಮಾನರು ಅವರಿಗೆ, ನೀವು ಯಾಕೆ ಮರಿ ಬಿಚ್ಚುತ್ತೀರಿ? ಅಂದರು. ಆದರೆ ಅವರು, ಅದು
೩೫ ಕರ್ತನಿಗೆ ಬೇಕೆಂದು ಹೇಳಿ, ಅದನ್ನು ಯೇಸುವಿನ ಬಳಿಗೆ ತಂದು, ತಮ್ಮ ವಸ್ತ್ರಗಳನ್ನು ಮರಿಯ ಮೇಲೆ
೩೬ ಹಾಕಿ, ಯೇಸುವನ್ನು ಮೇಲೆ ಕೂಡ್ರಿಸಿದರು. ಅವನು ಹೋಗುತ್ತಿರುವಾಗ, ತಮ್ಮ ವಸ್ತ್ರಗಳನ್ನು ಮಾರ್ಗ
ದಲ್ಲಿ ಹಾಸಿದರು.
೩೭ ಇದಲ್ಲದೆ ಅವನು ಇಪ್ಪೇ ಗುಡ್ಡದಿಂದ ಇಳಿಯುವ ಸ್ಥಳಕ್ಕೆ ಸಮೀಪ ಬಂದಾಗ, ಶಿಷ್ಯರ ಸಮೂಹವೆಲ್ಲಾ,
ತಾವು ನೋಡಿದ ಎಲ್ಲಾ ಬಲವಾದ ಕ್ರಿಯೆಗಳಿಗೆ ಸಂತೋಷ ಪಟ್ಟು, ಮಹಾ ಶಬ್ದದಿಂದ ದೇವರನ್ನು ಹೊಗಳಿ,
೩೮ ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಸ್ತೋತ್ರವಾಗಲಿ! ಪರಲೋಕದಲ್ಲಿ ಸಮಾಧಾನವು! ಅತ್ಯುನ್ನತವಾದ
ವುಗಳಲ್ಲಿ ಮಹಿಮೆಯು! ಎಂದು ಹೇಳಲಾರಂಭಿಸಿದರು.
೩೯ [3]ಆಗ ಸಮೂಹದಲ್ಲಿರುವ ಫರಿಸಾಯರಲ್ಲಿ ಕೆಲವರು ಅವನಿಗೆ, ಬೋಧಕನೇ, ನಿನ್ನ ಶಿಷ್ಯರನ್ನು ಗದರಿಸು,
೪೦ ಅಂದಾಗ; ಅವನು ಪ್ರತ್ಯುತ್ತರವಾಗಿ ಅವರಿಗೆ, ನಿಮಗೆ ಹೇಳುತ್ತೇನೆ, ಇವರು ಸುಮ್ಮನಿದ್ದರೆ, [4]ಕಲ್ಲುಗಳು
ಕೂಗುವವು, ಅಂದನು.
೪೧ ತರುವಾಯ ಅವನು ಸಮೀಪಿಸಿದಾಗ, ಪಟ್ಣವನ್ನು ನೋಡಿ, ಅದಕ್ಕೋಸ್ಕರ ಅತ್ತು, ಹೇಳಿದ್ದೇನಂದರೆ,
೪೨ ಅಯ್ಯೋ! ನೀನು [5]ಈ ನಿನ್ನ ದಿವಸದಲ್ಲಾದ್ಯರೂ ನಿನ್ನ ಸಮಾಧಾನಕ್ಕೆ ಬೇಕಾದವುಗಳನ್ನು ತಿಳಿದಿದ್ದರೆ,
೪೩ ಒಳ್ಳೇದಾಗಿತ್ತು; ಆದರೆ ಈಗ ನಿನ್ನ ಕಣ್ಣುಗಳಿಗೆ ಮರೆಯಾಗಿವೆ. ನಿನ್ನ ಶತ್ರುಗಳು [6]ಮೇರುವೆಯನ್ನು ನಿನ್ನ
೪೪ ಸುತ್ತ ಹಾಕಿ, ನಿನ್ನನ್ನು ಸುತ್ತಿ ಕೊಂಡು, ಎಲ್ಲಾ ಕಡೆಯಲ್ಲಿ ನಿನ್ನನ್ನು ಇರಿಕಿಸಿ, ನಿನ್ನನ್ನೂ [7]ನಿನ್ನಲ್ಲಿರುವ ನಿನ್ನ
ಮಕ್ಕಳನ್ನೂ ನೆಲಸಮ ಮಾಡಿ, ನಿನ್ನಲ್ಲಿ ಕಲ್ಲಿನ ಮೇಲೆ ಕಲ್ಲು ಬಿಡದ ದಿನಗಳು ನಿನ್ನ ಮೇಲೆ ಬರುವವು;
ಯಾಕಂದರೆ ನಿನ್ನ ದರುಶನದ ಸಮಯವನ್ನು ನೀನು ತಿಳುಕೊಳ್ಳಲಿಲ್ಲ.

1. ತನಗೆ ಪ್ರಾಪ್ತಿಸುವ ಕಷ್ಟ ಉಪದ್ರಗಳನ್ನು ಸಹಿಸಲೂ, ತನ್ನ ಪುಣ್ಯ ಕ್ರಿಯೆಯನ್ನು ಪೂರೈಸಲೂ, ಮಹಾ ಧೀರನ ಹಾಗೆ ಧೈರ್ಯದಿಂದ ಮುಂದಕ್ಕೆ ನಡೆದು ಹೋದನು.

2. ಲೂಕ. ೧೯. ೨೯—೪೬. ವರಿಗೂ ಇರುವ ವಚನಗಳು ಮತ್ತಾ. ೨೧. ೧—೨೨. ವರಿಗೂ ಇರುವ ವಚನಗಳಿಗೆ ಸರಿಯಾಗಿದೆ. ಮತ್ತಾ. ೨೧. ೧. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು. ೨೯—೩೮. ವರಿಗಿರುವ ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೧. ೧—೯. ಮಾರ್ಕ. ೧೧. ೧—೧೦. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

3. ೩೯—೪೪. ಈ ವಚನಗಳು ಬೇರೆ ಸುವಾರ್ತೆಗಳಲ್ಲಿ ಹೇಳಿ ಇರದ ರೀತಿಯಾಗಿ ಈ ಸುವಾರ್ತೆಯಲ್ಲಿ ಹೇಳಲ್ಪಟ್ಟವೆ. ಒಬ್ಬ ಸಾಧಾರಣ ಬೋಧಕನೆಂದು ಮಾತ್ರ ಎಣಿಸಿದ್ದ ಫರಿಸಾಯರು ಕ್ರಿಸ್ತನನ್ನು ಕುರಿತು ಇಷ್ಟು ಮಹಿಮೆಯುಳ್ಳ ನಾಮಗಳನ್ನೂ ಪ್ರವಾದನವಾಕ್ಯಗಳನ್ನೂ ಉಚ್ಚರಿಸಲ್ಪಡುವದನ್ನು ಕೇಳಿ, ವ್ಯಸನ ಪಟ್ಟರು.

4. ಕೀರ್ತ. ೯೬. ೧೧—೧೩. ಹಬ. ೨. ೧೧. ಮತ್ತಾ. ೩. ೯.

5. ನಿನ್ನನ್ನು ರಕ್ಷಿಸುವ ಉದ್ದಿಶ್ಯ ನಾನು ಬಂದಿರುವ ಈ ಒಳ್ಳೇ ದಿವಸವೆಂದು ಅರ್ಥವಾಗುತ್ತದೆ.

6. ಇದು ಕೊತ್ತಳವೆಂದು ಅರ್ಥವಾಗುತ್ತದೆ. ತೀತುಸ್ ಎಂಬವನು ಯೆರೂಸಲೇಮು ಪಟ್ಣವನ್ನು ಮುತ್ತಿಗೆ ಹಾಕಿದಾಗ ಅದರ ಸುತ್ತಲೂ ಒಂದು ಮರದ ಬೇಲಿಯನ್ನುಂಟು ಮಾಡಿದನು. ಯೆಹೂದ್ಯರು ಅದನ್ನು ನಾಶ ಮಾಡಿದಾಗ ಪಟ್ಣದ ಸುತ್ತಲೂ ಮೇರುವೆಯನ್ನು ಕಟ್ಟಿದನು. ಕ್ರಿಸ್ತನು ಯೆಶಾ. ೨೯. ೨—೪. ವಚನಗಳಲ್ಲಿರುವ ಅಭಿಪ್ರಾಯಕ್ಕೆ ಸರಿಯಾಗಿ ಮಾತಾಡಿದನೆಂದು ತೋರುತ್ತದೆ.

7. ಪಟ್ಣದ ಕಟ್ಟುವಿಕೆಗಳನ್ನೂ ಪ್ರಜೆಗಳನ್ನೂ ಒಂದೇ ಸಾರಿ ನಾಶ ಮಾಡಿ ಬಿಡುವರು.

೪೫ [1]ಮತ್ತು ಅವನು ದೇವಾಲಯದೊಳಗೆ ಬಂದು, ಅದರಲ್ಲಿ ಕ್ರಯ ವಿಕ್ರಯ ಮಾಡುವವರನ್ನು ಹೊರಡಿಸಲಾ
೪೬ ರಂಭಿಸಿ, ಅವರಿಗೆ, ನನ್ನ ಮನೆ ಪ್ರಾರ್ಥನೆಯ ಮನೆ, ಎಂದು ಬರೆದದೆ; (ಯೆಶಾ. ೫೬. ೭. ಯೆರೆ. ೭. ೧೧.)
ಆದರೆ ನೀವು ಅದನ್ನು ಕಳ್ಳರ ಗವಿಯಾಗ ಮಾಡಿದ್ದೀರಿ, ಅಂದನು.
೪೭ ಇದಲ್ಲದೆ [2]ಅವನು ದಿನಾಲು ದೇವಾಲಯದಲ್ಲಿ ಬೋಧಿಸುತ್ತಿದ್ದನು. ಆದರೆ ಪ್ರಧಾನ ಯಾಜಕರೂ ಶಾಸ್ತ್ರಿ
೪೮ ಗಳೂ ಜನರ ಶ್ರೇಷ್ಠರೂ ಅವನನ್ನು ಸಂಹರಿಸುವದಕ್ಕೆ ಹುಡುಕಿದಾಗ್ಯೂ, ಏನು ಮಾಡ ಬೇಕೆಂದು,
ಕಾಣದೆ ಹೋದರು; ಯಾಕಂದರೆ ಜನರೆಲ್ಲಾ ಅವನನ್ನು [3]ಹತ್ತಿ ಕೊಂಡು, ಕೇಳುತ್ತಾ ಇದ್ದರು.

ತನ್ನ ಅಧಿಕಾರವನ್ನು ಕುರಿತು ಮಾಡಿದ ಆಕ್ಷೇಪಣೆಗೆ ಕ್ರಿಸ್ತನು ಕೊಟ್ಟ ಪ್ರತ್ಯುತ್ತರವು.
ದ್ರಾಕ್ಷೇ ತೋಟದ ಕೆಲಸದವರನ್ನು ಕುರಿತ ಸಾಮ್ಯವು.

**20.** ಮತ್ತು [4]ಆ ದಿವಸಗಳ ಒಂದರಲ್ಲಿ ಆದದ್ದೇನಂದರೆ, ಅವನು ದೇವಾಲಯದೊಳಗೆ ಜನರಿಗೆ ಬೋಧಿಸು
ತ್ತಾ, ಸುವಾರ್ತೆ ಪ್ರಸಂಗಿಸುತ್ತಾ ಇರಲಾಗಿ, ಪ್ರಧಾನ ಯಾಜಕರೂ ಶಾಸ್ತ್ರಿಗಳೂ ಹಿರಿಯರ ಸಂಗಡ ಹ
೨ ತ್ತರ ಬಂದು, ಅವನಿಗೆ ಹೇಳಿದ್ದೇನಂದರೆ, ಇವುಗಳನ್ನು ಯಾವ ಅಧಿಕಾರದಿಂದ ಮಾಡುತ್ತೀ? ಈ ಅಧಿಕಾ
೩ ರವನ್ನು ನಿನಗೆ ಕೊಟ್ಟವನ್ಯಾರು? ನಮಗೆ ಹೇಳು. ಅವನು ಉತ್ತರ ಕೊಟ್ಟು, ಅವರಿಗೆ, ನಾನು ಸಹ
೪ ನಿಮ್ಮನ್ನು ಒಂದು ಮಾತು ಕೇಳುತ್ತೇನೆ; ನನಗೆ ಹೇಳಿರಿ. ಯೋಹಾನನ ಸ್ನಾನವು ಪರಲೋಕದಿಂದಿತ್ತೋ?
೫ ಮನುಷ್ಯರಿಂದಿತ್ತೋ? ಅಂದನು. ಆಗಲವರು ತಮ್ಮೊಳಗೆ, ನಾವು, ಪರಲೋಕದಿಂದ ಅಂದರೆ, ಹಾಗಾದರೆ
೬ ಯಾಕೆ ಅವನಲ್ಲಿ ವಿಶ್ವಾಸವಿಡಲಿಲ್ಲ? ಅನ್ನುವನು; ಮನುಷ್ಯರಿಂದ ಅಂದರೆ, ಜನರೆಲ್ಲಾ ನಮ್ಮನ್ನು [5]ಕಲ್ಲೆಸೆ
೭ ಯುವರು; ಯಾಕಂದರೆ, ಯೋಹಾನನು ಪ್ರವಾದಿ ಎಂದು ನಂಬುತ್ತಾರೆ, ಅಂದು ಕೊಂಡು, ಎಲ್ಲಿಂದಲೋ!
೮ ಅರಿಯೆವು, ಎಂದು ಉತ್ತರ ಕೊಟ್ಟರು. ಆಗ ಯೇಸು ಅವರಿಗೆ, ನಾನು ಯಾವ ಅಧಿಕಾರದಿಂದ ಇವುಗಳ
ನ್ನು ಮಾಡುತ್ತೇನೆಂದು ನಿಮಗೆ ಹೇಳುವದಿಲ್ಲ, ಅಂದನು.
೯ [6]ಇದಲ್ಲದೆ ಅವನು ಜನರಿಗೆ ಈ ಸಾಮ್ಯವನ್ನು ಹೇಳಲಾರಂಭಿಸಿದನು; ಏನಂದರೆ, ಒಬ್ಬ ಮನುಷ್ಯನು
ದ್ರಾಕ್ಷೇ ತೋಟವನ್ನು ನೆಟ್ಟು, ಅದನ್ನು ಒಕ್ಕಲಿಗರಿಗೆ ಒಪ್ಪಿಸಿ ಕೊಟ್ಟು, ಬಹು ಕಾಲ ಬೇರೆ ದೇಶದಲ್ಲಿ ಇದ್ದನು.
೧೦ ಮತ್ತು ತಕ್ಕ ಕಾಲದಲ್ಲಿ ಒಕ್ಕಲಿಗರ ಬಳಿಗೆ, ದ್ರಾಕ್ಷೇ ತೋಟದ ಫಲದಲ್ಲಿ ತನಗೆ ಕೊಡ ಬೇಕೆಂದು ಹೇಳಿ,
ದಾಸನನ್ನು ಕಳುಹಿಸಿದನು; ಆದರೆ ಒಕ್ಕಲಿಗರು ಅವನನ್ನು ಹೊಡೆದು, ಅವನನ್ನು ಬರೀದಾಗಿ ಕಳುಹಿಸಿ
೧೧ ಬಿಟ್ಟರು. ಮತ್ತು ಅವನು ಬೇರೆ ದಾಸನನ್ನು ಕಳುಹಿಸಿದಾಗ, ಅವರು ಇವನನ್ನೂ ಹೊಡೆದು, ಅವಮಾನ
೧೨ ಮಾಡಿ, ಬರೀದಾಗಿ ಕಳುಹಿಸಿ ಬಿಟ್ಟರು. ಮತ್ತು ಅವನು ಮೂರನೆಯವನನ್ನು ಕಳುಹಿಸಿದಾಗ, ಅವರು
೧೩ ಇವನನ್ನು ಸಹ ಘಾಯ ಮಾಡಿ, ಹೊರಗೆ ಹಾಕಿದರು. ಆಗ ದ್ರಾಕ್ಷೇ ತೋಟದ ಯಜಮಾನನು, ನಾನೇ
ನು ಮಾಡಲಿ? ನನ್ನ ಪ್ರಿಯ ಮಗನನ್ನು ಕಳುಹಿಸುವೆನು; ಒಂದು ವೇಳೆ ಅವನನ್ನು ನೋಡಿ, ಲಕ್ಷ್ಯ ಮಾಡು
೧೪ ವರು, ಅಂದನು. ಆದರೆ ಒಕ್ಕಲಿಗರು ಅವನನ್ನು ನೋಡಿ, ಇವನು ಬಾಧ್ಯಸ್ಥನು; ಬನ್ನಿರಿ, ಬಾಧ್ಯತೆ ನಮ್ಮ

1. ೪೫, ೪೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೧. ೧೨, ೧೩. ಮಾರ್ಕ. ೧೧. ೧೫. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

2. ೪೭, ೪೮. ವಚನಗಳಲ್ಲಿ ೨೧. ೩೭, ೩೮. ವಚನಗಳಲ್ಲಿರುವ ಪ್ರಕಾರ, ಕ್ರಿಸ್ತನು ತಾನು ಹಿಂಸೆ ಪಡುವದಕ್ಕೆ ಮುಂಚಿನ ದಿವಸಗಳನ್ನು ಹ್ಯಾಗೆ ಕಳೆದನೆಂದು ತೋರಿಸಿ ಇದೆ. ಅದರಲ್ಲಿ ಕೆಲವು ಮುಖ್ಯ ಸಂಗತಿಗಳನ್ನು ೧೯—೨೨. ಸಂಧಿಗಳ ವರಿಗೂ ನೋಡ ಬಹುದು.

3. ಆತನ ಅಮೃತವಾಕ್ಯಗಳನ್ನು ಕೇಳಿದ ಜನರು ಅತ್ಯಾಶ್ಚರ್ಯದಿಂದ ತುಂಬಿದವರಾಗಿ, ಆತನ ಬೋಧನೆಗಳನ್ನು ಅತ್ಯಾಶೆಯಿಂದ ಕೇಳುತ್ತಾ ಇದ್ದರು.

4. ೨೦ನೇ ಸಂಧಿಯಲ್ಲಿರುವ ಸಂಗತಿಗಳು ಮತ್ತಾ. ೨೧. ೨೩—೪೬; ೨೨. ೨೩. ಸಂಧಿಗಳಲ್ಲಿ ಅಡಗಿರುತ್ತವೆ. ಮತ್ತಾ. ೨೧. ೨೩; ೨೨. ೧೫; ೨೩. ೧. ವ್ಯಾಖ್ಯಾನಗಳಲ್ಲಿ ನೋಡ ಬೇಕು. ೧—೮. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೧. ೨೩—೨೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

5. ತಮ್ಮ ಕಾರ್ಯಕ್ಕೆ ಅನುಕೂಲವಾಗಿ ಜನರಲ್ಲಿ ಕಲಹವನ್ನು ಎಬ್ಬಿಸಿದ ಅಧಿಕಾರಿಗಳು ಈಗ ಅವರಿಗೆ ಭಯ ಪಡುತ್ತಾರೆ.

6. ೯—೧೯. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೧. ೨೩, ೩೩—೪೬. ಮಾರ್ಕ. ೧೨. ೧—೧೨. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.



೧೫ ದಾಗುವ ಹಾಗೆ, ಅವನನ್ನು ಕೊಂದು ಹಾಕುವ ಎಂದು, ತಮ್ಮಲ್ಲಿ ಆಲೋಚಿಸಿ ಕೊಂಡು, ಅವನನ್ನು
ದ್ರಾಕ್ಷೇ ತೋಟದ ಹೊರಗೆ ಹಾಕಿ, ಕೊಂದು ಹಾಕಿದರು. ಹಾಗಾದರೆ, ದ್ರಾಕ್ಷೇ ತೋಟದ ಯಜಮಾನ
೧೬ ನು ಅವರಿಗೆ ಏನು ಮಾಡುವನು? ಅವನು ಬಂದು, ಆ ಒಕ್ಕಲಿಗರನ್ನು ನಾಶನ ಮಾಡಿ, ದ್ರಾಕ್ಷೇ ತೋಟ
ವನ್ನು ಬೇರೊಬ್ಬರಿಗೆ ಕೊಡುವನು.
ಅವರು ಕೇಳಿ, [1]ಆಗದು, ಅಂದರು.
೧೭ ಆದರೆ ಅವನು ಅವರನ್ನು ನೋಡಿ, ಹೇಳಿದ್ದೇನಂದರೆ, ಹಾಗಾದರೆ, ಮನೇ ಕಟ್ಟುವವರು ತಳ್ಳಿದ ಕಲ್ಲೇ
೧೮ ಮೂಲೆಗೆ ತಲೇ ಕಲ್ಲಾಯಿತು, (ಕೀರ್ತ. ೧೧೮. ೨೨.) ಎಂಬ ಬರಹವು ಏನು? ಆ ಕಲ್ಲಿನ ಮೇಲೆ ಬೀ
ಳುವ ಪ್ರತಿ ಮನುಷ್ಯನು ತುಂಡಾಗುವನು; ಆದರೆ ಅದು ಯಾವನ ಮೇಲೆ ಬೀಳುವದೋ, ಅವನನ್ನು ಪುಡಿ
ಪುಡಿ ಮಾಡುವದು.
೧೯ ಆ ಸಮಯದಲ್ಲಿ ಪ್ರಧಾನ ಯಾಜಕರೂ ಶಾಸ್ತ್ರಿಗಳೂ, ಅವನು ತಮ್ಮನ್ನು ಕುರಿತು ಈ ಸಾಮ್ಯವನ್ನು
ಹೇಳಿದನೆಂದು ತಿಳಿದು, ಅವನ ಮೇಲೆ ಕೈ ಹಾಕುವದಕ್ಕೆ ಹುಡುಕಿ, ಜನರಿಗೆ ಭಯ ಪಟ್ಟರು.

ತಂತ್ರವಾದ ಪ್ರಶ್ನೆಗಳಿಗೆ ಕ್ರಿಸ್ತನು ಉತ್ತರ ಕೊಟ್ಟದ್ದು; ಮೆಸ್ಸಿಯನ ಉತ್ಪತ್ತಿಯನ್ನು ಕುರಿತು ಪ್ರಶ್ನೆ ಮಾಡಿದ್ದು.

೨೦ [2]ಮತ್ತು ಅವನನ್ನು ಅಧಿಕಾರಕ್ಕೂ, ಅಧಿಪತಿಯ ವಶಕ್ಕೂ ಒಪ್ಪಿಸುವ ಹಾಗೆ, ಮಾತಿನಲ್ಲಿ ಅವನನ್ನು ಹಿಡಿ
ದು ಕೊಳ್ಳುವದಕ್ಕೆ ಹೊಂಚಿ ಕೊಂಡು, ತಾವು ನೀತಿವಂತರೆಂದು ಕಪಟದಿಂದ ಅನ್ನಿಸಿ ಕೊಳ್ಳುವ [3]ಚಾರರನ್ನು
೨೧ ಕಳುಹಿಸಿದರು. ಇವರು, ಬೋಧಕನೇ, ನೀನು ಸರಿಯಾಗಿ ಮಾತಾಡಿ, ಬೋಧಿಸುತ್ತೀ; ಮುಖದಾಕ್ಷಿಣ್ಯ
೨೨ ಮಾಡದೆ, ನಿಜವಾಗಿ ದೇವರ ಮಾರ್ಗವನ್ನು ಬೋಧಿಸುತ್ತೀ ಎಂದು ಬಲ್ಲೆವು; ಕೈಸರನಿಗೆ ತೆರಿಗೆ ಕೊಡ
ಬೇಕೋ, ಬೇಡವೋ? ಎಂದು ಅವನನ್ನು ಕೇಳಿದರು.
೨೩ ಆದರೆ ಅವನು ಅವರ ತಂತ್ರವನ್ನು ತಿಳಿದು, ಅವರಿಗೆ ಹೇಳಿದ್ದು, ನನ್ನನ್ನು ಯಾಕೆ ಶೋಧಿಸುತ್ತೀರಿ?
೨೪ ನನಗೆ ಹಣವನ್ನು ತೋರಿಸಿರಿ. ಅದಕ್ಕೆ ಯಾವನ ರೂಪವೂ ಮೇಲ್ಬರಹವೂ ಉಂಟು? ಅವರು ಉತ್ತರ ಕೊ
೨೫ ಟ್ಟು, ಕೈಸರನದು, ಅಂದಾಗ; ಅವನು ಅವರಿಗೆ, ಹಾಗಾದರೆ ಕೈಸರನದನ್ನು ಕೈಸರನಿಗೂ, ದೇವರದನ್ನು ದೇ
೨೬ ವರಿಗೂ ಕೊಡಿರಿ, ಅಂದನು. ಆಗಲವರು ಜನರೆದುರಾಗಿ ಅವನ ಮಾತನ್ನು ಹಿಡಿಯಲಾರದೆ, ಅವನ ಉತ್ತ
ರಕ್ಕೆ ಆಶ್ಚರ್ಯ ಪಟ್ಟು, ಸುಮ್ಮನಿದ್ದರು.
೨೭ ಮತ್ತು ಪುನರುತ್ಥಾನವಿಲ್ಲವೆಂದು ಹೇಳುವ ಸದ್ದುಕಾಯರಲ್ಲಿ ಕೆಲವರು ಹತ್ತರ ಬಂದು, ಅವನನ್ನು ಕೇಳಿ
೨೮ ದ್ದೇನಂದರೆ, ಬೋಧಕನೇ, ಒಬ್ಬನ ಸಹೋದರನು, ಹೆಂಡತಿ ಇದ್ದು, ಸತ್ತರೆ, ಅವನು ಮಕ್ಕಳಿಲ್ಲದೆ ಸಾಯುವ
ಪಕ್ಷದಲ್ಲಿ, ಅವನ ಸಹೋದರನು ಅವನ ಹೆಂಡತಿಯನ್ನು ತೆಗೆದು ಕೊಂಡು, ತನ್ನ ಸಹೋದರನಿಗೆ ಮಕ್ಕಳನ್ನು
೨೯ ಹುಟ್ಟಿಸ ಬೇಕೆಂದು, (ದ್ವಿತೀಯ ನ್ಯಾ. ೨೫. ೫.) ಮೋಶೆ ನಮಗೆ ಬರೆದಿದ್ದಾನೆ. ಹೀಗಿರಲಾಗಿ, ಏಳು
ಮಂದಿ ಸಹೋದರರಿದ್ದರು; ಮೊದಲನೆಯವನು ಹೆಂಡತಿಯನ್ನು ತೆಗೆದು ಕೊಂಡು, ಮಕ್ಕಳಿಲ್ಲದೆ ಸತ್ತನು.
೩೦, ೩೧ ಎರಡನೆಯವನು ಆ ಹೆಂಗಸನ್ನು ತೆಗೆದು ಕೊಂಡು, ಇವನೂ ಮಕ್ಕಳಿಲ್ಲದೆ ಸತ್ತನು. ಮತ್ತು ಮೂರ
ನೆಯವನು ಅವಳನ್ನು ತಕ್ಕೊಂಡನು; ಮತ್ತು ಅದೇ ಪ್ರಕಾರ ಆ ಏಳು ಮಂದಿಯೂ; ಅವರು ಮಕ್ಕಳನ್ನು
೩೨, ೩೩ ಉಳಿಸದೆ, ಸತ್ತರು. ಎಲ್ಲರ ಕಡೆಯಲ್ಲಿ ಆ ಹೆಂಗಸು ಸಹ ಸತ್ತಳು. ಹಾಗಾದರೆ ಪುನರುತ್ಥಾನದಲ್ಲಿ ಅವ
ರೊಳಗೆ ಯಾರ ಹೆಂಡತಿಯಾಗಿರುವಳು? ಯಾಕಂದರೆ ಅವಳು ಆ ಏಳು ಮಂದಿಗೂ ಹೆಂಡತಿಯಾಗಿದ್ದಳು.

1. ಈ ಸಾಮ್ಯವನ್ನು ತಮ್ಮನ್ನು ಕುರಿತೇ ಹೇಳಿದನೆಂದು ಅವರು ತಿಳಿದು, ಈ ಪ್ರಕಾರ ಹೇಳಿದರು. (೧೯. ವ.)

2. ೨೦—೪೭. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೨. ೧೫—೪೬. ಮಾರ್ಕ. ೧೨. ೧೩—೪೦. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

3. ಆತನಲ್ಲಿ ತಪ್ಪು ಕಂಡು ಹಿಡಿಯ ಬೇಕೆಂದು ಅವರೇ ಸಮಯ ನೋಡಿ ಕೊಂಡಿದ್ದ ತರುವಾಯ, ಲಂಚದಿಂದ ವಶ ಮಾಡಿ ಕೊಂಡ ಕೆಲವು ಮನುಷ್ಯರನ್ನು ಆತನ ಬಳಿಗೆ ಕಳುಹಿಸಿದರು.

೩೪ ಆಗ ಯೇಸು ಅವರಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ಈ ಲೋಕದ ಮಕ್ಕಳು ಮದುವೆ ಮಾಡಿ
೩೫ ಕೊಳ್ಳುತ್ತಾರೆ, ಮತ್ತು ಮದುವೆ ಮಾಡಿ ಕೊಡುತ್ತಾರೆ; ಆದರೆ ಆ ಲೋಕಕ್ಕೂ, ಸತ್ತವರ ಪುನರುತ್ಥಾ
ನಕ್ಕೂ ಶೇರುವದಕ್ಕೆ ಯೋಗ್ಯರಾದವರು ಮದುವೆ ಮಾಡಿ ಕೊಳ್ಳುವದಿಲ್ಲ, ಮದುವೆ ಮಾಡಿ ಕೊಡುವದಿಲ್ಲ.
೩೬ ಯಾಕಂದರೆ [1]ದೂತರಿಗೆ ಸಮಾನರಾಗಿದ್ದು, ಇನ್ನು ಮೇಲೆ ಸಾಯಲಾರರು; ಪುನರುತ್ಥಾನದ ಮಕ್ಕಳಾ
ಗಿದ್ದು, ದೇವರ ಮಕ್ಕಳಾಗಿದ್ದಾರೆ.
೩೭ ಆದರೆ ಸತ್ತವರು ಏಳುತ್ತಾರೆಂದು, ಮೋಶೆಯು ಸಹ ಪೊದೆಯ ಸಂಧಿಯಲ್ಲಿ, ಕರ್ತನು ಅಬ್ರಹಾಮನ
ದೇವರೂ, ಇಸಾಕನ ದೇವರೂ, ಯಾಕೋಬನ ದೇವರೂ, (ಹೊರ. ೩. ೬.) ಎಂದು ಹೇಳಿ, ತೋರಿಸಿದ್ದಾನೆ.
೩೮ ಆದರೆ ಅವನು ಸತ್ತವರಿಗಲ್ಲ, ಬದುಕುವವರಿಗೆ ದೇವರಾಗಿದ್ದಾನೆ; ಯಾಕಂದರೆ ಎಲ್ಲರು ಅವನಿಗೆ ಬದು
೩೯ ಕುತ್ತಾರೆ. ಆಗ ಶಾಸ್ತ್ರಿಗಳಲ್ಲಿ ಕೆಲವರು ಉತ್ತರ ಕೊಟ್ಟು, ಬೋಧಕನೇ, ಚನ್ನಾಗಿ ಹೇಳಿದಿ, ಅಂದರು.
೪೦ ಮತ್ತು [2]ಇನ್ನು ಏನಾದರೂ ಅವನನ್ನು ಕೇಳ ಧೈರ್ಯ ಪಡಲಿಲ್ಲ.
೪೧ ಆಗಲವನು ಅವರಿಗೆ ಹೇಳಿದ್ದೇನಂದರೆ, ಕ್ರಿಸ್ತನು ದಾವೀದನ ಮಗನೆಂದು ಜನರು ಹೇಳುವದೇನು?
೪೨, ೪೩ ದಾವೀದನು ತಾನೇ ಕೀರ್ತನೇ ಪುಸ್ತಕದಲ್ಲಿ, ಕರ್ತನು ನನ್ನ ಕರ್ತನಿಗೆ, ನಾನು ನಿನ್ನ ಶತ್ರುಗಳನ್ನು ನಿನ್ನ
ಪಾದಪೀಠವಾಗಿ ಇಡುವ ಮಟ್ಟಿಗೂ, ನನ್ನ ಬಲಪಾರ್ಶ್ವದಲ್ಲಿ ಕೂಡ್ರು ಎಂದು, (ಕೀರ್ತ. ೧೧೦. ೧.) ಹೇಳ
೪೪ ಲಿಲ್ಲವೋ? ಹಾಗಾದರೆ ದಾವೀದನು ಅವನನ್ನು ಕರ್ತನೆಂದು ಕರೆದರೆ, ಅವನ ಮಗನಾಗಿರುವದು ಹ್ಯಾಗೆ?

ಶಾಸ್ತ್ರಿಗಳಿಗೆ ಎಚ್ಚರಿಕೆಯಾಗಿರ ಆಜ್ಞಾಪಿಸಿದ್ದು; ವಿಧವೆಯ ಧರ್ಮವನ್ನು ಹೊಗಳಿದ್ದು.

೪೫, ೪೬ ಮತ್ತು ಜನರೆಲ್ಲಾ ಕೇಳುತ್ತಿರಲು, ಅವನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ, ದೊಡ್ಡ ಅಂಗಿಗಳನ್ನು
ತೊಟ್ಟು ಕೊಂಡು, ತಿರುಗಾಡ ಇಚ್ಛೈಸಿ, ಅಂಗಡಿ ಬೀದಿಗಳಲ್ಲಿ ವಂದನೆಗಳನ್ನೂ ಸಭೆಮನೆಗಳಲ್ಲಿ ಮೊದ
೪೭ ಲನೇ ಪೀಠಗಳನ್ನೂ ಔತಣಗಳಲ್ಲಿ ಮೊದಲನೇ ಪಙ್ತಿಗಳನ್ನೂ ಆಶಿಸಿ, ವಿಧವೆಯರ ಮನೆಗಳನ್ನು ತಿಂದು
ಬಿಟ್ಟು, ನೆವಕ್ಕೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುವ ಶಾಸ್ತ್ರಿಗಳಿಗೆ ಜಾಗ್ರತೆಯಾಗಿರ್ರಿ. ಇವರೇ ಅಧಿಕ
ವಾದ ಆಜ್ಞೆ ಹೊಂದುವರು.

21. [3]ಇದಲ್ಲದೆ ಅವನು ಕಣ್ಣೆತ್ತಿ, ಐಶ್ವರ್ಯವಂತರು ತಮ್ಮ ದಾನಗಳನ್ನು ಬೊಕ್ಕಸದಲ್ಲಿ ಇಡುವದನ್ನು ಕಂಡನು.
೨ ಮತ್ತು ಬಡವಳಾದ ಒಬ್ಬ ವಿಧವೆ ಎರಡು ಕಾಸು ಅದರಲ್ಲಿ ಹಾಕುವದನ್ನು ನೋಡಿ, ಹೇಳಿದ್ದೇನಂದರೆ,
೩, ೪ ನಿಜವಾಗಿ ನಿಮಗೆ ಹೇಳುತ್ತೇನೆ, ಈ ಬಡ ವಿಧವೆ ಎಲ್ಲರಿಗಿಂತ ಹೆಚ್ಚಾಗಿ ಹಾಕಿದ್ದಾಳೆ; ಯಾಕಂದರೆ
ಇವರೆಲ್ಲರು ತಮಗೆ ಮಿಕ್ಕಿರುವದರಲ್ಲಿ ಕೆಲವನ್ನು ದೇವರಿಗೆ ದಾನವಾಗಿ ಹಾಕಿದ್ದಾರೆ; ಆದರೆ ಇವಳು ತನ್ನ
ಕೊರತೆಯಲ್ಲಿ ತನಗಿದ್ದ ಬದುಕೆಲ್ಲಾ ಹಾಕಿದ್ದಾಳೆ.

ಕ್ರಿಸ್ತನು ಹೇಳಿದ ಪ್ರವಾದನೆಗಳನ್ನು ಕುರಿತು ಸಂಭಾಷಿಸಿದ್ದು; ಸೈರಣೆಯೂ ಎಚ್ಚರಿಕೆಯೂ ಉಳ್ಳವರಾಗಿರ
ಬೇಕೆಂದು ಆಜ್ಞಾಪಿಸಿದ್ದು.

೫ [4]ಮತ್ತು ಕೆಲವರು ದೇವಾಲಯವನ್ನು ಕುರಿತು, ಅದು ಒಳ್ಳೇ ಕಲ್ಲುಗಳಿಂದಲೂ [5]ಕಾಣಿಕೆಗಳಿಂದಲೂ

1. ಸಾಯದ ವರವನ್ನು ಹೊಂದಿ, ದೂತರ ಹಾಗೆ ಇರ ಹೋಗುವ ದೇವರ ದಾಸರು, ಮರಣದಿಂದ ಕಡಿಮೆಯಾಗಿ ಹೋಗುವ ಮನುಷ್ಯರ ಸಂಖ್ಯೆಯನ್ನು ಪೂರ್ತಿ ಮಾಡ ತಕ್ಕ ಯತ್ನವಾದ ಮದುವೆಯನ್ನು ಮಾಡ ತಕ್ಕ ಅವಶ್ಯವಿಲ್ಲ. ಅವರು ಪಾಪದ ಫಲವಾದ ಕೇಡುಗಳಿಗೆ ಶರೀರದ ಪ್ರಕಾರವಾಗಿಯೂ ಆತ್ಮದ ಪ್ರಕಾರವಾಗಿಯೂ ಪೂರ್ಣವಾಗಿ ತಪ್ಪಿಸಿ ಕೊಂಡವರಾಗಿರುವರು. (ರೋಮಾ. ೮. ೨೩. ಎಫೆ. ೧. ೧೪.)

2. ೩೯ನೇ ೪೦ನೇ ವಚನಗಳು ಮಾರ್ಕ. ೧೨. ೨೮—೩೪. ವಚನಗಳಲ್ಲಿ ಇರುವ ಸಂಗತಿಗಳ ಪ್ರಾರಂಭವೂ ಮುಗಿಸುವಿಕೆಯೂ ಅಡಗಿದ ಸಂಕ್ಷೇಪವಾಗಿದೆ.

3. ೧—೪. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೧೨. ೪೧—೪೪. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ಈ ಭಾಗದಲ್ಲಿರುವ ಸಂಭಾಷಣೆ ಮಾರ್ಕನ ಸುವಾರ್ತೆಯಲ್ಲಿ ಹೇಳಿರುವ ಪ್ರಕಾರ ಕ್ರಿಸ್ತನು ಇಪ್ಪೇ ಗುಡ್ಡದ ಮೇಲೆ ಮಾಡಿದ ಸಂಭಾಷಣೆಗೆ ಸರಿಯಾಗಿದೆ. (ಮತ್ತಾ. ೨೪. ೧. ಮಾರ್ಕ. ೧೩. ೧. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

5. ಜನರು ಮಾಡಿದ ಹರಿಕೆಗಳಿಂದ ಬಂದ ಹೆಚ್ಚು ಬೆಲೆಯುಳ್ಳ ಕಾಣಿಕೆಗಳು ದೇವಾಲಯದಲ್ಲಿ ಬಹಳವಾಗಿದ್ದವು.



೬ ಶೃಂಗರಿಸಲ್ಪಟ್ಟದೆ, ಅಂದಾಗ; ಅವನು, ಇವುಗಳನ್ನು ನೋಡುತ್ತೀರಲ್ಲ? ಕೆಡವಲ್ಪಡದೆ ಕಲ್ಲು ಕಲ್ಲಿನ ಮೇಲೆ
ಬಿಡಲ್ಪಡದ ದಿವಸಗಳು ಬರುವವು, ಅಂದನು.
೭ ಅವರು, ಬೋಧಕನೇ, ಇವು ಯಾವಾಗ ಆಗುವವು? ಅವು ಆಗುವ ಕಾಲಕ್ಕೆ ಗುರುತೇನು? ಎಂದು ಅವ
ನನ್ನು ಕೇಳಿದಾಗ;
೮ ಅವನು ಹೇಳಿದ್ದು, ನೀವು ಮೋಸಗೊಳ್ಳದ ಹಾಗೆ ನೋಡಿ ಕೊಳ್ಳಿರಿ. ಯಾಕಂದರೆ ಅನೇಕರು, ನಾನು
ಕ್ರಿಸ್ತನು; [1]ಸಮಯವು ಸಮೀಪವಾಯಿತು ಎಂದು ಹೇಳಿ, ನನ್ನ ಹೆಸರಿನಲ್ಲಿ ಬರುವರು. ಹಾಗಾದರೆ ಅವರ
೯ ಹಿಂದೆ ಹೋಗ ಬೇಡಿರಿ. ಆದರೆ ನೀವು ಯುದ್ಧ ಕಲಹಗಳ ಸುದ್ದಿ ಕೇಳಿದರೆ, ದಿಗುಲು ಪಡ ಬೇಡಿರಿ; ಯಾ
ಕಂದರೆ ಇವು ಮೊದಲು ಆಗ ಬೇಕು; ಆದರೆ ಸಂಗಡಲೇ ಅಂತ್ಯವು ಇರುವದಿಲ್ಲ.
೧೦ ಆಗಲವರಿಗೆ ಹೇಳಿದ್ದೇನಂದರೆ, ಜನಾಂಗದ ಮೇಲೆ ಜನಾಂಗವು, ರಾಜ್ಯದ ಮೇಲೆ ರಾಜ್ಯವು ಏಳುವದು;
೧೧ ಮತ್ತು ಸ್ಥಳ ಸ್ಥಳಗಳಲ್ಲಿ ದೊಡ್ಡ ಭೂಕಂಪಗಳೂ ಬರಗಳೂ ವ್ಯಾಧಿಗಳೂ ಇರುವವು; ಮತ್ತು ಆಕಾಶದಿಂ
ದುಂಟಾಗುವ ಭಯಂಕರವಾದ ನೋಟಗಳೂ, ದೊಡ್ಡ ಗುರುತುಗಳೂ ಇರುವವು.
೧೨ ಆದರೆ [2]ಇವೆಲ್ಲಕ್ಕೆ ಮುಂಚೆ ನಿಮ್ಮ ಮೇಲೆ ತಮ್ಮ ಕೈಗಳನ್ನು ಹಾಕಿ, ನಿಮ್ಮನ್ನು ಸಭೆಮನೆಗಳಿಗೂ, ಕಾವಲಿ
ಮನೆಗಳಿಗೂ ಒಪ್ಪಿಸಿ, ನನ್ನ ಹೆಸರಿನ ನಿಮಿತ್ತ ಅರಸುಗಳ ಮುಂದೆಯೂ ಅಧಿಪತಿಗಳ ಮುಂದೆಯೂ ತಕ್ಕೊಂ
೧೩, ೧೪ ಡು ಹೋಗಿ, ಹಿಂಸಿಸುವರು. ಇದು ನಿಮಗೆ [3]ಸಾಕ್ಷಿಗೋಸ್ಕರ ಆಗುವದು. ಹೀಗಿರುವದರಿಂದ ಪ್ರತ್ಯು
ತ್ತರವನ್ನು ಹೇಳುವದಕ್ಕೆ ಮೊದಲಾಗಿ ಚಿಂತೆ ಪಡ ಬಾರದೆಂದು, ನಿಮ್ಮ ಹೃದಯಗಳಲ್ಲಿ ನಿಶ್ಚಯ ಮಾಡಿರಿ.
೧೫ ಯಾಕಂದರೆ ನಿಮ್ಮನ್ನು ಎದುರಿಸುವವರೆಲ್ಲರು ಎದುರು ಮಾತಾಡಲೂ, ಎದುರು ನಿಲ್ಲಲೂ ಕೂಡದಂಥ
೧೬ ಬಾಯಿಯನ್ನೂ ಜ್ಞಾನವನ್ನೂ ನಾನು ನಿಮಗೆ ಕೊಡುವೆನು. ಇದಲ್ಲದೆ ಹೆತ್ತವರೂ ಸಹೋದರರೂ
ನೆಂಟರೂ ಸ್ನೇಹಿತರೂ ನಿಮಗೆ ದ್ರೋಹ ಮಾಡುವರು; ಮತ್ತು ನಿಮ್ಮಲ್ಲಿ ಕೆಲವರನ್ನು ಕೊಂದು ಹಾಕುವರು.
೧೭, ೧೮ ಮತ್ತು ನನ್ನ ಹೆಸರಿನ ನಿಮಿತ್ತ ಎಲ್ಲರು ನಿಮ್ಮನ್ನು ಹಗೆ ಮಾಡುವರು. ಆದರೆ ನಿಮ್ಮ [4]ತಲೇ ಕೂದಲು
೧೯ ಗಳಲ್ಲಿ ಒಂದಾದರೂ ನಾಶವಾಗುವದಿಲ್ಲ. ನಿಮ್ಮ ತಾಳ್ಮೆಯಿಂದ ನಿಮ್ಮ ಪ್ರಾಣಗಳನ್ನು ಸ್ವತಂತ್ರಿಸಿ ಕೊಳ್ಳಿರಿ.
೨೦ ಆದರೆ ಯೆರೂಸಲೇಮು ಸೈನ್ಯಗಳಿಂದ ಸುತ್ತಲ್ಪಟ್ಟಿರುವದನ್ನು ನೀವು ನೋಡುವಾಗ, ಅದು ಹಾಳಾಗುವ
೨೧ ಸಮಯವು ಸಮೀಪವಾಯಿತೆಂದು ತಿಳುಕೊಳ್ಳಿರಿ. ಆಗ ಯೆಹೂದದಲ್ಲಿರುವವರು ಬೆಟ್ಟಗಳಿಗೆ ಓಡಿ ಹೋ
೨೨ ಗಲಿ; ಅದರ ಮಧ್ಯದಲ್ಲಿರುವವರು ಹೊರಡಲಿ; ಪರಸ್ಥಳಗಳಲ್ಲಿರುವವರು ಅದರಲ್ಲಿ ಶೇರದಿರಲಿ. ಯಾಕಂದರೆ
ಆ ದಿವಸಗಳು ಬರೆದವುಗಳೆಲ್ಲಾ ಈಡೇರುವಂಥ, [5]ಮುಯ್ಯಿಗೆ ಮುಯ್ಯಿ ಆಗುವಂಥ ದಿವಸಗಳಾಗಿವೆ.
೨೩ ಇದಲ್ಲದೆ ಆ ದಿವಸಗಳಲ್ಲಿ ಗರ್ಭಿಣಿಯರಿಗೂ, ಮೊಲೆ ಕೊಡುವವರಿಗೂ, ಅಯ್ಯೋ! ಯಾಕಂದರೆ ದೇಶದ
೨೪ ಮೇಲೆ ಮಹಾ ಸಂಕಟವೂ, ಈ ಜನರ ಮೇಲೆ ಕೋಪವೂ ಉಂಟಾಗುವದು; ಅವರು ಕತ್ತಿಯ ಬಾಯಿಯಿಂದ
ಬೀಳುವರು; ಸಮಸ್ತ [6]ಜನಾಂಗಗಳೊಳಗೆ ಶೆರೆಯಾಗಿ ವೈಯಲ್ಪಡುವರು; ಮತ್ತು [7]ಜನಾಂಗಗಳ ಸಮಯವು
ಪೂರ್ಣವಾಗುವ ತನಕ, ಯೆರೂಸಲೇಮು ಜನಾಂಗಗಳಿಂದ ತುಳಿಯಲ್ಪಡುತ್ತಾ ಇರುವದು.

1. ಕಾಲವು ಸಮೀಪವಾಯಿತು ಎಂದು ಕ್ರಿಸ್ತನು ಪ್ರಸಂಗ ಮಾಡಿದ ಹಾಗೆಯೇ ಕಳ್ಳ ಗುರುಗಳು ಸಹ ಪ್ರಸಂಗ ಮಾಡುವರು. (ಮಾರ್ಕ. ೧. ೧೫.)

2. ೧೨—೧೯. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೦. ೧೬—೨೨. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ನಿಮಗೆ ಸಂಭವಿಸುವ ಮಹಾ ಉಪದ್ರವು ನಿಮ್ಮ ಯಥಾರ್ಥತ್ವಕ್ಕೆ ಸಾಕ್ಷಿಯಾಗಿಯೂ, ಅವರಿಗೆ ವಿರೋಧವಾದ ಸಾಕ್ಷಿಯಾಗಿಯೂ ಇರುವದು. (ಮತ್ತಾ. ೧೦. ೧೯. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.)

4. ನಿಮಗೆ ಸಂಭವಿಸುವ ಉಪದ್ರಗಳಿಂದ ನಿಮಗೆ ಸ್ವಲ್ಪವಾದರೂ ನಷ್ಟ ಬಾರದು. ನೀವು ತಾಳ್ಮೆಯಿಂದ ನನ್ನನ್ನು ಹೊಂದಿ ಕೊಂಡು, ನನ್ನ ಕಟ್ಟಳೆಗಳಿಗೆ ಒಳಬಿದ್ದು ನಡೆದರೆ, ಇಹದಲ್ಲಿಯೂ ಪರದಲ್ಲಿಯೂ ಸುಖ ಹೊಂದುವಿರಿ ಎಂಧೇಳಿದನು.

5. ೨೨ನೇ ವಚನವನ್ನೂ ೨೮ನೆ ವಚನವನ್ನೂ ಸರಿ ನೋಡುವಾಗ, ಮುಯ್ಯಿಗೆ ಮುಯ್ಯಿ ಆಗುವ ದಿವಸಗಳೆಂಬುವದು ವಿಮೋಚನೆಯ ಕಾಲವನ್ನು ಸೂಚಿಸುತ್ತದೆ ಎಂದು ತಿಳಿಯ ಬಹುದು. (ಯೆಶಾ. ೩೪. ೧—೮; ೬೩. ೧, ೪.)

6. ಪೂರ್ವಕಾಲದಲ್ಲಿ ಯೆಹೂದ್ಯರು ಬಾಬೆಲಿಗೆ ಶೆರೆಯಾಗಿ ವೈಯಲ್ಪಟ್ಟರು. ಈ ಕಾಲದಲ್ಲಿ ಅವರು ಧೂಳಿಯ ಮುಂದಿನ ಹೊಟ್ಟಿನ ಹಾಗೆ ಲೋಕದಲ್ಲೆಲ್ಲಾ ಚದರಲ್ಪಟ್ಟಿದ್ದಾರೆ. ಯೆರೂಸಲೇಮು ಎಂಬ ಪರಿಶುದ್ಧ ಪಟ್ಟಣವು, ರೋಮಾಯರು, ಫಾರ್ಷಿಯವರು, ಸರಸೇನರು, ಮೂಢ ಭಕ್ತಿಯುಳ್ಳ ಕ್ರೈಸ್ತರು, ತುರುಕರು ಮುಂತಾದ ಜಾತಿಗಳವರಿಂದ ತುಳಿಯಲ್ಪಡುತ್ತಾ ಇದೆ.

7. ಇಸ್ರಯೇಲ್ ಜಾತಿಯವರಿಗೆ ಕೃಪೆಯ ಕಾಲ ಉಂಟಾಗಿದ ಪ್ರಕಾರ (೧೯. ೪೨.) ಅನ್ಯ ಜನಾಂಗಗಳವರಿಗೂ ಕೃಪೆಯ

೨೫ ಮತ್ತು ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಲಕ್ಷಣಗಳೂ, ಭೂಮಿಯ ಮೇಲಿರುವ ಜನಾಂಗಗಳಿಗೆ ದಿಕ್ಕು
೨೬ ಕಾಣದ ಸಂಕಟವೂ ಇರುವವು; ಸಮುದ್ರವೂ ತೆರೆಗಳೂ [1]ಘೋಷಿಸುವವು; ಜಗತ್ತಿಗೆ ಉಂಟಾಗುವ ಕಾ
ರ್ಯಗಳ ಭಯದಿಂದಲೂ ನಿರೀಕ್ಷೆಯಿಂದಲೂ ಮನುಷ್ಯರ ಗುಂಡಿಗೆ ಕುಂದುವದು; ಯಾಕಂದರೆ ಆಕಾಶದ
೨೭ ಬಲಗಳು ಕದಲಿಸಲ್ಪಡುವವು. ಆಗಲವರು ಮನುಷ್ಯನ ಮಗನು ಮೇಘದಲ್ಲಿ ಬಹು ಬಲ ಮಹಿಮೆಗಳಿಂದ
೨೮ ಬರುವದನ್ನು ನೋಡುವರು. ಆದರೆ ಇವು ಆಗುವದಕ್ಕೆ ಆರಂಭವಾಗುವಾಗ, ಮೇಲಕ್ಕೆ ನೋಡಿ, ನಿಮ್ಮ
[2]ತಲೆಗಳನ್ನು ಎತ್ತಿರಿ; ಯಾಕಂದರೆ [3]ನಿಮ್ಮ ವಿಮೋಚನೆಯು ಸವಿಾಪವಾಗುತ್ತದೆ.

೨೯ ಮತ್ತು ಅವರಿಗೆ ಹೇಳಿದ ಸಾಮ್ಯವೇನಂದರೆ, ಅಂಜೂರವನ್ನೂ ಸಕಲ ಮರಗಳನ್ನೂ ನೋಡಿರಿ;
೩೦ ಅವು ಈಗಲೇ ಚಿಗಿತರೆ, ಬಿಸಿಲುಕಾಲವು ಈಗಲೇ ಸವಿಾಪವೆಂದು ನಿಮಗೆ ನೀವೇ ತಿಳುಕೊಳ್ಳುತ್ತೀರಿ.
೩೧ ಅದೇ ಪ್ರಕಾರ ನೀವು ಇವು ಆಗುವದನ್ನು ನೋಡಿದರೆ, ದೇವರ ರಾಜ್ಯವು ಸವಿಾಪವೆಂದು ತಿಳುಕೊಳ್ಳಿರಿ.
೩೨ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಎಲ್ಲಾ ಉಂಟಾಗುವ ತನಕ, ಈ ಸಂತತಿಯು ಗತಿಸಿ ಹೋಗದು.
೩೩ ಆಕಾಶವೂ ಭೂಮಿಯೂ ಗತಿಸಿ ಹೋಗುವವು; ಆದರೆ ನನ್ನ ವಾಕ್ಯಗಳು ಗತಿಸಿ ಹೋಗವು.

೩೪ ಇದಲ್ಲದೆ ನಿಮ್ಮ ಹೃದಯಗಳು ಹೊಟ್ಟೆಬಾಕತನದಿಂದಲೂ, ಅಮಲಿನಿಂದಲೂ, ಜೀವನದ ಚಿಂತೆಗಳಿಂದಲೂ
೩೫ ಭಾರವಾಗಿರಲು, ಆ ದಿವಸವು ಫಕ್ಕನೆ ನಿಮ್ಮ ಮೇಲೆ ಬಾರದ ಹಾಗೆ, ನೋಡಿ ಕೊಳ್ಳಿರಿ. ಯಾಕಂದರೆ
೩೬ ಸಮಸ್ತ ಭೂಮಿಯ ಮೇಲೆ ವಾಸವಾಗಿರುವವರೆಲ್ಲರ ಮೇಲೆ [4]ಉರ್ಲಿನ ಹಾಗೆ ಬರುವದು. ಆದದರಿಂದ
ಉಂಟಾಗುವದಕ್ಕಿರುವ ಇವುಗಳಿಗೆಲ್ಲಾ ನೀವು ತಪ್ಪಿಸಿ ಕೊಂಡು, ಮನುಷ್ಯನ ಮಗನ ಮುಂದೆ ನಿಂತು
ಕೊಳ್ಳುವದಕ್ಕೆ [5]ಯೋಗ್ಯರಾಗುವ ಹಾಗೆ, ಯಾವಾಗಲೂ ಪ್ರಾರ್ಥನೆ ಮಾಡಿ, ಎಚ್ಚರಿಕೆಯಾಗಿರ್ರಿ.

ಕ್ರಿಸ್ತನು ದೇವಾಲಯದಲ್ಲಿ ಪ್ರತಿ ದಿವಸವೂ ಪ್ರಸಂಗಿಸಿದ್ದು; ಅಧಿಕಾರಿಗಳು ಆತನನ್ನು ಕೊಲ್ಲ ಯೋಚಿಸಿ,
ಯೂದ ಇಸ್ಕರಿಯೋತನ ಸಂಗಡ ಒಪ್ಪಂದ ಮಾಡಿದ್ದು.

೩೭ ಇದಲ್ಲದೆ ಅವನು ಹಗಲುಗಳಲ್ಲಿ ದೇವಾಲಯದೊಳಗೆ ಬೋಧಿಸುತ್ತಾ, ರಾತ್ರಿಗಳಲ್ಲಿ ಹೊರಗೆ ಬಂದು,
೩೮ [6]ಇಪ್ಪೇ ಗುಡ್ಡವೆಂಬ ಗುಡ್ಡದಲ್ಲಿ ಇಳುಕೊಳ್ಳುತ್ತಾ ಇದ್ದನು. ಮತ್ತು ಅವನನ್ನು ಕೇಳುವದಕ್ಕೆ, ಬೆಳಿಗ್ಗೆ
ಜನರೆಲ್ಲಾ ದೇವಾಲಯದಲ್ಲಿ ಅವನ ಬಳಿಗೆ ಬರುತ್ತಿದ್ದರು.

---

ಕಾಲ ಉಂಟಾಗಿರುವದು. ಇಸ್ರಯೇಲರ ಕೃಪೆಯ ಕಾಲವು ಮುಗಿದಾಗ ಅವರಲ್ಲಿ ಕೆಲವರಿಗೆ ಸೌಖ್ಯವೂ, ಕೆಲವರಿಗೆ ಉಪದ್ರವೂ ಸಂಭವಿಸಿದ ರೀತಿಯಾಗಿ, ಜನಾಂಗಗಳ ಕೃಪೆಯ ಕಾಲ ಮುಗಿಯುವಾಗ ಇವರಿಗೂ ಹಾಗೆಯೇ ಸಂಭವಿಸುವದು.

1. ಈ ವಚನಗಳಲ್ಲಿರುವ ನಾನಾ ವಿಧ ಭಯಂಕರವಾದ ಉಪಮಾನಗಳಿಂದ ಲೋಕಕ್ಕೆ ಸಂಭವಿಸುವ ಕಠಿಣವಾದ ಉಪದ್ರಗಳ ರೀತಿಯನ್ನು ಪ್ರಕಟಿಸುತ್ತದೆ.

2. ಲೌಕಿಕ ಬದುಕನ್ನು ನಂಬಿದ ಲೋಕದವರು ಭೂಮಿಯನ್ನು ನೋಡಿ ಕೊಂಡು, ತಲೆ ಬೊಗ್ಗಿಸಿ ಕೊಂಡು, ನಡಿಯುತ್ತಾರೆ. ಪರಲೋಕದ ಬದುಕನ್ನು ಶಾಶ್ವತವೆಂದು ನಂಬಿದ ದೇವಭಕ್ತರು, ತಮಗೆ ಬರಲಿಕ್ಕಿರುವ ಪರಮ ಭಾಗ್ಯವನ್ನು ನೆನಸಿ, ಯಾವದಕ್ಕೂ ಭಯ ಪಡದೆ, ತಮ್ಮ ತಲೆಗಳನ್ನೂ ಹೃದಯಗಳನ್ನೂ ಮೇಲಕ್ಕೆತ್ತಿ, ಧೈರ್ಯವಾಗಿ ನಡಿಯುವರು.

3. ದುರ್ಮಾರ್ಗರಿಗೆ ಸಂಭವಿಸುವ ಉಪದ್ರವು ಸನ್ಮಾರ್ಗರಿಗೆ ವಿಮೋಚನೆಯಾಗಿ ಮುಗಿಯುವದು. (ರೋಮಾ. ೮. ೨೩.) ರಕ್ಷಣೆಯ ನಾಯಕನಾದ ಕ್ರಿಸ್ತನನ್ನು ಹೊಂದಿ ಕೊಂಡ ಭಕ್ತರಿಗೆ ಉಪದ್ರ ನಿವರ್ತಿಯಾಗಲು, ಶರೀರದಲ್ಲಿಯೂ ಆತ್ಮದಲ್ಲಿಯೂ ಸುಖ ಹೊಂದಿ, ಬಾಳುವರು.

4. ಪಕ್ಷಿಜಾತಿಗಳನ್ನು ಬೇಡನ ಬಲೆಯು ನೆನಸದ ಸಮಯದಲ್ಲಿ ಬಂದು ಆಕ್ರಮಿಸಿ ಕೊಳ್ಳುವ ಪ್ರಕಾರ ಸುಖಭೋಗಗಳಲ್ಲಿ ಮುಣುಗಿರುವ ದುರ್ಮಾರ್ಗರನ್ನು ಕರ್ತನ ದಿವಸವು ನೆನಸದ ಸಮಯದಲ್ಲಿ ಬಂದು, ಹಿಡುಕೊಳ್ಳುವದು.

5. ನ್ಯಾಯತೀರ್ವಿಕೆಯ ಮಹಾ ದಿವಸದಲ್ಲಿ ಕ್ರಿಸ್ತನ ದಾಸರು ನಿರಪರಾಧಿಗಳಾಗಿಯೂ ನೀತಿವಂತರಾಗಿಯೂ ನಿಲ್ಲ ಬೇಕಾದದ್ದು ಅವಶ್ಯವು.

6. ಕ್ರಿಸ್ತನು ರಾತ್ರಿಕಾಲಗಳಲ್ಲಿ ಇಪ್ಪೇ ಗುಡ್ಡದ ಪಶ್ಚಿಮ ಬುಡದಲ್ಲಿರುವ ಬೇತಾನ್ಯ ಊರಿನಲ್ಲಿ ಹೋಗಿ ತಂಗಿದನೆಂದು ಮಾರ್ಕನ ಸುವಾರ್ತೆಯಿಂದ ತಿಳಿಯ ಬಹುದು. (ಮಾರ್ಕ. ೧೧. ೧೧.)



22. [1]ಇದಲ್ಲದೆ ಪಸ್ಕವೆಂಬ ಹುಳಿ ಇಲ್ಲದ ರೊಟ್ಟಿಗಳ ಹಬ್ಬವು ಸವಿಾಪವಾದಾಗ, (೨) ಪ್ರಧಾನ ಯಾ
ಜಕರೂ ಶಾಸ್ತ್ರಿಗಳೂ, ಹ್ಯಾಗೆ ಅವನನ್ನು ಕೊಂದು ಹಾಕ ಬಹುದೆಂದು, ಹುಡುಕಿದರು; ಯಾಕಂದರೆ,
ಅವರು ಜನರಿಗೆ ಭಯ ಪಡುತ್ತಿದ್ದರು.
೩ ಆದರೆ [2]ಹನ್ನೆರಡು ಮಂದಿಯ ಲೆಖ್ಖದಲ್ಲಿರುವ ಇಸ್ಕರಿಯೋತೆಂಬ ಉಪನಾಮವುಳ್ಳ ಯೂದನಲ್ಲಿ ಸೈತಾನನು
೪ ಹೊಕ್ಕನು. ಆಗಲವನು ಹೋಗಿ, ಪ್ರಧಾನ ಯಾಜಕರ [3]ಸೈನ್ಯಾಧಿಪತಿಗಳ ಸಂಗಡ, ಅವನನ್ನು ಒಪ್ಪಿಸು
೫ ವದು ಹ್ಯಾಗೆಂದು ಮಾತಾಡಿದಾಗ, ಅವರು ಸಂತೋಷ ಪಟ್ಟು, ಅವನಿಗೆ ಹಣ ಕೊಡುವದಕ್ಕೆ ಒಪ್ಪಿ
೬ ಕೊಂಡರು. ಆಗಲವನು ಮಾತು ಕೊಟ್ಟು, ಗುಂಪು ಕೂಡದ ಹಾಗೆ ಅವನನ್ನು ಅವರಿಗೆ ಒಪ್ಪಿಸುವದಕ್ಕೆ
ಒಳ್ಳೇ ಸಮಯ ಹುಡುಕಿದನು.

ಕ್ರಿಸ್ತನು ತನ್ನ ಶಿಷ್ಯರ ಸಂಗಡ ಪಸ್ಕವನ್ನು ಆಚರಿಸಿದ್ದು; ರಾತ್ರಿಭೋಜನವನ್ನು ನೇಮಿಸಿದ್ದು; ತನ್ನನ್ನು
ಒಪ್ಪಿಸಿ ಕೊಡುವದನ್ನು ಮುಂತಿಳಿಸಿದ್ದು. ತಮ್ಮಲ್ಲಿ ಯಾವನು ದೊಡ್ಡವನೆಂದು ಶಿಷ್ಯರು ತರ್ಕಿಸಿದ್ದನ್ನು ಖಂಡಿಸಿದ್ದು;
ಪೇತ್ರ ಮೊದಲಾದವರನ್ನು ಎಚ್ಚರಿಸಿದ್ದು.

೭,೮ ಇದಲ್ಲದೆ [4]ಪಸ್ಕವನ್ನು ಅರ್ಪಿಸ ತಕ್ಕ ಹುಳಿ ಇಲ್ಲದ ರೊಟ್ಟಿಗಳ ದಿವಸ ಬಂದಾಗ, ಅವನು ಪೇತ್ರನನ್ನೂ
ಯೋಹಾನನನ್ನೂ ಕಳುಹಿಸಿ, ನೀವು ಹೋಗಿ, ನಾವು ಉಣ್ಣುವ ಹಾಗೆ ಪಸ್ಕವನ್ನು ನಮಗೆ ಸಿದ್ಧ ಮಾಡಿರಿ,
೯,೧೦ ಅಂದನು. ಅವರು ಅವನಿಗೆ, ನಾವು ಎಲ್ಲಿ ಸಿದ್ಧ ಮಾಡ ಬೇಕು? ಅಂದಾಗ; ಅವನು ಅವರಿಗೆ
ಹೇಳಿದ್ದು, ಇಗೋ, ನೀವು ಪಟ್ಣದಲ್ಲಿ ಶೇರಿದಾಗ, ನೀರಿನ ಗಡಿಗೆ ಹೊರುವ ಒಬ್ಬ ಮನುಷ್ಯನು ನಿಮ್ಮೆದುರಿಗೆ
೧೧ ಬರುವನು; ಅವನು ಹೋಗುವ ಮನೆಗೆ ಅವನನ್ನು ಹಿಂಬಾಲಿಸಿರಿ. ಮತ್ತು [5]ಆ ಮನೆಯ ಯಜಮಾನನಿಗೆ,
ನಾನು ನನ್ನ ಶಿಷ್ಯರ ಸಂಗಡ ಪಸ್ಕವನ್ನು ಉಣ್ಣ ತಕ್ಕ ಸಾಲೆ ಎಲ್ಲಿ? ಅಂತ, ಬೋಧಕನು ನಿನಗೆ ಹೇಳುತ್ತಾನೆಂ
೧೨ ಬದಾಗಿ ಹೇಳಿರಿ. ಅವನು ನಿಮಗೆ ಸಾಮಗ್ರಿ ಇರುವಂಥ ದೊಡ್ಡ ಮೇಲ್ಮಾಳಿಗೆಯನ್ನು ತೋರಿಸುವನು;
೧೩ ಅಲ್ಲಿ [6]ಸಿದ್ಧ ಮಾಡಿರಿ. ಅವರು ಹೋಗಿ, ತಮಗೆ ಹೇಳಿದ ಹಾಗೆ ಕಂಡು, ಪಸ್ಕವನ್ನು ಸಿದ್ಧ ಮಾಡಿದರು.
೧೪ ಆ ಘಳಿಗೆ ಬಂದಾಗ, ಅವನೂ, [7]ಅವನ ಸಂಗಡ ಹನ್ನೆರಡು ಅಪೊಸ್ತಲರೂ ಕೂತು ಕೊಂಡರು.

---

1. ಈ ಸಂಧಿಯು ಅನೇಕ ವಿಷಯಗಳಲ್ಲಿ ಮತ್ತಾಯನ ೨೬ನೇ ಸಂಧಿಗೆ ಸರಿಯಾಗಿದೆ. ಮತ್ತಾ. ೨೬. ೧, ೧೬, ೩೬, ೫೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. (೩—೬. ವಚನಗಳ ವ್ಯಾಖ್ಯಾನವನ್ನು ಮಾರ್ಕ. ೧೪. ೧೦, ೧೧. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ಬೇತಾನ್ಯದಲ್ಲಿ ಕ್ರಿಸ್ತನಿಗೆ ನಡೆದ ರಾತ್ರಿಯ ಔತಣವನ್ನು ಕುರಿತು ಲೂಕನು ಏನೂ ಹೇಳಲಿಲ್ಲ. ಈ ಸಮಯದಲ್ಲಿ ಸೈತಾನನು ಯೂದನಲ್ಲಿ ಹೊಕ್ಕದ್ದನ್ನು ಈ ಸುವಾರ್ತೆಯಲ್ಲಿ ಮಾತ್ರ ಹೇಳಲ್ಪಟ್ಟದೆ. ಅವನು ರಾತ್ರಿಭೋಜನ ಮಾಡಿದ ತರುವಾಯ ಸೈತಾನನು ಅವನಲ್ಲಿ ಹೊಕ್ಕನೆಂದು ಯೋಹಾನನು ಹೇಳಿದ್ದಾನೆ. (ಯೋಹಾ. ೧೩. ೨೭.) ದೇವಭಕ್ತರ ಹೃದಯದಲ್ಲಿ ಪರಿಶುದ್ಧಾತ್ಮನು ವಾಸವಾಗಿರುವ ಪ್ರಕಾರ, ಭಕ್ತಿಹೀನರ ಹೃದಯದಲ್ಲಿ ಪಿಶಾಚನು ಆಸೀನನಾಗಿರುವ ಸಿಂಹಾಸನ ಉಂಟು.

3. ಇವರು ದೇವಾಲಯವನ್ನು ಕಾಯುವ ಲೇವ್ಯರಿಗೆ ಶೇರಿದ ಠಾಣುವೆಯವರಿಗೆ ಅಧಿಪತಿಗಳಾಗಿದ್ದವರು. (ಅಪೊ. ಕ್ರಿ. ೪. ೧.)

4. ೭—೧೪. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೬. ೧೭—೧೯. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

5. ಪಸ್ಕ ಭೋಜನವನ್ನು ಉಣ್ಣುವದಕ್ಕೆ ಮನೆ ಹುಡುಕಲಿಕ್ಕೆ ಹೋದವರು ಪೇತ್ರನೂ ಯೋಹಾನನೂ ಎಂದು ಈ ಸುವಾರ್ತೆಯಲ್ಲಿ ಮಾತ್ರ ಹೇಳಿ ಇರುತ್ತದೆ. ದೂರ ದೇಶಗಳಿಂದ ಪಸ್ಕ ಹಬ್ಬವನ್ನು ಆಚರಿಸ ಬರುವ ಪರಸ್ಥಳದವರಿಗೆ ಯೆರೂಸಲೇಮು ಪಟ್ಣದವರು ತಮ್ಮ ಮನೆಗಳಲ್ಲಿ ಸ್ಥಳ ಕೊಡುವ ಪದ್ಧತಿಯುಂಟು. ಅದರಿಂದ ಕ್ರಿಸ್ತನಿಗೆ ತನ್ನ ಮನೆಯಲ್ಲಿ ಸ್ಥಳ ಕೊಟ್ಟ ಮನುಷ್ಯನು ಆತನ ಶಿಷ್ಯನೆಂದು ನೆನಸುವದಕ್ಕೆ ಆಸ್ಪದವಿಲ್ಲ. ಆದಾಗ್ಯೂ ಅವನು ಪೇತ್ರನಿಗೂ ಯೋಹಾನನಿಗೂ ಬೋಧಕನಾಗಿದ್ದಾತನನ್ನು ಅರಿತಿದ್ದದರಿಂದ ಅವನು ಒಂದು ವೇಳೆ ಆತನ ಶಿಷ್ಯನಾಗಿರ ಬಹುದು.

6. ಪಸ್ಕದ ಕುರಿಯನ್ನು ಕೊಂದು, ಭೋಜನಕ್ಕೆ ಬೇಕಾದ ರೊಟ್ಟಿಯನ್ನೂ ದ್ರಾಕ್ಷೇ ರಸವನ್ನೂ ಸಿದ್ಧ ಮಾಡ ಬೇಕು. (ಹೊರ. ೧೨ನೇ ಸಂಧಿ.)

7. ಅವರು ಪಸ್ಕ ಭೋಜನವನ್ನು ಉಣ್ಣುವ ಕಾಲದಲ್ಲಿ ಮುಂದೆ ಬರುವ ಸಂಗತಿಗಳು ನಡೆದವು. ತಮ್ಮಲ್ಲಿ ಯಾವನು ದೊಡ್ಡವನೆಂದು ಶಿಷ್ಯರು ವಾಗ್ವಾದ ಮಾಡಿದರು. (೨೪—೩೦.) ಕ್ರಿಸ್ತನು ದ್ರಾಕ್ಷೇ ರಸವನ್ನು ಅವರಿಗೆ ಕೊಟ್ಟು, (೧೫—೧೮.) ಅವರ ಕಾಲುಗಳನ್ನು ತೊಳೆದು, (ಯೋಹಾ. ೧೩. ೧—೨೦.) ತನ್ನನ್ನು ಒಪ್ಪಿಸಿ ಕೊಡುವವನು ಯಾವನು ಎಂದು ತೋರಿಸಿ, (೨೧—೨೩.) ಪೇತ್ರನು ತನ್ನನ್ನು ಕುರಿತು ಬೊಂಕುವನೆಂದು ತಿಳಿಸಿ, (೩೧—೩೮.) ರಾತ್ರಿಭೋಜನವನ್ನು ಏರ್ಪಡಿಸಿದನು. (೧೯—೨೦.) ರಾತ್ರಿಭೋಜನದ ಸ್ಥಾಪನೆಯು, ಅವರು ಮೊದಲನೇ ಸಾರಿ ದ್ರಾಕ್ಷೇ ರಸವನ್ನು ಕುಡಿದ ಮೇಲೆ ಉಂಟಾಯಿತೆಂದು ಕಾಲವ್ಯತ್ಯಾಸವಾಗಿ ಲೂಕನು ಹೇಳುವದನ್ನು ನೋಡುವಾಗ, ಹಳೇ ಒಡಂಬಡಿಕೆ ಮುಗಿದದ್ದಕ್ಕೂ, ಹೊಸ ಒಡಂಬಡಿಕೆ ಪ್ರಾರಂಭಿಸಿದ್ದಕ್ಕೂ ಸಮ್ಮಂಧ ಕಾಣುವ ಹಾಗೆ, ಹೀಗೆ ಹೇಳಿದನೆಂದು ತೋರುತ್ತದೆ. (೧೮, ೧೯, ೨೦. ವ.)

೪೧ ಅವರನ್ನು ಬಿಟ್ಟು, ಹೆಚ್ಚು ಕಡಿಮೆ ಕಲ್ಲೆಸೆಯುವಷ್ಟು ದೂರ ಹೋಗಿ, ಮೊಣಕಾಲೂರಿ, ಪ್ರಾರ್ಥಿಸಿದ್ದೇ
೪೨ ನಂದರೆ, ತಂದೆಯೇ, ನೀನು ಈ ಪಾತ್ರೆಯನ್ನು ನನಗೆ ದೂರ ಮಾಡ ಮನಸ್ಸಾಗಿದ್ದರೆ, ಮಾಡು; ಆದಾಗ್ಯೂ
೪೩ ನನ್ನ ಚಿತ್ತವಲ್ಲ, ನಿನ್ನದೇ ಆಗಲಿ. ಇದಲ್ಲದೆ ಪರಲೋಕದಿಂದ ಬಂದ ಒಬ್ಬ [1]ದೂತನು ಅವನಿಗೆ ಕಾಣಿಸಿ
೪೪ ಕೊಂಡು, ಅವನನ್ನು ಬಲ ಪಡಿಸಿದನು. ಮತ್ತು ಅವನು ಹೋರಾಟದಲ್ಲಿದ್ದು, ಇನ್ನೂ ಚುರುಕಾಗಿ ಪ್ರಾ
ರ್ಥಿಸಿದನು. ಇದಲ್ಲದೆ ಅವನ ಬೆವರು ಭೂಮಿಗೆ ಬೀಳುವ [2]ರಕ್ತದ ದೊಡ್ಡ ಬಿಂದುಗಳ ಹಾಗಾಯಿತು.
೪೫ ಅವನು ಪ್ರಾರ್ಥನೆ ಮಾಡಿ ಎದ್ದ ಮೇಲೆ, ಶಿಷ್ಯರ ಬಳಿಗೆ ಬಂದು, ಅವರು ದುಃಖದಿಂದ ನಿದ್ದೆ ಮಾಡುವದನ್ನು
೪೬ ಕಂಡು, ಅವರಿಗೆ, ನೀವು ನಿದ್ದೆ ಮಾಡುವದೇನು? ಶೋಧನೆಯಲ್ಲಿ ಪ್ರವೇಶಿಸದ ಹಾಗೆ, ಎದ್ದು, ಪ್ರಾರ್ಥಿಸಿರಿ,
ಅಂದನು.

೪೭ [3]ಅವನು ಮಾತಾಡುತ್ತಿರುವಾಗ, ಇಗೋ, ಸಮೂಹವು; ಮತ್ತು ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರುವ
೪೮ ಯೂದನು ಅವರ ಮುಂದೆ ನಡೆದು, ಯೇಸುವಿಗೆ ಮುದ್ದಿಡುವದಕ್ಕೆ ಸಮೀಪಕ್ಕೆ ಬಂದನು. ಆದರೆ ಯೇಸು
ಅವನಿಗೆ, ಯೂದನೇ, ಮುದ್ದಿನಿಂದ ಮನುಷ್ಯನ ಮಗನನ್ನು ಒಪ್ಪಿಸುತ್ತೀಯೋ? ಅಂದನು.

೪೯ ಅವನ ಸುತ್ತಲಿರುವವರು ಆಗ ಹೋಗುವದನ್ನು ನೋಡಿ, ಕರ್ತನೇ, ಕತ್ತಿಯಿಂದ ಹೊಡೆಯೋಣೋ?
೫೦ ಎಂದು ಅವನಿಗೆ ಹೇಳಿದರು. ಮತ್ತು ಅವರಲ್ಲಿ [4]ಒಬ್ಬನು ಪ್ರಧಾನ ಯಾಜಕನ ದಾಸನನ್ನು ಹೊಡೆದು,
೫೧ ಅವನ ಬಲಕಿವಿಯನ್ನು ಹರಿಯ ಕಡಿದನು. ಆದರೆ ಯೇಸು ಉತ್ತರ ಕೊಟ್ಟು, [5]ಈ ಮಟ್ಟಿಗೂ ಬಿಡಿರಿ
ಎಂದು ಹೇಳಿ, ಅವನ ಕಿವಿಯನ್ನು ಮುಟ್ಟಿ, ಅವನನ್ನು ಗುಣ ಮಾಡಿದನು.

೫೨ ಮತ್ತು ಯೇಸು ತನ್ನ ಹತ್ತರ ಬಂದ ಪ್ರಧಾನ ಯಾಜಕರಿಗೂ, ದೇವಾಲಯದ ಸೈನ್ಯಾಧಿಪತಿಗಳಿಗೂ,
ಹಿರಿಯರಿಗೂ, ಕಳ್ಳನಿಗೆ ವಿರೋಧವಾಗಿ ಬಂದ ಹಾಗೆ, ಕತ್ತಿಗಳನ್ನೂ ಡೊಣ್ಣೆಗಳನ್ನೂ ಹಿಡಿದು, ಹೊರಟಿರೋ?
೫೩ ನಾನು ದಿನಾಲು ನಿಮ್ಮ ಸಂಗಡ ದೇವಾಲಯದಲ್ಲಿರುವಾಗ, ನೀವು ನನ್ನ ಮೇಲೆ ಕೈ ಚಾಚಲಿಲ್ಲ; ಆದರೆ
ಇದು ನಿಮ್ಮ ಘಳಿಗೆಯೂ, [6]ಕತ್ತಲೆಯ ಅಧಿಕಾರವೂ ಆಗಿದೆ, ಅಂದನು.

---

ತೋಟದಲ್ಲಿ ಅನುಭವಿಸಿದ ಸಂಕಟಗಳಲ್ಲಿ ಕೆಲವು ವಿಶೇಷಗಳನ್ನು ಈ ಸುವಾರ್ತೆಯಲ್ಲಿ ಬಿಟ್ಟಿದ್ದಾಗ್ಯೂ, ಬೇರೆ ಸುವಾರ್ತೆಗಳಲ್ಲಿ ಇಲ್ಲದ ಒಂದೆರಡು ಸಂಗತಿಗಳನ್ನು ಇದರಲ್ಲಿ ಹೇಳಿ ಇದೆ. (೪೩, ೪೪. ವ.)

1. ಬೇರೆ ಸುವಾರ್ತೆಗಳಿಗಿಂತಲೂ ಈ ಸುವಾರ್ತೆಯಲ್ಲಿ ದೂತರನ್ನು ಕುರಿತು ಆಗಾಗ್ಯೆ ಹೇಳಿ ಇರುತ್ತದೆ. ಎಚ್ಚತ್ತಿದ್ದು ಪ್ರಾರ್ಥನೆ ಮಾಡ ಬೇಕೆಂದು ಹೇಳಿದ ಕರ್ತನು ಒಬ್ಬ ದೂತನಿಂದ ಬಲ ಪಡಿಸಲ್ಪಡ ಸಮ್ಮತಿಸಿದನು. ತನ್ನನ್ನು ತಾನೇ ಬರಿದು ಮಾಡಿ ಕೊಂಡನೆಂಬ ವಾಕ್ಯಕ್ಕೆ ಇದು ಒಂದು ದೃಷ್ಟಾಂತವಾಗಿದೆ. ಆದರೆ ಆ ದೂತನ ಹೆಸರನ್ನು ಹೇಳಲಿಲ್ಲ. ಅವನು ತನ್ನನ್ನು ಸೃಷ್ಟಿಸಿದ ಕರ್ತನಿಗೆ ಮಾಡಿದ ಸೇವೆಯ ಮಹಿಮೆಯನ್ನು ಯಾರಿಂದಲೂ ವಿವರಿಸಲಾಗದು.

2. ಆತನ ಬೆವರು ರಕ್ತದ ಹಾಗೆ ಕೆಂಪಾಗಿತ್ತು. ಮಿತಿ ಇಲ್ಲದ ಮನೋವ್ಯಾಕುಲದಿಂದ ಕೆಲವರಿಗೆ ಇಂಥಾ ರಕ್ತ ಬೆವರು ಉಂಟಾಯಿತೆಂದು ಇತಿಹಾಸಗಳಿಂದ ತಿಳಿಯ ಬಹುದು. ಆದರೆ ತಂಪು ಘಾಳಿ ಬೀಸುವ ತೋಟದಲ್ಲಿ ತಣ್ಣಗಿರುವ ಬೆಳದಿಂಗಳಲ್ಲಿ ಬಹು ತಂಪಾಗಿರುವ ಭೂಮಿಯ ಮೇಲೆ ಕ್ರಿಸ್ತನಿಗೆ ಇಂಥಾ ರಕ್ತ ಬೆವರು ಉಂಟಾದದ್ದು ನಾವು ಯೋಚಿಸ ತಕ್ಕ ವಿಶೇಷವಾಗಿದೆ. ಪಾಪಕ್ಕೋಸ್ಕರ ಬರ ತಕ್ಕ ಕೋಪಾಗ್ನಿಯನ್ನು ಆತನು ನಮಗಾಗಿ ಅನುಭವಿಸಿದಾಗ, ಆತನು ಪಟ್ಟ ಮನೋವೇದನೆ ಎಷ್ಟು ಭಯಂಕರವೂ ಘೋರವೂ ಆಗಿತ್ತೆಂದು ತಿಳಿಯ ತಕ್ಕದ್ದು. ಅದನ್ನು ಇಷ್ಟೆಂದು ಹೇಳುವದು ಅಸಾಧ್ಯವಾದ ಕಾರ್ಯವು.

3. ೪೭—೫೩. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೬. ೪೭—೫೬. ಮಾರ್ಕ. ೧೪. ೪೩—೫೨. ಯೋಹಾ. ೧೮. ೨—೧೧. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

4. ಇವನ ಹೆಸರು ಪೇತ್ರನೆಂದು ಯೋಹಾನನ ಸುವಾರ್ತೆಯಲ್ಲಿ ಮಾತ್ರ ಹೇಳಿ ಇದೆ. ಪ್ರಧಾನ ಯಾಜಕನ ಸೇವಕನ ಕಿವಿಯನ್ನು ಕಡಿದ ಸಂಗತಿ ನಾಲ್ಕು ಸುವಾರ್ತೆಗಳಲ್ಲಿ ಹೇಳಲ್ಪಟ್ಟಾಗ್ಯೂ, ಕರ್ತನು ಅದನ್ನು ಮುಟ್ಟಿ ಗುಣ ಮಾಡಿದ್ದನ್ನು ವೈದ್ಯನಾದ ಲೂಕನು ಮಾತ್ರ ಹೇಳುತ್ತಾನೆ.

5. ಈ ವಚನದ ಅಭಿಪ್ರಾಯ ಚನ್ನಾಗಿ ತಿಳಿಯಲಿಲ್ಲ. ತನ್ನನ್ನು ಹಿಡಿಯ ಬಂದವರಿಗೆ ಹೀಗೆ ಹೇಳಿದ್ದರೆ, ನನ್ನ ಶಿಷ್ಯರು ಮಾಡಿದ್ದನ್ನು ಮನ್ನಿಸಿರಿ; ಅವನ ಕಿವಿಯನ್ನು ಮುಟ್ಟಿ ಗುಣ ಮಾಡುವದಕ್ಕೆ ಸಮ್ಮತಿಸಿರಿ, ಎಂಬ ಅರ್ಥವಾಗುತ್ತದೆ. ತನ್ನ ಶಿಷ್ಯರಿಗೆ ಹೀಗೆ ಹೇಳಿದ್ದರೆ, ಅವರು ತಮ್ಮ ಇಷ್ಟದ ಪ್ರಕಾರ ಮಾಡಲಿ ಎಂದು, ಅಥವಾ ನೀವು ಇಷ್ಟು ಮಾಡಿದ್ದು ಸಾಕು ಎಂದು ಅರ್ಥವಾಗುತ್ತದೆ.

6. ನೀವು ಇದಕ್ಕೆ ಮುಂಚೆ ಮಾಡದೆ ಇದ್ದದ್ದನ್ನು ಈಗ ಮಾಡುತ್ತೀರಿ. ದೇವರು ಇದಕ್ಕೆ ಸ್ಥಳ ಕೊಡುತ್ತಾನೆ. ಅಂಧಕಾರದ ಪ್ರಭುವಾದ ಸೈತಾನನು ಹೀಗೆ ಮಾಡುವದಕ್ಕೆ ನಿಮ್ಮನ್ನು ಪ್ರೇರೇಪಿಸುತ್ತಾನೆ. ಇದು ನಿಮ್ಮ ಕಾಲವಾಗಿರುವದರಿಂದ ನಿಮ್ಮ ಇಷ್ಟದಂತೆ ಮಾಡಿರಿ ಎಂದು ತಿಳಿಯುವಂತೆ ಹೀಗೆ ಹೇಳಿರುವನು.



ಕ್ರಿಸ್ತನು ಪ್ರಧಾನ ಯಾಜಕನ ಮನೆಗೆ ತೆಗೆದು ಕೊಂಡು ಹೋಗಲ್ಪಟ್ಟದ್ದು; ಪೇತ್ರನು ಆತನನ್ನು ಬೊಂಕಿದ್ದು.

೫೪ ಆಗಲವರು ಅವನನ್ನು ತೆಗೆದು ಕೊಂಡು ಹೋಗಿ, ಪ್ರಧಾನ ಯಾಜಕನ ಮನೆಗೆ ತಂದರು.
೫೫ [1]ಪೇತ್ರನು ದೂರದಿಂದ ಹಿಂಬಾಲಿಸಿದನು. ಆದರೆ ಅವರು ಅಂಗಳದ ನಡುವೆ ಬೆಂಕಿ ಉರಿಸಿ, ಕೂತು ಕೊಂ
೫೬ ಡಾಗ, ಪೇತ್ರನು ಅವರೊಳಗೆ ಕೂತು ಕೊಂಡನು. ಆಗ ಒಬ್ಬ ದಾಸಿಯು ಬೆಳಕಿಗೆದುರಾಗಿ ಕೂತು
ಕೊಂಡಿರುವ ಅವನನ್ನು ನೋಡಿ, ಅವನ ಮೇಲೆ ದೃಷ್ಟಿ ಇಟ್ಟು, ಇವನು ಸಹ ಅವನ ಸಂಗಡ ಇದ್ದನು,
೫೭, ೫೮ ಅಂದಾಗ; ಅವನು, ಸ್ತ್ರೀಯೇ, ಅವನನ್ನು ಅರಿಯೆನೆಂದು, ಅವನನ್ನು ಬೊಂಕಿದನು. ಸ್ವಲ್ಪ ಕಾಲದ
ಮೇಲೆ ಮತ್ತೊಬ್ಬನು ಅವನನ್ನು ನೋಡಿ, ನೀನು ಸಹ ಅವರಲ್ಲಿ ಒಬ್ಬನಾಗಿದ್ದೀ, ಅಂದಾಗ; ಪೇತ್ರನು,
೫೯ ಮನುಷ್ಯನೇ, ನಾನಲ್ಲ, ಅಂದನು. ಮತ್ತು ಹೆಚ್ಚು ಕಡಿಮೆ ಒಂದು ತಾಸಾದ ಮೇಲೆ, ಮತ್ತೊಬ್ಬನು, ನಿಜ
ವಾಗಿ ಇವನು ಸಹ ಅವನ ಸಂಗಡ ಇದ್ದನು; ಯಾಕಂದರೆ ಗಲಿಲಾಯದವನಾಗಿದ್ದಾನೆಂದು ದೃಢವಾಗಿ
೬೦ ಹೇಳಿದಾಗ; ಪೇತ್ರನು, ಮನುಷ್ಯನೇ, ನೀನು ಹೇಳುವದನ್ನು ಅರಿಯೆ, ಅಂದನು. ಸಂಗಡಲೇ ಅವನು ಇನ್ನು
೬೧ ಮಾತಾಡುತ್ತಿರುವಾಗ ಕೋಳಿ ಕೂಗಿತು. ಮತ್ತು ಕರ್ತನು ತಿರುಗಿ ಕೊಂಡು, ಪೇತ್ರನ ಮೇಲೆ ದೃಷ್ಟಿ
ಇಟ್ಟನು. ಆಗ ಪೇತ್ರನು, ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನನ್ನು ಬೊಂಕುವಿ ಎಂದು,
೬೨ ಕರ್ತನು ತನಗೆ ಹೇಳಿದ ಮಾತು ಜ್ಞಾಪಕ ಮಾಡಿ ಕೊಂಡನು. ಆಗ ಪೇತ್ರನು ಹೊರಗೆ ಹೋಗಿ, ಬಹಳ
ವಾಗಿ ಅತ್ತನು.

೬೩, ೬೪ ಇದಲ್ಲದೆ [2]ಯೇಸುವನ್ನು ಹಿಡಿದ ಜನರು ಅವನನ್ನು ಹಾಸ್ಯ ಮಾಡಿ, ಹೊಡೆದು, ಅವನಿಗೆ ಮುಸುಕು
ಹಾಕಿ, ಮುಖವನ್ನು ಬಡಿದು, ನಿನ್ನನ್ನು ಬಡಿದವನ್ಯಾರೆಂದು ಪ್ರವಾದನೆ ಹೇಳೆಂಬದಾಗಿ ಅವನನ್ನು ಕೇಳಿದರು.
೬೫ ಈ ಮೊದಲಾದ ಅನೇಕ ದೂಷಣೆಗಳನ್ನು ಅವನಿಗೆ ಹೇಳಿದರು.

ಕ್ರಿಸ್ತನು ಸನೇದ್ರಿಮ್ ಸಂಘದವರಿಂದ ವಿಚಾರಿಸಲ್ಪಟ್ಟು, ಅಪರಾಧಿ ಎಂದು ನಿರ್ಣಯಿಸಲ್ಪಟ್ಟದ್ದು.

೬೬ ಬೆಳಗಾಗುತ್ತಿರುವಾಗ ಜನರ ಹಿರಿಯ ಸಭೆಯೂ ಪ್ರಧಾನ ಯಾಜಕರೂ ಶಾಸ್ತ್ರಿಗಳೂ ಕೂಡಿ ಕೊಂಡು,
೬೭ ಅವನನ್ನು ತಮ್ಮ ಮಂತ್ರಿಸಭೆಗೆ ತಕ್ಕೊಂಡು ಹೋಗಿ, ನೀನು ಕ್ರಿಸ್ತನಾಗಿದ್ದೀಯೋ? ನಮಗೆ ಹೇಳು,
೬೮ ಅಂದರು. ಅವನು ಅವರಿಗೆ, ನಾನು ನಿಮಗೆ ಹೇಳಿದರೆ, ನಂಬುವದೇ ಇಲ್ಲ; ನಾನು ಕೇಳಿದರೂ, ಉತ್ತರ
೬೯ ಕೊಡುವದೇ ಇಲ್ಲ; ಮತ್ತು ನನ್ನನ್ನು [3]ಬಿಡುವದಿಲ್ಲ. ಈಗಿನಿಂದ ಮನುಷ್ಯನ ಮಗನು ದೇವರ ಬಲದ
ಬಲಪಾರ್ಶ್ವದಲ್ಲಿ ಕೂತು ಕೊಂಡಿರುವನು, ಅಂದಾಗ;
೭೦ ಎಲ್ಲರು, ಹಾಗಾದರೆ ನೀನು ದೇವರ ಮಗನೋ? ಅನ್ನಲು; ಅವನು ಅವರಿಗೆ, ನಾನೇ ಎಂದು, ನೀವೇ
೭೧ ಹೇಳುತ್ತೀರಿ, ಅಂದನು. ಆಗಲವರು, ನಮಗೆ ಸಾಕ್ಷಿ ಇನ್ನ್ಯಾಕೆ ಬೇಕು? ನಾವೇ ಅವನ ಬಾಯಿಯಿಂದ
ಕೇಳಿದ್ದೇವೆ, ಅಂದರು.

---

1. ಪೇತ್ರನು ಕ್ರಿಸ್ತನನ್ನು ಬೊಂಕಿದ್ದನ್ನು ಕುರಿತು ಮತ್ತಾ. ೨೬. ೬೯. ಮಾರ್ಕ. ೧೪. ೬೬—೭೨. ಯೋಹಾ. ೧೮. ೧೬, ೧೮. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು. ಪೇತ್ರನ ಬೀಳುವಿಕೆಯನ್ನು ಕುರಿತು ನಾವು ಯೋಚಿಸ ತಕ್ಕ ಕೆಲವು ಕಾರ್ಯಗಳುಂಟು. ೧ನೇದು, ಅವನು ಪಾಪದ ಕುಣಿಯಲ್ಲಿ ಒಂದೇ ಸಾರಿ ಬೀಳದೆ ಮೆಟ್ಟು ಮೆಟ್ಟಾಗಿ ಬಿದ್ದನು. ಮೊದಲು ಆತನನ್ನು ಅರಿಯೆನೆಂದು ಹೇಳಿದವನು ಕಡೆಯಲ್ಲಿ ಶಪಿಸಿ ಕೊಂಡು, ಆಣೆ ಇಟ್ಟು ಕೊಂಡನು. ೨ನೇದು, ಎಚ್ಚತ್ತಿರ ತಕ್ಕವನು ನಿದ್ರೆ ಮಾಡಿದನು. ೩ನೇದು, ತನ್ನ ಕರ್ತನಿಗೆ ಸಮೀಪದಲ್ಲಿರ ಬೇಕಾದವನು ದೂರವಾಗಿ ಶತ್ರುಗಳ ಸಂಗಡ ಇದ್ದನು. ೪ನೇದು, ಅವನ ಕರ್ತನ ಪ್ರಾರ್ಥನೆಯು ಅವನನ್ನು ರಕ್ಷಿಸಿತು. ೫ನೇದು, ಆತನ ಕೃಪಾದೃಷ್ಟಿಯು ಅವನ ಅಂತರ್ಯದಲಿ ಅಂಬಿನ ಹಾಗೆ ಕಾಕಿತು, ಬೆಂಕಿಯ ಮುಂದಿನ ಮೇಣದ ಹಾಗೆ ಅದನ್ನು ಕರಗಿಸಿತು. ೬ನೇದು, ಆತನ ಮಹಾ ಕರುಣೆಯಿಂದ ಅವನು ತಿರಿಗಿ ತನ್ನ ಅಪೊಸ್ತಲ ಉದ್ಯೋಗವನ್ನು ಹೊಂದಿದನು. (ಯೋಹಾ. ೨೧. ೧೫—೧೭.)

2. ೬೩—೭೧. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೬. ೫೯—೬೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ನಿಮ್ಮ ಪ್ರಶ್ನೆಗೆ ನಾನು ಉತ್ತರ ಹೇಳಿದರೂ, ನಾನು ನಿಮ್ಮನ್ನು ಪ್ರಶ್ನೆ ಮಾಡಿದರೂ, ಅದರಿಂದ ನೀವು ನನ್ನನ್ನು ಕೊಲ್ಲ ಬೇಕೆಂಬ ನಿಮ್ಮ ನಿರ್ಣಯವು ಮಾರ್ಪಡುವದಿಲ್ಲ. ಆದಾಗ್ಯೂ ನಾನು ಮೆಸ್ಸಿಯನಾದ ಲೋಕರಕ್ಷಕನೆಂದೂ, ನಿಮ್ಮನ್ನು ನ್ಯಾಯ ತೀರಿಸಲಿಕ್ಕಿರುವವನೆಂದೂ ನಿಶ್ಚಯವಾಗಿ ಹೇಳುತ್ತೇನೆಂದು ವಿಶದವಾಗಿ ತಕ್ಕ ರೀತಿಯಾಗಿ ಇದನ್ನು ಹೇಳಿದನು. (೬೯. ವ. ಮತ್ತಾ. ೨೬. ೬೪. ವಚನದ ವ್ಯಾಖ್ಯಾನ ನೋಡ ಬೇಕು.)

೨೯ ಯಾಕಂದರೆ, ಇಗೋ, ಬಂಜೆಯಾದವರೂ, ಹೆರದ ಗರ್ಭಗಳೂ, ಹಾಲು ಕೊಡದ ಮೊಲೆಗಳೂ ಭಾಗ್ಯವು
೩೦ ಳ್ಳವುಗಳೆಂದು ಹೇಳುವ ದಿವಸಗಳು ಬರುತ್ತವೆ. ಆಗ ಬೆಟ್ಟಗಳಿಗೆ ನಮ್ಮ ಮೇಲೆ ಬೀಳಿರಿ! ಗುಡ್ಡಗಳಿಗೆ, ನಮ್ಮನ್ನು
೩೧ ಮುಚ್ಚಿರಿ! (ಹೊಶೇ. ೧೦. ೮.) ಎಂದು ಹೇಳಲಾರಂಭಿಸುವರು. ಯಾಕಂದರೆ ಹಸೀ ಮರದಲ್ಲಿ ಇವುಗ
ಳನ್ನು ಮಾಡಿದರೆ, ಒಣಗಿದ್ದರಲ್ಲಿ ಏನಾಗುವದು?
೩೨, ೩೩ ಇದಲ್ಲದೆ ದುಷ್ಟರಾದ ಬೇರೆ ಇಬ್ಬರು, ಅವನ ಸಂಗಡ ಸಂಹರಿಸಲ್ಪಡುವದಕ್ಕೆ, ನೈಯಲ್ಪಟ್ಟರು. ಅವರು
[1]ಕಪಾಲವೆಂಬ ಸ್ಥಳಕ್ಕೆ ಹೋದಾಗ, ಅಲ್ಲಿ ಅವನನ್ನೂ ಆ ದುಷ್ಟರನ್ನೂ, ಒಬ್ಬನನ್ನು ಬಲಪಾರ್ಶ್ವದಲ್ಲಿ, ಒಬ್ಬ
ನನ್ನು ಎಡಪಾರ್ಶ್ವದಲ್ಲಿ, ಶಿಲುಬೆಗೆ ಹಾಕಿದರು.
೩೪ ಆದರೆ ಯೇಸು, [2]ತಂದೆಯೇ, ಅವರಿಗೆ ಮನ್ನಿಸು; ಮಾಡುವದೇನೆಂದು [3]ಅರಿಯರು, ಅಂದನು. ಇದಲ್ಲದೆ ಅವನ
ವಸ್ತ್ರಗಳನ್ನು ಪಾಲಿಟ್ಟು, ಚೀಟು ಹಾಕಿದರು.
೩೫ ಜನರು ನೋಡುತ್ತಾ ನಿಂತರು. ಮತ್ತು ಅವರ ಸಂಗಡ ಅಧಿಪತಿಗಳು ಸಹ, ಮತ್ತೊಬ್ಬರನ್ನು ರಕ್ಷಿಸಿ
ದನು; ಇವನು ದೇವರು ಆದು ಕೊಂಡ ಕ್ರಿಸ್ತನಾಗಿದ್ದರೆ, ತನ್ನನ್ನು ರಕ್ಷಿಸಿ ಕೊಳ್ಳಲಿ, ಎಂದು ಗೇಲಿಟ್ಟರು.
೩೬, ೩೭ ಮತ್ತು ರಾಣುವೆಯವರು ಸಹ ಹತ್ತರ ಬಂದು, ಹುಳಿರಸವನ್ನು ಅವನಿಗೆ ತಂದು, ನೀನು ಯೆಹೂ
ದ್ಯರ ಅರಸನಾಗಿದ್ದರೆ, ನಿನ್ನನ್ನು ನೀನೇ ರಕ್ಷಿಸಿಕೋ ಎಂದು ಹೇಳಿ, ಅವನನ್ನು ಹಾಸ್ಯ ಮಾಡಿದರು.
೩೮ ಇದಲ್ಲದೆ, **ಇವನು ಯೆಹೂದ್ಯರ ಅರಸನಾಗಿದ್ದಾನೆ** ಎಂಬ ಮೇಲ್ಬರಹವು ಗ್ರೀಕ ರೋಮಾಯ
ಇಬ್ರೀಯ ಅಕ್ಷರಗಳಲ್ಲಿ ಅವನ ಮೇಲ್ಗಡೆ ಬರೆಯಲ್ಪಟ್ಟಿತು.
೩೯ ಮತ್ತು ತೂಗಿರುವ ದುಷ್ಟರಲ್ಲಿ ಒಬ್ಬನು, ನೀನು ಕ್ರಿಸ್ತನಾಗಿದ್ದರೆ, ನಿನ್ನನ್ನೂ ನಮ್ಮನ್ನೂ ರಕ್ಷಿಸೆಂದು, ಅವ
೪೦ ನನ್ನು ದೂಷಿಸಿದನು. ಆದರೆ ಬೇರೊಬ್ಬನು ಅವನನ್ನು ಗದರಿಸಿ, [4]ಅದೇ ಆಜ್ಞೆಯಲ್ಲಿರುವ ನೀನು ದೇವರಿಗೆ
೪೧ ಭಯ ಪಡುವದಿಲ್ಲವೋ? ನಮಗೆ ನ್ಯಾಯವಾಗಿದೆ ಸರಿ; ಯಾಕಂದರೆ ನಾವು ಮಾಡಿದವುಗಳಿಗೆ ತಕ್ಕ
೪೨ ದ್ದನ್ನು ಹೊಂದುತ್ತೇವೆ; ಆದರೆ ಇವನು ಅಯೋಗ್ಯವಾದದ್ದೇನೂ ಮಾಡಲಿಲ್ಲ, ಎಂದು ಹೇಳಿ, ಯೇಸುವಿಗೆ,

---

ಉಪದ್ರಗಳ ಘೋರದಿಂದ, ಮಕ್ಕಳನ್ನು ಹೆರದೆ ಬಂಜೆಯಾಗಿರುವದು ದೊಡ್ಡ ಆಶೀರ್ವಾದವೆಂದೂ, (೨೯.) ದೀರ್ಘವಾದ ಉಪದ್ರಕ್ಕಿಂತ ಥಕ್ಕನೆ ಸಾಯುವದು ಉತ್ತಮವೆಂದೂ, (೩೦.) ಹೇಳುವಿರಿ. ಹಸೀ ಮರಕ್ಕೆ ಸರಿಯಾದ, ಪರಿಶುದ್ಧತ್ವವೂ ಕೃಪೆಯೂ ಉಳ್ಳ ನನಗೆ ಇಷ್ಟು ಉಪದ್ರವಾದರೆ, ಒಣ ಮರಕ್ಕೆ ಸರಿಯಾದ ನಿಷ್ಫಲವೂ ನಿಷ್ಕರುಣೆಯೂ ಉಳ್ಳ ನಿಮ್ಮ ಜಾತಿಯವರಿಗೆ ಎಷ್ಟು ಉಪದ್ರ ಬರುವದು! (೩೧.)

1. ಕಪಾಲಸ್ಥಳವೆಂಬುವದಕ್ಕೆ ಸರಿಯಾದ ಲತಿನ್ ಶಬ್ದವು ಕಾಲ್ವರಿ, ಇಬ್ರೀಯ ಶಬ್ದವು ಗೊಲ್ಗೋಥ. (ಮತ್ತಾ. ೨೭. ೩೩. ವಚನದ ವ್ಯಾಖ್ಯಾನ ನೋಡ ಬೇಕು.)

2. ಕ್ರಿಸ್ತನು ತನ್ನನ್ನು ಕೊಂದ ಪಾತಕರಿಗಾಗಿ ಬೇಡಿ ಕೊಂಡದ್ದು ಈ ಸುವಾರ್ತೆಯಲ್ಲಿ ಮಾತ್ರ ಹೇಳಲ್ಪಡುತ್ತದೆ. ಪಾಪಾತ್ಮರಿಗೋಸ್ಕರ ಶಿಲುಬೆಯ ಮೇಲೆ ಮರಣತ್ಯಾಗ ಮಾಡುವ ಕರುಣಾನಿಧಿಯಾದ ಕ್ರಿಸ್ತನು ತನ್ನ ಪರಮ ತಂದೆಯ ಮಿತಿಯಿಲ್ಲದ ಪ್ರೀತಿಯನ್ನು ನೆನಸಿ ಕೊಂಡು, ಕೊಲೆಪಾತಕರಿಗಾಗಿ ಬೇಡಿ ಕೊಂಡನು. (ಯೆಶಾ. ೫೩. ೧೨.) ಅವರ ಮೂರ್ಖತನದಿಂದ ಪ್ರಾಣ ಬಿಡುವ ರಕ್ಷಣೆಯ ನಾಯಕನು, ಅವರು ಕನಿಕರ ಹೊಂದುವ ಹಾಗೆ, ಅವರ ತಿಳಿಯದತನವನ್ನು ಆಧಾರ ಮಾಡಿ ಕೊಂಡು, ಅವರಿಗಾಗಿ ವಹಿಸಿ ಮಾತಾಡಿದ್ದು ಎಷ್ಟು ಆಶ್ಚರ್ಯವಾದ ಪ್ರೀತಿ! ಆತನ ಬೋಧನೆಯಂತೆ ನಡತೆಯೂ ಇತ್ತು. (ಮತ್ತಾ. ೫. ೪೪.) ಈ ವಿಷಯದಲ್ಲಿ ಆತನ ಮಾದ್ರಿಯು ಆತನ ಶಿಷ್ಯರಿಗೆ ಎಷ್ಟೋ ಶ್ರೇಷ್ಠವಾದದ್ದು. (ಅಪೊ. ಕ್ರಿ. ೭. ೬೦. ೧ ಪೇತ್ರ. ೨. ೨೧—೨೩.)

3. ರೋಮಾಯ ರಾಣುವೆಯವರು ಮಾತ್ರವಲ್ಲ, ಯೆಹೂದ್ಯರು ಸಹ ತಿಳಿಯದೆ ಆತನನ್ನು ಶಿಲುಬೆಗೆ ಹಾಕಿದರು. (ಅಪೊ. ಕ್ರಿ. ೩. ೧೭. ೧ ಕೊರಿ. ೨. ೮.) ಆದರೂ ಈ ತಿಳಿಯದತನವು ದಂಡನೆಗೆ ಹೇತುವೆಯಾದ ಮಹಾ ಪಾಪವಾಗಿದೆ ಎಂಬುವದಕ್ಕೆ ಸಂದೇಹವಿಲ್ಲ.

4. ಈ ಇಬ್ಬರು ಕಳ್ಳರು ರಕ್ಷಕನನ್ನು ಮೊದಲಲ್ಲಿ ದೂಷಿಸಿದರೆಂದು ಮತ್ತಾಯು ಮಾರ್ಕನ ಸುವಾರ್ತೆಗಳಿಂದ ತಿಳಿಯ ಬರುತ್ತದೆ. ಆದರೆ ಇವರಲ್ಲಿ ಒಬ್ಬನು ಆತನ ತಾಳ್ಮೆಯನ್ನೂ ಆತನ ದೀನತ್ವದಲ್ಲಿ ಆತನು ತೋರಿಸಿದ ದೈವಮಹತ್ವವನ್ನೂ ನೋಡಿ, ಪರಿಶುದ್ಧಾತ್ಮನ ಕೃಪೆಯಿಂದ ಗ್ರಹಿಕೆಯನ್ನು ಹೊಂದಿ, ಗುಣ ಪಟ್ಟನು. ಅವನು ನಿಜವಾಗಿ ಗುಣ ಪಟ್ಟನೆಂಬುವದಕ್ಕೆ ಗುರುತಾಗಿ, ಆತನನ್ನು ದೂಷಿಸಿದ ಮತ್ತೊಬ್ಬ ಕಳ್ಳನನ್ನು ಗದರಿಸಿದನು. ಆತನಿಗಾದ ಹಾಗೆ ನಿನಗೂ ಕಷ್ಟ ಸಂಭವಿಸಿರಲಾಗಿ, ನೀನು ದೇವರಿಗೆ ಸ್ವಲ್ಪವಾದರೂ ಭಯ ಪಡದೆ, ದುಷ್ಟರ ಸಂಗಡ ಕೂಡಿ ಕೊಂಡು ಈತನನ್ನು ದೂಷಿಸುವದು ಧರ್ಮವೋ? "ಕೆಟ್ಟದ್ದು ಮಾಡಿದವರು ಕೇಡು ಅನುಭವಿಸುವರು" ಎಂಬ ಹಾಗೆ ನಾವು ಮಾಡಿದ ಅಪರಾಧಕ್ಕೆ ತಕ್ಕ ಆಜ್ಞೆ ಬಂದದ್ದು ನಮಗೆ ನ್ಯಾಯವಾಗಿದೆ. ನಿರ್ಮಲನಾದ ಈತನು ಯಾವ ಅಪರಾಧವನ್ನೂ ಮಾಡದೆ ಇರಲಾಗಿ ಈತನನ್ನು ದೂಷಿಸ ಬಹುದೇ? ಎಂದು ಅವನನ್ನು ಗದರಿಸಿದನು.



೪೩ ಕರ್ತನೇ, [1]ನಿನ್ನ ರಾಜ್ಯದೊಳಗೆ ಬರುವಾಗ, ನನ್ನನ್ನು ಜ್ಞಾಪಕ ಮಾಡಿಕೋ, ಅಂದನು. ಯೇಸು ಅವ
ನಿಗೆ, ನಿಶ್ಚಯವಾಗಿ ನಿನಗೆ ಹೇಳುತ್ತೇನೆ, [2]ಈ ಹೊತ್ತು ನನ್ನ ಸಂಗಡ [3]ಪರದೈಸಿನಲ್ಲಿ ಇರುವಿ, ಅಂದನು.
೪೪ ಹೆಚ್ಚು ಕಡಿಮೆ ಆರನೇ ತಾಸಾದಾಗ, ದೇಶವೆಲ್ಲಾದರ ಮೇಲೆ ಒಂಭತ್ತನೇ ತಾಸಿನ ವರಿಗೂ ಕತ್ತಲಾಯಿತು;
೪೫ ಸೂರ್ಯನು ಕತ್ತಲಾದನು;
ಮತ್ತು ದೇವಾಲಯದ ತೆರೆಯು ಮಧ್ಯದಲ್ಲಿ ಹರಿದು ಹೋಯಿತು.
೪೬ ಆಗ ಯೇಸು ಮಹಾ ಶಬ್ದದಿಂದ ಕೂಗಿ, ತಂದೆಯೇ, ನಿನ್ನ ಕೈಗಳಲ್ಲಿ ನನ್ನ [4]ಆತ್ಮವನ್ನು ಒಪ್ಪಿಸುತ್ತೇನೆ,
(ಕೀರ್ತ. ೩೧. ೫.) ಅಂದನು; ಇವುಗಳನ್ನು ಹೇಳಿ, ಪ್ರಾಣ ಬಿಟ್ಟನು.
೪೭ ಶತಾಧಿಪತಿಯು ಆದದ್ದನ್ನು ನೋಡಿ, ದೇವರನ್ನು ಮಹಿಮೆ ಪಡಿಸಿ, ನಿಜವಾಗಿ ಈ ಮನುಷ್ಯನು [5]ನೀತಿವಂ
ತನಾಗಿದ್ದನು, ಅಂದನು.
೪೮ ಮತ್ತು ಆ ನೋಟಕ್ಕೆ ಕೂಡಿ ಬಂದ ಸಮೂಹಗಳೆಲ್ಲಾ ಆದವುಗಳನ್ನು ನೋಡಿ, [6]ಎದೆ ಬಡುಕೊಂಡು
೪೯ ತಿರಿಗಿ ಹೋದರು. ಇದಲ್ಲದೆ ಅವನ ಪರಿಚಿತರೆಲ್ಲರೂ, ಅವನ ಸಂಗಡ ಗಲಿಲಾಯದಿಂದ ಬಂದು, ಅವನನ್ನು
ಹಿಂಬಾಲಿಸಿದ ಸ್ತ್ರೀಯರೂ ಇವುಗಳನ್ನು ನೋಡುತ್ತಾ, ದೂರದಲ್ಲಿ ನಿಂತಿದ್ದರು.

ಕ್ರಿಸ್ತನ ಪರಿಶುದ್ಧ ಶರೀರವನ್ನು ಹೂಣಿಟ್ಟದ್ದು.

೫೦ ಮತ್ತು, ಇಗೋ, ಯೆಹೂದ್ಯರ ಪಟ್ಟಣವಾದ ಅರಿಮಥಾಯದವನಾದ [7]ಯೋಸೆಫನೆಂಬ ಒಬ್ಬ ಮನುಷ್ಯ
೫೧ ನಿದ್ದನು. ಅವನು ಮಂತ್ರಿಯು, ನೀತಿವಂತನಾದ ಒಳ್ಳೇ ಮನುಷ್ಯನು; ಅವರ ಆಲೋಚನೆಗೂ ಕೃತ್ಯಕ್ಕೂ
೫೨ ಸಮ್ಮತಿ ಪಡದೆ ಇದ್ದನು. ಅವನು ತಾನು ದೇವರ ರಾಜ್ಯವನ್ನು ನಿರೀಕ್ಷಿಸುತ್ತಿದ್ದನು. ಅವನು ಪಿಲಾತನ
೫೩ ಬಳಿಗೆ ಬಂದು, ಯೇಸುವಿನ ಶರೀರವನ್ನು ಬೇಡಿ ಕೊಂಡು, ಅದನ್ನು ಇಳಿಸಿ, ಅದನ್ನು ಬಟ್ಟೆಯಲ್ಲಿ ಸುತ್ತಿ,
೫೪ ಇನ್ನು ಯಾರೂ ಇರಿಸಲ್ಪಡದಂಥ, ಬಂಡೆಯಲ್ಲಿ ತೋಡಿದಂಥ ಸಮಾಧಿಯಲ್ಲಿ ಅದನ್ನು ಇಟ್ಟನು. ಇದಲ್ಲದೆ
ಸಿದ್ಧ ಮಾಡುವ ದಿವಸವಾಗಿತ್ತು; ಸಬ್ಬತು ಸಮೀಪಿಸಿತು.
೫೫ ಮತ್ತು ಅವನ ಸಂಗಡ ಗಲಿಲಾಯದಿಂದ ಬಂದ ಹೆಂಗಸರು ಸಹ ಹಿಂಬಾಲಿಸಿ, ಸಮಾಧಿಯನ್ನೂ, ಅವನ
೫೬ ಶರೀರವು ಇಡಲ್ಪಟ್ಟ ರೀತಿಯನ್ನೂ ನೋಡಿದರು. ತರುವಾಯ ಅವರು ತಿರಿಗಿ ಹೋಗಿ, ಸುಗಂಧಗಳನ್ನೂ
ತೈಲಗಳನ್ನೂ ಸಿದ್ಧ ಮಾಡಿ, ಕಟ್ಟಳೆಯ ಮೇರೆಗೆ ಸಬ್ಬತಿನಲ್ಲಿ ಸುಮ್ಮನಿದ್ದರು.

---

1. ಹೀಗೆ ತನ್ನ ಪಾಪವನ್ನು ಗ್ರಹಿಸಿ, ತನ್ನ ಕೆಟ್ಟ ಜತೆಗಾರನ ಅಪರಾಧವನ್ನು ಅವನಿಗೆ ತೋರಿಸಿ, ಕ್ರಿಸ್ತನ ನಿರಪರಾಧತ್ವವನ್ನು ಅರಿಕೆ ಮಾಡಿದನು. ಆತನೇ ಮೇಲಾದ ದೇವರೆಂದೂ, ಸರ್ವ ಲೋಕಾಧಿಪತಿ ಎಂದೂ ವಿಶ್ವಾಸಿಸಿ, ಆತನಿಗೆ, ನಿನ್ನ ರಾಜ್ಯದಲ್ಲಿ ಬರುವಾಗ ನನ್ನನ್ನು ಜ್ಞಾಪಕ ಮಾಡಿಕೋ ಎಂದು ಪ್ರಾರ್ಥಿಸಿದನು. ಬೆಂಕಿಯ ಸರ್ಪಗಳಿಂದ ಕಚ್ಚಲ್ಪಟ್ಟ ಇಸ್ರಯೇಲ್ಯರು ಗಣೆಯ ಮೇಲಿದ್ದ ಹಿತ್ತಾಳೆ ಸರ್ಪವನ್ನು ನೋಡಿ, ರಕ್ಷಿಸಲ್ಪಟ್ಟ ಹಾಗೆ, ಶಿಲುಬೆಯ ಮೇಲೆ ಎತ್ತಲ್ಪಟ್ಟ ರಕ್ಷಕನನ್ನು ನೋಡಿ, ಈ ಕಳ್ಳನು ರಕ್ಷಿಸಲ್ಪಟ್ಟನು.

2. ಕ್ರಿಸ್ತನು ಆ ಕಳ್ಳನ ವಿಜ್ಞಾಪನೆಯನ್ನು ಕೇಳಿದಾಗಲೇ, ನಿನ್ನ ವಿಜ್ಞಾಪನೆಯ ಪ್ರಕಾರ ಇಂದೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ವಾಗ್ದತ್ತ ಮಾಡಿದನು.

3. ಪರದೈಸು ಎಂಬುವದು ಫಾರ್ಸಿ ಭಾಷೆಯ ಪದವು. ಇದಕ್ಕೆ ತೋಟವೆಂಬುವ ಅರ್ಥವು. ಏಡೆನ್ ತೋಟಕ್ಕೆ ಈ ಹೆಸರಿತ್ತು. (ಉತ್ಪ. ೨. ೮.) ತರುವಾಯ ಸನ್ಮಾರ್ಗರ ಆತ್ಮಗಳು ವಾಸಿಸುವ ಸ್ಥಳಕ್ಕೆ ಈ ಹೆಸರು ವಾಡಿಕೆಯಾಯಿತು. (೨ಕೊರಿ. ೧೨. ೪. ಪ್ರಕಟ. ೨. ೭.) ಅದರಿಂದ ಕ್ರಿಸ್ತನ ಆತ್ಮವು ಸತ್ತವರ ಸ್ಥಳವಾದ ಅದೃಶ್ಯ ಲೋಕಕ್ಕೆ ಹೋಯಿತೆಂದೂ, (ಅಪೊ. ಕ್ರಿ. ೨. ೨೭.) ಆತನ ಕೃಪೆಯ ನೆರಳಿನಲ್ಲಿ ಸಾಯುವ ಭಕ್ತರು ಪರದೈಸೆಂಬ ಪರಮ ಪದವಿಯನ್ನು ಹೊಂದುವರೆಂದೂ ತಿಳಿಯ ಬಹುದು. (ಫಿಲಿ. ೧. ೨೩.) ಶಿಲುಬೆಯ ಮೇಲೆ ಹೀನವಾದ ಮರಣ ಹೊಂದಿದವನು ತನ್ನ ಶರಣು ಹೊಕ್ಕ ಭಕ್ತನಿಗೆ ಪರದೈಸಿನ ಸೌಖ್ಯವನ್ನು ಕೊಡುವದು ಎಷ್ಟತಿಶಯವು! ಮರಣಸಮಯದಲ್ಲಿ ಗುಣ ಪಡುವದು ಒಂದು ವೇಳೆ ಸಾಧ್ಯವಾದಾಗ್ಯೂ, ಗುಣ ಪಡದೆ, ಮತ್ತೊಬ್ಬ ಕಳ್ಳನ ದೃಷ್ಟಾಂತದಿಂದ, ಮರಣಕಾಲದಲ್ಲಿ ಗುಣ ಪಡ ಬಹುದೆಂದು ಎಣಿಸುವವರ ಯೋಚನೆಯು ಎಷ್ಟೋ ಮೋಸವಾದದ್ದೆಂದು ತಿಳಿಯ ಬೇಕು.

4. (ಇದು ಕೀರ್ತ. ೩೧. ೫. ವಚನದಲ್ಲಿರುವ ಮಾತುಗಳು.) ರಕ್ಷಕನು ಸಾಯುವ ಸಮಯದಲ್ಲಿಯೂ ದೇವರ ವಾಕ್ಯದ ಮಹಿಮೆಯನ್ನೇ ಉಚ್ಚರಿಸುತ್ತಾನೆ. ಇದರಿಂದ ಭಕ್ತರು ಸಾಯುವ ವಿಧ ಎಂಥಾದ್ದೆಂದು ತೋರಿಸಿದನು. ತಂದೆಯ ಪ್ರೀತಿಯನ್ನರಿತು, ಆತನ ಕೈಗಳಲ್ಲಿ ತನ್ನ ಆತ್ಮವನ್ನು ಒಪ್ಪಿಸಿ, ತಲೆಯನ್ನು ಬಾಗಿಸಿ, ಮರಣ ಹೊಂದಿದನು. ಬಹಳ ಶಬ್ದದಿಂದ, "ತೀರಿತೆಂದು" ಹೇಳಿದನೆಂದು ಯೋಹಾನನ ಸುವಾರ್ತೆಯಿಂದ ತಿಳಿಯ ಬಹುದು.

5. ಅವನು ನೀತಿವಂತನೆಂದು ಅಂದದ್ದು, ಕ್ರಿಸ್ತನು ಹೇಳಿದ ಪ್ರಕಾರ ಆತನೇ ದೇವರ ಮಗನೆಂದು ತಿಳಿದು ಕೊಂಡನು. (ಮಾರ್ಕ. ೧೫. ೩೯.)

6. ನೀತಿಪರನಾದ ಕ್ರಿಸ್ತನು ಮರಣ ಹೊಂದಿದ್ದರಿಂದ ಉಂಟಾದ ದುಃಖವನ್ನು ಸಹಿಸಲಾರದೆ, ಎದೆ ಬಡುಕೊಂಡರು. ಇವರಲ್ಲಿ ಕೆಲವರು ಪೇತ್ರನ ಪ್ರಸಂಗವನ್ನು ಕೇಳಿ, ಗುಣ ಪಟ್ಟರುವರು. (ಅಪೊ. ಕ್ರಿ. ೨. ೩೭.)

7. ೫೦—೫೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೭. ೫೭—೬೬. ಮಾರ್ಕ. ೧೫. ೪೨—೪೭. ಯೋಹಾ. ೧೯. ೩೮—೪೨. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

ಸ್ತ್ರೀಯರು ಸಮಾಧಿಗೆ ಹೋದದ್ದು; ಜೀವದಿಂದ ಎದ್ದ ಕರ್ತನು ಅವರಿಗೆ ಕಾಣಿಸಿದ್ದು; ದಿವಾರೋಹಣವಾದದ್ದು.

**24.** ಆದರೆ [1]ಸಬ್ಬತಿನ ಮಾರಣೆ ದಿವಸದಲ್ಲಿ, ಬೆಳಿಗ್ಯೆ, ಅವರು ತಾವು ಸಿದ್ಧ ಮಾಡಿದ ಸುಗಂಧಗಳನ್ನು ತೆಗೆದು
೨ ಕೊಂಡು, ಬೇರೆ ಕೆಲವು ಸ್ತ್ರೀಯರ ಸಂಗಡ ಸಮಾಧಿಗೆ ಬಂದು, ಕಲ್ಲು ಸಮಾಧಿಯಿಂದ ಹೊರಳಿಸಿದ್ದನ್ನು
೩ ನೋಡಿ, ಒಳಗೆ ಹೋಗಿ, ಕರ್ತನಾದ ಯೇಸುವಿನ ಶರೀರವನ್ನು ಕಾಣಲಿಲ್ಲ.
೪ ಇದರ ವಿಷಯ ಅವರು ಸಂದೇಹ ಪಡುತ್ತಿರುವಾಗ ಆದದ್ದೇನಂದರೆ, ಇಗೋ, ಮಿಂಚುವ ವಸ್ತ್ರಗಳುಳ್ಳ
೫ ಇಬ್ಬರು ಮನುಷ್ಯರು ಅವರ ಬಳಿಯಲ್ಲಿ ನಿಂತಿದ್ದರು. ಅವರು ಭಯಸ್ಥರಾಗಿ, ಮುಖವನ್ನು ನೆಲಕ್ಕೆ ಬೊಗ್ಗಿ
೬ ಸುವಾಗ, ಅವರು ಅವರಿಗೆ, ನೀವು ಬದುಕುವವನನ್ನು ಸತ್ತವರಲ್ಲಿ ಹುಡುಕುವದೇನು? ಅವನು ಇಲ್ಲಿ ಇಲ್ಲ,
೭ ಎದ್ದಿದ್ದಾನೆ; ಅವನು ಗಲಿಲಾಯದಲ್ಲಿದ್ದಾಗ, ಮನುಷ್ಯನ ಮಗನು ಪಾಪಿಷ್ಠರಾದ ಮನುಷ್ಯರ ಕೈಗಳಿಗೆ
ಒಪ್ಪಿಸಲ್ಪಟ್ಟು, ಶಿಲುಬೆಗೆ ಹಾಕಲ್ಪಟ್ಟು, ಮೂರನೇ ದಿವಸದಲ್ಲಿ ಏಳ ಬೇಕೆಂಬದಾಗಿ ನಿಮಗೆ ಹೇಳಿದ್ದನ್ನು
[2]ಜ್ಞಾಪಕ ಮಾಡಿ ಕೊಳ್ಳಿರಿ, ಅಂದರು.
೮, ೯ ಆಗ ಅವನ ಮಾತುಗಳನ್ನು ಜ್ಞಾಪಕ ಮಾಡಿ ಕೊಂಡರು. ಮತ್ತು ಸಮಾಧಿಯಿಂದ ತಿರಿಗಿ ಹೋಗಿ,
೧೦ ಹನ್ನೊಂದು ಮಂದಿಗೂ, ಮಿಕ್ಕಾದವರೆಲ್ಲರಿಗೂ, ಇವುಗಳನ್ನೆಲ್ಲಾ ತಿಳಿಸಿದರು. ಅಪೊಸ್ತಲರಿಗೆ ಇವುಗಳನ್ನು
ಹೇಳಿದವರು ಯಾರಂದರೆ, ಮಗ್ದಲದವಳಾದ ಮರಿಯಳೂ, ಯೋಹಾನಳೂ, ಯಾಕೋಬನ ಮರಿಯಳೂ,
೧೧ ಅವರ ಸಂಗಡ ಇದ್ದ ಮಿಕ್ಕಾದವರೂ. ಆದರೆ ಅವರ ಮಾತುಗಳು ಅವರಿಗೆ ಹರಟೆಯ ಹಾಗೆ ಕಾಣಿಸಿದ
೧೨ ದರಿಂದ, ಅವರನ್ನು ನಂಬಲಿಲ್ಲ. ಆದರೆ ಪೇತ್ರನು ಎದ್ದು, ಸಮಾಧಿಗೆ ಓಡಿ ಹೋಗಿ, ಬೊಗ್ಗಿ ಕೊಂಡು,
[3]ಬಟ್ಟೆಗಳು ಮಾತ್ರ ಬಿದ್ದಿರುವದನ್ನು ಕಂಡು, ಆದ ಸಂಗತಿಗೆ [4]ಆಶ್ಚರ್ಯ ಪಟ್ಟು, ತನ್ನ ಮನೆಗೆ ಹೋದನು.
೧೩ ಮತ್ತು, ಇಗೋ, [5]ಅವರಲ್ಲಿ ಇಬ್ಬರು ಅದೇ ದಿವಸದಲ್ಲಿ ಯೆರೂಸಲೇಮಿಗೆ ಅರವತ್ತು ಸ್ತಾದ್ಯಗಳಷ್ಟು
೧೪ ದೂರವಾದ [6]ಎಮ್ಮಾಹುವೆಂಬ ಗ್ರಾಮಕ್ಕೆ ಹೋಗುತ್ತಾ, ಸಂಭವಿಸಿದ ಈ ಎಲ್ಲಾ ಕಾರ್ಯಗಳ ವಿಷಯ
೧೫ ವಾಗಿ, ತಮ್ಮೊಳಗೆ ಸಂಭಾಷಿಸಿ ಕೊಳ್ಳುತ್ತಿದ್ದರು. ಅವರು ಸಂಭಾಷಿಸಿ ಕೊಂಡು, ತರ್ಕಿಸುತ್ತಿರಲಾಗಿ,
೧೬ ಯೇಸು ತಾನೇ ಸಮೀಪಕ್ಕೆ ಬಂದು, ಅವರ ಸಂಗಡ ಹೋದನು. ಆದರೆ [7]ಅವನನ್ನು ತಿಳಿಯದ ಹಾಗೆ,
ಅವರ ಕಣ್ಣುಗಳು ಹಿಡಿಯಲ್ಪಟ್ಟವು.

1. ಈ ಸಂಧಿಯು ಮತ್ತಾ. ೨೮. ಮಾರ್ಕ. ೧೬. ಯೋಹಾ. ೨೦. ೨೧. ಸಂಧಿಗಳಿಗೆ ಬಹುಶಾ ಸರಿಯಾಗಿದೆ. (ಮತ್ತಾ. ೨೮. ೧. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.) ಎಮ್ಮಾಹು ಊರಿಗೆ ಹೋದ ಇಬ್ಬರು ಶಿಷ್ಯರಿಗೆ ಕರ್ತನು ಕಾಣಿಸಿ ಕೊಂಡದ್ದೂ, (೧೩—೩೫.) ಪುನರುತ್ಥಾನವಾದ ತರುವಾಯ ಅಪೊಸ್ತಲರಿಗೆ ಕಾಣಿಸಿ ಕೊಂಡು, ಅವರ ಸಂಗಡ ಮಾಡಿದ ಸಂಭಾಷಣೆಯೂ, (೩೬—೪೯.) ಆತನು ಪರಲೋಕಕ್ಕೆ ಏರಿ ಹೋದ ಸಮಯದಲ್ಲಿ ಸಂಭವಿಸಿದ ವಿಶೇಷಗಳೂ ಈ ಸುವಾರ್ತೆಯಲ್ಲಿ ಮುಖ್ಯವಾಗಿ ಹೇಳಲ್ಪಡುತ್ತವೆ. (೫೦—೫೩.)

2. ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ ಮಾತುಗಳನ್ನು ದೇವದೂತರು ಸಹ ಕೇಳಿ ಇದ್ದರೆಂದು ತೋರುತ್ತದೆ.

3. ಇವು ಸುಗಂಧವರ್ಗಗಳು ಹಾಕಲ್ಪಟ್ಟ ಕ್ರಿಸ್ತನ ಶರೀರವನ್ನು ಸುತ್ತಿ ಇದ್ದ ಬಟ್ಟೆಗಳು.

4. ನಡೆದ ಅತಿಶಯವನ್ನು ಕಂಡು, ತನ್ನಲ್ಲಿ ಆಶ್ಚರ್ಯ ಪಡುತ್ತಾ ಮನೆಗೆ ಹೋದನು. (ಯೋಹಾ. ೨೦. ೧೦.)

5. ಇವರಿಬ್ಬರೂ ಕ್ರಿಸ್ತನ ಶಿಷ್ಯರೇ ಹೊರ್ತು ಅಪೊಸ್ತಲರಲ್ಲ. ಇವರಲ್ಲಿ ಒಬ್ಬನ ಹೆಸರು ಕ್ಲೋಫನು. (೧೮. ವ.) ಇನ್ನೊಬ್ಬನ ಹೆಸರು ತಿಳಿಯದು. ಕೆಲವರು ಸೀಮೋನನೆಂದೂ, ಕೆಲವರು ಲೂಕನೆಂದೂ ನೆನಸುತ್ತಾರೆ. ಆದರೆ ನಿಶ್ಚಯವಿಲ್ಲ. ಈ ಇಬ್ಬರು ಶಿಷ್ಯರೂ ಕ್ರಿಸ್ತನು ಪುನರುತ್ಥಾನವಾದ ದಿವಸ ಮಧ್ಯಾಹ್ನ ಸಮಯದಲ್ಲಿ ಪ್ರಯಾಣ ಮಾಡಿ ಇರುವರು.

6. ಇವರು ಹೋದ ಊರು ಎಮ್ಮಾಹು. ಇದು ಯೆರೂಸಲೇಮಿಗೆ ಏಳು ಮೈಲುಗಳ ದೂರದಲ್ಲಿತ್ತು. ಈಗ ಅದು ಇದ್ದ ಸ್ಥಳವು ಸಹ ತಿಳಿಯದು.

7. ಎಮ್ಮಾಹು ಊರಿಗೆ ಪ್ರಯಾಣ ಮಾಡಿದ ಶಿಷ್ಯರು ದಾರಿಯಲ್ಲಿ ಯೇಸು ರಕ್ಷಕನನ್ನು ಕುರಿತು ಸಂಭಾಷಿಸುತ್ತಾ ಹೋದರು. ಇದು ಕ್ರೈಸ್ತರಿಗೆ ಒಳ್ಳೇ ಮಾದ್ರಿಯು. ಈ ಶಿಷ್ಯರ ಅಪೇಕ್ಷೆಯನ್ನು ಪೂರೈಸುವ ಉದ್ದಿಶ್ಯ ಕರ್ತನು ಅವರ ಸಮೀಪಕ್ಕೆ ಬಂದು, ಅವರ ಸಂಗಡ ಸಂಭಾಷಿಸಿದನು. ಆದಾಗ್ಯೂ ಅವರು ಆತನನ್ನು ತಮ್ಮ ರಕ್ಷಕನೆಂದು ತಿಳಿದು ಕೊಳ್ಳಲಿಲ್ಲ. ಆತನು ಮಾರು ರೂಪವಾಗಿ ಕಾಣಿಸಿದ್ದರಿಂದ (ಮಾರ್ಕ. ೧೬. ೧೨.) ಆತನು ಯಾರೆಂದು ಅವರಿಗೆ ತಿಳಿಯದೆ ಇತ್ತು. ಈ ವಚನವನ್ನೂ ೩೧ನೇ ವಚನವನ್ನೂ ನೋಡುವಾಗ, ದೇವರ ಚಿತ್ತದಿಂದಲೇ ಆತನನ್ನು ಕಾಣ ಕೂಡದ ಹಾಗೆ ಅವರ ದೃಷ್ಟಿ ಮರೆ ಆಯಿತೆಂದು ತೋರುತ್ತದೆ.



೧೭ ಅವನು ಅವರಿಗೆ, ನೀವು ನಡೆಯುತ್ತಾ, ದುಃಖ ಪಟ್ಟು, ನಿಮ್ಮೊಳಗೆ ಸಂಭಾಷಿಸಿ ಕೊಳ್ಳುವ ಈ ಮಾತು
೧೮ ಗಳೇನು? ಅಂದಾಗ; ಕ್ಲೋಫನೆಂಬ ಒಬ್ಬನು ಉತ್ತರ ಕೊಟ್ಟು, ಅವನಿಗೆ, ನೀನೊಬ್ಬನೇ ಯೆರೂಸಲೇ
ಮಿನಲ್ಲಿ [1]ಪರವಾಸಿಯಾಗಿದ್ದು, ಈ ದಿವಸಗಳಲ್ಲಿ ಅದರೊಳಗೆ ಆದವುಗಳನ್ನು ತಿಳಿಯದೆ ಇದ್ದೀಯೋ?
ಅಂದನು.
೧೯ ಅವನು ಅವರಿಗೆ, ಎಂಥವುಗಳನ್ನು? ಅಂದಾಗ; ಅವರು ಅವನಿಗೆ ಹೇಳಿದ್ದು, ನಜರೇತಿನವನಾದ ಯೇಸುವಿನ
ಸಂಗತಿಗಳನ್ನೇ. ದೇವರ ಮುಂದೆಯೂ, ಸಮಸ್ತ ಜನರ ಮುಂದೆಯೂ, ಕ್ರಿಯೆಯಲ್ಲಿಯೂ ವಾಕ್ಯದಲ್ಲಿಯೂ
೨೦ ಬಲವುಳ್ಳ ಪ್ರವಾದಿಯಾದ ಮನುಷ್ಯನಾಗಿದ್ದ ಅವನನ್ನು ಪ್ರಧಾನ ಯಾಜಕರೂ ನಮ್ಮ ಅಧಿಪತಿಗಳೂ
೨೧ ಮರಣದ ನಿರ್ಣಯಕ್ಕೆ ಒಪ್ಪಿಸಿ, ಅವನನ್ನು ಶಿಲುಬೆಗೆ ಹಾಕಿಸಿದ್ದಾರೆ. ಆದರೆ ನಾವು, ಇಸ್ರಯೇಲಿಗೆ
ವಿಮೋಚನೆ ಮಾಡ ಬೇಕಾದವನು ಇವನೇ ಎಂದು, ನಿರೀಕ್ಷಿಸಿದೆವು; ಇವೆಲ್ಲವುಗಳಲ್ಲದೆ, ಇವುಗಳು ಆಗಿ,
೨೨ ಈ ಹೊತ್ತು [2]ಮೂರನೇ ದಿವಸ ನಡಿಯುತ್ತದೆ. ಮತ್ತು ನಮ್ಮಲ್ಲಿರುವ ಕೆಲವು ಹೆಂಗಸರು ಸಹ ಬೆಳಿಗ್ಯೆ
೨೩ ಸಮಾಧಿಗೆ ಹೋಗಿ, ಅವನ ಶರೀರವನ್ನು ಕಾಣದೆ, ಬಂದು, ಅವನು ಬದುಕುತ್ತಾನೆಂದು ಹೇಳುವ ದೂತರ
೨೪ ದರ್ಶನವನ್ನು ಸಹ ನೋಡಿದ್ದೇವೆಂದು ಹೇಳಿ, ನಮ್ಮನ್ನು ಆಶ್ಚರ್ಯ ಪಡಿಸಿದರು. ಹೀಗಿರುವದರಿಂದ, ನಮ್ಮ
ಸಂಗಡ ಇದ್ದವರಲ್ಲಿ ಕೆಲವರು ಸಮಾಧಿಗೆ ಹೋಗಿ, ಆ ಹೆಂಗಸರು ಹೇಳಿದ ಹಾಗೆಯೇ ಕಂಡರು. ಆದರೆ
ಅವನನ್ನು ಕಾಣಲಿಲ್ಲ.
೨೫ ಆಗಲವನು ಅವರಿಗೆ ಹೇಳಿದ್ದೇನಂದರೆ, ಓ ಬುದ್ಧಿಹೀನರೇ! ಪ್ರವಾದಿಗಳು ಹೇಳಿದವುಗಳನ್ನೆಲ್ಲಾ ನಂಬುವ
೨೬ ದಕ್ಕೆ ಮಂದ ಹೃದಯವುಳ್ಳವರೇ! [3]ಕ್ರಿಸ್ತನು ಈ ಶ್ರಮೆಗಳನ್ನು ಪಟ್ಟು, ತನ್ನ ಮಹಿಮೆಯಲ್ಲಿ ಪ್ರವೇಶಿಸ
೨೭ ಬೇಕಾಗಿರಲಿಲ್ಲವೋ? ಆಗಲವನು ಮೋಶೆಯಿಂದಲೂ, ಪ್ರವಾದಿಗಳೆಲ್ಲರಿಂದಲೂ ಆರಂಭಿಸಿ, ಸಮಸ್ತ ಬರಹ
ಗಳಲ್ಲಿ ತನ್ನ ವಿಷಯವಾದವುಗಳನ್ನು ಅವರಿಗೆ ವಿವರಿಸಿದನು.
೨೮ ಅವರು ಹೋಗುವ ಗ್ರಾಮಕ್ಕೆ ಸಮೀಪಿಸಿದಾಗ, ಅವನು ಇನ್ನೂ [4]ದೂರ ಹೋಗ ಬೇಕೆಂಬ ಹಾಗೆ
೨೯ ಮಾಡಿದನು. ಆಗಲವರು ನಮ್ಮ ಸಂಗಡ ಇರು; ಸಾಯಂಕಾಲವಾಯಿತು; ದಿವಸವು ಸಂದು ಹೋಯಿತು,
ಎಂದು ಅವನಿಗೆ ಬಲವಂತ ಮಾಡಿದ್ದರಿಂದ, ಅವರ ಸಂಗಡ ಇರುವದಕ್ಕೆ ಪ್ರವೇಶಿಸಿದನು.
೩೦ ಅವನು ಅವರ ಸಂಗಡ ಊಟಕ್ಕೆ ಕೂತು ಕೊಂಡಿರುವಾಗ, ಏನಾಯಿತಂದರೆ, ಅವನು [5]ರೊಟ್ಟಿ ತಕ್ಕೊಂ
೩೧ ಡು, ಸ್ತೋತ್ರ ಮಾಡಿ, ಮುರಿದು, ಅವರಿಗೆ ಕೊಟ್ಟನು. ಆಗಲವರ ಕಣ್ಣುಗಳು ತೆರೆಯಲ್ಪಟ್ಟು, ಅವನ
೩೨ ಗುರುತು ತಿಳಿದರು. ಮತ್ತು ಅವನು ಅವರನ್ನು ಬಿಟ್ಟು, ಕಾಣದೆ ಹೋದನು. ಆಗ, ಅವನು ಮಾರ್ಗದಲ್ಲಿ
ನಮ್ಮ ಸಂಗಡ ಮಾತಾಡಿ, ಬರಹಗಳನ್ನು ನಮಗೆ ತೆರೆಯುವಾಗ, ನಮ್ಮ ಹೃದಯವು [6]ನಮ್ಮೊಳಗೆ ಉರಿಯ
ಲಿಲ್ಲವೋ? ಎಂದು ತಮ್ಮೊಳಗೆ ಹೇಳಿ ಕೊಂಡು,

1. ಪಟ್ಟಣದವರೆಲ್ಲರಿಗೂ ತಿಳಿದಿರುವ ಈ ಪ್ರಬಲವಾದ ಸಂಗತಿಯು ನಿನಗೆ ತಿಳಿಯದೆ ಇರುವದು ಆಶ್ಚರ್ಯವೆಂದು ಹೇಳಿದನು.

2. (ಮತ್ತಾ. ೧೨. ೪೦. ವಚನದ ವ್ಯಾಖ್ಯಾನ ನೋಡ ಬೇಕು.) ಮೂರನೇ ದಿವಸ ಜೀವದಿಂದ ಏಳುವೆನೆಂದು ಹೇಳಿದವನು ಇನ್ನೂ ಏಳಲಿಲ್ಲವೆಂದು ನೆನಸಿ, ಹೀಗೆ ಹೇಳಿದರು.

3. ಪ್ರವಾದಿಗಳ ವಾಕ್ಯಗಳಲ್ಲಿ ಪ್ರಕಟವಾದ ದೇವರ ನಿರ್ಣಯದ ಪ್ರಕಾರ ಲೋಕರಕ್ಷಕನಾದ ಕ್ರಿಸ್ತನು ಶ್ರಮೆ ಪಟ್ಟು, ಮರಣ ಹೊಂದಿ, ಮಹಿಮೆಯಲ್ಲಿ ಪ್ರವೇಶಿಸ ಬೇಕೆಂಬುವದು ಅವರಿಗೆ ತಿಳಿಯದೆ ಇದ್ದದರಿಂದ ಅವರ ಬುದ್ಧಿಯೂ ಭಕ್ತಿಯೂ ಬಹು ಸ್ವಲ್ಪವೆಂದು ಹೇಳಿ, ವೇದವಾಕ್ಯಗಳನ್ನೆಲ್ಲಾ ಅವರಿಗೆ ಚನ್ನಾಗಿ ವಿವರಿಸಿ, ತೋರಿಸಿದನು.

4. ಮಾರ್ಕ. ೬. ೪೮. ವಚನದ ವ್ಯಾಖ್ಯಾನ ನೋಡ ಬೇಕು.

5. ಆ ರಾತ್ರಿ ತಮ್ಮ ಸಂಗಡ ಇರ ಬೇಕೆಂದು ಬೇಡಿ ಕೊಂಡ ತನ್ನ ಶಿಷ್ಯರ ಸಂಗಡ ಇದ್ದು, ಅವರ ಸಂಗಡ ಊಟ ಮಾಡಿದನು. ಮನೇ ಯಜಮಾನನ ಹಾಗೆ ಆತನು ಪಙ್ತಿಯ ಮೊದಲಲ್ಲಿ ಇದ್ದು, ರೊಟ್ಟಿಯನ್ನು ತಕ್ಕೊಂಡು, ಆಶೀರ್ವದಿಸಿ, ಅವರಿಗೆ ಕೊಟ್ಟ ಪ್ರೀತಿಯ ಕ್ರಿಯೆಯಿಂದ ಆತನೇ ತಮ್ಮ ಕರ್ತನೆಂದು ತಿಳಿದು ಕೊಂಡರು. ಅವರು ಉಂಡದ್ದು ಕರ್ತನ ರಾತ್ರಿಭೋಜನವೆಂದು ಕೆಲವರು ನೆನಸುತ್ತಾರೆ.

6. ಆತನ ಇಂಪಾದ ವಾಕ್ಯಗಳನ್ನು ಕೇಳಿದವರ ಅಂತರ್ಯವು ಬೆಂಕಿಯ ಮುಂದಿನ ಮೇಣದಂತೆ ಕರಗಿತು. ಆ ಕೃಪೆಯ ವಾಕ್ಯಗಳ ಮಾಧುರ್ಯವು ಅದನ್ನು ಗ್ರಹಿಸಿದವರಿಗೆ ಮಾತ್ರ ತಿಳಿಯುವದು.

೩೩ ಅದೇ ಘಳಿಗೆಯಲ್ಲಿ ಎದ್ದು, ಯೆರೂಸಲೇಮಿಗೆ ತಿರಿಗಿ ಹೋಗಿ, ಕರ್ತನು ನಿಜವಾಗಿ ಎದ್ದಿದ್ದಾನೆಂದೂ,
೩೪ [1]ಸೀಮೋನನಿಗೆ ಕಾಣಿಸಿ ಕೊಂಡಿದ್ದಾನೆಂದೂ, ಹೇಳುವ [2]ಆ ಹನ್ನೊಂದು ಮಂದಿಯೂ, ಅವರ ಸಂಗಡಿಗರೂ
೩೫ ಕೂಡಿ ಬಂದಿರುವದನ್ನು ಕಂಡು, ತಾವೇ ಮಾರ್ಗದಲ್ಲಿ ಆದವುಗಳನ್ನೂ, ಅವನು ರೊಟ್ಟಿ ಮುರಿಯುವದರಲ್ಲಿ
ತಮಗೆ ತಿಳಿಯಲ್ಪಟ್ಟನೆಂಬುವದನ್ನೂ, ವಿವರಿಸಿದರು.
೩೬ [3]ಇವುಗಳನ್ನು ಅವರು ಮಾತಾಡುತ್ತಿರುವಾಗ, ಯೇಸು ತಾನೇ ಅವರ [4]ಮಧ್ಯದಲ್ಲಿ ನಿಂತು, ನಿಮಗೆ ಸಮಾ
೩೭ ಧಾನವಾಗಲಿ, ಎಂದು ಅವರಿಗೆ ಹೇಳಿದನು. ಆದರೆ ಅವರು ದಿಗುಲು ಪಟ್ಟು, ಭಯಸ್ಥರಾಗಿ, ಆತ್ಮವನ್ನು ಕಂ
೩೮ ಡೆವೆಂದು ನೆನಸಿದರು. ಆಗಲವನು ಅವರಿಗೆ ಹೇಳಿದ್ದೇನಂದರೆ, ಯಾಕೆ ಕಳವಳಗೊಳ್ಳುತ್ತೀರಿ? ಯಾಕೆ ನಿಮ್ಮ
೩೯ ಹೃದಯಗಳಲ್ಲಿ ಆಲೋಚನೆಗಳು ಏರುತ್ತವೆ? ನನ್ನ [5]ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ; ನಾನೇ
ಅಲ್ಲವೋ? ನನ್ನನ್ನು ಮುಟ್ಟಿ, ನೋಡಿರಿ; ಯಾಕಂದರೆ ಮಾಂಸವೂ ಎಲುವುಗಳೂ ನನಗೆ ಉಂಟೆಂದು ನೀವು
೪೦ ನೋಡುವ ಪ್ರಕಾರ ಆತ್ಮಕ್ಕೆ ಇಲ್ಲ. ಇದನ್ನು ಹೇಳಿ, ತನ್ನ ಕೈ ಕಾಲುಗಳನ್ನು ಅವರಿಗೆ ತೋರಿಸಿದನು.
೪೧ ಅವರು ಸಂತೋಷದಿಂದ ಇನ್ನು ನಂಬದೆ, ಆಶ್ಚರ್ಯ ಪಡುವಾಗ, ಅವರಿಗೆ, ಇಲ್ಲಿ ತಿನ್ನುವ ಪದಾರ್ಥ ಏನಾ
೪೨ ದರೂ ನಿಮಗೆ ಉಂಟೋ? ಅಂದನು. ಅವರು ಸುಟ್ಟ ಮೀನಿನ ತುಂಡನ್ನೂ, ಸ್ವಲ್ಪ ಜೇನುತೊಟ್ಟಿಯನ್ನೂ
೪೩ ಅವನಿಗೆ ಕೊಟ್ಟರು. ಅವನು ತೆಗೆದು ಕೊಂಡು, [6]ಅವರ ಮುಂದೆ ತಿಂದನು.
೪೪ [7]ಮತ್ತು ಅವರಿಗೆ ಹೇಳಿದ್ದೇನಂದರೆ, [8]ಮೋಶೆಯ ನ್ಯಾಯಪ್ರಮಾಣದಲ್ಲಿಯೂ, ಪ್ರವಾದಿಗಳಲ್ಲಿಯೂ, ಕೀ
ರ್ತನೆಗಳಲ್ಲಿಯೂ, ನನ್ನನ್ನು ಕುರಿತು ಬರೆದಿರುವವುಗಳೆಲ್ಲಾ ಈಡೇರ ಬೇಕೆಂದು, ನಾನು ಇನ್ನು ನಿಮ್ಮ ಸಂ
೪೫ ಗಡ ಇದ್ದಾಗ ನಿಮಗೆ ಹೇಳಿದ ವಾಕ್ಯಗಳು ಇವೇ. [9]ಆಗಲವರು ಬರಹಗಳನ್ನು ಗ್ರಹಿಸುವ ಹಾಗೆ, ಅವರ
೪೬ ಬುದ್ಧಿಯನ್ನು ತೆರೆದು, ಅವರಿಗೆ ಹೇಳಿದ್ದೇನಂದರೆ, ಹೀಗೆ ಬರೆದದೆ; ಮತ್ತು ಹೀಗೆ ಕ್ರಿಸ್ತನು ಶ್ರಮೆ ಪಟ್ಟು,
೪೭ ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಏಳಲೂ, [10]ಯೆರೂಸಲೇಮಿನಿಂದ ಆರಂಭವಾಗಿ ಎಲ್ಲಾ ಜನಾಂಗ

1. (೧ ಕೊರಿ. ೧೫. ೫.) ಎಮ್ಮಾಹು ಊರಿಗೆ ಹೋದ ಶಿಷ್ಯರು ಯೆರೂಸಲೇಮಿಗೆ ತಿರಿಗಿ ಬರುವಾಗ, ಕರ್ತನು ಒಂದು ವೇಳೆ ಸೀಮೋನನಿಗೆ ಕಾಣಿಸಿ ಕೊಂಡಿರುವನು.

2. ಕರ್ತನನ್ನು ಕಂಡ ಶಿಷ್ಯರು ಮಿಕ್ಕಾದವರಿಗೂ ಆ ಆಶ್ಚರ್ಯವಾದ ಸುದ್ದಿಯನ್ನು ಹೇಳ ಬೇಕೆಂದು ಸಂಗಡಲೇ ಹೊರಟು ಹೋದರು. ಹನ್ನೊಂದು ಮಂದಿ ಎಂಬುವದು ಅಪೊಸ್ತಲರನ್ನು ತೋರಿಸುತ್ತದೆ. ತೋಮನು ಮಾತ್ರ ಅವರಲ್ಲಿ ಇರಲಿಲ್ಲ. (ಯೋಹಾ. ೨೦. ೧೯, ೨೪.)

3. ೩೬—೪೯. ಮಾರ್ಕ. ೧೬. ೧೪—೧೮. ಯೋಹಾ. ೨೦. ೧೯—೨೩. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

4. ಬಾಗಲು ಮುಚ್ಚಲ್ಪಟ್ಟಿರುವಾಗ ಕರ್ತನು ಫಕ್ಕನೆ ಅವರ ಮಧ್ಯದಲ್ಲಿ ಪ್ರಸನ್ನನಾದದರಿಂದ ಆತನನ್ನು ನೋಡಿ, ಭಯ ಪಟ್ಟರು. (ಯೋಹಾ. ೨೦. ೧೯.) ಅವರು ಭಯ ಪಟ್ಟದ್ದರಿಂದ ಆತನ ಪುನರುತ್ಥಾನ ನಿಜವೆಂದು ನಿಶ್ಚಯ ಪಡುವದಕ್ಕೆ ಹೇತುವೆಯಾಯಿತು.

5. ಆತ್ಮಕ್ಕೆ ಕೈ ಕಾಲು ಮುಂತಾದ ಅವಯವಗಳಿಲ್ಲದ್ದರಿಂದ ಆತನ ಕೈ ಕಾಲುಗಳನ್ನು ಶಿಷ್ಯರು ನೋಡಿದಾಗ, ಆತನೇ ತಮ್ಮ ಪರಮ ಗುರುವೆಂದು ತಿಳಿದು ಕೊಳ್ಳ ಹೇತುವೆಯಾಯಿತು. (ಯೋಹಾ. ೨೦. ೨೦.)

6. ಅವರಿಗೆ ತನ್ನ ಪುನರುತ್ಥಾನದ ವಿಷಯ ಉಂಟಾಗಿದ್ದ ಸಂದೇಹವನ್ನೂ ಅಪನಂಬಿಕೆಯನ್ನೂ ನಿವರ್ತಿಸುವದಕ್ಕೆ ಅವರಿಗೆ ತನ್ನ ಕೈ ಕಾಲುಗಳನ್ನು ತೋರಿಸಿದ್ದಲ್ಲದೆ, ಅವರ ಮುಂದೆ ಊಟ ಸಹ ಮಾಡಿದನು.

7. ಕ್ರಿಸ್ತನ ಪುನರುತ್ಥಾನಕ್ಕೂ ದಿವಾರೋಹಣಕ್ಕೂ ಮಧ್ಯೆ ನಾಲ್ವತ್ತು ದಿವಸಗಳಲ್ಲಿ ತನ್ನ ಶಿಷ್ಯರ ಸಂಗಡ ಮಾಡಿದ ಸಂಭಾಷಣೆಗಳ ಸಂಕ್ಷೇಪವು ೪೪—೪೯. ವರೆಗೆ ಇರುವ ವಚನಗಳಲ್ಲಿ ಅಡಗಿರುತ್ತದೆಂದು ತಿಳಿಯ ಬಹುದು.

8. ಯೆಹೂದ್ಯರು ಹಳೇ ಒಡಂಬಡಿಕೆಯನ್ನು, ನ್ಯಾಯಪ್ರಮಾಣವು, ಪ್ರವಾದನೆಗಳು, ಕೀರ್ತನೆಗಳು ಎಂದು ಮೂರು ಭಾಗಗಳಾಗಿ ವಿಭಾಗಿಸಿದ್ದರು. ಈ ವಚನಗಳಲ್ಲಿ ಇವು ದೇವರ ವಾಕ್ಯವೆಂದು ಹೇಳಿರುವದರಿಂದ ಹಳೇ ಒಡಂಬಡಿಕೆಯ ಪುಸ್ತಕಗಳೆಲ್ಲಾ ಪರಿಶುದ್ಧಾತ್ಮನ ಪ್ರೇರಣೆಯಿಂದ ಬರೆಯಲ್ಪಟ್ಟವುಗಳೆಂದು ತಿಳಿಯ ಬೇಕು.

9. ಆತನು ಅವರ ಸಂಗಡ ಇದ್ದಾಗ ತನ್ನ ಬಾಯಿಯಿಂದ ಹೇಳಿದ ವಚನಗಳಲ್ಲಿ ಕೆಲವು ಬರೆಯಲ್ಪಟ್ಟದ್ದಾಗ್ಯೂ, (೧೮. ೩೧; ೨೨. ೩೭. ಮತ್ತಾ. ೨೬. ೫೬.) ಅನೇಕ ವಾಕ್ಯಗಳು ಬರೆಯಲ್ಪಡಲಿಲ್ಲವೆಂದು ತೋರುತ್ತದೆ.

10. ಆತನನ್ನು ಕೊಲೆ ಮಾಡಿದ ಪಟ್ಟಣದವರಿಗೆ ಮೊದಲು ಸುವಾರ್ತೆಯನ್ನು ಸಾರುವ ಹಾಗೆ ಆಜ್ಞಾಪಿಸಿದನು. ಇದು ಎಷ್ಟು ಆಶ್ಚರ್ಯವಾದ ಪ್ರೀತಿಯು! ಇನ್ನು ಸ್ವಲ್ಪ ಕಾಲದೊಳಗೆ ತನ್ನ ಮಹಿಮೆಯನ್ನೆಲ್ಲಾ ಸೂರೆ ಕೊಡಲಿಕ್ಕಿರುವ ಪಟ್ಟಣಕ್ಕೆ ಇದು ಎಷ್ಟು ದೊಡ್ಡ ಉಪಕಾರ! ಶಿಷ್ಯರು ತಮ್ಮ ಕರ್ತನ ಅಪ್ಪಣೆಯ ಪ್ರಕಾರ ಮಾಡಿದರೆಂದು ನೋಡುತ್ತೇವೆ. (ಅಪೊ. ಕ್ರಿ. ೨—೮. ಸಂಧಿ.) ಅವರು ಅನ್ಯ ದೇಶಗಳಿಗೆ ಹೋದರೂ, ಯೆಹೂದ್ಯರಿಗೆ ಮೊದಲು ಸುವಾರ್ತೆಯನ್ನು ಪ್ರಸಂಗಿಸಿದರು. (ಅಪೊ. ಕ್ರಿ. ೧೧. ೧೯; [illegible]



೪೮ ಗಳಿಗೆ ಮಾನಸಾಂತರವೂ ಪಾಪಪರಿಹಾರವೂ ಅವನ ಹೆಸರಿನಲ್ಲಿ ಸಾರಲ್ಪಡಲೂ ಬೇಕಾಗಿತ್ತು. ನೀವು
೪೯ ಇವುಗಳಿಗೆ ಸಾಕ್ಷಿಗಳಾಗಿದ್ದೀರಿ. ಮತ್ತು, ಇಗೋ, [1]ನನ್ನ ತಂದೆಯ ವಾಗ್ದತ್ತವನ್ನು ನಿಮ್ಮ ಮೇಲೆ ಕಳುಹಿ
ಸುತ್ತೇನೆ; ಆದರೆ ನೀವು ಉನ್ನತ ಸ್ಥಳದಿಂದ ಬಲವನ್ನು ಧರಿಸಿ ಕೊಳ್ಳುವ ಪರ್ಯಂತರ, ಯೆರೂಸಲೇಮ್
ಪಟ್ಟಣದಲ್ಲಿ ಇರ್ರಿ.
೫೦ ಆ ಮೇಲೆ ಅವರನ್ನು [2]ಬೇತಾನ್ಯದ ವರಿಗೂ ಹೊರಗೆ ಕರಕೊಂಡು ಹೋಗಿ, ತನ್ನ [3]ಕೈಗಳನ್ನು ಎತ್ತಿ,
೫೧ ಅವರನ್ನು ಆಶೀರ್ವದಿಸಿದನು. ಅವನು ಅವರನ್ನು ಆಶೀರ್ವದಿಸುತ್ತಿರುವಾಗ, ಅವರನ್ನು ಬಿಟ್ಟು, ಪರಲೋ
೫೨ ಕಕ್ಕೆ ಎತ್ತಲ್ಪಟ್ಟನು. ಮತ್ತು ಅವರು [4]ಅವನಿಗೆ ನಮಸ್ಕರಿಸಿ, ಮಹಾ ಸಂತೋಷದಿಂದ ಯೆರೂಸಲೇಮಿಗೆ
೫೩ ತಿರಿಗಿ ಹೋದರು. ಮತ್ತು ದೇವರನ್ನು ಹೊಗಳುತ್ತಾ, ಸ್ತೋತ್ರ ಮಾಡುತ್ತಾ, ಯಾವಾಗಲೂ [5]ದೇವಾ
ಲಯದಲ್ಲಿ ಇದ್ದರು. ಆಮೆನ್.

1. ಇದು ಅವರು ಇನ್ನೂ ಕೆಲವು ದಿವಸಗಳಲ್ಲಿ ಹೊಂದಲಿಕ್ಕಿರುವ ಪರಿಶುದ್ಧಾತ್ಮದ ಅಗ್ನಿಸ್ನಾನವನ್ನು ಕುರಿತದ್ದು. (ಅಪೊ. ಕ್ರಿ. ೧. ೫.) ಪರಿಶುದ್ಧಾತ್ಮಕ್ಕೆ ಉನ್ನತದಿಂದ ಬರುವ ಬಲವೆಂದು ಹೇಳಲ್ಪಟ್ಟದೆ. ಅದರಿಂದ ಧರಿಸಲ್ಪಡುವ ವರಿಗೂ ಎಂದು ಇರುತ್ತದೆ. ಮನುಷ್ಯನು ದಿವ್ಯ ಹೋಲಿಕೆಯಾದ ವಸ್ತ್ರವನ್ನು ಕಳಕೊಂಡು, ನಿರ್ವಾಣಿಯೂ ಬಲಹೀನನೂ ಆದನು. ಕ್ರಿಸ್ತನನ್ನು ಹೊಂದಿದ ಭಕ್ತನು ಆ ಪರಿಶುದ್ಧ ಹೋಲಿಕೆಯಾದ ವಸ್ತ್ರವನ್ನು ತಿರಿಗಿ ಧರಿಸಿ, ಬಲ ಹೊಂದುವನು.

2. ಕ್ರಿಸ್ತನು ಬೇತಾನ್ಯ ಊರಿಗೆ ಹೋಗದೆ, ಅದಕ್ಕೆ ಸಮೀಪವಾಗಿದ್ದ ಇಪ್ಪೇ ಗುಡ್ಡಕ್ಕೆ ಹೋದನು. ಅಲ್ಲಿಂದ ಪರಲೋಕಕ್ಕೆ ಏರಿ ಹೋದ ಅದ್ಭುತ ಸಂಗತಿಯು (ಅಪೊ. ಕ್ರಿ. ೧. ೯—೧೨.) ವಿವರವಾಗಿ ಹೇಳಲ್ಪಟ್ಟದೆ.

3. ಘಾಯ ಪಟ್ಟಿದ್ದ ತನ್ನ ಕೈಗಳನ್ನು ಎತ್ತಿ, ಅವರನ್ನು ಆಶೀರ್ವದಿಸಿದನು. ಹೀಗೆ ಆಶೀರ್ವದಿಸುತ್ತಿರುವಾಗಲೇ ಪರಲೋಕಕ್ಕೆ ಏರಿ ಹೋದನು. ಪ್ರಧಾನ ಯಾಜಕನು ಮೊದಲು ಬಲಿಯರ್ಪಿಸಿ, ತರುವಾಯ ಜನರನ್ನು ಆಶೀರ್ವದಿಸುವದುಂಟು. (ಲೇವಿ. ೯. ೨೨—೨೪.) ತರುವಾಯ ದೇವರ ಮಹಿಮೆಯ ಪ್ರಕಾಶವು ಪ್ರತ್ಯಕ್ಷವಾಗುವದು. ಅದೇ ಪ್ರಕಾರ ಕ್ರಿಸ್ತನು ಮಹಾ ಪ್ರಧಾನ ಯಾಜಕನಾಗಿ, ತನ್ನನ್ನೇ ಪಾಪನಿವರ್ತಿಯ ಬಲಿಯಾಗಿ ಅರ್ಪಿಸಿ, ತರುವಾಯ ತನ್ನ ದಾಸರನ್ನು ಆಶೀರ್ವದಿಸಿ, ಕಡೆಯಲ್ಲಿ ಪರಿಶುದ್ಧಾತ್ಮದ ವರವನ್ನು ಅನುಗ್ರಹಿಸುತ್ತಾನೆ.

4. ಈ ಸುವಾರ್ತೆಯ ಪ್ರಾರಂಭದಲ್ಲಿ, ಜಕರೀಯನು, ಮರಿಯಳು, ಸಿಮೆಯೋನನು, ಅನ್ನಳು, ದೇವದೂತರು ಆತನನ್ನು ಹೊಗಳಿ, ಆರಾಧಿಸಿದರು. ಕಡೆಯಲ್ಲಿ ಆತನ ಶಿಷ್ಯರು ಆತನನ್ನು ನಮಸ್ಕರಿಸಿ, ಆರಾಧಿಸಿದರೆಂದು ಬರೆದದೆ.

5. ಆರಾಧನೇ ಸಮಯಗಳಲ್ಲೆಲ್ಲಾ ಅವರು ತಪ್ಪದೆ ದೇವಾಲಯದಲ್ಲಿದ್ದರು. ಹಾಗೆ ಇದ್ದದರಿಂದ ಜನರು ಕ್ರಿಸ್ತನ ಚರಿತ್ರೆಯನ್ನು ಕೇಳುವದಕ್ಕೆ ಹೇತುವೆಯಾಯಿತು. ನಾವು ಸಹ ಆತನ ಚರಿತ್ರೆಯನ್ನು ಯಾವಾಗಲೂ ಎಲ್ಲೆಲ್ಲಿಯೂ ಸಾರುವ.